ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಮಂಗಳೂರು

ಭಾನುವಾರ, 17 ಮೇ 2026

ಸಂಪುಟ 48, ಸಂಚಿಕೆ 59, ಪುಟಗಳು 12+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com
epaper.hosadigantha.com
Hosadigantha Digital



ಶಾಲೆಗಳಲ್ಲಿ ಪ್ರತಿದಿನ ನಾಡಗೀತೆ ಕಡ್ಡಾಯ: ಸರ್ಕಾರ ಆದೇಶ

| ೦೫

ಬೆಳ್ಳಿಗೆ ಕೇಂದ್ರದ ನಿರ್ಬಂಧ: ಆಮದು ಮೇಲೆ ಮಿತಿ



| ೦೨

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಕೃತ್ತಿಕೆ

ದಿನದ ಮಾತು

ಕುಲೀನನಿಗೂ, ಅಕುಲೀನನಿಗೂ, ಅಂತ್ಯಜನಿಗೂ ಒಳ್ಳೆಯ ನಡವಳಿಕೆಯಿಂದಲ್ಲದೆ ನಿಶ್ಚಲವಾದ ಸೌಖ್ಯ ಸಾಧ್ಯವಿಲ್ಲ.

▲ಸಮಯ ಪರೀಕ್ಷೆ

ನೆನೆದವರ ಮನದಲ್ಲಿ...

ವಕ್ರದೃಷ್ಟಿ

◆ಎನ್.ರಾಮನಾಥ್

◆ಪುಟ ೬

ಕಿರುಸುದ್ದಿ

ಸಿಬಿಎಸ್‌ಇ: 9ನೇ ತರಗತಿಗೆ ತ್ರಿಭಾಷೆ ಕಡ್ಡಾಯ

◆ಪುಟ ೨

ಐಸಿಸ್ ಕಮಾಂಡರ್ ಹತ್ಯೆ

◆ಪುಟ ೨

ಟ್ರಂಪ್: ಚೀನಾ ನೆನಪಿನ ಬುತ್ತಿ ಕಸದ ಬುಟ್ಟಿಗೆ!

◆ಪುಟ ೨

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ: ಉಪನ್ಯಾಸಕಿ ಬಂಧನ

◆ಪುಟ ೨

ಮಧ್ಯಸ್ಥಿಕೆ ತೀರ್ಪಿಗೆ ಯಾವುದೇ ಮನ್ನಣೆ ಇಲ್ಲ

◆ಪುಟ ೨

ಟಿಎಂಸಿ ಸಂಸದ ಅಭಿಷೇಕ್ ವಿರುದ್ಧ ಎಫ್‌ಐಆರ್

◆ಪುಟ ೨

ಭೋಜಶಾಲಾದಲ್ಲಿ ಭಕ್ತರಿಂದ ಪೂಜೆ

◆ಪುಟ ೨

ಇಸ್ರೇಲ್ ದಾಳಿ: ಹಮಾಸ್ ವಿಂಗ್ ಕಮಾಂಡರ್ ವಧೆ

◆ಪುಟ ೨

ಹಿಜ್ಬುಲ್ ಶಂಕಿತನ ಆಸ್ತಿ ವಶಪಡಿಸಿದ ಪೊಲೀಸ್

◆ಪುಟ ೨



ಇದು ಭೋಜಶಾಲಾ ದೇಗುಲ: ಹೈ ಐತಿಹಾಸಿಕ ತೀರ್ಪು

◆ಪುಟ ೨

ಸುದ್ದಿ ಸಮಗ್ರ

ತ್ವರಿತಗತಿ, ಶ್ರೇಷ್ಠತೆಯ ಪರಿವರ್ತನೆ ನಮ್ಮ ಗುರಿ | ಸಂಪನ್ನ ಭಾರತದ ಯಾನದಲ್ಲಿ ಪಾಲ್ಗೊಳ್ಳಿ: ಭಾರತೀಯ ಸಮುದಾಯಕ್ಕೆ ಮೋದಿ ಕರೆ

ಅಸೀಮ ಕನಸಿನ ಭಾರತ



ಜಗತ್ತಿನ ಬೆಳವಣಿಗೆಯ ಇಂಜಿನ್ ಆಗುವ ಆಶಯ

ಭಾರತದ ಯುವಶಕ್ತಿಯಿಂದು ಬಾನಂಗಳ ಸ್ಪರ್ಶಿಸಲು ತವಕಿಸುತ್ತಿದೆ. ಮುಖ್ಯವಾಗಿ ಭಾರತದ ಸ್ಟಾರ್ಟ್‌ಅಪ್ ವ್ಯವಸ್ಥೆ ಅತ್ಯಂತ ಬಲಿಷ್ಠವಾಗುತ್ತಿರೋದು ಯುವಶಕ್ತಿಯ ಉನ್ನತ ಆಶೋತ್ತರಗಳ ಹಿಂದಿನ ಪ್ರೇರಣೆಯಾಗಿದೆ. ನಾವಿಂದು ಜಗತ್ತಿನಲ್ಲೇ ತೃತೀಯ ಬೃಹತ್ ಸ್ಟಾರ್ಟ್‌ಅಪ್ ವ್ಯವಸ್ಥೆ ಹೊಂದಿದ ರಾಷ್ಟ್ರವಾಗಿದ್ದೇವೆ. ಭಾರತದ ಆಶೋತ್ತರಗಳಿಂದು ಕೇವಲ ಗಡಿಗಳಿಗೆ ಸೀಮಿತವಲ್ಲ, ಬದಲಾಗಿ ಒಲಿಂಪಿಕ್ಸ್‌ಗೆ ಆತಿಥೇಯ ವಹಿಸಲು ಭಾರತ ಬಯಸುತ್ತಿದೆ. ಜಾಗತಿಕ ಉತ್ಪಾದನಾ ಕೇಂದ್ರವಾಗಲು ಆಶಿಸಿದೆ. ಹಸಿರು ಇಂಧನ ರಂಗದಲ್ಲಿ ಜಾಗತಿಕ ನಾಯಕನಾಗಲು ಮುಂದಾಗಿದೆ ಮತ್ತು ಜಗತ್ತಿನ ಪ್ರಗತಿ-ಬೆಳವಣಿಗೆಯ ಇಂಜಿನ್ ಆಗಿ ರೂಪುಗೊಳ್ಳುವ ಉನ್ನತ ಗುರಿ ಹೊಂದಿದೆ ಎಂದು ವಿವರಿಸಿದರು.

◆**ಹೇಗ್ (ನೆದರ್‌ಲ್ಯಾಂಡ್ಸ್):** ಭಾರತವು ಬೃಹತ್ ಕನಸುಗಳನ್ನು ಕಾಣುತ್ತಿದೆ. ಭಾರತದ ಯುವಶಕ್ತಿ ಗಗನ ಸ್ಪರ್ಶಿಸಲು ಹಾತೊರೆದಿದೆ. ತುಂಬು ಅವಕಾಶಗಳ ನಾಡಾಗಿರುವ ಭಾರತವು ಅಭೂತಪೂರ್ವ ಪರಿವರ್ತನೆಗಳಿಗೆ ಸಾಕ್ಷಿಯಾಗುತ್ತಿದೆ ಮತ್ತು ದೇಶದ ಆಶೋತ್ತರಗಳು ಗಡಿಗಳಿಗೆ ಸೀಮಿತವಾಗುಳಿದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ತಮ್ಮ ಪಂಚ ರಾಷ್ಟ್ರ ಪ್ರವಾಸದಲ್ಲಿ ನೆದರ್‌ಲ್ಯಾಂಡ್ಸ್‌ನ ಹೇಗ್‌ನಲ್ಲಿ ಭಾರತೀಯ ಸಮುದಾಯವನ್ನುದ್ದೇಶಿಸಿ ಹೆಮ್ಮೆ ವ್ಯಕ್ತಪಡಿಸಿದ್ದಾರೆ.

ಮೋದಿ ಪಂಚ ರಾಷ್ಟ್ರ ಪ್ರವಾಸ

21ನೇ ಶತಮಾನದ ಭಾರತವು ತುಂಬು ಸದವಕಾಶಗಳ ನೆಲೆವೀಡಾಗಿದೆ. ತಂತ್ರಜ್ಞಾನದಲ್ಲೂ ಮುಂದು, ಮಾನವೀಯತೆಯಲ್ಲೂ ಮುಂದಿದೆ. ಭಾರತವು ತನ್ನ ಪ್ರಾಚೀನ ಪರಂಪರೆ ಸಂರಕ್ಷಿಸಿಕೊಂಡು ಆಧುನಿಕತೆಯತ್ತ ದಾಪುಗಾಲಿಕ್ಕುತ್ತಿದೆ. ಹಾಗಾಗಿ ಭಾರತದಲ್ಲಿರುವ ನಿಮ್ಮ ಪೂರ್ವಜರ ಗ್ರಾಮಗಳ ಜತೆ ಬಾಂಧವ್ಯ ಬೆಸೆದುಕೊಂಡು, ಸಂಪನ್ನ ಭಾರತದ ಯಾನದಲ್ಲಿ ಪಾಲ್ಗೊಳ್ಳಲು ತಮಗಿದು ಸಕಾಲವೆಂದು ಭಾರತೀಯ ಸಂಜಾತರನ್ನು ಉದ್ದೇಶಿಸಿದ ತಮ್ಮ 40 ನಿಮಿಷಗಳ ಭಾಷಣದಲ್ಲಿ ಪ್ರಧಾನಿ ಮೋದಿ ಕರೆನೀಡಿದ್ದಾರೆ.

ಹೂಡಿಕೆ ಮಾಡಲು ಕರೆ: ಭಾರತದೊಂದಿಗಿನ ಸಹಕಾರ ಕೊಂಡಿಯನ್ನು ಸಾಧ್ಯವಾದಷ್ಟು ಬಲಪಡಿಸುವಂತೆ ಅಥವಾ ಭಾರತದಲ್ಲಿ ಹೂಡಿಕೆ ಹೂಡಲು ಮುಂಬರುವಂತೆ ನೆದರ್‌ಲ್ಯಾಂಡ್‌ನಲ್ಲಿರುವ ಭಾರತದ ಎಲ್ಲಾ ಸ್ನೇಹಿತರನ್ನು ಪ್ರಧಾನಿ ಮೋದಿ ಕೋರಿದರು.

➡ಪುಟ ೪

ಸಹಜ ಗೇಟ್‌ವೇ

ಭಾರತೀಯ ಉದ್ದಿಮೆಗಳಿಗೆ ಯುರೋಪ್ ಪ್ರವೇಶಕ್ಕೆ ನೆದರ್‌ಲ್ಯಾಂಡ್ಸ್ ಸಹಜ ಗೇಟ್‌ವೇ ಆಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಪ್ರಧಾನಿ ಮೋದಿ, ಪ್ರಸ್ತುತ ಯಾನದಲ್ಲಿ ಭಾರತೀಯ ಸಮುದಾಯ ವಿಶ್ವಾಸಾರ್ಹ ಸೇತುವಾಗಿ ಸೇವೆ ಸಲ್ಲಿಸಬಹುದಾಗಿದೆ ಎಂದು ಕರೆಯಿತ್ತರು.

ಪ್ರಧಾನಿ ಮೋದಿ ಸ್ವಾಗತಕ್ಕೆ ಗರ್ಬಾ ನೃತ್ಯ ಪ್ರದರ್ಶನ

◆**ಹೇಗ್ (ನೆದರ್‌ಲ್ಯಾಂಡ್):** ಭಾರತದ ಮೋದಿ ಶನಿವಾರ ನೆದರ್‌ಲ್ಯಾಂಡ್ ತಲುಪಿದ್ದು, ಇಲ್ಲಿನ ಭಾರತೀಯ ಸಮುದಾಯ ಮೋದಿ ಅವರನ್ನು ಸಾಂಪ್ರದಾಯಿಕ ನೃತ್ಯ ಪ್ರದರ್ಶನಗಳೊಂದಿಗೆ ಆತ್ಮೀಯತೆಯಿಂದ ಸ್ವಾಗತಿಸಿತು.

➡ಪುಟ ೪

ವಿಶೇಷ ಕ್ಷಣದಲ್ಲೇ ಭೇಟಿ

ಭಾರತ-ಯುರೋಪ್ ಒಕ್ಕೂಟ ನಡುವಣ ಮುಕ್ತ ವ್ಯಾಪಾರ ಒಪ್ಪಂದವು, ವ್ಯಾಪಾರ ಮತ್ತು ಹೂಡಿಕೆ ಬಾಂಧವ್ಯಗಳಿಗೆ ನವ ಆಯಾಮ ನೀಡಿರುವ ಕ್ಷಣಗಳಲ್ಲೇ, ನೆದರ್‌ಲ್ಯಾಂಡ್ಸ್‌ಗೆ ಭೇಟಿ ನೀಡುವ ಅವಕಾಶ ತನಗೆ ಲಭಿಸಿದೆ. ತನ್ನ ಭೇಟಿ ಸೆಮಿಕಂಡಕ್ಟರ್‌ಗಳು, ಜಲ ನಿರ್ವಹಣೆ, ಶುದ್ಧ ಇಂಧನ, ಆವಿಷ್ಕಾರ ರಂಗಗಳಲ್ಲಿ ಸಹಕಾರವನ್ನು ಗಾಢಗೊಳಿಸುವ ಅವಕಾಶ ತೆರೆಯುವ ನಂಬಿಕೆಯಿದೆ ಎಂದು ಪ್ರಧಾನಿ ಮೋದಿ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

➡ಪುಟ ೪

ನನ್ನ ಇ-ಖಾತಾ, ನನ್ನ ಹಕ್ಕು ಕಾರ್ಯಕ್ರಮ ಚುರುಕುಗೊಳಿಸಿದ ಉಪ ಮುಖ್ಯಮಂತ್ರಿ

ಅಭಿಯಾನಕ್ಕೆ ಭಾರೀ ಜನಸ್ಪಂದನೆ: ಡಿಕೆಶಿ

- ಪ್ರತಿ ಶನಿವಾರ ನಡೆಯಲಿದೆ ನನ್ನ ಇ-ಖಾತೆ ಅಭಿಯಾನ
- ಮೊದಲ ಶನಿವಾರ 5 ಪಾಲಿಕೆಯಿಂದ 52 ಸ್ಥಳಗಳಲ್ಲಿ ಅಭಿಯಾನ
- ಬಿ ಟು ಎ ಖಾತಾಕ್ಕೆ 100 ದಿನ ರಿಯಾಯಿತಿ



◆**ಬೆಂಗಳೂರು:** ನನ್ನ ಇ-ಖಾತಾ, ನನ್ನ ಹಕ್ಕು ಅಭಿಯಾನದಿಂದ ಬೆಂಗಳೂರಿನ ಸಾರ್ವಜನಿಕರು ಒಂದೇ ಒಂದು ರೂಪಾಯಿ ಲಂಚ ನೀಡದೆ ತಮ್ಮ ಆಸ್ತಿಗಳನ್ನು ಬಿ ಖಾತೆಯಿಂದ ಎ ಖಾತೆಗೆ ಪರಿವರ್ತನೆ ಹಾಗೂ ಮನೆ ಬಾಗಿಲಲ್ಲೇ ಇ-ಖಾತೆ ಪಡೆಯುವ ಮಹತ್ವದ ಅಭಿಯಾನಕ್ಕೆ ಅಭೂತಪೂರ್ವ ಬೆಂಬಲ ದೊರೆತಿದೆ.



ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ)ದ ಐದು ನಗರದ ಪಾಲಿಕೆ ವ್ಯಾಪ್ತಿಯಲ್ಲಿ ಆರಂಭವಾದ ನನ್ನ ಇ-ಖಾತಾ, ನನ್ನ ಹಕ್ಕು ಅಭಿಯಾನಕ್ಕೆ ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಹೊರಮಾವು ಬಳಿಯ (ನ್ಯಾಷನಲ್ ಪಬ್ಲಿಕ್ ಸ್ಕೂಲ್) ಅಭಿಯಾನ ಕೇಂದ್ರಕ್ಕೆ ಶನಿವಾರ ಭೇಟಿ ನೀಡಿದ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು, ನಗರದ ಏಳು ಲಕ್ಷ ಜನರಿಗೆ ಉಪಯೋಗವಾಗುವ ಮಹತ್ವದ ಯೋಜನೆಯಾಗಿದೆ. ಬೆಂಗಳೂರು ನಿವಾಸಿಗಳು, ಅರ್ಜಿದಾರರು ಈ ಅಭಿಯಾನದಿಂದ ಖುಷಿ ಯಾಗಿದ್ದಾರೆಂದು ಹೇಳಿದರು.

ಖಾತೆ ದಾಖಲೆಯಲ್ಲಿ ಫೋಟೋ ಸಹ ಇರಲಿದೆ. ಯಾರಾದರೂ ನಕಲಿ ದಾಖಲೆಗಳನ್ನು ನೀಡಿ ಖಾತೆ ಮಾಡಿಸಿಕೊಂಡರೆ ಅದನ್ನು ರದ್ದು ಮಾಡುವ ವ್ಯವಸ್ಥೆಯೂ ಇದೆ.

➡ಪುಟ ೪

ನಮ್ಮ ಕೆಲಸಕ್ಕೆ ಕೇಂದ್ರ ಸರ್ಕಾರ ಶ್ಲಾಘನೆ

ಸಾರ್ವಜನಿಕರು ಯಾರಿಗೂ ಒಂದೇ ಒಂದು ರೂಪಾಯಿ ಲಂಚ ನೀಡಬಾರದು. ಅಧಿಕಾರಿಗಳಿಗೆ ಸೇರಿದಂತೆ ಯಾವ ಪಕ್ಷದವರಿಗೂ ಲಂಚ ಕೊಡಬಾರದು. ಸರ್ಕಾರಿ ಭೂಮಿಗಳನ್ನು ಮಂಜೂರು ಮಾಡಲು ಸಾಧ್ಯವಿಲ್ಲ. ನಾವು ಇಡೀ ದೇಶದಲ್ಲಿಯೇ ಮಾದರಿಯಾಗಿದ್ದೇವೆ. ಕೇಂದ್ರ ಸರ್ಕಾರವು ನಮಗೆ ಒಳ್ಳೆ ಕೆಲಸ ಮಾಡುತ್ತಿದ್ದೀರಿ ಎಂದು ಶ್ಲಾಘಿಸಿದೆ. ಆರನೇ ಗ್ಯಾರಂಟಿಯಾಗಿ ಭೂಮಿ ಗ್ಯಾರಂಟಿ ನೀಡುತ್ತಿದ್ದೇವೆ. ನೀವು ತೆಗೆದುಕೊಂಡ ನಿವೇಶನ ಅಂದು ಕಡಿಮೆ ಬೆಲೆಯದ್ದಾಗಿದ್ದರೆ ಖಾತೆ ಬದಲಾವಣೆಯಿಂದ ಆಸ್ತಿ ಬೆಲೆ ಹೆಚ್ಚಳವಾಗಲಿದೆ ಎಂದು ಶಿವಕುಮಾರ್ ತಿಳಿಸಿದರು.

ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ್

ರಾಜ್ಯಕ್ಕೆ ಹೆಚ್ಚುವರಿ 1,122 ವೈದ್ಯ ಸೀಟು

◆**ಬೆಂಗಳೂರು:** ರಾಜ್ಯದಲ್ಲಿ ಮೆಡಿಕಲ್ ಸೀಟು ಲಭ್ಯತೆ ಹೆಚ್ಚಾಗಿದ್ದು, ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಲು ಬಯಸುವವರಿಗೆ ಸುವರ್ಣ ಅವಕಾಶ ಲಭಿಸಲಿದೆ. ರಾಜ್ಯಕ್ಕೆ ಹೆಚ್ಚುವರಿ 1,122 ಸೀಟುಗಳು ದೊರೆಯಲಿವೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ್ ತಿಳಿಸಿದರು. ವಿಕಾಸಸೌಧದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ರಾಜ್ಯ ವೈದ್ಯಕೀಯ ಕ್ಷೇತ್ರದಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿದೆ. ರಾಜ್ಯಕ್ಕೆ ದೊರೆತಿರುವ ಹೆಚ್ಚುವರಿ ಸೀಟುಗಳು ಕೊಪ್ಪಳ, ಗದಗ, ಚಾಮರಾಜನಗರ, ಕಾರವಾರ ಸೇರಿ ಇತರೆ ಜಿಲ್ಲೆಗಳಿಗೆ ದೊರೆಯಲಿದೆ ಎಂದು ತಿಳಿಸಿದರು.

ಪದವಿಪೂರ್ವ ಸೀಟುಗಳಿಗೆ ಕೇಂದ್ರ ಸರ್ಕಾರದಿಂದ 495 ಕೋಟಿ ರೂ. ಅನುದಾನ ಸಿಗಲಿದೆ. ಅದೇ ರೀತಿ ಸ್ನಾತಕೋತ್ತರ ವೈದ್ಯಕೀಯ ಸೀಟುಗಳಿಗೆ 541 ಕೋಟಿ ರೂ. ಅನುದಾನ ಸಿಗಲಿದೆ ಎಂದು ಡಾ. ಪಾಟೀಲ್ ವಿವರಿಸಿದರು.

➡ಪುಟ ೪



ಸೀಟ್‌ಗಳ ವಿವರ

- ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜು (ಖಾಸಗಿ, ಡೀಮ್ಡ್ ಸೇರಿ) - 72
- ಲಭ್ಯವಿರುವ ಯುಜಿ ಸೀಟುಗಳು - 13,945
- ಪಿಜಿ ಸೀಟುಗಳು - 7,727

ಪ್ರಧಾನಿ ಮೋದಿ ಕರೆಗೆ ಓಗೊಟ್ಟ ಬಿಜೆಪಿ ರಾಜ್ಯಾಧ್ಯಕ್ಷ

ಮೆಟ್ರೋದಲ್ಲಿ ಪ್ರಯಾಣಿಸಿದ ಬಿವೈವಿ

◆**ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ಅವರ ಮಿತವ್ಯಯ ಕರೆಗೆ ಓಗೊಟ್ಟು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಶನಿವಾರ ತಮ್ಮ ವಾಹನ ಬಿಟ್ಟು ಮೆಜೆಸ್ಟಿಕ್‌ನಿಂದ ಕೆಂಗೇರಿವರೆಗೆ ಮೆಟ್ರೋ ಮೂಲಕ ತೆರಳಿದರು.

ಈ ವೇಳೆ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಮಿತವ್ಯಯಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನತೆಗೆ ಕರೆ ನೀಡಿರುವುದಕ್ಕೆ ಪ್ರತಿಯೊಬ್ಬರೂ ಸ್ಪಂದಿಸಬೇಕಾಗಿದೆ. ವಿರೋಧಪಕ್ಷಗಳು ಇದರಲ್ಲಿ ಯಾವುದೇ ರಾಜಕೀಯವನ್ನು ತರಬಾರದು. ರಾಜ್ಯದ ಬಿಜೆಪಿ ಅಧ್ಯಕ್ಷನಾಗಿ ನಾನೂ ಸಾರ್ವಜನಿಕ ಸಾರಿಗೆ ಬಳಸಲು ಮುಂದಾಗಿದ್ದೇನೆ ಎಂದು ತಿಳಿಸಿದರು. ಅಮೆರಿಕ, ಇರಾನ್ ಹಾಗೂ ಇಸ್ರೇಲ್ ಯುದ್ಧದಿಂದಾಗಿ ಆಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಎಲ್ಲರಿಗೂ ತಿಳಿದಿದೆ. ಭಾರತವೂ ಸೇರಿದಂತೆ ಇಡೀ ಜಗತ್ತು ಸಂಕಷ್ಟಕ್ಕೆ ಸಿಲುಕಿದೆ. ಆದ್ದರಿಂದ ಪ್ರತಿಯೊಬ್ಬರೂ ಮಿತವ್ಯಯ ಬಗ್ಗೆ ಯೋಚಿಸಬೇಕಾಗಿದೆ.

➡ಪುಟ ೪



ರೈಲು, ಬಸ್ ಪ್ರಯಾಣಕ್ಕೆ ಆದ್ಯತೆ: ಸಚಿವ ಸೋಮಣ್ಣ


◆ಪುಟ ೩

ಜನಸಂಖ್ಯೆ ಹೆಚ್ಚಳಕ್ಕೆ ಆಂಧ್ರ ಹೊಸ ತಂತ್ರ

◆**ಅಮರಾವತಿ:** ಜನಸಂಖ್ಯೆ ಕುಸಿತದ ಆತಂಕ ಎದುರಿಸುತ್ತಿರುವ ಆಂಧ್ರ ಪ್ರದೇಶ, ಇದೀಗ ಜನನ ಪ್ರಮಾಣ ಹೆಚ್ಚಿಸಲು ನಗದು ಪ್ರೋತ್ಸಾಹದ ದಾರಿ ಹಿಡಿದಿದೆ. ರಾಜ್ಯದಲ್ಲಿ ಮೂರನೇ ಮಗುವಿಗೆ 30 ಸಾವಿರ ರೂ. ಹಾಗೂ ನಾಲ್ಕನೇ ಮಗುವಿಗೆ 40 ಸಾವಿರ ರೂ. ಪ್ರೋತ್ಸಾಹಧನ ನೀಡಲಾಗುವುದು ಎಂದು ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಘೋಷಿಸಿದ್ದಾರೆ. ಶ್ರೀಕಾಕುಳಂ ಜಿಲ್ಲೆಯ ನರಸನ್ನಪೇಟೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, 'ಜನಸಂಖ್ಯೆ ನಿಯಂತ್ರಣದ ಕಾಲ ಮುಗಿದಿದೆ.

➡ಪುಟ ೪

3ನೇ ಮಗುವಿಗೆ 30 ಸಾವಿರ, 4 ಮಗುವಿಗೆ 40 ಸಾವಿರ ರೂ. ಪ್ರೋತ್ಸಾಹ: ಸಿಎಂ ನಾಯ್ಡು ಘೋಷಣೆ



ನಮ್ಮ ತಂಟೆಗೆ ಬಂದರೆ ಪಾಕ್ ಅಸ್ತಿತ್ವವೇ ನಾಶ

◆**ಹೊಸದಿಲ್ಲಿ:** ಭಾರತ ವಿರುದ್ಧ ಭಯೋತ್ಪಾದನೆಗೆ ನಿರಂತರ ಬೆಂಬಲ ನೀಡುವುದೇ ಷಡ್ಯಂತ್ರವಾದಲ್ಲಿ, ಭೂಗೋಳ ಅಥವಾ ಇತಿಹಾಸದ ಭಾಗವಾಗಿ ಉಳಿಯಬೇಕೋ ಬೇಡವೋ ಎಂಬುದನ್ನೂ ಪಾಕಿಸ್ತಾನ ಅಗತ್ಯವಾಗಿ ತೀರ್ಮಾನಿಸಬೇಕಾಗುತ್ತದೆ ಎಂದು ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಪಾಕ್‌ಗೆ ತಮ್ಮ ತೀಕ್ಷ್ಣ ಎಚ್ಚರಿಕೆಯನ್ನು ಪುನರುಚ್ಚರಿಸಿದ್ದಾರೆ.



ಉಗ್ರ ಪೋಷಕ ಪಾಕಿಸ್ತಾನಕ್ಕೆ ಜ.ಉಪೇಂದ್ರ ದ್ವಿವೇದಿ ತೀಕ್ಷ್ಣ ಎಚ್ಚರಿಕೆ

ಆಪರೇಷನ್ ಸಿಂದೂರ್‌ನ ಅನಿವಾರ್ಯತೆ ಸೃಜಿಸಿದಂತಹ ಸನ್ನಿವೇಶಗಳು ಮರುಕಳಿಸಿದಲ್ಲಿ ಭಾರತೀಯ ಸೇನೆ ಅದ್ಯಾವ ರೀತಿ ಪ್ರತಿಕ್ರಿಯಿಸಲಿದೆ ಎಂಬ ಸುದ್ದಿಗಾರರ ಪ್ರಶ್ನೆಗೆ , ಸೇನಾ ಮುಖ್ಯಸ್ಥ ಜ.ದ್ವಿವೇದಿ ಈ ರೀತಿ ಪ್ರತ್ಯುತ್ತರಿಸಿದ್ದಾರೆ.

ಕಳೆದ ವರ್ಷದ ಆಪರೇಶನ್ ಸಿಂದೂರ್ ನಂತರದಲ್ಲಿ ಭಾರತದ ಮಿಲಿಟರಿ ಪಡೆ ಪಾಕ್‌ಗೆ ಸಾರ್ವಜನಿಕವಾಗಿ ನೀಡಿರುವ ಅತ್ಯಂತ ಕಟು ಎಚ್ಚರಿಕೆ ಇದಾಗಿದೆ. ಹಾಗೆಂದು ಭಾರತೀಯ ಸೇನೆ ಪಾಕ್‌ಗೆ ಎಚ್ಚರಿಕೆ ನೀಡುತ್ತಿರುವುದು ಇದು ಹೊಸತಲ್ಲ ಅಥವಾ ಮೊದಲಲ್ಲ. ಪಾಕಿಸ್ತಾನ ಭಾರತದ ವಿರುದ್ಧ ಭಯೋತ್ಪಾದನೆಗೆ ಬೆಂಬಲ ಮುಂದುವರಿಸಿದಲ್ಲಿ, ಭಾರತದ ಸಶಸ್ತ್ರಪಡೆಗಳು ಆಪರೇಷನ್ ಸಿಂದೂರ್ 1.0ನಲ್ಲಿ ಮೆರೆದಂತಹ ಸಂಯಮ ಸಮಾನ ತಾಳ್ಮೆಯನ್ನು ಖಂಡಿತ ತೋರುವುದಿಲ್ಲ.

➡ಪುಟ ೪

ಎನ್‌ಸಿಬಿ ವಶಕ್ಕೆ ₹182 ಕೋಟಿ ಜಿಹಾದಿ ಡ್ರಗ್

◆**ಹೊಸದಿಲ್ಲಿ:** ಅಂತಾರಾಷ್ಟ್ರೀಯ ಮಾದಕದ್ರವ್ಯ ಜಾಲವೊಂದು ಒಳಗೊಂಡಿರುವ 182 ಕೋಟಿ ರೂ. ಮೌಲ್ಯದ 227.7 ಕೆ.ಜಿ. ಕೇಪ್‌ಟೇಗೊನ್ ಹೆಸರಿನ ಜಿಹಾದಿ ಡ್ರಗ್ ಅನ್ನು ನಾರ್ಕೋಟಿಕ್ಸ್ ನಿಯಂತ್ರಣ ಸಂಸ್ಥೆ (ಎನ್‌ಸಿಬಿ) ವಶಪಡಿಸಿರುವುದಾಗಿ ಕೇಂದ್ರ ಗೃಹ ಇಲಾಖೆ (ಎಂಎಚ್‌ಎ) ಶನಿವಾರ ಘೋಷಿಸಿದೆ.

227 ಕೆ.ಜಿ. ಕೇಪ್‌ಟೇಗೊನ್ ವಶಪಡಿಸಿದ ಎನ್‌ಸಿಬಿ, ವಿದೇಶಿ ಪ್ರಜೆ ಬಂಧನ

ಕೇಪ್‌ಟೇಗೊನ್ ಮಾದಕದ್ರವ್ಯದ ಮೊದಲ ಕನ್ಸೈನ್‌ಮೆಂಟ್ ಅನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾದ ಗೃಹ ಇಲಾಖೆಯ ಸಾಧನೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಭಾರತ ಪ್ರವೇಶಿಸುವ ಅಥವಾ ಭಾರತ ಗಡಿ ಬಳಸಿಕೊಂಡು ಸಾಗಣೆ ಮಾಡುವ ಪ್ರತಿ ಗ್ರಾಂ ಮಾದಕ ದ್ರವ್ಯವನ್ನೂ ನಾವು ವಶಪಡಿಸುತ್ತೇವೆಂದು ಪುನರುಚ್ಚರಿಸುತ್ತೇನೆ.

➡ಪುಟ ೪

ಏನಿದು ಕೇಪ್‌ಟೇಗೊನ್?



ಇದು ಫಿನೆಥಿಲಿನ್ ಎಂಬ ಸಿಂಥೆಟಿಕ್ ಮಾದಕ ದ್ರವ್ಯವಾಗಿದೆ. ಕೇಪ್‌ಟೇಗೊನ್ ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದುಕೊಂಡಿದೆ. 1960ರಿಂದ ಇದನ್ನು ಮಧ್ಯಪ್ರಾಚ್ಯದ ಸಂಘರ್ಷ ಭರಿತ ಪ್ರದೇಶಗಳಲ್ಲಿ ಭಯೋತ್ಪಾದನೆ, ಅಪಹರಣ, ಅತ್ಯಾಚಾರ, ದೌರ್ಜನ್ಯ ಪ್ರಕರಣಗಳಲ್ಲಿ ಬಳಸುತ್ತಾರೆ. ನಿರಂತರ ಆರೋಪಗಳ ನಂತರ ಜಿಹಾದಿ ಡ್ರಗ್ ಎಂಬ ಹೆಸರನ್ನು ಪಡೆಯಿತು.

➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ	ಅಪರಂಜಿ ಚಿನ್ನ	ಆಭರಣ ಚಿನ್ನ	
	2,71,300(2,77,700)	15,800(15,950)	14,385(14,675)	$1 = ₹95.71

ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಜುಲೈ 1ರಿಂದ ಸಿಬಿಎಸ್‌ಇ ಹೊಸ ನಿಯಮ

ಇನ್ನು 9ನೇ ತರಗತಿಗೆ ತ್ರಿಭಾಷೆ ಕಡ್ಡಾಯ



ಪ್ರಮುಖ ಅಂಶಗಳು

- 2026 ಜುಲೈ 1ರಿಂದ ಜಾರಿ
- 9 ನೇ ತರಗತಿಗೆ ಮೂರು ಭಾಷೆ ಕಡ್ಡಾಯ
- ಕನಿಷ್ಠ ಎರಡು ಭಾರತೀಯ ಭಾಷೆಗಳು ಅನಿವಾರ್ಯ
- ಮೌಲ್ಯಮಾಪನ ಶಾಲಾ ಮಟ್ಟದಲ್ಲೇ

ಹೊಸದಿಲ್ಲಿ: ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ 2020) ಅನುಷ್ಠಾನದ ಭಾಗವಾಗಿ ಸಿಬಿಎಸ್‌ಇ ಮಹತ್ವದ ಭಾಷಾ ನೀತಿ ಬದಲಾವಣೆಯನ್ನು ಘೋಷಿಸಿದೆ. 2026ರ ಜುಲೈ 1ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗೆ ಮೂರು ಭಾಷೆಗಳ ಅಧ್ಯಯನ ಕಡ್ಡಾಯವಾಗಲಿದೆ. ಈ ಮೂಲಕ ದೇಶಾದ್ಯಂತ ಸಿಬಿಎಸ್‌ಇ ಶಾಲೆಗಳಲ್ಲಿ ತ್ರಿಭಾಷಾ ಸೂತ್ರಕ್ಕೆ ಹೊಸ ರೂಪದಲ್ಲಿ ಚಾಲನೆ ಸಿಗುತ್ತಿದೆ.

ಹೊಸ ನಿಯಮದ ಪ್ರಕಾರ ವಿದ್ಯಾರ್ಥಿಗಳು ಆರ್1, ಆರ್2 ಮತ್ತು ಆರ್3 ಎಂದು ಗುರುತಿಸಲಾದ ಮೂರು ಭಾಷೆಗಳನ್ನು ಕಲಿಯಬೇಕು. ಈ ಮೂರರಲ್ಲಿ ಕನಿಷ್ಠ ಎರಡು ಭಾರತೀಯ ಭಾಷೆಗಳಿರಬೇಕು ಎಂದು ಸಿಬಿಎಸ್‌ಇ ಸ್ಪಷ್ಟಪಡಿಸಿದೆ. ವಿದೇಶಿ ಭಾಷೆಯನ್ನು ಆಯ್ಕೆ ಮಾಡಬಹುದಾದರೂ, ಉಳಿದ ಎರಡು ಭಾಷೆಗಳು ಭಾರತೀಯವಾಗಿರಲೇಬೇಕು.

ಆರ್3 ಭಾಷೆಯ ಮೌಲ್ಯಮಾಪನವನ್ನು ಶಾಲಾ ಮಟ್ಟದಲ್ಲೇ ನಡೆಸಲಾಗುತ್ತದೆ. ಆದರ ಅಂಕಗಳು ಸಿಬಿಎಸ್‌ಇ ಪ್ರಮಾಣಪತ್ರದಲ್ಲಿ ದಾಖಲಾಗಲಿದ್ದರೂ, ಕೇಂದ್ರಿಕೃತ ಬೋರ್ಡ್ ಪರೀಕ್ಷೆ ನಡೆಯುವುದಿಲ್ಲ.

- ಮೂರನೇ ಭಾಷೆಗೆ ಬೋರ್ಡ್ ಪರೀಕ್ಷೆ ಇಲ್ಲ
- ಎರಡು ಭಾರತೀಯ ಭಾಷೆ ಓದುವುದು ಅನಿವಾರ್ಯ

ಏಕೆ ಈ ಬದಲಾವಣೆ?: ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಬಹುಭಾಷಾ ಶಿಕ್ಷಣಕ್ಕೆ ವಿಶೇಷ ಒತ್ತು ನೀಡಲಾಗಿದೆ. ವಿದ್ಯಾರ್ಥಿಗಳು ತಮ್ಮ ಮಾತೃಭಾಷೆ, ಭಾರತೀಯ ಭಾಷೆಗಳು ಹಾಗೂ ವಿಭಿನ್ನ ಭಾಷಾ ಸಂಸ್ಕೃತಿಗಳ ಅರಿವು ಹೊಂದಬೇಕು ಎಂಬುದು ಕೇಂದ್ರ ಸರ್ಕಾರದ ಉದ್ದೇಶ. ಈ ಹಿನ್ನೆಲೆ ಸಿಬಿಎಸ್‌ಇ ಹೊಸ ನಿಯಮ ಜಾರಿಗೆ ಮುಂದಾಗಿದೆ.

ಶಾಲಾ ಶಿಕ್ಷಣದ ರಾಷ್ಟ್ರೀಯ ಪಠ್ಯಚೌಕಟ್ಟು ಶಿಫಾರಸುಗಳಿಗೂ ಈ ಕ್ರಮ ಹೊಂದಿಕೆಯಾಗುತ್ತದೆ ಎಂದು ಶಿಕ್ಷಣ ಇಲಾಖೆ ಹೇಳಿದೆ. 'ಭಾಷೆ ಕೇವಲ ಪಾಠವಲ್ಲ, ಅದು ಭಾರತೀಯ ಜ್ಞಾನ ಪರಂಪರೆ ಹಾಗೂ ಸಾಂಸ್ಕೃತಿಕ ವೈವಿಧ್ಯದ ಸೇತುವೆ' ಎಂಬ ಸಂದೇಶವನ್ನು ಕೇಂದ್ರ ಸರ್ಕಾರ ಒತ್ತಿ ಹೇಳುತ್ತಿದೆ.

ಬೆಳ್ಳಿಗೆ ಕೇಂದ್ರದ ನಿರ್ಬಂಧ ಆಮದು ಮೇಲೆ ಮಿತಿ

ಹೊಸದಿಲ್ಲಿ: ಅಮೂಲ್ಯ ಲೋಹಗಳ ಮೇಲಿನ ಆಮದು ಸುಂಕವನ್ನು ಭಾರೀ ಪ್ರಮಾಣದಲ್ಲಿ ಏರಿಸಿದ ಕೆಲವೇ ದಿನಗಳಲ್ಲಿ ಕೇಂದ್ರ ಸರ್ಕಾರ ಈಗ ಬೆಳ್ಳಿ ಆಮದು ಮೇಲೂ ಕಟ್ಟುನಿಟ್ಟಿನ ನಿಯಂತ್ರಣ ಹೇರಿದೆ.



ಕೇಂದ್ರ ವಾಣಿಜ್ಯ ಸಚಿವಾಲಯದ ಅಧೀನದಲ್ಲಿರುವ ವಿದೇಶಿ ವ್ಯಾಪಾರ ಮಹಾನಿರ್ದೇಶನಾಲಯ ಶನಿವಾರ ಹೊರಡಿಸಿದ ಅಧಿಸೂಚನೆಯಲ್ಲಿ, ಬೆಳ್ಳಿ ಹಾಗೂ ಚಿನ್ನ–ಪ್ಲಾಟಿನಂ ಲೇಪಿತ ಬೆಳ್ಳಿ ಆಮದು ನೀತಿಯನ್ನು 'ಮುಕ್ತ' ವರ್ಗದಿಂದ 'ನಿರ್ಬಂಧಿತ' ವರ್ಗಕ್ಕೆ ತಕ್ಷಣದಿಂದಲೇ ವರ್ಗಾಯಿಸಲಾಗಿದೆ ಎಂದು ತಿಳಿಸಿದೆ.ಇದರಿಂದ ಇನ್ನುಮುಂದೆ ಬೆಳ್ಳಿ ಆಮದು ಮಾಡಲು ಸರ್ಕಾರದ ಪರವಾನಗಿ ಕಡ್ಡಾಯವಾಗಲಿದೆ. ಈ ಕ್ರಮವು ಬೆಳ್ಳಿ ಆಮದು ಮೇಲಿನ ನಿಯಂತ್ರಣ ಹೆಚ್ಚಿಸುವುದರ ಜೊತೆಗೆ ವಿದೇಶಿ ವಿನಿಮಯ ಹೊರಹರಿವು ಕಡಿಮೆ ಮಾಡುವ ಉದ್ದೇಶ ಹೊಂದಿದೆ ಎನ್ನಲಾಗಿದೆ.ಇದರ ಹಿಂದೆ ಕಳೆದ ಮೇ 13ರಂದು ಕೇಂದ್ರ ಸರ್ಕಾರ ಅಮೂಲ್ಯ ಲೋಹಗಳ ಆಮದು ಸುಂಕವನ್ನು ಶೇ.6ರಿಂದ ನೇರವಾಗಿ ಶೇ.15ಕ್ಕೆ ಏರಿಸಿದ್ದೂ ಪ್ರಮುಖ ಕಾರಣವೆಂದು ವಾಣಿಜ್ಯ ವಲಯ ವಿಶ್ಲೇಷಿಸುತ್ತಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ–ಬೆಳ್ಳಿ ಬೆಲೆ ಏರಿಳಿತ, ದೇಶೀಯ ಬೇಡಿಕೆ ಹೆಚ್ಚಳ ಹಾಗೂ ವ್ಯಾಪಾರ ಅಸಮತೋಲನದ ನಡುವೆಯೇ ಕೇಂದ್ರ ಸರ್ಕಾರದ ಈ ಕ್ರಮ ಗಮನ ಸೆಳೆದಿದೆ.

ಇತಿಹಾಸ ಸರಿಪಡಿಸುವಿಕೆ


2003ರಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ(ಎಎಸ್‌ಐ) ಹೊರಡಿಸಿದ್ದ ವ್ಯವಸ್ಥೆಯನ್ನೂ ಐಖ ರದ್ದುಪಡಿಸಿದೆ. ಈ ಆದೇಶದಂತೆ ಶುಕ್ರವಾರ ಮುಸ್ಲಿಮರಿಗೆ ನಮಾಜ್, ಮಂಗಳ ವಾರ ಹಿಂದೂಗಳಿಗೆ ಪೂಜೆ ಅವಕಾಶ ನೀಡಲಾಗುತ್ತಿತ್ತು. ಈಗ ಆ ವ್ಯವಸ್ಥೆ ನ್ಯಾಯಾಲ ಯದ ತೀರ್ಪಿನಿಂದ ಅಸ್ತಿತ್ವ ಕಳೆದು ಕೊಂಡಿದೆ.

ಸರಸ್ವತಿ ಮೂರ್ತಿ ಎಲ್ಲಿದೆ?

ಸದ್ಯ ಇದೇ ದೇಗುಲದ ಸರಸ್ವತಿ ಮೂರ್ತಿ ಲಂಡನ್‌ನಲ್ಲಿರುವ ಬ್ರಿಟಿಷ್ ಮ್ಯೂಸಿಯಂನಲ್ಲಿದೆ. ವಿಶೇಷವೆಂದರೆ, ಕಾಂಗ್ರೆಸ್ ಸಂಸದ, ಇತಿಹಾಸಕಾರ ಶಶಿತರೂರ್ ಅವರು ಈ ಮ್ಯೂಸಿಯಂ ಅನ್ನು ಸೇರಿಸಿ ಬ್ರಿಟನ್‌ನಲ್ಲಿರುವ ವಸ್ತುಸಂಗ್ರಹಾಲಯಗಳನ್ನು ಚೋರ್ ಬಜಾರ್ ಎಂದಿದ್ದರು. ಇದೇ ಮ್ಯೂಸಿಯಂನಲ್ಲಿ ಸರಸ್ವತಿ ಮಾತೆಯ ಮೂರ್ತಿ ಇದೆ. ಇದನ್ನು ವಾಪಸ್ ತರಲು ಪ್ರಯತ್ನಿಸುವಂತೆಯೂ ಹೈಕೋರ್ಟ್ ಹೇಳಿದೆ.

ಇದು ಭೋಜಶಾಲಾ ದೇಗುಲ

ಮಧ್ಯಪ್ರದೇಶ ಹೈಕೋರ್ಟ್‌ನ ಐತಿಹಾಸಿಕ ತೀರ್ಪು





ಮಧ್ಯಪ್ರದೇಶದ ಧಾರ ಜಿಲ್ಲೆಯ ಭೋಜಶಾಲೆ ದೇಗುಲ ಮತ್ತೆ ರಾಷ್ಟ್ರ ರಾಜಕೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಚರ್ಚೆಗಳ ಕೇಂದ್ರಬಿಂದುವಾಗಿದೆ. ಹಲವು ದಶಕಗಳಿಂದ ಹಿಂದೂ–ಮುಸ್ಲಿಂ ಸಮುದಾಯಗಳ ಮಧ್ಯೆ ಸಂಘರ್ಷದ ಕಾರಣವಾಗಿದ್ದ ಭೋಜಶಾಲೆ–ಕಮಾಲ್ ಮೌಲಾ ಮಸೀದಿ ವಿವಾದದಲ್ಲಿ ಮಧ್ಯಪ್ರದೇಶ ಹೈಕೋರ್ಟ್ ಮಹತ್ವದ ತೀರ್ಪು ನೀಡಿದ್ದು, ಈ ತಾಣವು ಮೂಲತಃ ವಾಗ್ದೇವಿ (ಸರಸ್ವತಿ) ದೇವಾಲಯ ಹಾಗೂ ಸಂಸ್ಕೃತ ಅಧ್ಯಯನ ಕೇಂದ್ರವಾಗಿತ್ತು ಎಂದು ಸ್ಪಷ್ಟಪಡಿಸಿದೆ.

188 ಕಂಬಗಳ ಮೌನ ಸಾಕ್ಷ್ಯ!

ಈ ಪ್ರಕರಣದಲ್ಲಿ ದೊಡ್ಡ ತಿರುವು ತಂದದ್ದು ಎಎಸ್‌ಐ ವೈಜ್ಞಾನಿಕ ಸಮೀಕ್ಷೆ. ಹೈಕೋರ್ಟ್ ಆದೇಶದ ಮೇರೆಗೆ 2024ರಲ್ಲಿ 98 ದಿನಗಳ ಕಾಲ ಸಮಗ್ರ ಸರ್ವೇ ನಡೆದಿತ್ತು. ಎಎಸ್‌ಐ ತನ್ನ ವರದಿಯಲ್ಲಿ ಹಲವು ಮಹತ್ವದ ಅಂಶಗಳನ್ನು ಉಲ್ಲೇಖಿಸಿತ್ತು, ಇವೆಲ್ಲವನ್ನು ನ್ಯಾಯಾಲಯ ಮಹತ್ವದ ಪುರಾವೆಗಳೆಂದು ಪರಿಗಣಿಸಿದೆ. ಅಂದರೆ,

- 188 ಕಂಬಗಳಲ್ಲಿ ಹಿಂದು ಧಾರ್ಮಿಕ ಚಿಹ್ನೆಗಳು
- ನಾಗರ ಶೈಲಿಯ ದೇವಾಲಯ ವಾಸ್ತುಶಿಲ್ಪ
- ದೇವ–ದೇವಿಯ ಮೂರ್ತಿಗಳ ಅವಶೇಷ
- ಕತ್ತರಿಸಲಾದ ಮೂರ್ತಿಭಾಗಗಳು
- ದೇವಸ್ಥಾನ ಅವಶೇಷಗಳನ್ನು ಮಸೀದಿ ನಿರ್ಮಾಣಕ್ಕೆ ಮರುಬಳಕೆ ಮಾಡಿದ ಸುಳಿವುಗಳು



ಏನು ಈ ಭೋಜಶಾಲೆ?

ಧಾರ ನಗರದ ಐತಿಹಾಸಿಕ ಕೇಂದ್ರದಲ್ಲಿರುವ ಭೋಜಶಾಲೆ 11ನೇ ಶತಮಾನಕ್ಕೆ ಸೇರಿದ ಸ್ಮಾರಕ. ಪರಮಾರ ವಂಶದ ರಾಜ ಭೋಜನು ಇದನ್ನು ಸಂಸ್ಕೃತ ಶಿಕ್ಷಣ ಕೇಂದ್ರವಾಗಿ ನಿರ್ಮಿಸಿದ್ದನೆಂಬ ನಂಬಿಕೆ ಇದೆ. ಇಲ್ಲಿ ವಾಗ್ದೇವಿ ಸರಸ್ವತಿಯ ಆರಾಧನೆ ನಡೆಯುತ್ತಿತ್ತೆಂದು ಹಿಂದೂ ಸಂಘಟನೆಗಳು ಹೇಳುತ್ತವೆ. ಮುಸ್ಲಿಂ ಸಮುದಾಯದ ವಾದ ಬೇರೆ. ಅವರ ಪ್ರಕಾರ ಇದು ಕಮಾಲ್ ಮೌಲಾ ಮಸೀದಿ. ದೆಹಲಿ ಸುಲ್ತಾನರ ಕಾಲದಲ್ಲಿ ಮಸೀದಿಯಾಗಿ ರೂಪಾಂತರಗೊಂಡಿತ್ತೆಂದು ಅವರು ಹೇಳುತ್ತಾರೆ. ಇದೇ ಎರಡು ದಾವೆಗಳು ದಶಕಗಳಿಂದ ಸಂಘರ್ಷಕ್ಕೆ ಕಾರಣವಾಗಿದ್ದವು.

ಭೋಜಶಾಲೆ ತೀರ್ಪಿನಲ್ಲಿ ಅಯೋಧ್ಯೆ ಮಾದರಿ

ಮಧ್ಯಪ್ರದೇಶ ಹೈಕೋರ್ಟ್ ಭೋಜಶಾಲೆ–ಕಮಾಲ್ ಮೌಲಾ ಮಸೀದಿ ವಿವಾದದಲ್ಲಿ ತೀರ್ಪು ನೀಡುವಾಗ, 2019ರ ಅಯೋಧ್ಯೆ ತೀರ್ಪಿನ 10 ಪ್ರಮುಖ ತತ್ವಗಳನ್ನು ಉಲ್ಲೇಖಿಸಿದೆ. ಭೋಜಶಾಲೆ ಒಂದು ಸರಸ್ವತಿ ದೇವಿಯ ದೇವಸ್ಥಾನ ಎಂಬ ನಿರ್ಣಯಕ್ಕೆ ಬರುವಾಗ ಈ ಅಂಶಗಳನ್ನು ಆಧಾರವನ್ನಾಗಿ ಪರಿಗಣಿಸಲಾಗಿದೆ.

1. ಸಾಕ್ಷ್ಯಕ್ಕೆ ಗಣಿತೀಯ ಖಚಿತತೆ ಬೇಕಿಲ್ಲ

ಇಂತಹ ಧಾರ್ಮಿಕ–ಐತಿಹಾಸಿಕ ವಿವಾದಗಳಲ್ಲಿ 'ನೂರು ಪ್ರತಿಶತ ಸಾಬೀತು' ಅಗತ್ಯವಿಲ್ಲ. ನ್ಯಾಯಾಲಯವು 'ಸಂಭವನೀಯತೆಯ ಪ್ರಾಬಲ್ಯ' ಅಂದರೆ ಹೆಚ್ಚು ಸಾಧ್ಯತೆಯ ಆಧಾರದಲ್ಲಿ ನಿರ್ಧಾರಕ್ಕೆ ಬರಬಹುದು.

2. ನಂಬಿಕೆ ಮತ್ತು ಆರಾಧನೆ ಮುಖ್ಯ

ನ್ಯಾಯಾಲಯದ ಕೆಲಸ ಧಾರ್ಮಿಕ ಕಟ್ಟಡದ 'ತತ್ತ್ವಶಾಸ್ತ್ರೀಯ ಶುದ್ಧತೆ' ಪರಿಶೀಲಿಸುವುದಲ್ಲ. ಜನರ ನಂಬಿಕೆ, ಆರಾಧನೆಯ ನಿರಂತರತೆ, ಧಾರ್ಮಿಕ ಬಳಕೆ, ಐತಿಹಾಸಿಕ ಉಲ್ಲೇಖಗಳೇ ಮುಖ್ಯ.

3. ದೇವತೆ, ಧಾರ್ಮಿಕ ಉದ್ದೇಶದ ರಕ್ಷಣೆ

ಒಂದು ಧಾರ್ಮಿಕ ಸ್ಥಳದ ಮೂಲ ಉದ್ದೇಶ ಮತ್ತು ಅದಕ್ಕೆ ಸಂಬಂಧಿಸಿದ ದೇವತೆಯ ರಕ್ಷಣೆಯೇ ನ್ಯಾಯಾಲಯದ ಮೊದಲ ಆದ್ಯತೆ ಎಂದು ತತ್ವ ಹೇಳುತ್ತದೆ. ಭಕ್ತರು ದೇವರ ಪರವಾಗಿ ಹಕ್ಕು ರಕ್ಷಿಸಬಹುದು.

4. ಧಾರ್ಮಿಕ ಹಕ್ಕು ನಾಶವಾಗುವುದಿಲ್ಲ

ಮೂರ್ತಿ ಇಲ್ಲದಿದ್ದರೂ ಅಥವಾ ಧ್ವಂಸವಾದರೂ ಆ ಸ್ಥಳದ ಧಾರ್ಮಿಕ ಸ್ವರೂಪ ಅಂತ್ಯವಾಗುವುದಿಲ್ಲ. ಧಾರ್ಮಿಕ ಉದ್ದೇಶ ಮುಂದುವರಿಯುತ್ತದೆ.

5. ನಂಬಿಕೆಗೆ ದಾಖಲೆ ಇರಬೇಕೆಂದಿಲ್ಲ

ಧಾರ್ಮಿಕ ನಂಬಿಕೆಗಳು ಯಾವಾಗಲೂ ದಾಖಲೆಗಳ ಮೂಲಕ ಸಾಬೀತಾಗುವುದಿಲ್ಲ. ಜನರ ನಂಬಿಕೆ ಮತ್ತು ಪರಂಪರೆಗೂ ನ್ಯಾಯಾಲಯ ಮಹತ್ವ ಕೊಡಬೇಕು ಎಂದು ಅಯೋಧ್ಯೆ ತೀರ್ಪು ಹೇಳಿತ್ತು.

6. ಗೆಜೆಟ್ ದಾಖಲೆಗಳಿಗೆ ಸಾಕ್ಷ್ಯ ಮೌಲ್ಯ

ಸರ್ಕಾರಿ ಗೆಜೆಟ್, ಗಜೆಟಿಯರ್, ಅಧಿಕೃತ ದಾಖಲೆಗಳಿಗೆ ನ್ಯಾಯಾಲಯದಲ್ಲಿ ಸಾಕ್ಷ್ಯ ಮೌಲ್ಯವಿದೆ ಎಂದು ತತ್ವ ಸ್ಪಷ್ಟಪಡಿಸುತ್ತದೆ.

7. ದಾಖಲೆಗಳಲ್ಲಿ ಉಲ್ಲೇಖ ಮಹತ್ವದ್ದು

ಸರ್ಕಾರದ ಪತ್ರವ್ಯವಹಾರ, ಆಡಳಿತಾತ್ಮಕ ದಾಖಲೆಗಳಲ್ಲಿ ಯಾವುದಾದರೂ ಸ್ಥಳವನ್ನು ನಿರಂತರವಾಗಿ ಒಂದು ಧಾರ್ಮಿಕ ಗುರುತಿನೊಂದಿಗೆ ಉಲ್ಲೇಖಿಸಿದ್ದರೆ ಅದು ಪ್ರಮುಖ ಸಾಕ್ಷ್ಯವಾಗಬಹುದು ಎಂದು ಹೇಳಲಾಗಿದೆ.

8. ವಕ್ಫ್ ಬೈ ಯೂಸರ್/ಸ್ವಯಂ ಹಕ್ಕಲ್ಲ

ಒಂದು ಸಮುದಾಯ ದೀರ್ಘಕಾಲ ಬಳಸಿದೆ ಎನ್ನುವುದರಿಂದ ಮಾತ್ರ ಇನ್ನೊಂದು ಸಮುದಾಯದ ಸ್ಥಾಪಿತ ಧಾರ್ಮಿಕ ಹಕ್ಕು ನಾಶವಾಗುವುದಿಲ್ಲ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

9. ಪುರಾತತ್ವ ವರದಿ ದುರ್ಬಲ ಸಾಕ್ಷ್ಯವಲ್ಲ

ಭಾರತೀಯ ಪುರಾತತ್ವ ಇಲಾಖೆ ವರದಿ ಬಹುಶಾಖಾ ಅಧ್ಯಯನದ ಮೇಲೆ ಆಧಾರಿತವಾಗಿರುವುದರಿಂದ ಅದನ್ನು ದುರ್ಬಲ ಸಾಕ್ಷ್ಯ ಎಂದು ತಳ್ಳಿ ಹಾಕಲಾಗುವುದಿಲ್ಲ.

10. ಧಾರ್ಮಿಕ ಚಿಹ್ನೆ ಸಾಕ್ಷ್ಯ

ಶಿಲ್ಪಗಳು, ಶಾಸನಗಳು, ಧಾರ್ಮಿಕ ಚಿಹ್ನೆಗಳು, ವಾಸ್ತುಶೈಲಿ ಮೊದಲಾದ ಪುರಾತತ್ವ ಅಂಶಗಳು ಆ ಸ್ಥಳದ ಮೂಲ ಧಾರ್ಮಿಕ ಸ್ವರೂಪವನ್ನು ತಿಳಿಸುವ ಮಹತ್ವದ ಸಾಕ್ಷ್ಯಗಳಾಗಬಹುದು.



ಕಿರುಸುದ್ದಿ

ಟಿಎಂಸಿ ಸಂಸದ ಅಭಿಷೇಕ್ ಬ್ಯಾನರ್ಜಿ ವಿರುದ್ಧ ಎಫ್‌ಐಆರ್

ಕೋಲ್ಕತಾ: ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆ ವೇಳೆ ಪ್ರಚೋದನಾಕಾರಿ ಹೇಳಿಕೆಗಳನ್ನು ನೀಡಿದ ಆರೋಪದ ಮೇಲೆ ತೃಣಮೂಲ ಕಾಂಗ್ರೆಸ್ ಸಂಸದ ಅಭಿಷೇಕ್ ಬ್ಯಾನರ್ಜಿ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ವಿಧಾನಸಭೆ ಚುನಾವಣೆಯ ಫಲಿತಾಂಶ ಪ್ರಕಟವಾದ ಮರುದಿನ, ಅಂದರೆ ಮೇ 5ರಂದು ಸಾಮಾಜಿಕ ಕಾರ್ಯಕರ್ತ ರಾಜೀಬ್ ಸರ್ಕಾರ್ ಉತ್ತರ 24 ಪರಗಣ ಜಿಲ್ಲೆಯ ಬಗುಯಾತಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಅಭಿಷೇಕ್ ಬ್ಯಾನರ್ಜಿ, ಏಪ್ರಿಲ್ 27 ಮತ್ತು ಮೇ 3 ರ ನಡುವೆ ಚುನಾವಣಾ ಕಾರ್ಯಕ್ರಮಗಳಲ್ಲಿ ಮತ ಎಣಿಕೆ ಪ್ರಕ್ರಿಯೆ ಮತ್ತು ಚುನಾವಣೋತ್ತರ ಹಿಂಸಾಚಾರದ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಸಂಬಂಧಿಸಿದಂತೆ ಪ್ರಚೋದನಾಕಾರಿ ಭಾಷಣ ಮಾಡಿದ್ದರು.

ಇಸ್ರೇಲ್ ದಾಳಿ: ಹಮಾಸ್ ವಿಂಗ್ ಕಮಾಂಡರ್ ವಧೆ

ಕೈರೋ: ಇಸ್ರೇಲ್‌ನ ಶುಕ್ರವಾರದ ದಾಳಿಯಲ್ಲಿ ಹಮಾಸ್ ಮಿಲಿಟರಿ ವಿಂಗ್ ಕಮಾಂಡರ್ ಇಝ್ ಅಲ್–ದಿನ್ಅಲ್ –ಹದಾದ್, ಈತನ ಪತ್ನಿ ಮತ್ತು ಪುತ್ರಿ ಸತ್ತಿರುವುದನ್ನು ಹಮಾಸ್‌ನ ಹಿರಿಯ ಅಧಿಕಾರಿ ರಾಯ್ಟರ್‌ಗೆ ತಿಳಿಸಿದ್ದಾರೆ. ನಾವು ಹಮಾಸ್ ಮಿಲಿಟರಿ ಮುಖ್ಯಸ್ಥ ಹದಾದ್‌ನನ್ನು ಟಾರ್ಗೆಟ್ ಮಾಡಿ ವೈಮಾನಿಕ ದಾಳಿ ನಡೆಸಿದ್ದೇವೆಂದು ಇಸ್ರೇಲ್ ಘೋಷಿಸಿದ ಮರುದಿನ ಹಮಾಸ್ ಅಧಿಕಾರಿಗಳು ಹದಾದ್ ಸಾವನ್ನು ದೃಢೀಕರಿಸಿದ್ದಾರೆ. ನಾವು ಶುಕ್ರವಾರ ಹದಾದ್‌ನನ್ನು ಟಾರ್ಗೆಟ್ ಮಾಡಿ ವೈಮಾನಿಕ ದಾಳಿ ನಡೆಸಿದ್ದೇವೆ ಎಂದು ಇಸ್ರೇಲ್ ಪ್ರಧಾನಿ ನೆತನ್ಯಾಹು ಮತ್ತು ಇಸ್ರೇಲ್ ರಕ್ಷಣಾ ಸಚಿವ ಕಟ್ಜ್ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದರು.

ಹಿಜ್ಬುಲ್ ಶಂಕಿತನ ಆಸ್ತಿ ವಶಪಡಿಸಿದ ಪೊಲೀಸ್

ಶ್ರೀನಗರ: ಸದ್ಯ ಪಾಕಿಸ್ತಾನದಿಂದ ಸಕ್ರಿಯನಾಗಿದ್ದಾನೆ ಎನ್ನಲಾದ ಹಿಜ್ಬುಲ್ ಮುಜಾಹಿದೀನ್ ಉಗ್ರ ಸಂಘಟನೆಯೊಂದಿಗೆ ಸಂಪರ್ಕದಲ್ಲಿರುವ ಶಂಕಿತನಿಗೆ ಸೇರಿದ ಆಸ್ತಿಯನ್ನು ಶನಿವಾರ ಸ್ಥಳೀಯ ಪೊಲೀಸರು ಮುಟ್ಟುಗೋಲು ಮಾಡಿರುವುದಾಗಿ ತಿಳಿಸಿದ್ದಾರೆ. ಪೊಲೀಸ್ ವಕ್ತಾರರ ಪ್ರಕಾರ, ಶಂಕಿತ ನದಿಹಾಲ್ ರಾಫಿಯಾಬಾದ್ ನಿವಾಸಿ ರಶೀದ್ ಉದ್–ದೀನ್ ಖುರೇಶಿ ಆಗಿದ್ದಾನೆ. ಹೊರಹೋಗುವಿಕೆ ಮತ್ತು ಆಂತರಿಕ ಚಲನೆ ನಿಯಂತ್ರಣ ಸುಗ್ರೀವಾಜ್ಞೆ, 2005 ಕಾಯ್ದೆಯ ಸೆಕ್ಷನ್ 2/3ರ ಅನ್ವಯದಲ್ಲಿ ಪಂಜಲ್ಲಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಮಧ್ಯಸ್ಥಿಕೆ ತೀರ್ಪಿಗೆ ಯಾವುದೇ ಮನ್ನಣೆ ಇಲ್ಲ

ಹೊಸದಿಲ್ಲಿ: ಸಿಂಧೂ ಜಲ ಒಪ್ಪಂದಕ್ಕೆ ಸಂಬಂಧಿಸಿದಂತೆ ಮಧ್ಯಸ್ಥಿಕೆ ನ್ಯಾಯಪೀಠ ನೀಡಿರುವ ಇತ್ತೀಚಿನ ತೀರ್ಪನ್ನು ಭಾರತ ಸರ್ಕಾರ ಶನಿವಾರ ತಳ್ಳಿ ಹಾಕಿದ್ದು, 'ಅಕ್ರಮವಾಗಿ ರಚಿಸಲಾದ ನ್ಯಾಯಪೀಠದ ಯಾವುದೇ ಆದೇಶ ಭಾರತಕ್ಕೆ ಬಾಧ್ಯಕರವಲ್ಲ' ಎಂದು ಸ್ಪಷ್ಟಪಡಿಸಿದೆ. ಜೊತೆಗೆ ಇಂಡಸ್ ಜಲ ಒಪ್ಪಂದವನ್ನು ಅಮಾನತಿನಲ್ಲಿ ಇಡುವ ಭಾರತದ ನಿರ್ಧಾರ ಮುಂದುವರಿಯುತ್ತದೆ ಎಂದೂ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಘೋಷಿಸಿದೆ.

ಪಾಕಿಸ್ತಾನವು ಕಿಶನ್‌ಗಂಗಾ ಹಾಗೂ ರಾಟ್ಲೆ ಜಲವಿದ್ಯುತ್ ಯೋಜನೆಗಳಿಗೆ ಸಂಬಂಧಿಸಿದ ವಿವಾದವನ್ನು ಆಧರಿಸಿ ಮಧ್ಯಸ್ಥಿಕೆ ಪ್ರಕ್ರಿಯೆ ಆರಂಭಿಸಿತ್ತು. ಈ ಹಿನ್ನೆಲೆ 'ಗರಿಷ್ಠ ನೀರು ಸಂಗ್ರಹ ಸಾಮರ್ಥ್ಯ' ಕುರಿತ ಪೂರಕ ತೀರ್ಪನ್ನು ನ್ಯಾಯಪೀಠ ಪ್ರಕಟಿಸಿತ್ತು. ಆದರೆ ಭಾರತ ಇದನ್ನು ಸಂಪೂರ್ಣವಾಗಿ ಅಮಾನ್ಯ ಎಂದು ಘೋಷಿಸಿದೆ.

ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಪ್ರತಿಕ್ರಿಯಿಸಿ, 'ಈ ನ್ಯಾಯಪೀಠವನ್ನು ಭಾರತ ಯಾವತ್ತೂ ಮಾನ್ಯತೆ ನೀಡಿಲ್ಲ. ಅದರ ಯಾವುದೇ ಕ್ರಮ, ಆದೇಶ ಅಥವಾ ತೀರ್ಪು ಶೂನ್ಯ ಹಾಗೂ ಅಮಾನ್ಯ' ಎಂದು ಹೇಳಿದ್ದಾರೆ.

ಭಾರತವು ಕಳೆದ ವರ್ಷ ಪಹಲ್ಗಾಮ್ ಉಗ್ರ ದಾಳಿಯ ನಂತರ ಇಂಡಸ್ ಜಲ ಒಪ್ಪಂದವನ್ನು ಅಮಾನತಿನಲ್ಲಿ ಇಟ್ಟಿರುವುದಾಗಿ ಘೋಷಿಸಿತ್ತು. ಆದರ ಬಳಿಕ ಪಾಕಿಸ್ತಾನ ಜಾಗತಿಕ ಮಟ್ಟದಲ್ಲಿ ಕಾನೂನು ಹೋರಾಟ ಮುಂದುವರಿಸುತ್ತಿದೆ. ಆದರೆ ಭಾರತ ತನ್ನ ಸಾರ್ವಭೌಮ ಹಕ್ಕುಗಳಿಗೆ ವಿರುದ್ಧವಾದ ಯಾವುದೇ ಹೊರಗಿನ ಮಧ್ಯಸ್ಥಿಕೆಯನ್ನು ಒಪ್ಪುವುದಿಲ್ಲ ಎಂಬ ನಿಲುವನ್ನು ಮರುದೃಢಪಡಿಸಿದೆ.

ನೀಟ್ ಪತ್ರಿಕೆ ಸೋರಿಕೆ: ಉಪನ್ಯಾಸಕಿ ಬಂಧನ

ಹೊಸದಿಲ್ಲಿ: ನೀಟ್–ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿ ಶನಿವಾರ ಪುಣೆಯ ಜೀವಶಾಸ್ತ್ರ ಉಪನ್ಯಾಸಕಿ ಮನೀಶಾ ಗುರುನಾಥ್ ಮಂಧಾರೆ ಅವರನ್ನು ಸಿಬಿಐ ಅಧಿಕಾರಿಗಳು ದಿಲ್ಲಿಯಲ್ಲಿ ಬಂಧಿಸಿದ್ದಾರೆ.

ಪರೀಕ್ಷೆಗೂ ಮುನ್ನ ಜೀವಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ವಿಷಯಗಳ ಪ್ರಮುಖ ಪ್ರಶ್ನೆಗಳನ್ನು ಉಪನ್ಯಾಸಕಿ ಮನೀಶಾ ವಿದ್ಯಾರ್ಥಿಗಳ ಜತೆ ಹಂಚಿಕೊಂಡಿದ್ದಾರೆ. ಕೋಚಿಂಗ್ ಕ್ಲಾಸ್‌ಗಳನ್ನು ನಡೆಸಿ ಆಯ್ದ ವಿದ್ಯಾರ್ಥಿಗಳಿಗೆ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಲಾಗಿದೆ ಎಂದು ತನಿಖೆಯಲ್ಲಿ ತಿಳಿದುಬಂದಿದೆ. ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ), ಮನೀಶಾ ಅವರನ್ನು ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶಾತಿ ಪರೀಕ್ಷೆಗಳಿಗೆ (ಪದವಿಪೂರ್ವ) ವಿಶೇಷಜ್ಞೆಯನ್ನಾಗಿ ನೇಮಿಸಿತ್ತು ಎಂದು ಸಿಬಿಐ ತಿಳಿಸಿದೆ. ಏಪ್ರಿಲ್‌ನಲ್ಲಿ ಮನೀಶಾ ವಾಘ್ಮರೆ ಮತ್ತು ಪುಣೆಯ ಇನ್ನೋರ್ವ ಬಂಧಿತ ಆರೋಪಿ ಜತೆಗೂಡಿ ತಮ್ಮ ನಿವಾಸದಲ್ಲೇ ನಡೆಸಿದ ಕೋಚಿಂಗ್ ಕ್ಲಾಸ್‌ನಲ್ಲಿ ಪ್ರಮುಖ ಪ್ರಶ್ನೆಗಳನ್ನು ಆಯ್ದ ವಿದ್ಯಾರ್ಥಿಗಳಿಗೆ ಬಹಿರಂಗಪಡಿಸಿದ್ದರು. ಹಲವು ಪ್ರಶ್ನೆಗಳು ಸೋರಿಕೆಯಾದ ಹಿನ್ನೆಲೆ ಮೇ 3ರಂದು ನಡೆಯಬೇಕಿದ್ದ ಗೆಸ್ ಪೇಪರ್ ಪರೀಕ್ಷೆಯನ್ನು ಎನ್‌ಟಿಎ ರದ್ದುಗೊಳಿಸಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿ ಸಿಬಿಐ ದಿಲ್ಲಿ, ಜೈಪುರ, ಗುರುಗ್ರಾಮ, ನಾಸಿಕ್, ಪುಣೆ ಮತ್ತು ಅಹಿಲ್ಯಾನಗರ್‌ನಲ್ಲಿ ತಪಾಸಣೆ ನಡೆಸಿದೆ.

10 ದಿನಗಳ ಸಿಬಿಐ ಕಸ್ಟಡಿ: ಪ್ರಮುಖ ಆರೋಪಿಗಳಾದ ಶುಭಂ ಖೈರ್ನಾರ್, ಮನೀಶಾ ವಾಘ್ಮರೆ, ಧನಂಜಯ್ ಲೋಖಂಡೆ, ಪಿ.ವಿ. ಕುಲಕರ್ಣಿ ಅವರನ್ನು ವಿಚಾರಣೆಗೆ ಹಾಜರುಪಡಿಸಿದ ಸಿಬಿಐ 14 ದಿನಗಳ ಕಸ್ಟಡಿಗೆ ಕೋರಿದ್ದು, ನ್ಯಾಯಾಲಯ 10 ದಿನಗಳ ಕಸ್ಟಡಿಗೊಪ್ಪಿಸಿದೆ.

ಟ್ರಂಪ್: ಚೀನಾ ನೆನಪಿನ ಬುತ್ತಿ ಕಸದ ಬುಟ್ಟಿಗೆ!

ಬೀಜಿಂಗ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಅವರ ನಿಯೋಗ ಶುಕ್ರವಾರ ಏರ್‌ಫೋರ್ಸ್ ಒನ್ ವಿಮಾನ ಹತ್ತುವ ಮುನ್ನ ತಮಗೆ ಸಿಕ್ಕಿದ್ದ ಎಲ್ಲಾ ಚೀನೀ ಉಡುಗೊರೆಗಳು ಮತ್ತು ಬ್ಯಾಡ್ಜ್‌ಗಳನ್ನು ರನ್‌ವೇ ಬಳಿಯಿದ್ದ ಕಸದ ಬುಟ್ಟಿಗೆ ಸುರಿದು ಕೈ ತೊಳೆದುಕೊಂಡರು! ಇದರೊಂದಿಗೆ ಅಮೆರಿಕ ಅಧ್ಯಕ್ಷರ ನಾಟಕೀಯ ಚೀನಾ ಪ್ರವಾಸ ಕೊನೆಗೊಂಡಿತು.



ಸೋಯಾಬೀನ್ ಮತ್ತು ಬೋಯಿಂಗ್ ವಿಮಾನಗಳ ಒಪ್ಪಂದಗಳನ್ನಷ್ಟೇ ಮುಗಿಸಿ ಖಾಲಿ ಕೈಯಿಂದ ಹೊರಟ ಅಮೆರಿಕನ್ನರು, ಚೀನಾದ ಗೂಢಚರ್ಯೆಯ ಭೀತಿಯಿಂದ ತಮ್ಮ ಬರ್ನರ್ ಫೋನ್‌ಗಳ ಜತೆಗೆ, ಲ್ಯಾಪೆಲ್ ಬ್ಯಾಡ್ಜ್‌ಗಳು ಮತ್ತು ಪತ್ರಿಕಾ ಆಮಂತ್ರಣ ಪತ್ರಿಕೆಗಳನ್ನು ವಿಮಾನದ ಮೆಟ್ಟಿಲ ಬುಡದಲ್ಲೇ ಎಸೆದರು. ಚೀನಾದ ಕಣ್ಗಾವಲಿನಿಂದ ತಪ್ಪಿಸಿಕೊಳ್ಳಲು ಹೀಗೆ ಮಾಡಲಾಯಿತೆಂದು ಎಂದು ಶ್ವೇತಭವನದ ವರದಿಗಾರ್ತಿ ಎಮಿಲಿ ಗುಡಿನ್ ಬಹಿರಂಗಪಡಿಸಿದ್ದಾರೆ. ತಂತ್ರಜ್ಞಾನ ದೈತ್ಯರಾದ ಎಲಾನ್ ಮಸ್ಕ್ ಮತ್ತು ಎನ್ವಿಡಿಯಾ ಸಿಇಒ ಜೆನ್ಸನ್ ಹುವಾಂಗ್ ಕೂಡ ತಮ್ಮ ವೈಯಕ್ತಿಕ ಗ್ಯಾಜೆಟ್‌ಗಳನ್ನು ಅಮೆರಿಕದಲ್ಲೇ ಬಿಟ್ಟು ಬಂದಿದ್ದರು. ಇಡೀ ಪ್ರವಾಸದಲ್ಲಿ ಸಿಗ್ನಲ್ ಬ್ಲಾಕ್ ಮಾಡುವ 'ಫ್ಯಾರಡೆ ಬ್ಯಾಗ್' ಹಾಗೂ ಅತ್ಯಂತ ಸರಳ ಬರ್ನರ್ ಫೋನ್‌ಗಳನ್ನಷ್ಟೇ ಅವರು ಬಳಸಿದ್ದರು. ನಾವು ಕೂಡ ಅವರ ಮೇಲೆ ಅಷ್ಟೇ ನಿಗಾ ಇಟ್ಟಿರುತ್ತೇವೆ ಎಂದು ಟ್ರಂಪ್ ಉಭಯ ದೇಶಗಳ ನಡುವಿನ ಗುಪ್ತಚರ ಪೈಪೋಟಿಯನ್ನು ಒಪ್ಪಿಕೊಂಡಿದ್ದಾರೆ!

ಭೋಜಶಾಲಾದಲ್ಲಿ ಭಕ್ತರಿಂದ ಪೂಜೆ



ಧಾರ್: ಮಧ್ಯಪ್ರದೇಶ ಹೈಕೋರ್ಟ್ ತೀರ್ಪು ಪ್ರಕಟಿಸಿದ ಮರುದಿನವಾದ ಶನಿವಾರದಂದು ಹಿಂದು ಭಕ್ತರು ಮತ್ತು ಭೋಜ್ ಉತ್ಸವ ಸಮಿತಿಯ ಪದಾಧಿಕಾರಿಗಳು ಭೋಜ್‌ಶಾಲಾ ಸಂಕೀರ್ಣದಲ್ಲಿ ಪೂಜೆ ಸಲ್ಲಿಸಿ ಆರತಿ ಬೆಳಗಿದರು. ವಿವಾದಿತ ಭೋಜಶಾಲಾ ದೇವಸ್ಥಾನ–ಕಮಲ್ ಮೌಲಾ ಮಸೀದಿ ಸಂಕೀರ್ಣ ಸರಸ್ವತಿ ದೇವಿಗೆ ಸಮರ್ಪಿತವಾದ ದೇವಾಲಯ ಎಂದು ಮಧ್ಯಪ್ರದೇಶ ಹೈಕೋರ್ಟ್ ಶುಕ್ರವಾರ ಘೋಷಿಸಿತ್ತು. ಮುಸ್ಲಿಮರಿಗೆ ಶುಕ್ರವಾರದ ನಮಾಜ್‌ಗೆ ಅವಕಾಶ ನೀಡಿ ಮತ್ತು ಹಿಂದುಗಳ ಪೂಜಾ ಹಕ್ಕನ್ನು ನಿಯಂತ್ರಿಸಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) 2003ರಲ್ಲಿ ಹೊರಡಿಸಿದ್ದ ಆದೇಶವನ್ನು ನ್ಯಾಯಾಲಯ ರದ್ದುಗೊಳಿಸಿತು.

ಇನ್ನು ಮುಂದೆ ಆತ ಆಫ್ರಿಕಾ ಜನರನ್ನು ಹೆದರಿಸಲ್ಲ: ಟ್ರಂಪ್

ಐಸಿಸ್ ಕಮಾಂಡರ್ ಅಬು ಹತ್ಯೆ

ವಾಷಿಂಗ್ಟನ್: ಇಸ್ಲಾಮಿಕ್ ಸ್ಟೇಟ್(ಐಸಿಸ್) ಜಾಗತಿಕ ಸಂಪರ್ಕಜಾಲದಲ್ಲೇ 2ನೇ ರ್‍ಯಾಂಕ್‌ನ ಕಮಾಂಡರ್ ಅಬು ಬಿಲಾಲ್ ಅಲ್–ಮಿನುಕಿ(44) ಸಾವಿನ ಸುದ್ದಿಯನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತೀಯ ಕಾಲಮಾನ ಶನಿವಾರ ಬೆಳಗ್ಗೆ ಘೋಷಿಸಿದ್ದಾರೆ.

ಅಮೆರಿಕ–ನೈಜೀರಿಯಾ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಐಸಿಸ್ ದ್ವಿತೀಯ ರ್‍ಯಾಂಕ್‌ನ ಕಮಾಂಡರ್ ಅಬು ಬಿಲಾಲ್ ಹತನಾಗಿದ್ದಾನೆ. ಇನ್ನು ಮುಂದೆ ಆತ ಆಫ್ರಿಕಾ ಜನರನ್ನು ಹೆದರಿಸಲ್ಲ ಎಂದು ಅಧ್ಯಕ್ಷ ಟ್ರಂಪ್ ಭರವಸೆ ನೀಡಿದ್ದಾರೆ. ವಿಶೇಷ ಕಾರ್ಯಾಚರಣೆ ಆಫ್ರಿಕಾದಲ್ಲಿ ನಡೆದಿದ್ದು, ಜಂಟಿ ಕಾರ್ಯಾಚರಣೆಯಲ್ಲಿ ನೆರವಾದ ಆಫ್ರಿಕಾ ಸರ್ಕಾರಕ್ಕೂ ಅಧ್ಯಕ್ಷ ಟ್ರಂಪ್ ಕೃತಜ್ಞತೆಗಳನ್ನು ತಿಳಿಸಿದ್ದಾರೆ.

ಟ್ರಂಪ್ ಹೇಳಿದ್ದೇನು?: ನನ್ನ ಮಾರ್ಗದರ್ಶನ ಅನ್ವಯ ಅಮೆರಿಕ ಮತ್ತು ಆಫ್ರಿಕಾ ಸಶಸ್ತ್ರ ಪಡೆಗಳು ಜಂಟಿ ಕಾರ್ಯಾಚರಣೆ ನಡೆಸಿವೆ. ಈತ ಆಫ್ರಿಕಾದಲ್ಲಿ ಅಡಗಿದ್ದಾನೆಂದು ತಿಳಿಯಿತು. ನಮ್ಮ ನಿಖರವಾದ ಯೋಜನೆ ಕಾರ್ಯಗತವಾಗಿದ್ದು, ವಿಶ್ವದಲ್ಲೇ ಅತ್ಯಂತ ಸಕ್ರಿಯವಾಗಿದ್ದ ಭಯೋತ್ಪಾದಕನನ್ನು ಹೊಡೆದುರುಳಿಸಿದ್ದೇವೆ. ಈತನ ಸಾವಿನಿಂದ ಐಸಿಸ್ ಜಾಗತಿಕ ಉಗ್ರ ಚಟುವಟಿಕೆಗಳು ಬಹಳ ಕುಂಠಿತವಾಗಲಿದೆ. ಕಾರ್ಯಾಚರಣೆಗೆ ಬೆಂಬಲಿಸಿದ ನೈಜೀರಿಯಾ ಸರ್ಕಾರಕ್ಕೆ ಧನ್ಯವಾದಗಳು. ಗಾಡ್ ಬ್ಲೆಸ್ ಅಮೆರಿಕ ಎಂದು ಟ್ರುತ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಆಫ್ರಿಕಾದಲ್ಲಿ ಅಮೆರಿಕ ಮತ್ತು ನೈಜೀರಿಯಾ ಜಂಟಿ ಕಾರ್ಯಾಚರಣೆ

ಅಬು ಬಿಲಾಲ್ ಯಾರು?: 1982ರಲ್ಲಿ ನೈಜೀರಿಯಾದ ಬೊರ್ನೊ ಪ್ರದೇಶದಲ್ಲಿ ಬಿಲಾಲ್ ಜನಿಸಿದ್ದ. ಈತನ ಇನ್ನೊಂದು ಹೆಸರು ಅಬು ಬಕರ್ ಇಬಿನ್ ಮುಹಮ್ಮದ್ ಇಬಿನ್ ಅಲಿ ಅಲ್– ಮೈನುಕಿ, ಈತ ಐಸಿಸ್ ಉಗ್ರ ಸಂಘಟನೆಯ ಹಿರಿಯ ನಾಯಕರಲ್ಲೊಬ್ಬ. ಆಫ್ರಿಕಾದ ಸಾಹೇಲ್ ಪ್ರದೇಶದಲ್ಲಿ ಉಗ್ರ ದಾಳಿ ನಡೆಸಿದ್ದ. 2018ರಲ್ಲಿ ಪಶ್ಚಿಮ ಆಫ್ರಿಕಾ ಐಸಿಸ್ ನಾಯಕನಾಗಿದ್ದ. 2023ರಲ್ಲಿ ಈತ ಐಸಿಸ್‌ನ ಹಿರಿಯ ನಾಯಕನೆಂದು ಅಮೆರಿಕ ಗೃಹ ಇಲಾಖೆ ಗುರುತಿಸಿತ್ತು. ಐಸಿಸ್ ಜಾಗತಿಕ ಉಗ್ರ ಚಟುವಟಿಕೆಗಳಲ್ಲಿ ಈತ ಪ್ರಮುಖ ಪಾತ್ರ ವಹಿಸುತ್ತಿದ್ದ.

1871ರಲ್ಲಿ ದ್ವೀಪ ಅಚ್ಚರಿ ಘಟನೆಗೆ ಸಾಕ್ಷಿ | ಸಂಶೋಧನೆ ಬಹಿರಂಗ

5 ಹಸುಗಳಿಂದ 2 ಸಾವಿರದ ಹಿಂಡು!

ಪ್ಯಾರಿಸ್: 1871ರಲ್ಲಿ ನಿರ್ಜನ ದ್ವೀಪವೊಂದರಲ್ಲಿ ಬಿಟ್ಟು ಹೋಗಿದ್ದ ಕೇವಲ ಐದು ಹಸುಗಳು ಆಶ್ಚರ್ಯಕರ ರೀತಿಯಲ್ಲಿ ವಿಕಸನಗೊಂಡು ಸುಮಾರು 2,000 ಪ್ರಾಣಿಗಳ ಬೃಹತ್ ಹಿಂಡಾಗಿ ಬೆಳೆದಿರುವುದನ್ನು ವಂಶವಾಹಿ ಸಂಶೋಧನೆಯೊಂದು ಪತ್ತೆಹಚ್ಚಿದೆ.



ದಕ್ಷಿಣ ಹಿಂದೂ ಮಹಾಸಾಗರದ ಆಮ್‌ಸ್ಟರ್‌ಡ್ಯಾಂ ದ್ವೀಪದಲ್ಲಿ ವಾಸಿಸಲು ಪ್ರಯತ್ನಿಸಿ ವಿಫಲನಾದ ಹರ್ಟಿನ್ ಎಂಬ ಫ್ರೆಂಚ್ ರೈತ, 1871ರಲ್ಲಿ ಅಲ್ಲಿಂದ ಹೊರಡುವಾಗ ಒಂದು ಹೋರಿ, ಎರಡು ಹಸು ಮತ್ತು ಎರಡು ಕರುಗಳನ್ನು ಬಿಟ್ಟು ಹೋಗಿದ್ದ ಎನ್ನಲಾಗಿದೆ. ಜ್ವಾಲಾಮುಖಿಗಳಿಂದ ಕೂಡಿದ, ತೀವ್ರ ಗಾಳಿ ಮತ್ತು ಚಳಿಯಿರುವ ಈ 55 ಚದರ ಕಿಲೋಮೀಟರ್ ವ್ಯಾಪ್ತಿಯ ದ್ವೀಪದಲ್ಲಿ ಈ ಹಸುಗಳು ಬದುಕುಳಿದಿರುವುದು ಮಾತ್ರವಲ್ಲ ಅಚ್ಚರಿ ಹುಟ್ಟಿಸುವಂತೆ ವಿಕಸನಗೊಂಡಿವೆ.

ಅತಿಹೆಚ್ಚು ಅಂತರ–ಸಂತಾನೋತ್ಪತ್ತಿ: ಸಾಮಾನ್ಯವಾಗಿ ಅಲ್ಪ ಸಂಖ್ಯೆಯ ಪ್ರಾಣಿಗಳಿಂದ ವಂಶವೃದ್ಧಿ ಅಸಾಧ್ಯವೆಂಬ ನಂಬಿಕೆಯಿದ್ದರೂ, 1988ರ ವೇಳೆಗೆ ಇವುಗಳ ಸಂಖ್ಯೆ 2,000ಕ್ಕೆ ಏರಿತ್ತು. ಈ ಹಿಂಡಿನಲ್ಲಿ ದಾಖಲೆ ಮಟ್ಟದ (0.30 ರಷ್ಟು) ಅಂತರ–ಸಂತಾನೋತ್ಪತ್ತಿ ನಡೆದಿದ್ದರೂ, ಇವುಗಳಲ್ಲಿ ಯಾವುದೇ ಆರೋಗ್ಯ ಸಮಸ್ಯೆ ಅಥವಾ ಸಂತಾನೋತ್ಪತ್ತಿ ದೋಷಗಳು ಕಂಡುಬಂದಿಲ್ಲ ಎಂಬ ಅಂಶ ವಿಜ್ಞಾನಿಗಳನ್ನು ಬೆರಗುಗೊಳಿಸಿದೆ.

ವಂಶವಾಹಿ ರಹಸ್ಯ: ವಂಶವಾಹಿ ತಜ್ಞ ಮ್ಯಾಥ್ಯೂ ಗೌಟಿಯರ್ ನೇತೃತ್ವದ ತಂಡ ನಡೆಸಿದ ಡಿಎನ್‌ಎ ವಿಶ್ಲೇಷಣೆಯ ಪ್ರಕಾರ, ಈ ಹಸುಗಳು ಶೇ. 75ರಷ್ಟು ಯುರೋಪಿಯನ್ ಜರ್ಸಿ ಮತ್ತು ಶೇ. 25ರಷ್ಟು ಹಿಂದೂ ಮಹಾಸಾಗರ ಭಾಗದ ಜೆಬು ತಳಿಯ ಮಿಶ್ರಣವಾಗಿವೆ. ದ್ವೀಪದ ವಾತಾವರಣಕ್ಕೆ ತಕ್ಕಂತೆ ಇವುಗಳ ಗಾತ್ರ ಕುಗ್ಗಿಲ್ಲ ಎಂಬುದು ಸಂಶೋಧನೆಯಲ್ಲಿ ದೃಢಪಟ್ಟಿದೆ.

ಪರಿಸರಕ್ಕೆ ಹಾನಿ!: ಈ ಹಸುಗಳು ದ್ವೀಪದ ಅಪರೂಪದ ಫೈಲಿಕಾ ಅರ್ಬೋರಿಯಾ ಮರಗಳನ್ನು ತಿಂದು ಹಾಕಿದ್ದವು ಮತ್ತು ಅಳಿವಿನಂಚಿನಲ್ಲಿರುವ ಅಲ್ಬಟ್ರಾಸ್ ಹಕ್ಕಿಗಳ ಸಂತಾನೋತ್ಪತ್ತಿಗೆ ಅಡ್ಡಿಯಾಗಿದ್ದವು. ಈ ಕಾರಣದಿಂದಾಗಿ ಫ್ರೆಂಚ್ ಸರ್ಕಾರ 1987ರಲ್ಲಿ ದ್ವೀಪಕ್ಕೆ ಬೇಲಿ ಹಾಕಿ, 2010ರ ವೇಳೆಗೆ ಎಲ್ಲಾ ಹಸುಗಳನ್ನು ಹಂತ ಹಂತವಾಗಿ ನಿರ್ಮೂಲನೆ ಮಾಡಿತು. 2019ರಲ್ಲಿ ಈ ದ್ವೀಪವನ್ನು ಯುನೆಸ್ಕೋ ವಿಶ್ವ ಪರಂಪರೆಯ ಪಟ್ಟಿಗೆ ಸೇರಿಸಲಾಗಿದೆ.



ಅಮ್ಮ ಮಂಗಳೂರಿಗೆ
ಮೇ 28 | 29 | 2026

ಮಾತಾ ಅಮೃತಾನಂದಮಯಿ ಮಠ | ಮಾನವೀಯ ಸೇವೆಯೇ ಇಲ್ಲಿ ಪ್ರಧಾನ | ಶಿಬಿರಗಳ ಮೂಲಕ ಬಡವರಿಗೆ ಆಸರೆ

ಇಪ್ಪತ್ತೈದು ವರ್ಷಗಳ ಸಾರ್ಥಕ ಸೇವೆಯಲ್ಲಿ...

▸ ಸುರೇಶ್ ಡಿ. ಪಳ್ಳಿ

'ಆರೋಗ್ಯವಂತ ವ್ಯಕ್ತಿಗೆ ಸಾವಿರ ಕನಸುಗಳಿರುತ್ತವೆ; ಅನಾರೋಗ್ಯವಂತನಿಗೆ ಒಂದೇ ಕನಸು–ಆರೋಗ್ಯ'.

ಈ ಮಾತು ಎಷ್ಟು ಅರ್ಥಪೂರ್ಣವಾದುದು ಅಲ್ಲವೇ? ಅನಾರೋಗ್ಯ ವ್ಯಕ್ತಿಯನ್ನೂ ಆರೋಗ್ಯವಂತನನ್ನಾಗಿಸಿ ಆತನ ಕನಸನ್ನು ನನಸು ಮಾಡುವಲ್ಲಿ ಸದ್ಗುರು ಶ್ರೀ ಮಾತಾ ಅಮೃತಾನಂದಮಯಿ ನೇತೃತ್ವದ ಸಂಸ್ಥೆ ನಿರಂತರ ಶ್ರಮಿಸುತ್ತಿದೆ. ಗಂಭೀರ ಕಾಯಿಲೆಯಿಂದ ಬಳಲುತ್ತಿದ್ದ ಲಕ್ಷಾಂತರ ಮಂದಿಗೆ ಸೂಕ್ತ ಚಿಕಿತ್ಸೆ ನೀಡಿ ಅವರನ್ನು ಗುಣಮುಖವಾಗಿಸಿದ್ದು ಒಂದು ಯಶೋಗಾಥೆಯೇ ಸರಿ. ಮಂಗಳೂರಿನ ಬೋಳೂರಿನಲ್ಲಿರುವ ಶ್ರೀ ಮಾತಾ ಅಮೃತಾನಂದಮಯಿ ಮಠದಲ್ಲಿಯೂ ಕಳೆದ 25 ವರ್ಷಗಳಿಂದ ಸ್ವಚ್ಛತೆ, ಶೈಕ್ಷಣಿಕ ನೆರವು ಸೇರಿದಂತೆ ಹತ್ತಾರು ಸೇವಾ ಕಾರ್ಯಗಳು ನಡೆಯುತ್ತಲೇ ಬಂದಿವೆ. ಅದರಲ್ಲಿ ಆರೋಗ್ಯ ಸೇವೆಯೂ ಒಂದು.

ಅಚಲ ಬದ್ಧತೆ, ಪಾರದರ್ಶಕತೆ ಮತ್ತು ಜನಸಹಭಾಗಿತ್ವದ ಮೂಲಕ ಮಾತಾ ಅಮೃತಾನಂದಮಯಿ ಮಠ ನಂಬಿಕೆಯ ಸಂಕೇತವಾಗಿ ಬೆಳೆದಿದೆ. ಬೋಳೂರು ಶಾಖಾ ಮಠದ ಮುಖ್ಯಸ್ಥರಾದ ಸಂಪೂಜ್ಯ ಸ್ವಾಮಿನಿ ಮಂಗಳಾಮೃತ ಪ್ರಾಣ ಇವರ ನೇತೃತ್ವದಲ್ಲಿ ನಡೆದ ಸೇವಾ ಕಾರ್ಯಗಳಿಗೆ ಲೆಕ್ಕವಿಲ್ಲ. ಇಲ್ಲಿನ ಸೇವಾ ನಿರತ ಭಕ್ತರನ್ನೊಳಗೊಂಡ 'ಮಾತಾ ಅಮೃತಾನಂದಮಯಿ ಸೇವಾ ಸಮಿತಿ'ಯ ಮೂಲಕ ಸೇವಾ ಕಾರ್ಯಗಳು ಅಮ್ಮನವರ ನಿರ್ದೇಶನ ಮತ್ತು ಆಶೋತ್ತರಗಳಿಗೆ ಅನುಗುಣವಾಗಿ ನಡೆಯುತ್ತಾ ಬರುತ್ತಿದೆ.

ಉಚಿತ ವೈದ್ಯಕೀಯ ಸೇವೆ

25 ವರ್ಷಗಳ ಹಿಂದೆ ಕರಾವಳಿಯ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮ ಗುಣಮಟ್ಟದ ವೈದ್ಯಕೀಯ ಸೇವೆಗಳು ವಿರಳವಾಗಿರುವ ಸ್ಥಳಗಳನ್ನು ಗುರುತಿಸಿ ಅಲ್ಲಿಗೆ ವಿವಿಧ ತಜ್ಞ ವೈದ್ಯರುಗಳ ತಂಡದೊಂದಿಗೆ ಅಗತ್ಯ ತಪಾಸಣಾ ಸಾಧನಗಳು ಹಾಗೂ ಉತ್ತಮ ಗುಣಮಟ್ಟದ ಔಷಧಗಳೊಂದಿಗೆ ಮಠದ ವೈದ್ಯಕೀಯ ಸೇವಾ ವಿಭಾಗದ ಸೇವಾರ್ಥಿಗಳು ಭೇಟಿ ನೀಡಿ ತಪಾಸಣೆಗೈದು ಪ್ರಾರಂಭಿಸಿದ ಉಚಿತ ವೈದ್ಯಕೀಯ ಸೇವೆ ಇದುವರೆಗೂ ಅತ್ಯಂತ ಯಶಸ್ವಿಯಾಗಿ ಫಲಪ್ರದವೆನಿಸಿದೆ.

ಅನಾರೋಗ್ಯದ ಜೊತೆಗೆ ಆರ್ಥಿಕ ತೊಂದರೆ ಅನುಭವಿಸುವ, ನಿರ್ಲಕ್ಷ್ಯದಿಂದ ಸಂಕಷ್ಟಕ್ಕೆ ಗುರಿಯಾಗುವ ಅಸಹಾಯಕ ಜನರ ಅನುಕೂಲಕ್ಕೆಂದೇ ಅಮ್ಮನವರು ಉಚಿತ ವೈದ್ಯಕೀಯ ಸೇವೆಗಳನ್ನು ಪ್ರಾರಂಭಿಸಿದ್ದರು ಎಂದು ಬೋಳೂರಿನ ಮಾತಾ ಅಮೃತಾನಂದಮಯಿ ಸೇವಾ ಸಮಿತಿಯ ಅಧ್ಯಕ್ಷ ಸುರೇಶ್ ಅಮೀನ್ ಸಮಗ್ರ ಮಾಹಿತಿ ನೀಡಿದರು.

ಕುಗ್ರಾಮಗಳಲ್ಲಿ ವೈದ್ಯರ ತಂಡ

ಈ ಉಚಿತ ವೈದ್ಯಕೀಯ ಸೇವೆಗಳಲ್ಲಿ ತಜ್ಞ ವೈದ್ಯರ ತಂಡದಲ್ಲಿ ವಿವಿಧ ಸ್ಪೆಷಾಲಿಟಿ ವೈದ್ಯರುಗಳ ಸೇವೆಯನ್ನು ಹಳ್ಳಿ ಹಳ್ಳಿಗಳ ಕುಗ್ರಾಮಗಳಿಗೆ ತೆರಳಿ ಅಲ್ಲಿನ ಬಡಜನರ ಆರೋಗ್ಯ ತಪಾಸಣೆ ಮಾಡಿ ಉಚಿತ ಔಷಧೋಪಚಾರ ಸಹಿತ ಚಿಕಿತ್ಸೆ ನೀಡಲಾಗುತ್ತದೆ. ಅಲ್ಲದೆ ಉನ್ನತ ತಪಾಸಣೆ, ಶಸ್ತ್ರ ಚಿಕಿತ್ಸೆ, ದಂತ ಚಿಕಿತ್ಸೆ ಹಾಗೂ ಕನ್ನಡಕದ ಅಗತ್ಯವುಳ್ಳವರಿಗೆ ಈ ವೈದ್ಯಕೀಯ ಶಿಬಿರಗಳಿಂದ ಪ್ರಯೋಜನ ದೊರಕಿಸಲಾಗಿದೆ. ರೋಗ ಉಂಟಾ ಗುವ ಲಕ್ಷಣಗಳನ್ನು ಪ್ರಾರಂಭದಲ್ಲೇ ಗುರುತಿಸಿ ರೋಗ ಬರದಂತೆ ಮುಂಜಾಗ್ರತಾ ಕ್ರಮಗಳನ್ನು ತಿಳಿಸಲಾಗಿದೆ. ಈ ಸೇವೆಗೆ ವಿವಿಧ ಸೇವಾ ಸಂಸ್ಥೆಗಳು ಶಿಬಿರಗಳನ್ನು ಆಯೋಜಿಸಲು ಸಹಕರಿಸಿವೆ ಎಂದವರು ಹೇಳಿದರು.

25 ವರ್ಷಗಳ ಹಿಂದೆ ಕರಾವಳಿ ಜಿಲ್ಲೆಗಳಲ್ಲಿ ಈಗಿನಷ್ಟು ವೈದ್ಯಕೀಯ ಕಾಲೇಜುಗಳು ಇರಲಿಲ್ಲ. ವೈದ್ಯಕೀಯ ಸೇವೆಗಳ ಪ್ರಯೋಜನ ಪಡೆಯಲು ಈಗಿನಷ್ಟು ಸರಳವಾಗಿರಲಿಲ್ಲ. ಹಾಗಾಗಿ ಮಠದ ಶೇಕಡಾ ನೂರರಷ್ಟು ಉಚಿತವಾದ ಶಿಬಿರಗಳದ ಸಂಖ್ಯಾತ ರೋಗಿಗಳ ಪಾಲಿಗೆ ವರದಾನವಾಗಿ ಪರಿಣಮಿಸಿತ್ತು.

ಉಚಿತ ಶಸ್ತ್ರ ಚಿಕಿತ್ಸೆ

ಹಲವು ವರ್ಷಗಳ ಈ ಶಿಬಿರಗಳಲ್ಲಿ ನೇತ್ರ ತಜ್ಞರು ಆಧುನಿಕ ತಪಾಸಣಾ ಸಲಕರಣೆಗಳೊಂದಿಗೆ ಭಾಗವಹಿಸಿ ರೋಗಿಗಳ ಸಮಸ್ಯೆಗಳನ್ನು ಆಲಿಸಿ ತಪಾಸಣೆ ಮಾಡಿ ಅಗತ್ಯ ಚಿಕಿತ್ಸಾ ಸಲಹೆ ಹಾಗೂ ಔಷಧ ನೀಡಲಾಗಿದೆ. ಒಂದೊಂದು ಶಿಬಿರದಲ್ಲೂ ತಲಾ 250 ರಿಂದ 300 ಜನರು ಭಾಗವಹಿಸಿ ಪ್ರಯೋಜನ ಪಡೆದಿದ್ದಾರೆ. ಅಲ್ಲದೆ ಉನ್ನತ ತಪಾಸಣೆ, ಶಸ್ತ್ರ ಚಿಕಿತ್ಸೆ ಅಗತ್ಯವುಳ್ಳವರಿಗೆ ಪ್ರಯಾಣದ ಸೌಲಭ್ಯದ ಜೊತೆಗೆ ಉಚಿತ ಶಸ್ತ್ರ ಚಿಕಿತ್ಸೆಯ ಸಕಲ ವ್ಯವಸ್ಥೆಯನ್ನೂ ಮಾಡಲಾಗಿದೆ ಎನ್ನುತ್ತಾರೆ ಸೇವಾ ಸಮಿತಿಯ ಡಾ.ದೇವದಾಸ್ ಪುತ್ರನ್ ಅವರು.

ಕ್ಯಾನ್ಸರ್ ತಜ್ಞ ವೈದ್ಯರುಗಳು ವೈದ್ಯಕೀಯ ಸೇವಾ ತಂಡದ ಜೊತೆಗೆ ಸಂಚರಿಸಿ ಗ್ರಾಮೀಣ ಭಾಗದ ಜನರ ಆರೋಗ್ಯ ಸೇವೆಯ ಜೊತೆಗೆ ಕ್ಯಾನ್ಸರ್ ರೋಗ ಲಕ್ಷಣಗಳನ್ನು ಪತ್ತೆಹಚ್ಚುವ ಕಾರ್ಯ ಅತ್ಯಂತ ಉಪಯುಕ್ತವೆನಿಸಿದೆ. ಅಲ್ಲದೆ ಮಹಿಳಾ ತಜ್ಞ ವೈದ್ಯರು ಗರ್ಭಾಶಯ ಇತರ ವಿಧದ ಕ್ಯಾನ್ಸರ್ ರೋಗ ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ. ಅವರೆಲ್ಲರಿಗೂ ಸೂಕ್ತ ಕಾಲದಲ್ಲಿ ಯಾವುದೇ ಆರ್ಥಿಕ ಹೊರೆಯಾಗದಂತೆ ಸಂಪೂರ್ಣ ಉಚಿತವಾಗಿ ಚಿಕಿತ್ಸೆ ಪಡೆಯುವಲ್ಲಿ ಈ ಶಿಬಿರಗಳು ಸಹಕಾರಿಯಾಗಿದೆ ಎನ್ನುತ್ತಾರೆ ಡಾ.ದೇವದಾಸ್ ಪುತ್ರನ್.

ಅಮೃತಾ ಆಸ್ಪತ್ರೆಯಲ್ಲಿ ಉಚಿತ ಉನ್ನತ ಚಿಕಿತ್ಸೆ

ಆರ್ಥಿಕವಾಗಿ ಹಿಂದುಳಿದ ಗಂಭೀರ ಆರೋಗ್ಯ ಸಮಸ್ಯೆಗಳಿಗಾಗಿ ಚಿಕಿತ್ಸೆ ಪಡೆಯಲು ಅಮ್ಮನ ಆಶ್ರಮದ ನೆರವು ಕೋರಿ ಬಂದವರಿಗೆ ಕೇರಳದ ಕೊಚ್ಚಿಯಲ್ಲಿ ಇರುವ ದೇಶದ ಅತ್ಯುನ್ನತ ಶ್ರೇಣಿಯ ವಿಶ್ವಮಾನ್ಯ ಆಸ್ಪತ್ರೆಗಳಲ್ಲೊಂದಾದ ಅಮ್ಮನ ಆಶ್ರಮದ ವತಿಯಿಂದ ನಡೆಸಲ್ಪಡುವ ಅಮೃತ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸಾ ಸೌಲಭ್ಯಗಳನ್ನು ಪಡೆಯಲು ಸರ್ವ ರೀತಿಯ ನೆರವನ್ನು ಮಂಗಳೂರಿನ ಮಠದ ವತಿಯಿಂದ ಮಾಡಲಾಗಿದೆ.





ಜನ್ಮಜಾತ ಹೃದಯ ಸಮಸ್ಯೆಯಿಂದ ಬಳಲಿ ಚಿಕಿತ್ಸೆ ಪಡೆದು ಗುಣಮುಖವಾದ ಮೊದಲ ಮಗು (ಚಿತ್ರ 1), ಕಳೆದ ವರ್ಷ ನಡೆದ ಹೃದಯ ಸಂಬಂಧಿ ಚಿಕಿತ್ಸೆಗೆ ಆಗಮಿಸಿದ ಮಂದಿ ಹಾಗೂ ಆರೋಗ್ಯ ಸೇವೆ ನೀಡಿದ ತಂಡ (ಚಿತ್ರ 2)

ಸಂತೃಪ್ತಿ ಮೂಡಿಸಿದೆ



ಮಂಗಳೂರಿನ ಮಾತಾ ಅಮೃತಾನಂದಮಯಿ ಮಠದ ವೈದ್ಯಕೀಯ ಸೇವಾ ವಿಭಾಗದ ತಜ್ಞ ವೈದ್ಯರು ಮತ್ತು ಸೇವಾರ್ಥಿಗಳ ತಂಡ ಕಳೆದ 25 ವರ್ಷಗಳಿಂದ ಕುಗ್ರಾಮಗಳಿಗೆ ತೆರಳಿ ಸೇವೆಗೈದಿರುವುದು ಸಂತೃಪ್ತಿ ಮೂಡಿಸಿದೆ. ಇಲ್ಲಿ ನಡೆದ ಜನ್ಮಜಾತ ಹೃದಯ ರೋಗಿಗಳ ಉಚಿತ ಹೃದಯ ಶಸ್ತ್ರ ಚಿಕಿತ್ಸಾ ಶಿಬಿರವು ಅತ್ಯುತ್ತಮ ಸೇವೆಗಳಲ್ಲೊಂದಾಗಿದೆ. ಉಚಿತ ಹೃದಯ ಶಸ್ತ್ರ ಚಿಕಿತ್ಸಾ ಸೇವೆ ಮುಂದುವರಿಯುತ್ತಿದೆ.

■ ಸ್ವಾಮಿನಿ ಮಂಗಳಾಮೃತ ಪ್ರಾಣ, ಮಾತಾ ಅಮೃತಾನಂದಮಯಿ ಮಠ, ಮಂಗಳೂರು

ಅವಿಸ್ಮರಣೀಯ ಅನುಭವ



ಕಳೆದ 25ವರ್ಷಗಳಿಂದ ನಿರಂತರವಾಗಿ ನಡೆದುಕೊಂಡು ಬರುತ್ತಿರುವ ಈ ಉಚಿತ ವೈದ್ಯಕೀಯ ಶಿಬಿರಗಳು, ಸ್ಪೆಶಾಲಿಟಿ ಶಿಬಿರಗಳು ಅವಿಸ್ಮರಣೀಯ ಅನುಭವಗಳೊಂದಿಗೆ ಸಮಾಜದ ಅರ್ಹರಿಗೆ ತಲುಪಿಸಿರುವುದನ್ನು ಮರೆಯಲಾಗದು. ಅಮ್ಮನವರ ನೇತೃತ್ವದಲ್ಲಿ ಲಕ್ಷಾಂತರ ಮಂದಿಗೆ ಅತ್ಯಂತ ಗುಣಮಟ್ಟದ ಚಿಕಿತ್ಸೆ, ಅಗತ್ಯವುಳ್ಳವರಿಗೆ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನಡೆದಿದೆ.

■ ಸುರೇಶ್ ಅಮೀನ್, ಮಾತಾ ಅಮೃತಾನಂದಮಯಿ ಸೇವಾ ಸಮಿತಿ ಅಧ್ಯಕ್ಷರು

ಒಂದೇ ಶಿಬಿರದಲ್ಲಿ 400ಕ್ಕೂ ಅಧಿಕ ಮಂದಿಗೆ ಹೃದ್ರೋಗ ಚಿಕಿತ್ಸೆ

2025ರಲ್ಲಿ ಬೋಳೂರು ಮಠದಲ್ಲಿ ನಡೆದ ಹೃದ್ರೋಗ ಶಿಬಿರವೊಂದು ಅತ್ಯಂತ ಮಹತ್ವಪಡೆದಿತ್ತು. ಜನ್ಮ ಜಾತ ಹೃದಯ ರೋಗವಿರುವ 18 ವರ್ಷದೊಳಗಿನ ಮಕ್ಕಳಿಗಾಗಿ ನಡೆದ ಉಚಿತ ಶಸ್ತ್ರ ಚಿಕಿತ್ಸಾ ಶಿಬಿರದಲ್ಲಿ 400ಕ್ಕೂ ಅಧಿಕ ಮಂದಿ ಚಿಕಿತ್ಸೆ ಪಡೆದಿದ್ದಾರೆ. ರಾಜ್ಯದ ವಿವಿಧ ಜಿಲ್ಲೆಗಳಿಂದಲೂ ರೋಗಿಗಳು ಆಗಮಿಸಿದ್ದರು. ಸುಮಾರು 200 ಮಕ್ಕಳಿಗೆ ಉನ್ನತ ಮಟ್ಟದ ತಪಾಸಣೆ ಹಾಗೂ ಹೃದಯ ಶಸ್ತ್ರ ಚಿಕಿತ್ಸೆ ಅಗತ್ಯವಿದ್ದ 100ಕ್ಕೂ ಅಧಿಕ ಮಕ್ಕಳಿಗೆ ಕೊಚ್ಚಿಯ ಅಮೃತಾ ಆಸ್ಪತ್ರೆಯಲ್ಲಿ ಉಚಿತ ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ. ಸುಮಾರು 2 ಲಕ್ಷ ರೂ.ವರೆಗಿನ ಶಸ್ತ್ರಚಿಕಿತ್ಸಾ ವೆಚ್ಚವನ್ನು ಉಚಿತವಾಗಿ ಮಾಡಿರುವುದು. ಮಾನವೀಯ ಸೇವಾ ಕಾಳಜಿಯನ್ನು ಪ್ರತಿಬಿಂಬಿಸುತ್ತದೆ. ಈಗಲೂ ಶಸ್ತ್ರ ಚಿಕಿತ್ಸೆ ಮೂಲಕ ರೋಗಿಗಳ ಜನ್ಮ ಜಾತ ಹೃದಯ ಸಮಸ್ಯೆ ನಿರ್ಮೂಲನೆ ಮಾಡುವ ಪ್ರಕ್ರಿಯೆ ಮುಂದುವರಿಯುತ್ತಿದೆ ಎನ್ನುತ್ತಾರೆ ಮಾತಾ ಅಮೃತಾನಂದಮಯಿ ಸೇವಾ ಸಮಿತಿಯ ಅಧ್ಯಕ್ಷ ಸುರೇಶ್ ಅಮೀನ್ ಅವರು.

ಕಿರುಸುದ್ದಿ

ಸೃಜನ್ ಎಂ. ಬಿ. ಸಮಗ್ರ ಸಾಧನೆ



• **ಮಂಗಳೂರು:** ವರ್ಕಾಡಿ ಕೊಡ್ಲಮೊಗರು ಶ್ರೀ ವಾಣಿ ವಿಜಯ ಹೈಯರ್ ಸೆಕೆಂಡರಿ ಶಾಲೆಯ ವಿದ್ಯಾರ್ಥಿ ಸೃಜನ್ ಎಂ. ಬಿ. ಅವರು ಈ ವರ್ಷ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ ಎ ಪ್ಲಸ್ ಪಡೆದಿದ್ದಾರೆ. ಈ ಸಾಧನೆಗೆ ಶಾಲಾ ಪ್ರಬಂಧಕರು, ಮುಖ್ಯೋಪಾಧ್ಯಾಯರು,ಅಧ್ಯಾಪಕ ವೃಂದದವರು ಅಭಿನಂದನೆಯನ್ನು ಸಲ್ಲಿಸಿದ್ದಾರೆ.

ಮೇ 19: ಶಾಸಕ ಯಶ್‌ಪಾಲ್ ಸುವರ್ಣ ಅಹವಾಲು ಸ್ವೀಕಾರ

• **ಉಡುಪಿ:** ಮೇ 19 ರಂದು ಪೂರ್ವಾಹ್ನ 10.30ಕ್ಕೆ ಆದಿ ಉಡುಪಿಯ ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಉಡುಪಿ ಶಾಸಕ ಯಶ್ ಪಾಲ ಸುವರ್ಣ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳ ಉಪಸ್ಥಿತಿಯಲ್ಲಿ ಸಾರ್ವಜನಿಕರ ಅಹವಾಲು ಸ್ವೀಕಾರ ಕಾರ್ಯಕ್ರಮ ನಡೆಸಲಿದ್ದಾರೆ ಎಂದು ಶಾಸಕರ ಕಚೇರಿಯ ಪ್ರಕಟಣೆಯಲ್ಲಿ ತಿಳಿಸಿದೆ.

ನೇಣು ಬಿಗಿದು ಆತ್ಮಹತ್ಯೆ

• **ಕುಂಬಳೆ:** ಸೂರಂಬೈಲು ನಿವಾಸಿ, ಆಟೋ ಚಾಲಕರಾಗಿದ್ದ ಪುರುಷೋತ್ತಮ ಗಟ್ಟಿ (54) ಎಂಬವರು ಮನೆಯ ಸಿಟೌಟ್‌ನಲ್ಲಿ ನೇಣು ಬಿಗಿದು ಆತ್ಮಹತ್ಯೆಗೈದ ಘಟನೆ ವರದಿಯಾಗಿದೆ. ಶನಿವಾರ ಬೆಳಗ್ಗೆ ಮೃತದೇಹ ಕಂಡುಬಂದಿದೆ. ಮೃತರು ಪತ್ನಿ ಮೀನಾಕ್ಷಿ, ಮಕ್ಕಳಾದ ಭರತ್‌ರಾಜ್, ಸೌಮ್ಯಾ ಅವರನ್ನು ಅಗಲಿದ್ದಾರೆ. ಘಟನೆಗೆ ಸ್ಪಷ್ಟ ಕಾರಣ ತಿಳಿದುಬಂದಿಲ್ಲ. ಕುಂಬಳೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.


ನಿಧನ ಸುದ್ದಿ

ಪ್ರಜ್ವಲ್ ಪೂಜಾರಿ



• **ಮಂಗಳೂರು:** ಶ್ರೀ ಭದ್ರಕಾಳಿ ಚೆಂಡೆ ತಂಡದ ಸ್ಥಾಪಕ, ಯೆಯ್ಯಾಡಿ ಗುಂಡಳಿಕೆ ನಿವಾಸಿ ಪ್ರಜ್ವಲ್ ಪೂಜಾರಿ (33) ಶುಕ್ರವಾರ ರಾತ್ರಿ ಹೃದಯಾಘಾತದಿಂದ ನಿಧನ ಹೊಂದಿದರು. ಮೃತರು ತಂದೆ, ತಾಯಿ, ಪತ್ನಿಯನ್ನು ಅಗಲಿದ್ದಾರೆ. ಶ್ರೀ ಭದ್ರಕಾಳಿ ಚೆಂಡೆ ತಂಡದ ಸ್ಥಾಪಕರಾಗಿದ್ದರು. ಶರ್ಬತ್ ಕಟ್ಟೆ ಬಳಿಯ ಭದ್ರಕಾಳಿ ದೇವಸ್ಥಾನದ ಕಾರ್ಯಕ್ರಮಗಳಲ್ಲಿ ಮುಂಚೂಣಿಯಲ್ಲಿದ್ದರು. ಹಿಂದೂ ಜಾಗರಣ ವೇದಿಕೆಯಲ್ಲಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದರು. ವಿವಿಧ ಸಮಾಜ ಮುಖಿ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಶಾಸಕ ವೇದವ್ಯಾಸ ಕಾಮತ್ ಸಹಿತ ವಿವಿಧ ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.

ರಾಯ್ ಡೇವಿಡ್



• **ಮಡಿಕೇರಿ:** ಆದಿವಾಸಿ ಜನಾಂಗಗಳ ಪರ ಹೋರಾಟಗಾರ, ಕುಶಾಲನಗರದ ರಾಯ್ ಡೇವಿಡ್ (71) ಅವರು ಶನಿವಾರ ಅನಾರೋಗ್ಯದಿಂದ ನಿಧನರಾದರು. ಗುರುವಾರ ಮತ್ತು ಶುಕ್ರವಾರ ಶಿವಮೊಗ್ಗದಲ್ಲಿನ ಸಭೆಯೊಂದರಲ್ಲಿ ಭಾಗವಹಿಸಿ ಬೆಂಗಳೂರಿಗೆ ಬಂದಿದ್ದ ರಾಯ್ ಡೇವಿಡ್, ಉಸಿರಾಟದ ಸಮಸ್ಯೆಗೆ ಒಳಗಾದರು. ಶನಿವಾರ ಬೆಳಗ್ಗೆ ಅವರನ್ನು ಬೆಂಗಳೂರಿನ ಸಂತ ಫಿಲೊಮಿನಾ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆಗೆ ಸ್ಪಂದಿಸದೆ ಅವರು ನಿಧನರಾದರು. ಕೊಡಗು ಗ್ರಾಮೀಣಾಭಿವೃದ್ಧಿ ಸಂಸ್ಥೆ (ಕಾರ್ಡ್) ಸೇರಿದಂತೆ ಅನೇಕ ಸಂಘ, ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿದ್ದ ಅವರು, ಆದಿವಾಸಿಗಳಿಗೆ ಅವರ ಹಕ್ಕುಗಳ ಕುರಿತು ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿದ್ದರು. ಈ ಸಂಬಂಧ ಅನೇಕ ಕಾರ್ಯಾಗಾರಗಳನ್ನು ನಡೆಸಿಕೊಂಡು ಬರುತ್ತಿದ್ದರು. ಮೃತರು, ಪತ್ನಿ ಶಮಂತಕ ಡೇವಿಡ್, ಪುತ್ರರಾದ ರೋಷನ್ ಡೇವಿಡ್, ರೋಹನ್ ಡೇವಿಡ್ ಹಾಗೂ ಪುತ್ರಿ ರಚನಾರನ್ನು ಅಗಲಿದ್ದಾರೆ.

ಡಾ. ವೀರೇಂದ್ರ ಹೆಗ್ಗಡೆ ಆದೇಶ | ಉಜಿರೆಯ ಎಸ್‌ಡಿಎಂ ಆಸ್ಪತ್ರೆಯಿಂದ ಅಳವಡಿಕೆ

ಚಾರ್ಮಾಡಿ ಘಾಟಿಯಲ್ಲಿ 'ಉಬ್ಬು ಕನ್ನಡಿ'

• **ಬೆಳ್ತಂಗಡಿ:** ಚಾರ್ಮಾಡಿ ಘಾಟಿ ರಸ್ತೆಯ 12 ಕಡೆಗಳಲ್ಲಿ ಉಜಿರೆಯ ಎಸ್‌ಡಿಎಂ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ಕಾನ್ವೆಕ್ಸ್ ಮಿರರ್ (ಉಬ್ಬು ಕನ್ನಡಿ) ಗಳನ್ನು ಅಳವಡಿಸಲಾಗಿದೆ. ತಿರುವು ಮುರುವುಗಳಿಂದ ಕೂಡಿದ ಚಾರ್ಮಾಡಿ ಘಾಟಿ ರಸ್ತೆಯ ಹಲವು ಸ್ಥಳಗಳು ಅಪಾಯಕಾರಿ ಹಾಗೂ ಅತ್ಯಂತ ಸೂಕ್ಷ್ಮವಾಗಿದ್ದು ಇಲ್ಲಿ ವಾಹನಗಳನ್ನು ಚಲಾಯಿಸುವುದು ಸಾಹಸದ ಕೆಲಸವಾಗಿದೆ. ಹೊಸದಾಗಿ ಬರುವ ಚಾಲಕರಿಗೆ ಚಾರ್ಮಾಡಿ ಘಾಟಿ ರಸ್ತೆ ನಾನಾ ಸವಾಲುಗಳನ್ನು ನೀಡುತ್ತದೆ.

ಘಾಟಿ ಪ್ರದೇಶದಲ್ಲಿ 12 ವಿಶೇಷ ತಿರುವುಗಳಿದ್ದು ಇಲ್ಲಿ ವಾಹನ ಹತ್ತುವಾಗ ಹಾಗೂ ಇಳಿಯುವ ಸಮಯ ಮುಂಭಾಗದಿಂದ ಬರುವ ವಾಹನಗಳು ಪರಸ್ಪರ ಹತ್ತಿರ ಬರುವವರೆಗೂ ಗಮನಕ್ಕೆ ಬರದೆ ಹಲವಾರು ಅಪಘಾತಗಳು ನಡೆಯುತ್ತವೆ. ತಿರುವು ಪ್ರದೇಶಗಳು ಕಿರಿದಾಗಿದ್ದು, ಹೇರ್ ಪಿನ್ ಕರ್ವ್ ಗಳಾಗಿರುವ ಕಾರಣ ರಸ್ತೆ ಎಡಬದಿಯಲ್ಲಿ ವಾಹನವನ್ನು ಚಲಾಯಿಸಿಕೊಂಡು ಹೋದರು ಕೆಲವು ಸ್ಥಳಗಳಲ್ಲಿ ವಾಹನಗಳನ್ನು ಬಲಬದಿಗೆ ಚಲಾಯಿಸಿದರೆ ಮಾತ್ರ ತಿರುವು ಪಡೆದುಕೊಳ್ಳಲು ಸಾಧ್ಯವಾಗುವ ಸ್ಥಿತಿ ಇದೆ. ಮುಂಭಾಗದಿಂದ ಬರುವ ವಾಹನಗಳು ಇಂತಹ ಸಂದರ್ಭ ಗೋಚರಕ್ಕೆ ಬರುವುದಿಲ್ಲ. ಲಾರಿ, ಬಸ್ ನಂತಹ ಘನವಾಹನಗಳು ಮುಂಭಾಗದಿಂದ ಬಂದಾಗ ಅಪಾಯ ಕಟ್ಟಿಟ್ಟ ಬುತ್ತಿ.

ಕಾನ್ವೆಕ್ಸ್ ಮಿರರ್ ಅಳವಡಿಕೆ

ಉಜಿರೆಯ ಎಸ್‌ಡಿಎಂ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯವರು ಈ ತಿರುವುಗಳಲ್ಲಿ ಉಂಟಾಗುವ ಅಪಾಯಗಳ ಕುರಿತು ಪರಿಶೀಲನೆ ನಡೆಸಿ ಅಂತಹ 12 ಸ್ಥಳಗಳಲ್ಲಿ ರಾಷ್ಟ್ರೀಯ ಹೆದ್ದಾರಿ ಇಲಾಖೆಯ ಒಪ್ಪಿಗೆ ಪಡೆದು ಕಾನ್ವೆಕ್ಸ್ ಮಿರರ್ ಗಳನ್ನು ಅಳವಡಿಸಿದ್ದಾರೆ. ಈ ಕನ್ನಡಿಗಳು ಹಲವು ಮೀಟರ್ ದೂರದಿಂದ ಬರುವ ವಾಹನಗಳನ್ನು ಚಾಲಕರು ಗುರುತಿಸಲು ಸಹಕಾರಿಯಾಗಿದ್ದು ಮುಂಜಾಗ್ರತೆ ಕೈಗೊಳ್ಳಲು ಸಹಾಯಕವಾಗಿವೆ. ಪ್ರಸ್ತುತ ಘಾಟಿ ಭಾಗದಿಂದ ಸಂಚರಿಸುವ ವಾಹನ ಚಾಲಕರು ತಿರುವು ಪ್ರದೇಶಗಳಲ್ಲಿ ಈ ಕನ್ನಡಿಗಳನ್ನು ಗಮನಿಸುತ್ತಾ ವಾಹನಗಳನ್ನು ಚಲಾಯಿಸುತ್ತಾರೆ.ಇದು ಅಪಘಾತಗಳಿಗೆ ಕಡಿವಾಣ ಹಾಕಲು, ಟ್ರಾಫಿಕ್ ಜಾಮ್ ಉಂಟಾಗದಂತೆ, ತಿರುವುಗಳಲ್ಲಿ ವನ್ಯಜೀವಿಗಳ ಸಂಚಾರ ಇದ್ದರೆ ಅದನ್ನು ಗಮನಿಸಲು ಅನುಕೂಲ ನೀಡುತ್ತದೆ.





ಕಾನ್ವೆಕ್ಸ್ ಮಿರರ್ ಕಾನ್ವೆಕ್ಸ್ ಮಿರರ್ ವಾಹನ ಸವಾರರಿಗೆ ದೂರದಿಂದ ರಸ್ತೆ ಗಮನಿಸಲು ಅನುಕೂಲ ನೀಡುತ್ತದೆ. ತಿರುವಿನಲ್ಲಿ ಬರುವ ವಾಹನಗಳು ಚಾಲಕನಿಗೆ ನೇರವಾಗಿ ಕಾಣಿಸುವುದಿಲ್ಲ. ಈ ಕನ್ನಡಿಗಳಕ ಅಂತಹ ಸೂಕ್ಷ್ಮ ಸ್ಥಳಗಳ ಪ್ರತಿಬಿಂಬವನ್ನು ದೂರದಿಂದ ತೋರಿಸುತ್ತವೆ. ಈ ಕನ್ನಡಿಗಳು ಬಾಗಿದ ಮೇಲ್ಮೈಯನ್ನು ಹೊಂದಿದ್ದು ವಿಶಾಲವಾದ ಕೋನ ಗಳಲ್ಲಿ ಮುಂಭಾಗದ ದೃಶ್ಯವನ್ನು ಪ್ರತಿಬಿಂಬಿಸುತ್ತವೆ. ರಸ್ತೆ ಸುರಕ್ಷತಾ ದೃಷ್ಟಿಯಿಂದ ಇವುಗಳನ್ನು ಇಕ್ಕಟ್ಟಾದ ಬೆಟ್ಟ ಪ್ರದೇಶದ ರಸ್ತೆ, ಹಾಗೂ ತಿರುವುಗಳಿಂದ ಕೂಡಿದ ರಸ್ತೆಯಲ್ಲಿ ಅಳವಡಿಸಲಾಗುತ್ತದೆ.

ಡಾ. ಹೆಗ್ಗಡೆ ಆದೇಶ

ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ ದಂಪತಿ ಹಾಗೂ ಹರ್ಷೇಂದ್ರ ಕುಮಾರ್ ಅವರ ಆದೇಶದಂತೆ ಚಾರ್ಮಾಡಿ ಘಾಟಿ ರಸ್ತೆಯ ಅಪಾಯಕಾರಿ ತಿರುವುಗಳಲ್ಲಿ ಇಲಾಖೆಯ ಅನುಮತಿ ಪಡೆದು ಆಸ್ಪತ್ರೆ ವತಿಯಿಂದ ಅಳವಡಿಸಲಾಗಿದೆ. ಇಲ್ಲಿನ ಸೂಕ್ಷ್ಮ ಸ್ಥಳಗಳನ್ನು ಗುರುತಿಸಿ ಈ ಕೆಲಸ ನಿರ್ವಹಿಸಲು ಇಲಾಖೆಯೊಂದಿಗೆ ನಮ್ಮ ಸಿಬ್ಬಂದಿಗಳು ಕೈಜೋಡಿಸಿದ್ದಾರೆ.

■ ಜನಾರ್ದನ್, ಎಂ.ಡಿ., ಎಸ್‌ಡಿಎಂ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಉಜಿರೆ

ಅಪಘಾತ ಇಳಿಮುಖ

ಕನ್ನಡಿಗಳನ್ನು ಅಳವಡಿಸಿದ ಬಳಿಕ ತಿರುವುಗಳಲ್ಲಿ ಅಪಘಾತಗಳ ಸಂಖ್ಯೆ ಕಡಿಮೆಯಾಗಿದೆ.ತಿರುವುಗಳಲ್ಲಿ ಕನ್ನಡಿಗರನ್ನು ಅಳವಡಿಸಿರುವುದರಿಂದ ಹೆಚ್ಚಿನ ಚಾಲಕರಿಗೆ ಅನುಕೂಲವಾಗಿದೆ. ಘನ ವಾಹನಗಳನ್ನು ಗಮನಿಸಲು ಸುರಕ್ಷತೆಯ ಚಾಲನೆಗೆ ಇವು ಸಹಕಾರಿಯಾಗಿವೆ.

■ ನಾಗರಾಜ, ತರಕಾರಿ ಲಾರಿ ಚಾಲಕ, ಬೇಲೂರು

ಬಾರ್ಯ ಶ್ರೀ ವಿಷ್ಣುಮೂರ್ತಿ ಕ್ಷೇತ್ರದಲ್ಲಿ ಸೀಯಾಳ ಅಭಿಷೇಕ



• **ಮಂಗಳೂರು:** ಉಪ್ಪಿನಂಗಡಿ ಸಮೀಪದ ಬಾರ್ಯ ಶ್ರೀ ವಿಷ್ಣುಮೂರ್ತಿ ಕ್ಷೇತ್ರದಲ್ಲಿ ವರುಣ ಕೃಪೆಗಾಗಿ ಸಾಮೂಹಿಕ ಸೀಯಾಳ ಅಭಿಷೇಕವು ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿ ಅವರ ಮಾರ್ಗದರ್ಶನದಂತೆ ನಡೆಯಿತು. ಕ್ಷೇತ್ರದ ಆಡಳಿತ ಸೇವಾ ಟ್ರಸ್ಟಿನ ಉಪಾಧ್ಯಕ್ಷ ನಾರಾಯಣ ಗೌಡ, ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ಪೈ, ಟ್ರಸ್ಟಿಗಳಾದ ರಾಮಣ್ಣ ಗೌಡ, ಉಮೇಶ್ ಗಿರಿಗುಡ್ಡೆ, ವಿಜಯಲಕ್ಷ್ಮಿ ರೈ, ವಿಶ್ವನಾಥ ಗೌಡ ಆಲಡ್ಕ, ಮೋನಪ್ಪ ಗೌಡ ಮತ್ತು ಭಕ್ತರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ದೇವಳದ ಪ್ರಧಾನ ಅರ್ಚಕ ಗುರುಪ್ರಸಾದ್ ನೂರಿತ್ತಾಯ ಸೀಯಾಳ ಅಭಿಷೇಕ ಸಮರ್ಪಿಸಿದರು. ಸೇವಾ ಟ್ರಸ್ಟಿನ ಅಧ್ಯಕ್ಷ ಭಾಸ್ಕರ್ ಬಾರ್ಯ ಪ್ರಾರ್ಥನೆ ಸಲ್ಲಿಸಿದರು. ರಾಜೇಶ್ ಬಾರ್ಯ ಸಹಕರಿಸಿದರು.

ಮೇ 20ರಂದು ಮೆಡಿಕಲ್ ಶಾಪ್‌ಗಳ ಬಂದ್

• **ಮಂಗಳೂರು:** ಆನ್‌ಲೈನ್ ಮೂಲಕ ಔಷಧ ಮಾರಾಟ ವಿರೋಧಿಸಿ ಮೇ 20ರಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೆಡಿಕಲ್ ಶಾಪ್‌ಗಳನ್ನು ಬಂದ್ ಮಾಡಲಾಗುವುದು ಎಂದು ದಕ್ಷಿಣ ಕನ್ನಡ ಔಷಧ ವ್ಯಾಪಾರಿಗಳ ಸಂಘ ತಿಳಿಸಿದೆ.

ಆಲ್ ಇಂಡಿಯಾ ಆರ್ಗನೈಸೇಶನ್ ಆಫ್ ಕೆಮಿಸ್ಟ್ಸ್ ಆ್ಯಂಡ್ ಡ್ರಗ್ಗಿಸ್ಟ್ ಹಾಗೂ ಕರ್ನಾಟಕ ಕೆಮಿಸ್ಟ್ಸ್ ಆ್ಯಂಡ್ ಡ್ರಗ್ಗಿಸ್ಟ್ ಅಸೋಸಿಯೇಶನ್ ಕರೆಯಂತೆ ರಾಷ್ಟ್ರವ್ಯಾಪಿ ಈ ಬಂದ್ ನಡೆಯಲಿದ್ದು, ಸೌತ್ ಕೆನರಾ ಕೆಮಿಸ್ಟ್ಸ್ ಆ್ಯಂಡ್ ಡ್ರಗ್ಗಿಸ್ಟ್ ಅಸೋಸಿಯೇಶನ್‌ನ ಎಲ್ಲ ಸದಸ್ಯರು ಬೆಂಬಲಿಸಲಿದ್ದಾರೆ. ಮೇ 20ರಂದು 24 ಗಂಟೆಗಳ ಕಾಲ ಮೆಡಿಕಲ್ ಬಂದ್ ಇರಲಿದೆ ಎಂದು ಸಂಘದ ಅಧ್ಯಕ್ಷ ಅರುಣ್ ಶೆಟ್ಟಿ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಔಷಧಗಳು ದೈನಂದಿನ ಬಳಕೆಯ ವಸ್ತುಗಳಂತಲ್ಲ. ಔಷಧ ಮಾರಾಟ ನಿಯಮಗಳಿವೆ ಹಾಗೂ ಜವಾಬ್ದಾರಿಯುತ ವಿತರಣೆ ಅಗತ್ಯ. ಆದರೆ, ಅನಿಯಂತ್ರಿತವಾಗಿ ಆನ್‌ಲೈನ್ ಮೂಲಕ ಔಷಧ ಮಾರಾಟದಿಂದ ಶೆಡ್ಯೂಲ್ಡ್ ಡ್ರಗ್ಸ್‌ಗಳ ದುರುಪಯೋಗ, ಸ್ವಯಂ ಚಿಕಿತ್ಸೆ, ನಕಲಿ ಔಷಧ ಚೀಟಿಗಳ ಮೂಲಕ ಔಷಧ ಪಡೆದುಕೊಳ್ಳುವ ಅಪಾಯವಿದೆ. ಆನ್‌ಲೈನ್ ಮೂಲಕ ಪೂರೈಕೆಯಾಗುವ ಔಷಧ ಅಸುರಕ್ಷಿತ ದಾಸ್ತಾನು ಹಾಗೂ ಪೂರೈಕೆಯಾಗುವ ಸಾಧ್ಯತೆಯಿದೆ. ಆನ್‌ಲೈನ್ ಮೂಲಕ ಖರೀದಿಸಿದ ಔಷಧಗಳ ದುರುಪಯೋಗ ಉಂಟಾದಾಗ ಮೆಡಿಕಲ್ ಶಾಪ್‌ಗಳ ಬಗ್ಗೆ ಅನುಮಾನ ಮೂಡುತ್ತದೆ. ಈ ಬಗ್ಗೆ ಕೇಂದ್ರ ಸರಕಾರಕ್ಕೆ ಎಐಒಸಿಡಿ ವತಿಯಿಂದ ಹಲವಾರು ಬಾರಿ ಮನವಿ ನೀಡಿದ್ದರೂ, ಸ್ಪಂದನೆ ಸಿಕ್ಕಿಲ್ಲ. ಈ ಹಿನ್ನೆಲೆಯಲ್ಲಿ ವೆಬ್‌ಸೈಟ್ ಪೋರ್ಟಲ್ ಮೂಲಕ ಆನ್‌ಲೈನ್ ಮಾದರಿಯಲ್ಲಿ ಔಷಧ ಮಾರಾಟ ನಿಷೇಧಕ್ಕೆ ಒತ್ತಾಯಿಸಿ ಬಂದ್ ನಡೆಸಲಾಗುತ್ತಿದೆ ಎಂದು ವಿವರಿಸಿದರು.

ಕೋವಿಡ್ ಸಂದರ್ಭದಲ್ಲಿ ತುರ್ತು ಸಂದರ್ಭದಲ್ಲಿ ಆನ್‌ಲೈನ್ ಮೂಲಕ ಔಷಧ ಮಾರಾಟಕ್ಕೆ ನೀಡಿದ ತಾತ್ಕಾಲಿಕ ಅನುಮತಿಯನ್ನು ಪ್ರಸ್ತುತ ಮುಂದುವರೆಸಲಾಗಿದೆ. ಈ ಅನುಮತಿಯನ್ನೂ ರದ್ದುಪಡಿಸಬೇಕು ಎಂದು ಅಗ್ರಹಿಸಿದರು.

ಸಂಘದ ಕಾರ್ಯದರ್ಶಿ ಡಾ.ಎ.ಕೆ. ಜಮಾಲ್, ಉಪಾಧ್ಯಕ್ಷ ಅಮೃತ್ ಕಿರಣ್ ರೈ, ಜತೆ ಕಾರ್ಯದರ್ಶಿ ಶ್ರೀನಿವಾಸ ಭಟ್, ಕೋಶಾಧಿಕಾರಿ ಚಂದ್ರಶೇಖರ ಭಟ್, ಸಮಿತಿ ಸದಸ್ಯರಾದ ಸುರೇಶ್ ಆಳ್ವ, ಶರಣಂ ಶೆಟ್ಟಿ ಉಪಸ್ಥಿತರಿದ್ದರು.

ಗರ್ಭಿಣಿಯರ ಸ್ಕ್ಯಾನಿಂಗ್ ಮಾಡುವಾಗ ತಾಯಿ ಕಾರ್ಡ್ ಕಡ್ಡಾಯವಾಗಿ ಪಡೆಯಲು ಸೂಚನೆ

• **ಮಂಗಳೂರು:** ಸ್ಕ್ಯಾನಿಂಗ್ ಕೇಂದ್ರಗಳಲ್ಲಿ ಗರ್ಭಿಣಿ ಮಹಿಳೆಯರ ಸ್ಕ್ಯಾನಿಂಗ್ ಮಾಡುವಾಗ ತಾಯಿ ಕಾರ್ಡ್ ಕಡ್ಡಾಯವಾಗಿ ಪಡೆದು ಕೊಳ್ಳುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಹೆಚ್.ಆರ್ ತಿಮ್ಮಯ್ಯ ಸೂಚಿಸಿದ್ದಾರೆ.

ಅವರು ಶುಕ್ರವಾರ ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿಯಲ್ಲಿ ನಡೆದ ಜನನ ಪೂರ್ವ ಲಿಂಗ ನಿರ್ಣಯ (ನಿರ್ಬಂಧ ಮತ್ತು ದುರ್ಬಳಕೆ) ತಡೆ ಕಾಯಿದೆ 1994 ಕ್ಕೆ ಸಂಬಂಧಿಸಿ ಜಿಲ್ಲಾ ಮಟ್ಟದ ಸಲಹಾ ಸಮಿತಿಯ ಸಭೆಯಲ್ಲಿ ಮಾತನಾಡಿದರು.

18–19 ವರ್ಷದೊಳಗಿನ ಬಾಲಗರ್ಭಿಣಿಯರು ಕಂಡುಬಂದಲ್ಲಿ, ಅವರ ಗರ್ಭಧಾರಣೆಯ ದಿನಾಂಕವನ್ನು ಮತ್ತು ವಯಸ್ಸಿನ ದೃಢೀಕರಣವನ್ನು ಖಚಿತಪಡಿಸಿಕೊಳ್ಳಬೇಕು. ಅಪ್ರಾಪ್ತ ವಯಸ್ಸಿನ ಗರ್ಭಧಾರಣೆ ಕಾನೂನು ಬಾಹಿರವಾಗಿದ್ದು, ಇಂತಹ ಪ್ರಕರಣಗಳಲ್ಲಿ ಮೊದಲು ಪರೀಕ್ಷಿಸಿದವರು ಅಥವಾ ಸಂಸ್ಥೆಯ ಮುಖ್ಯಸ್ಥರು ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡುವಂತೆ ಡಿ.ಎಚ್.ಓ ಸೂಚಿಸಿದರು.



▸▸ **18–19 ವರ್ಷದೊಳಗಿನ ಬಾಲ ಗರ್ಭಿಣಿಯರು ಕಂಡುಬಂದಲ್ಲಿ, ಅವರ ಗರ್ಭಧಾರಣೆಯ ದಿನಾಂಕವನ್ನು ಮತ್ತು ವಯಸ್ಸಿನ ದೃಢೀಕರಣವನ್ನು ಖಚಿತಪಡಿಸಿಕೊಳ್ಳಬೇಕು.**

ಏಪ್ರಿಲ್ 2025 ರಿಂದ ಮಾರ್ಚ್ 2026 ರವರೆಗೆ ಖಾಸಗಿ 681 ಹಾಗೂ ಸರ್ಕಾರಿ 39 ಸ್ಕ್ಯಾನಿಂಗ್ ಸೆಂಟರ್‌ಗಳ ತಪಾಸಣೆ ನಡೆಸಲಾಗಿದೆ. ಹಾಗೂ ತಾಲೂಕು ಆರೋಗ್ಯಾಧಿಕಾರಿಗಳು ಖಾಸಗಿ 75 ಹಾಗೂ ಸರ್ಕಾರಿ 9 ಸ್ಕ್ಯಾನಿಂಗ್ ಸೆಂಟರ್‌ಗಳ ತಪಾಸಣೆ ನಡೆಸಲಾಗಿದೆ. ಏಪ್ರಿಲ್ 2026 ರಿಂದ ಖಾಸಗಿ 53 ಹಾಗೂ ಸರ್ಕಾರಿ 6 ಸ್ಕ್ಯಾನಿಂಗ್ ಸೆಂಟರ್‌ಗಳ ತಪಾಸಣೆ ನಡೆಸಲಾಗಿದೆ. ಹಾಗೂ ತಾಲೂಕು ಆರೋಗ್ಯಾಧಿಕಾರಿಗಳು ಖಾಸಗಿ 5 ಹಾಗೂ ಸರ್ಕಾರಿ 1 ಸ್ಕ್ಯಾನಿಂಗ್ ಸೆಂಟರ್‌ಗಳ ತಪಾಸಣೆ ನಡೆಸಲಾಗಿರುತ್ತದೆ ಎಂದು ಜಿಲ್ಲಾ ಎನ್‌ಫೋರ್ಸ್‌ಮೆಂಟ್ ಅಧಿಕಾರಿ ಡಾ.ದೀಪಾ ಪ್ರಭು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾ ಸಲಹಾ ಸಮಿತಿ ಅಧ್ಯಕ್ಷೆ (ಪಿ.ಎನ್.ಡಿ.ಟಿ) ಡಾ.ಅಮೃತಾ ಭಂಡಾರಿ, ಜಿಲ್ಲಾ ತಪಾಸಣಾ – ಮೇಲ್ವಿಚಾರಣಾ ಸಮಿತಿ ಸದಸ್ಯೆ ಡಾ.ಸುಂದರಿ, ಡಾ.ಅನಿತ್‌ರಾಜ್, ಆರ್.ಸಿ.ಎಚ್ ಅಧಿಕಾರಿ ರಾಜೇಶ್, ತಾಲೂಕು ಆರೋಗ್ಯಾಧಿಕಾರಿ ಡಾ.ಸುಜಯ್ ಮತ್ತಿತರರು ಉಪಸ್ಥಿತರಿದ್ದರು.

ಸಾರಿಗೆ ನೌಕರರ ಹಿಂಬಾಕಿ ಮೊತ್ತ ಬಿಡುಗಡೆ

• **ಬೆಂಗಳೂರು:** ನಾಲ್ಕು ಸಾರಿಗೆ ನಿಗಮಗಳ ಅಧಿಕಾರಿ/ನೌಕರರ ಹಿಂಬಾಕಿ ಮೊತ್ತದಲ್ಲಿ ಮೊದಲ ಕಂತಿನ 450 ಕೋಟಿ ರೂ. ಅನ್ನು ರಾಜ್ಯ ಸರ್ಕಾರವು ಬಿಡುಗಡೆಗೊಳಿಸಿದ್ದು, ಇವುಗಳ ಪೈಕಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ 137.24 ಕೋಟಿ ರೂ.ಮಂಜೂರಾಗಿದೆ.

ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳ ಅಧಿಕಾರಿ/ನೌಕರರಿಗೆ 2021ಜ.1 ರಿಂದ 2023 ಫೆ.28ರವರೆಗೆ ಒಟ್ಟು 26 ತಿಂಗಳ ಹಿಂಬಾಕಿ ಮೊತ್ತ 1271.92 ಕೋಟಿ ರೂ. ಪಾವತಿಸಲು ಅನುಮೋದನೆ ನೀಡಿ ಆದೇಶಿಸಲಾಗಿದೆ. ಇವುಗಳ ಪೈಕಿ ಪ್ರಸ್ತುತ ಮೊದಲ ಕಂತಿನ 450 ಕೋಟಿ ರೂ.ಬಿಡುಗಡೆಗೊಳಿಸಿದ್ದು, ಇದರಲ್ಲಿ ಬಿಎಂಟಿಸಿಗೆ 137.24 ಕೋಟಿ ರೂ.ಮಂಜೂರಾಗಿದೆ.

ಈ ಅನುದಾನದಡಿ 2021 ಜ.1ರಿಂದ 2021 ನ.30 ರವರೆಗೆ 11 ತಿಂಗಳ ಹಿಂಬಾಕಿ ಮೊತ್ತ ಪಾವತಿಸುವ ಸಂಬಂಧ ಕೆಲ ಕ್ರಮ ಕೈಗೊಳ್ಳಲಾಗಿದೆ. ಅದರಲ್ಲಿ ಪ್ರಮುಖವಾಗಿ ಸಂಸ್ಥೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೆ 11 ತಿಂಗಳ ವೇತನ ಪರಿಷ್ಕರಣೆಯ ಹಿಂಬಾಕಿ ಮೊತ್ತವನ್ನು ಶನಿವಾರ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲಾಗಿದೆ. 2021 ಜ.1 ರಿಂದ 2021 ನ.30ರ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿ ಸೇವಾ ವಿಮುಕ್ತರಾದ (ನಿವೃತ್ತಿ/ಸ್ವಯಂ ನಿವೃತ್ತಿ/ವಜಾ/ಮರಣ/ರಾಜೀನಾಮೆ ಸೇರಿದಂತೆ) ಅರ್ಹ ಅಧಿಕಾರಿ/ನೌಕರರಿಗೆ ಹಿಂಬಾಕಿ ಮೊತ್ತವನ್ನು ಮೇ 21 ರಂದು ಪಾವತಿಸಲಾಗುವುದು. ಇದೇ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿ ಅಂತರ ನಿಗಮ/ಸಂಸ್ಥೆಗಳಿಗೆ ವರ್ಗಾವಣೆಗೊಂಡ ಅಧಿಕಾರಿ/ನೌಕರರಿಗೆ ಹಿಂಬಾಕಿ ಮೊತ್ತವನ್ನು ಮೇ 22 ರಂದು ಸಂಬಂಧಿತ ನಿಗಮ/ಸಂಸ್ಥೆಗಳಿಗೆ ವರ್ಗಾವಣೆ ಮಾಡಲು ಕ್ರಮ ಕೈಗೊಳ್ಳಲಾಗುವುದು. ಸಂಸ್ಥೆಯ ಅಧಿಕಾರಿ ಹಾಗೂ ನೌಕರರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದ ಆದೇಶದಂತೆ ಅಗತ್ಯ ಕ್ರಮಗಳನ್ನು ತ್ವರಿತವಾಗಿ ಕೈಗೊಳ್ಳಲಾಗಿದೆ ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಕುಮಾರ್. ಕೆ.ಬಿ ತಿಳಿಸಿದ್ದಾರೆ.



ತುಮಕೂರಿನಲ್ಲಿ ಮೇ 19ರಂದು ನಡೆಯಲಿರುವ ಮೂರು ವರ್ಷದ ಪ್ರಗತಿಯತ್ತ ಕರ್ನಾಟಕ ಸಾಧನಾ ಸಮಾವೇಶ ಸಮರ್ಪಣೆ ಕಾರ್ಯಕ್ರಮಕ್ಕೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಶನಿವಾರ ಬೆಂಗಳೂರಿನ ಸದಾಶಿವನಗರದ ನಿವಾಸದಲ್ಲಿ ಭೇಟಿ ಮಾಡಿದ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರು ಅಧಿಕೃತವಾಗಿ ಆಹ್ವಾನಿಸಿದರು.

ವಂಚನೆ ಪ್ರಕರಣ: ಶಿವಾನಂದ ನೀಲಣ್ಣವರ ಸೆರೆ

• **ಬೆಳಗಾವಿ:** ಬೆಳಗಾವಿಯಲ್ಲಿ ಅನಧಿಕೃತ ಬಡ್ಡಿ ಹಾಗೂ ಹೂಡಿಕೆ ವ್ಯವಹಾರ ನಡೆಸಿದ ಆರೋಪದ ಮೇಲೆ ಶಿವಂ ಅಸೋಸಿಯೇಟ್ಸ್ ಮಾಲೀಕ ಶಿವಾನಂದ ನೀಲಣ್ಣವರನ್ನು ಅಧಿಕಾರಿಗಳು ಬಂಧಿಸಿದ್ದಾರೆ.

ಮೊದಲ ಹಂತದ ತನಿಖೆಯಲ್ಲೇ ರೂ.50 ಕೋಟಿಗೂ ಅಧಿಕ ಅಕ್ರಮ ವ್ಯವಹಾರ ನಡೆದಿರುವುದು ಪತ್ತೆಯಾಗಿದ್ದು, ಪ್ರಕರಣವನ್ನು ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಿದೆ. ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಮಾಹಿತಿ ನೀಡಿದಂತೆ, ಸುಮಾರು 35 ಸಾವಿರಕ್ಕೂ ಹೆಚ್ಚು ಜನರು ಶಿವಂ ಅಸೋಸಿಯೇಟ್ಸ್ ಮೂಲಕ ಹಣ ಹೂಡಿಕೆ ಮಾಡಿದ್ದಾರೆ. ಕರ್ನಾಟಕದ ವಿವಿಧ ಜಿಲ್ಲೆಗಳ ಜೊತೆಗೆ ಮಹಾರಾಷ್ಟ್ರ, ಆಂಧ್ರಪ್ರದೇಶ ಹಾಗೂ ತೆಲಂಗಾಣದಲ್ಲಿಯೂ ಈ ಜಾಲ ವಿಸ್ತರಿಸಿರುವ ಮಾಹಿತಿ ಲಭ್ಯವಾಗಿದೆ.

ಶೇ.36ರಷ್ಟು ಬಡ್ಡಿ ಆಮಿಷ: ರೂ.1 ಲಕ್ಷ ಠೇವಣಿ ಇಟ್ಟರೆ ಮಾಸಿಕ ಶೇ.36ರಷ್ಟು ಬಡ್ಡಿ ನೀಡುವುದಾಗಿ ಪತ್ರಿಕಾ ಜಾಹೀರಾತುಗಳ ಮೂಲಕ ಜನರನ್ನು ಆಕರ್ಷಿಸಲಾಗಿತ್ತು. ಹೆಚ್ಚಿನ ಲಾಭದ ಆಸೆಯಿಂದ ಸಾವಿರಾರು ಜನರು ಹಣ ಹೂಡಿಕೆ ಮಾಡಿದ್ದು, ಒಟ್ಟು ಠೇವಣಿಯ ಮೊತ್ತ ಸಾವಿರಾರು ಕೋಟಿಗಳಲ್ಲಿರಬಹುದು ಎಂದು ಶಂಕಿಸಲಾಗಿದೆ.

ದಾಳಿ ವೇಳೆ ಪತ್ತೆಯಾದ ದಾಖಲೆಗಳು: ಜಿಲ್ಲಾಧಿಕಾರಿ ಕಚೇರಿಯಲ್ಲಿ ಕೆಐಎಡಿ ಬಡ್ಸ್ ಆಕ್ಟ್ ಅಡಿಯಲ್ಲಿ ವಿಶೇಷ ತನಿಖಾ ತಂಡ ರಚಿಸಲಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ವಿಡಿಯೋಗಳು ಮತ್ತು ಮಾರುಕಟ್ಟೆ ಇಂಟಲಿಜೆನ್ಸ್ ಆಧರಿಸಿ ಶಿವಂ ಅಸೋಸಿಯೇಟ್ಸ್ ಕಚೇರಿ ಹಾಗೂ ಮನೆ ಮೇಲೆ ದಾಳಿ ನಡೆಸಲಾಗಿದೆ.ಅಧಿಕಾರಿಗಳ ಪ್ರಕಾರ ಪ್ರತಿ ತಿಂಗಳು ಒಂದೇ ಖಾತೆಯಿಂದ ರೂ.300ರಿಂದ ರೂ.400 ಕೋಟಿ ವ್ಯವಹಾರ ನಡೆದಿದೆ. ಯಾವುದೇ ಆರ್‌ಬಿಐ ಅಥವಾ ಸಹಕಾರ ಸಂಘ ನಿಯಮಗಳನ್ನು ಪಾಲಿಸಲಾಗಿಲ್ಲ. ದೊಡ್ಡ ಪ್ರಮಾಣದ ಹಣಕಾಸು ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ.

ಸ್ವಸ್ಥತಾ ಕಾರ್ಯಕ್ರಮ ರದ್ದು: ಮೇ 17ರಂದು ಬೆಳಗಾವಿಯಲ್ಲಿ 25 ಸಾವಿರ ಜನರನ್ನು ಸೇರಿಸಿ ಸ್ವಸ್ಥತಾ ಕಾರ್ಯಕ್ರಮ ಆಯೋಜಿಸಲಾಗಿತ್ತು. ನಗರಾದ್ಯಂತ ಕಟೌಟ್ ಮತ್ತು ಪೋಸ್ಟರ್‌ಗಳು ಹಾಕಲಾಗಿದ್ದವು. ತನಿಖೆ ಆರಂಭವಾದ ಬಳಿಕ ಪಾಲಿಕೆ ಅಧಿಕಾರಿಗಳು ಕಾರ್ಯಕ್ರಮ ರದ್ದುಪಡಿಸಿ ಎಲ್ಲಾ ಪೋಸ್ಟರ್ ತೆರವುಗೊಳಿಸಿದರು.

ಸಿಡಿಲಿಗೆ ಮಹಿಳೆ, 2 ಹಸು ಸಾವು

• **ಪಿರಿಯಾಪಟ್ಟಣ:** ಸಿಡಿಲು ಬಡಿದು ಓರ್ವ ಮಹಿಳೆ ಹಾಗೂ ಎರಡು ಹಸುಗಳು ಸ್ಥಳದಲ್ಲೇ ಮೃತಪಟ್ಟಿದ್ದು, ಅಸ್ವಸ್ಥಗೊಂಡ ಮಹಿಳೆಯನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾರೆ. ತಾಲೂಕಿನ ಸತ್ಯಗಾಲ ಗ್ರಾಮದ ನಿವಾಸಿ ವಿಠೋಬ(36 ವರ್ಷ) ಮೃತಪಟ್ಟ ದುರ್ದೈವಿ. ಶನಿವಾರ ಸಂಜೆ ಜಮೀನಿನಲ್ಲಿ ಹಸುಗಳನ್ನು ಮೇಯಿಸುತ್ತಿದ್ದ ಸಂದರ್ಭದಲ್ಲಿ ಸಿಡಿಲಿಗೆ ಅಸ್ವಸ್ಥಗೊಂಡ ಮಹಿಳೆಯನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ. ಮೃತರ ದೇಹವನ್ನು ಪಟ್ಟಣದ ಸಾರ್ವಜನಿಕ ಶವಾಗಾರದಲ್ಲಿ ಇರಿಸಲಾಗಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕಿಲೇಜಿ

◈ ದೇವಸ್ಥಾನ, ಮಠ, ಮಂದಿರ ಮತ್ತು ಧಾರ್ಮಿಕ ಕೇಂದ್ರಗಳಲ್ಲಿ ನಡೆಯುವ ಬೃಹತ್ ಕಲಶದಂತಹ ಕಾರ್ಯಕ್ರಮಗಳ ಮೂಲಕ ಹಿಂದೂ ಸಮಾಜವನ್ನು ಒಗ್ಗೂಡಿಸುವ ಕಾರ್ಯವಾಗಬೇಕಾಗಿದೆ – ವೈ.ಭರತ್ ಶೆಟ್ಟಿ

- ಕಣ್ಣುಗಳು ಎರಡಾದರೂ ದೃಷ್ಟಿ ಒಂದೇ, ಬೆರಳುಗಳು ಐದಾಗಿದ್ದರೂ ಕೈ ಒಂದೇ, ರಾಜ್ಯಗಳು ಬೇರೆ ಬೇರೆಯಾಗಿದ್ದರೂ ನಮ್ಮೆಲ್ಲರ ದೇಶ ಒಂದೇ ಆಗಿದೆ. ಹಾಗೆಯೇ ನಮ್ಮ ಜಾತಿ, ರೀತಿ, ಪಕ್ಷಗಳು ಬೇರೆ ಬೇರೆಯಾಗಿದ್ದರೂ ಧರ್ಮ ಒಂದೇ ಆಗಿದೆ ಎಂಬುದನ್ನು ನೆನಪಿಸುವ ಏಕೈಕ ಜಾಗವೆಂದರೆ ಧಾರ್ಮಿಕ ಕೇಂದ್ರಗಳು!

ದಿನ ಭವಿಷ್ಯ

ಮೇಷ ಆಪ್ತರ ಜತೆ ಭಿನ್ನಾಭಿಪ್ರಾಯ ಸಂಭವ. ಎದುರಾಡಬೇಡಿ. ಸಹನೆ ಕಾಯ್ದುಕೊಳ್ಳಿ. ಹಣದ ಹರಿವಿಗೆ ತಡೆ ಒದಗೀತು. ಖರ್ಚು ಕಡಿಮೆ ಮಾಡಿ.

ವೃಷಭ ತೃಪ್ತಿಕರ ಬೆಳವಣಿಗೆ. ಸಂಘಟಿತ ಕಾರ್ಯದಲ್ಲಿ ಸಫಲತೆ. ಇತರರಿಗೆ ಕೊಟ್ಟ ಹಣ ಮರಳಿ ಸಿಗಲಿದೆ. ಪ್ರೀತಿಪಾತ್ರರ ಜತೆ ಜಗಳವಾಡದಿರಿ.

ಮಿಥುನ ನಿಮಗೆ ಒದಗಿ ಬರುವ ಅವಕಾಶ ಚೆನ್ನಾಗಿ ಬಳಸಿಕೊಳ್ಳಿ. ದೀರ್ಘಾವಧಿ ಯೋಜನೆ ಪೂರ್ಣ ಆಗಲಿದೆ. ನಿಮ್ಮ ನಿರ್ಧಾರಕ್ಕೆ ಸಂಗಾತಿ ಬೆಂಬಲ.

ಕಟಕ ನಿಮ್ಮ ನಡೆನುಡಿ ಎಲ್ಲರ ಗಮನ ಸೆಳೆಯಲಿದೆ. ವೃತ್ತಿಯಲ್ಲಿ ಸಫಲತೆ. ಪ್ರೀತಿಯ ವಿಷಯದಲ್ಲಿ ನಿರಾಶೆ ಉಂಟಾದೀತು. ದೇಹಾಲಸ್ಯ ಸಂಭವ.

ಸಿಂಹ ಎಲ್ಲರ ಜತೆಗಿನ ಸಂಬಂಧ ಚೆನ್ನಾಗಿಡಿ. ಕೆಡುಕು ಮಾತು ಬಿಡಿ. ಸಂಗಾತಿ ಜತೆಗೆ ಸಾಮರಸ್ಯ ಕಾಯ್ದುಕೊಳ್ಳಿ. ಮಕ್ಕಳ ಸಾಧನೆಯಿಂದ ತೃಪ್ತಿ.

ಕನ್ಯಾ ನಿಮ್ಮ ಸಿಡುಕುತನ ಸಂಬಂಧ ಹಾಳು ಮಾಡೀತು. ಕೆಲವರು ನಿಮ್ಮ ಒಳ್ಳೆತನ ದುರುಪಯೋಗ ಮಾಡುವರು. ಖರೀದಿ ಉತ್ಸಾಹ, ಧನವ್ಯಯ.

ತುಲಾ ಕೆಲಸದಲ್ಲಿ ಹೆಚ್ಚು ಪರಿಶ್ರಮ ಬೇಕಾಗುವುದು. ಹಣ ಹೂಡಿಕೆಯಿಂದ ಲಾಭ ಸಿಗಲಿದೆ. ನಿಮಗೆ ಕೇಡು ಬಯಸುವವರ ಕುರಿತಂತೆ ಒಂದು ಕಣ್ಣಿಡಿ.

ವೃಶ್ಚಿಕ ಕಠಿಣ ಪರಿಶ್ರಮದ ಫಲ ಸಿಗಲಿದೆ. ಉದ್ಯೋಗ ಹುಡುಕುವವರಿಗೆ ಶುಭಸುದ್ದಿ. ಕೌಟುಂಬಿಕ ಉದ್ವಿಗ್ನತೆ ನಿವಾರಣೆ. ಹೂಡಿಕೆಯಿಂದ ಲಾಭ.

ಧನು ನಿಮ್ಮಿಷ್ಟದವರ ಪ್ರೀತಿ ಗಳಿಸುವ ಯತ್ನ ಸಫಲ. ಹಾಗೆಂದು ನಿಮ್ಮ ಕರ್ತವ್ಯ ಮರೆಯಬೇಡಿ. ಕೆಲಸ ಪೂರೈಸಲು ಗಮನ ಕೊಡಿ. ಬಂಧುಗಳ ಕಿರಿಕಿರಿ.

ಮಕರ ನಿಮ್ಮ ನಡೆನುಡಿಯಿಂದ ಆಕರ್ಷಣೆಯ ಕೇಂದ್ರವಾಗುವಿರಿ. ಖಾಸಗಿ ಮತ್ತು ವೃತ್ತಿ ಬದುಕು ತೃಪ್ತಿಕರ. ಅಜೀರ್ಣದ ಸಮಸ್ಯೆ ಹೊಟ್ಟೆ ಕೆಡಿಸೀತು.

ಕುಂಭ ಅಧಿಕ ಕೆಲಸದಿಂದ ಆರೋಗ್ಯ ಕೆಡಬಹುದು. ಆದಾಯದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಪೂರಕ ಬೆಳವಣಿಗೆ. ನಿಮ್ಮ ಮಾತಿಗೆ ಬೆಲೆ ಸಿಗಲಿದೆ.

ಮೀನ ಅನಗತ್ಯ ವಸ್ತು ಖರೀದಿಯಿಂದ ಧನವ್ಯಯ. ಬಿಕ್ಕಟ್ಟಿಗೆ ಸಂಬಂಧಿಸಿ ಯುಕ್ತ ಸಲಹೆ ಬಂದರೆ ಸ್ವೀಕರಿಸಿ. ಹಠ ಸ್ವಭಾವ ತೋರದಿರಿ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 7,0,2,5

ಮಹೇಶ್ ಬಾಬುಗೆ ಪಿಎಚ್‌ಡಿ



• **ಬೆಂಗಳೂರು:** ಬಳ್ಳಾರಿ ಜಿಲ್ಲೆಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯವು ಕೆಎಎಸ್ ಅಧಿಕಾರಿ ಮಹೇಶ್ ಬಾಬು ಎನ್. ಅವರಿಗೆ ಅನ್ವಯಿಕ ಭೂ –ವಿಜ್ಞಾನ ವಿಷಯದಲ್ಲಿ ಡಾಕ್ಟರ್ ಆಫ್ ಫಿಲಾಸಫಿ (ಪಿ.ಎಚ್‌ಡಿ) ಪದವಿಯನ್ನು ಪ್ರಧಾನ ಮಾಡಿದೆ. ಈ ಪದವಿಯು ಭಾರತದ ಪೂರ್ವ ಧಾರವಾಡ ಕ್ರೇಟನ್‌ನ ಹಟ್ಟಿ–ಮಸ್ಕಿ ಭಾಗದ ಸ್ಕಿಸ್ಟ್‌ಬೆಲ್ಟ್ ಪ್ರದೇಶದ ಅರೆ–ಶುಷ್ಕ ಪ್ರದೇಶದಲ್ಲಿ ಜಲ ಸಂಪನ್ಮೂಲ ಅಭಿವೃದ್ಧಿಯ ಭೌಗೋಳಿಕ ವಿಶ್ಲೇಷಣೆ ಎಂಬ ಅವರ ಸಂಶೋಧನ ಪ್ರಬಂಧದ ಮನ್ನಣೆಯಾಗಿ ನೀಡಲಾಗಿದೆ. ಈ ಸಂಶೋಧನೆಯನ್ನು ಅನ್ವಯಿಕ ಭೂ–ವಿಜ್ಞಾನ ವಿಭಾಗದ ಅಧ್ಯಕ್ಷ ಡಾ.ಬಸವರಾಜ್ ಹಟ್ಟಿ ಅವರ ಮಾರ್ಗದರ್ಶನದಲ್ಲಿ ನಡೆಸಲಾಯಿತು. ತಮ್ಮ ಸಂಶೋಧನಾ ಅವಧಿಯಲ್ಲಿ ಮಹೇಶ್‌ಬಾಬು ಎನ್. ಅವರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಗೋಷ್ಠಿಗಳು ಹಾಗೂ ಸಹಪಾಠ ವಿಮರ್ಶಿತ ನಿಯತಕಾಲಿಕೆಗಳಲ್ಲಿ ಹಲವಾರು ಸಂಶೋಧನಾ ಪ್ರಬಂಧಗಳನ್ನು ಪ್ರಸ್ತುತಪಡಿಸಿದ್ದಾರೆ ಮತ್ತು ಪ್ರಕಟಿಸಿದ್ದಾರೆ.

ಕೇಂದ್ರ ರಕ್ಷಣಾ ಸಚಿವರಿಗೆ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಪತ್ರ

ಎಎಂಸಿಎ ರಾಜ್ಯದಲ್ಲೇ ಸ್ಥಾಪಿಸಿ

• **ಬೆಂಗಳೂರು:** ರಕ್ಷಣಾ ಇಲಾಖೆಯ ಅಡಿಯಲ್ಲಿರುವ ಏರೋನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿ (ಎಡಿಎ) ಸ್ಥಾಪಿಸಲು ಉದ್ದೇಶಿಸಿರುವ ಮಧ್ಯಮಸ್ತರದ ಸುಧಾರಿತ ಯುದ್ಧ ವಿಮಾನ (ಅಡ್ವಾನ್ಸ್ಡ್ ಮೀಡಿಯಂ ಕಾಂಬ್ಯಾಟ್ ಏರ್ ಕ್ರಾಫ್ಟ್ (ಎಎಂಸಿಎ)) ನಿರ್ಮಾಣದ ಕ್ಯಾಂಪಸ್ಸನ್ನು ಕರ್ನಾಟಕದಲ್ಲೇ ಸ್ಥಾಪಿಸಬೇಕು ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಕೇಂದ್ರ ರಕ್ಷಣಾ ಸಚಿವರಿಗೆ ಪತ್ರ ಬರೆದಿದ್ದಾರೆ.

ಈ ಕುರಿತು ರಾಜನಾಥ್ ಸಿಂಗ್ ಅವರಿಗೆ ಪತ್ರ ಬರೆದಿರುವ ಸಚಿವರು, ಕ್ಯಾಂಪಸ್ ಸ್ಥಾಪನೆಗೆ ಅಗತ್ಯವಿರುವ 650 ಎಕರೆ ಭೂಮಿಯನ್ನು ಕೊಡಲು ರಾಜ್ಯ ಸರಕಾರ ಸಿದ್ಧವಿದೆ. ಈ ಯೋಜನೆಯು ರಾಜ್ಯದಲ್ಲೇ ಜಾರಿಗೆ ಬರುವುದು ದೇಶದ ಭದ್ರತೆಯ ದೃಷ್ಟಿಯಿಂದ ಅತ್ಯಂತ ಸೂಕ್ತವಾಗಿದೆ ಎಂದು ಸಚಿವ ಎಂ.ಬಿ. ಪಾಟೀಲ ಪತ್ರದಲ್ಲಿ ಮನವಿ ಮಾಡಿದ್ದಾರೆ.

ಎಎಂಸಿಎ ಸ್ಥಾವರ ಸ್ಥಾಪನೆಗೆ ರಾಜ್ಯ ಸೂಕ್ತವಾಗಿದೆ: ದೇಶದ ವೈಮಾಂತರಿಕ್ಷ ಮತ್ತು ರಕ್ಷಣಾ ಉದ್ಯಮ ವಲಯಕ್ಕೆ ರಾಜ್ಯವು ಶೇ.65ರಷ್ಟು ಕೊಡುಗೆ ನೀಡುತ್ತಿದೆ. ಉದ್ದೇಶಿತ ಸಂಸ್ಥೆಗೆ ಆರಂಭದಲ್ಲಿ ಬೇಕಿರುವ 300 ಎಕರೆ (ಯುದ್ಧ ವಿಮಾನ ನಿರ್ಮಾಣ) ಮತ್ತು ಭವಿಷ್ಯದ ದೃಷ್ಟಿಯಿಂದ ಅಗತ್ಯವಿರುವ 350 ಎಕರೆ (ರನ್ ವೇ ನಿರ್ಮಾಣ) ಸ್ಥಳವನ್ನು ಕೂಡಲೇ ಒದಗಿಸಲು ಯಾವುದೇ ತೊಂದರೆ ಇಲ್ಲ. ವೈಮಾಂತರಿಕ್ಷ ಮತ್ತು ರಕ್ಷಣಾ ವಲಯಕ್ಕೆ ಸೇರಿದ ಎಚ್‌ಎಎಲ್, ಇಸ್ರೋ, ಎನ್‌ಎಎಲ್, ಡಿಆರ್‌ಡಿಒ, ಡಿಎಆರ್‌ಇ, ಜಿಟಿಆರ್‌ಇ, ಎಡಿಇ, ಬಿಇಎಂಎಲ್ ಮತ್ತು ಬಿಇಎಲ್ ಮುಂತಾದವೆಲ್ಲ ಬೆಂಗಳೂರಿನಲ್ಲಿವೆ. ಹೀಗಾಗಿ ಎಎಂಸಿಎ ಸ್ಥಾವರ ಸ್ಥಾಪನೆಗೆ ಬೆಂಗಳೂರು ಅಥವಾ ಸುತ್ತಮುತ್ತಲಿನ ಸ್ಥಳಗಳು ಹೇಳಿಮಾಡಿಸಿದಂತಿವೆ ಎಂದು ವಿವರಿಸಿದ್ದಾರೆ.



ಎಎಂಸಿಎ ಯೋಜನೆಗೆ ಸಂಬಂಧಿಸಿದಂತೆ ನಾವು ರಕ್ಷಣಾ ಸಚಿವಾಲಯ ಮತ್ತು ಎಡಿಎ ಜತೆ ನಿರಂತರವಾಗಿ ಕೆಲಸ ಮಾಡಲು ಸಿದ್ಧರಿದ್ದೇವೆ.
■ ಎಂ.ಬಿ.ಪಾಟೀಲ, ಕೈಗಾರಿಕಾ ಸಚಿವ

ಈ ಸ್ಥಾವರವನ್ನು ಸ್ಥಾಪಿಸಲಿರುವ ಎಡಿಎ ಕೇಂದ್ರ ಕಚೇರಿ ಕೂಡ ಬೆಂಗಳೂರಿನಲ್ಲೇ ಇದೆ. ಇದನ್ನು ಕೇಂದ್ರ ಸರಕಾರ ಪರಿಗಣಿಸಬೇಕು. ಇಷ್ಟೇ ಅಲ್ಲದೆ, ಟಾಟಾ ಸಮೂಹದವರು ವೇಮಗಲ್‌ನಲ್ಲಿ ಹೆಲಿಕಾಪ್ಟರ್ ಜೋಡಣಾ ಘಟಕ ಸ್ಥಾಪಿಸಿದ್ದಾರೆ. ಜಗದ್ವಿಖ್ಯಾತ ಏರ್ ಬಸ್ ಮತ್ತು ಬೋಯಿಂಗ್ ಕಂಪನಿಗಳು ಕೂಡ ತಮ್ಮ ಬೃಹತ್ ಎಂಜಿನಿಯರಿಂಗ್ ಮತ್ತು ಆರ್ ಅಂಡ್ ಡಿ ಘಟಕಗಳನ್ನು ರಾಜ್ಯದಲ್ಲಿ ಹೊಂದಿವೆ. ಇವುಗಳಿಗೆ ಪೂರಕವಾಗಿ ಎರಡು ಸಾವಿರಕ್ಕೂ ಹೆಚ್ಚು ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ನಮ್ಮಲ್ಲಿ ಸಕ್ರಿಯವಾಗಿವೆ ಎಂದು ಅವರು ಪತ್ರದಲ್ಲಿ ವಿವರಿಸಿದ್ದಾರೆ.

ರಾಜ್ಯವು ಪ್ರತ್ಯೇಕ ವೈಮಾಂತರಿಕ್ಷ ಮತ್ತು ರಕ್ಷಣಾ ನೀತಿಯನ್ನು ಹೊಂದಿದ್ದು, ಐದು ಕಡೆಗಳಲ್ಲಿ ಏರೋಸ್ಪೇಸ್ ಹಬ್‌ಗಳನ್ನು ಅಭಿವೃದ್ಧಿ ಪಡಿಸುತ್ತಿದೆ. ಈ ನೀತಿಯಡಿ 6 ಬಿಲಿಯನ್ ಡಾಲರ್ ಬಂಡವಾಳ ಹೂಡಿಕೆ ಆಕರ್ಷಿಸುವ ಗುರಿ ಇದ್ದು, 2027ರ ಕೊನೆಯ ಹೊತ್ತಿಗೆ 70 ಸಾವಿರ ಉದ್ಯೋಗಗಳನ್ನು ಸೃಷ್ಟಿಸಲಾಗುವುದು.

ನಮ್ಮ ತಂಟೆಗೆ ಬಂದರೆ ಪಾಕಿಸ್ತಾನ ಅಸ್ತಿತ್ವವೇ ನಾಶ

ಪುಟ ೧➜ಭಾರತ ವಿರುದ್ಧ ಭಯೋತ್ಪಾದನೆ ಪ್ರಾಯೋಜಿಸುತ್ತಿರುವ ಪಾಕಿಸ್ತಾನ, ವಿಶ್ವದ ಭೂಪಟದಲ್ಲಿ ತಾನು ಉಳಿಯಬೇಕೋ ಬೇಡವೋ ಎಂದು ಚಿಂತನೆ ನಡೆಸುವಷ್ಟರ ಮಟ್ಟಿನ ಆಘಾತಕಾರಿ ಹೊಡೆತವನ್ನು ಸೇನೆ ಪಾಕ್‌ಗೆ ನೀಡಲಿದೆ ಎಂದು ಜ.ದ್ವಿವೇದಿ ಕಳೆದ ಅಕ್ಟೋಬರ್‌ನಲ್ಲಿ ಗುಡುಗಿದ್ದರು.

ನಿರ್ಣಾಯಕ ಪ್ರತ್ಯುತ್ತರ: ಗುಜರಾತ್ ಮತ್ತು ಪಾಕ್‌ನ ಸಿಂಧ್ ಪ್ರಾಂತ್ಯ ನಡುವಣ ಜೌಗು ಭೂಮಿ ಸರ್ ಕ್ರೀಕ್ ಬಳಿ ಪಾಕಿಸ್ತಾನದ ಮಿಲಿಟರಿ ಮೂಲಸೌಕರ್ಯಗಳು ದಿನೇ ದಿನೇ ಬೆಳೆಯುತ್ತಿರುವ ಬಗ್ಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕಳವಳ ವ್ಯಕ್ತಪಡಿಸಿರುವ ಬೆನ್ನಲ್ಲೇ, ಜ.ದ್ವಿವೇದಿ ಪಾಕ್‌ನ ದುಷ್ಪ್ರವೃತ್ತಿಗೆ ಸಿಡಿಲಿನಂತಹ ಎಚ್ಚರಿಕೆ ನೀಡಿದ್ದಾರೆ. ಸುದೀರ್ಘ ವರ್ಷಗಳಿಂದ ಮಾತುಕತೆ ಯತ್ನಗಳು ಮುಂದುವರಿದಿರುವ ಹೊರತೂ ಪಾಕಿಸ್ತಾನ ಗಡಿ ವಿವಾದ ಜೀವಂತ ಕಾಯ್ದುಕೊಳ್ಳಲು ಶ್ರಮಿಸುತ್ತಿದೆ ಮತ್ತು ಪಾಕಿಸ್ತಾನದ ಉದ್ದೇಶವಾದರೂ ಏನೆಂದು ರಕ್ಷಣಾ ಸಚಿವ ಸಿಂಗ್ ಪ್ರಶ್ನಿಸಿದ್ದರು.

ಸರ್‌ಕ್ರೀಕ್‌ನಲ್ಲಿ ಪಾಕ್ ಯಾವುದೇ ದುಸ್ಸಾಹಸಕ್ಕಿಳಿದದ್ದೇ ಆದಲ್ಲಿ ಭಾರತ ಅತ್ಯಂತ ನಿರ್ಣಾಯಕ ಪ್ರತ್ಯುತ್ತರವೀಯಲಿದೆ ಎಂದು ಸಚಿವರು ಪಾಕ್‌ಗೆ ಎಚ್ಚರಿಕೆ ನೀಡಿದ್ದರು. ಸೇನೆ, ಗಡಿ ಭದ್ರತಾ ಪಡೆ ಗಡಿಗಳನ್ನು ಅತ್ಯಂತ ಸನ್ನದ್ಧ ಸ್ಥಿತಿಯಲ್ಲಿ ಕಾಯುತ್ತಿವೆ ಎಂದು ಸಚಿವರು ಎಚ್ಚರಿಸಿದ್ದರು.

ಕಳೆದ ವರ್ಷ ಏ.22ರ ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಅನ್ಯಾಯವಾಗಿ ಬಲಿಯಾದ ಭಾರತೀಯ ಪ್ರವಾಸಿಗರ ಸಾವಿಗೆ ನ್ಯಾಯ ನೀಡುವನ್ನಯ, ಭಾರತದ ಸೇನಾ ಪಡೆ ಮೇ 7ರಂದು ಆಪರೇಶನ್ ಸಿಂದೂರ್ ನಡೆಸಿತ್ತು ಮತ್ತು ಆರಂಭಿಕ ಹಂತದಲ್ಲಿ ಪಾಕ್ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿದ್ದ 9 ಭಯೋತ್ಪಾದಕ ನೆಲೆಗಳನ್ನು ಧ್ವಂಸಗೊಳಿಸಿತ್ತು. ಮೊದಲ ಹಂತದಲ್ಲಿ ಪಾಕ್‌ನ ಮಿಲಿಟರಿ ಸೌಕರ್ಯಗಳ ಮೇಲೆ ಭಾರತೀಯ ಸೇನಾಪಡೆ ದಾಳಿ ನಡೆಸಿರಲಿಲ್ಲ. ಸಂಘರ್ಷ ನಿಲ್ಲಿಸುವಂತೆ ಪಾಕಿಸ್ಥಾನ ಗೋಗರೆದ ಹಿನ್ನೆಲೆಯಲ್ಲಿ, ಮೇ 10ರಂದು ಭಾರತ ಕದನ ವಿರಾಮ ಘೋಷಿಸಿ ಸಂಘರ್ಷ ಅಂತ್ಯಗೊಳಿಸಿತ್ತು.

ಎನ್‌ಸಿಬಿ ವಶಕ್ಕೆ ₹182 ಕೋಟಿ ಜಿಹಾದಿ ಡ್ರಗ್

ಪುಟ ೧➜ನಮ್ಮ ಎನ್‌ಸಿಬಿ ಅಧಿಕಾರಿಗಳ ಧೈರ್ಯವನ್ನು ನಾನು ಪ್ರಶಂಸಿಸುತ್ತೇನೆ ಎಂದು ಗೃಹ ಸಚಿವ ಅಮಿತ್ ಶಾ ಹೊಗಳಿದ್ದಾರೆ. ಕೇಪ್‌ಟೇಗೊನ್ ಮಾದಕದ್ರವ್ಯ ಸಾಗಣೆಗೆ ಭಾರತವನ್ನು ಸಾಗಣೆ ಮಾರ್ಗವನ್ನಾಗಿ ಬಳಸಲಾಗುತ್ತಿದೆ ಎಂಬ ವಿದೇಶಿ ಮಾದಕದ್ರವ್ಯ ವಿರೋಧಿ ಸಂಸ್ಥೆಯೊಂದರ ರಹಸ್ಯ ಮಾಹಿತಿ ಸ್ವೀಕರಿಸಿದ ಎನ್‌ಸಿಬಿ ರೇಜ್‌ಪಿಲ್ ಕಾರ್ಯಾಚರಣೆ ನಡೆಸಿದ್ದು, ಭಾರೀ ಮಾದಕದ್ರವ್ಯ ವಶಪಡಿಸಲಾಗಿದೆ.

ಚಪಾತಿ ಮೇಕರ್‌ನಲ್ಲಿ 31.5 ಕೆಜಿ ಮಾದಕದ್ರವ್ಯ ವಶ: ಮೇ 11ರಂದು ದಿಲ್ಲಿಯ ನೆಬ್ ಸರಾಯ್‌ನ ಮನೆಯೊಂದರ ಮೇಲೆ ಎನ್‌ಸಿಬಿ ಅಧಿಕಾರಿಗಳು ದಾಳಿ ನಡೆಸಿದ್ದು, 31.5 ಕೆ.ಜಿ. ಕೇಪ್‌ಟೇಗೊನ್ ಮಾತ್ರೆಗಳನ್ನು ವಶಪಡಿಸಿತ್ತು. ಚಪಾತಿಮೇಕರ್‌ನೊಳಗೆ ಮಾದಕದ್ರವ್ಯ ಮಾತ್ರೆಗಳನ್ನಿಟ್ಟು ಸೌದಿ ಅರೇಬಿಯಾದ ಜೆಡ್ಡಾಗೆ ರಫ್ತು ಮಾಡುವ ಉದ್ದೇಶವಿತ್ತು. ಪ್ರವಾಸಿ ವೀಸಾದಲ್ಲಿ 2024ರ ನ.14ರಂದು ಭಾರತ ಪ್ರವೇಶಿಸಿದ್ದ ಸಿರಿಯಾ ಪ್ರಜೆ ಈ ಮನೆ ಬಾಡಿಗೆಗೆ ಪಡೆದಿದ್ದ. ಆತನ ವೀಸಾ ಅವಧಿ 2025ರ ಜ.12ಕ್ಕೆ ಕೊನೆಗೊಂಡಿತ್ತು ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ.

ಏನಿದು ಕೇಪ್‌ಟೇಗೊನ್?

ಪುಟ ೧➜**ಕೇಪ್‌ಟೇಗೊನ್ ಸೇವನೆ ಪರಿಣಾಮ ಕೋಪ ಮತ್ತು ಹತಾಶೆ, ಆಕ್ರಮಣಕಾರಿ ಸ್ವಭಾವ ಮತ್ತು ಅಪಾಯ ಎದುರಿಸಬಲ್ಲ ಮನಸ್ಥಿತಿ ಮತ್ತು ಒತ್ತಡದಲ್ಲೂ ಯುದ್ಧ ಚಟುವಟಿಕೆ ನಡೆಸಬಲ್ಲ ಕೃತಕ ಬಲ ನೀಡುತ್ತದೆ ಎಂದು ತಿಳಿದುಬಂದಿದೆ.**

ಮಾದಕದ್ರವ್ಯ ಮುಕ್ತ ಭಾರತ: ಮಾದಕದ್ರವ್ಯ ಮುಕ್ತ ಭಾರತ ನಿರ್ಮಾಣಕ್ಕೆ ಮೋದಿ ಸರ್ಕಾರ ಕಟಿಬದ್ಧವಾಗಿದೆ. ಆಪರೇಷನ್ ರೇಜ್‌ಪಿಲ್ ಮಾದಕದ್ರವ್ಯ ವಿರೋಧಿ ಕಾರ್ಯಾಚರಣೆಯನ್ನು ನಡೆಸಿದ ಎನ್‌ಸಿಬಿ, 182 ಕೋಟಿ ರೂ. ಮೌಲ್ಯದ ಜಿಹಾದಿ ಡ್ರಗ್ ಹೆಸರಿನ ಕೇಪ್‌ಟೇಗೊನ್ ಮೊದಲ ರವಾನೆಯನ್ನು ವಶಪಡಿಸಿದ್ದಾರೆ ಎಂದು ಶಾ ಘೋಷಿಸಿದ್ದಾರೆ.

ಶೂನ್ಯ ಸಹಿಷ್ಣುತೆ: ಮಧ್ಯಪ್ರಾಚ್ಯಕ್ಕೆ ಸಾಗಿಸಲಾಗುತ್ತಿದ್ದ ಮಾದಕದ್ರವ್ಯ ಸಾಗಣೆಯನ್ನು ಪತ್ತೆಹಚ್ಚಿದ್ದಲ್ಲದೆ, ವಿದೇಶಿ ಪ್ರಜೆಯನ್ನು ಬಂಧಿಸಿರುವುದು, ಮಾದಕವಸ್ತುಗಳ ವಿರುದ್ಧ ನಮ್ಮ ಸರ್ಕಾರದ ಶೂನ್ಯ ಸಹಿಷ್ಣುತೆಗೆ ಉದಾಹರಣೆಗಳಾಗಿವೆ ಎಂದು ಶಾ ಹೇಳಿದ್ದಾರೆ.

ಅಭಿಯಾನಕ್ಕೆ ಭಾರೀ ಜನಸ್ಪಂದನೆ: ಡಿಕೆಶಿ

ಪುಟ ೧➜ನಿಗದಿತ ನಂಬರ್ ನೀಡಿದ ತಕ್ಷಣ 2004ರ ನಂತರದ ಎಲ್ಲಾ ದಾಖಲೆಗಳು ದೊರೆಯುತ್ತವೆ. ಸಬ್ ರಿಜಿಸ್ಟ್ರಾರ್ ಕಚೇರಿಗೆ ಲಿಂಕ್ ಮಾಡಲಾಗಿದೆ. ಅರ್ಹ ಮಾಲೀಕರಿಗೆ ಖಾತೆ ಮಾಡಿಕೊಡಲಾಗುವುದು ಎಂದು ಹೇಳಿದರು.

ಪ್ರತಿ ಶನಿವಾರ ಸಣ್ಣ ಇ- ಖಾತೆ ಅಭಿಯಾನ: ಆಸ್ತಿ ಮೌಲ್ಯಗಳನ್ನು ಹೆಚ್ಚಳ ಮಾಡಲು ಬಿ ಖಾತೆಯಿಂದ ಎ ಖಾತೆಗೆ ಪರಿವರ್ತನೆ ಮಾಡಿಕೊಡಲಾಗುತ್ತಿದೆ. ಇದು ಐತಿಹಾಸಿಕ ತೀರ್ಮಾನ. ಇದರಿಂದ ಬ್ಯಾಂಕ್‌ನಲ್ಲಿ ಸಾಲ ಪಡೆಯಬಹುದು ಹಾಗೂ ಇತರೆ ಸೌಲಭ್ಯಗಳನ್ನು ನಿಮ್ಮದಾಗಿಸಿಕೊಳ್ಳಬಹುದು. ಬೆಂಗಳೂರಿನಲ್ಲಿರುವ 23 ಲಕ್ಷ ಆಸ್ತಿಗಳಲ್ಲಿ 16 ಲಕ್ಷ ಎ ಖಾತೆಗಳಿದ್ದರೆ 7 ಲಕ್ಷ ಬಿ ಖಾತೆಗಳಿವೆ. ಕೆಳ ಮಟ್ಟದ ಅಧಿಕಾರಿಗಳು ಖಾತೆ ವಿಚಾರವಾಗಿ ಲಂಚ ಪಡೆದು ಕಿರುಕುಳ ನೀಡುತ್ತಿದ್ದರು ಎನ್ನುವುದು ನನ್ನ ಗಮನಕ್ಕೆ ಬಂದಿತ್ತು. ಆದಕ್ಕಾಗಿ ಪ್ರತಿ ಶನಿವಾರ ಅಭಿಯಾನ ನಡೆಸಲಾಗುವುದು ಎಂದು ತಿಳಿಸಿದರು.

100 ದಿನ ರಿಯಾಯಿತಿ: ನಿಮ್ಮ ಆಸ್ತಿ ದಾಖಲೆಗಳಲ್ಲಿ ತೊಂದರೆಯಿದ್ದರೆ ಅಧಿಕಾರಿಗಳು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಲಿದ್ದಾರೆ. ನಿಮ್ಮ ಆಸ್ತಿಗಳಿಗೆ ಗುರುತಿನ ಸಂಖ್ಯೆ ನೀಡಲಾಗಿರುತ್ತದೆ. ಇದನ್ನು ಬಳಸಿಕೊಂಡು ತಪ್ಪಿರುವ ದಾಖಲೆಗಳನ್ನು ಸರಿ ಮಾಡಲಾಗುವುದು. ನಿಮ್ಮ ಆಸ್ತಿ ಮೌಲ್ಯದ ಶೇ.5ರಷ್ಟು ಮೊತ್ತವನ್ನು ಕಟ್ಟಬೇಕಿತ್ತು. ಆದರೆ 100 ದಿನಗಳ ಕಾಲ ರಿಯಾಯಿತಿ ನೀಡಿದ್ದು ಶೇ.2ರಷ್ಟು ಶುಲ್ಕ ಪಾವತಿ ಮಾಡುವ ಅವಕಾಶ ಕಲ್ಪಿಸಲಾಗಿದೆ.



ದಲ್ಲಾಳಿಗಳನ್ನು ದೂರ ಇಡಬೇಕು. ಯಾವ ಅಧಿಕಾರಿ ಲಂಚ ಕೇಳಿದರೂ ದೂರು ನೀಡುವ ವ್ಯವಸ್ಥೆ ಮಾಡಬೇಕು. ಇದಕ್ಕಾಗಿ ನಿರ್ದಿಷ್ಟ ದೂರವಾಣಿ ಸಂಖ್ಯೆ ನೀಡಲಾಗುವುದು. ಲಂಚ ಕೇಳಿದರೆ ದೂರು ನೀಡಬಹುದು. ಅಂತಹವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು.
■ ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

ಇದು ಸಾರ್ವಜನಿಕರಿಗೆ ಸುವರ್ಣಾವಕಾಶ. ನಿಮ್ಮ ಖಾತೆಯನ್ನು ನಾವೇ ಫೈಲ್ ರೂಪದಲ್ಲಿಯೇ ನೀಡುತ್ತೇವೆ. ಅದರಲ್ಲಿ ನಿಮ್ಮ ಹಾಗೂ ಮನೆಯ ಫೋಟೋ ಇರುತ್ತದೆ. ಆನ್‌ಲೈನ್ ಮೂಲಕವೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಯಾರೂ ಇದನ್ನು ನಕಲು ಮಾಡಲು ಸಾಧ್ಯವಿಲ್ಲ ಎಂದು ಮಾಹಿತಿ ನೀಡಿದರು.

ಮೆಟ್ರೋದಲ್ಲಿ ಪ್ರಯಾಣಿಸಿದ ಬಿ.ವೈ.ವಿಜಯೇಂದ್ರ

ಪುಟ ೧➜ಪ್ರಧಾನಿಯವರು ಕರೆ ನೀಡಿರುವಾಗ ಎಲ್ಲರೂ ಬೆಂಬಲಿಸಬೇಕು. ಖಾಸಗಿ ವಾಹನಗಳನ್ನು ಬಳಸುವ ಬದಲು ಬಸ್, ಮೆಟ್ರೋ, ರೈಲು ಮುಂತಾದ ಸಾರ್ವಜನಿಕ ಸಾರಿಗೆ ಬಳಸಬೇಕು ಕರೆನೀಡಿದರು. ತೈಲ ಬೆಲೆ ಏರಿಕೆ ಯಾಕೆ ಆಗುತ್ತಿದೆ ಎಂದು ವಿರೋಧ ಪಕ್ಷ ಕಾಂಗ್ರೆಸ್ ಮುಖಂಡರಿಗೆ ಗೊತ್ತಿಲ್ಲವೇ, ಒಂದು ವೇಳೆ ರಾಜೀನಾಮೆ ನೀಡುವುದಿದ್ದರೆ ಎರಡು ವರ್ಷಗಳ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರಾಜೀನಾಮೆ ಕೊಡಬೇಕಿತ್ತು. ಏಕೆಂದರೆ ಅವರು ಅಷ್ಟು ಬೆಲೆ ಏರಿಕೆ ಮಾಡಿದ್ದಾರೆ. ತೈಲದ ಮೇಲೆ ತೆರಿಗೆಯನ್ನು ನಾಲ್ಕೈದು ಬಾರಿ ಏರಿಕೆ ಮಾಡಿದ್ದಾರೆ ಎಂದು ಹೇಳಿದರು.

ರೈಲು, ಬಸ್ ಪ್ರಯಾಣಕ್ಕೆ ಆದ್ಯತೆ: ಸೋಮಣ್ಣ



• ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ಮನವಿಯಂತೆ ನಾನೂ ರೈಲು, ಬಸ್‌ನಲ್ಲಿ ಓಡಾಡ್ತೇನೆ. ಎಲ್ಲೆಲ್ಲಿ ಅವಶ್ಯಕತೆ, ಅನುಕೂಲ ಇದೆಯೋ ಅಲ್ಲೆಲ್ಲ ರೈಲು ಮೂಲಕ ಪ್ರಯಾಣ ಮಾಡುತ್ತೇನೆ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು. ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು, ಹುಬ್ಬಳ್ಳಿ, ತುಮಕೂರು ಮತ್ತಿತರ ಕಡೆ ರೈಲಿನಲ್ಲೇ ಹೋಗುತ್ತೇನೆ ಎಂದು ಹೇಳಿದ್ದಾರೆ. ಈಗಾಗಲೇ ವಾಹನಗಳ ಬಳಕೆ ಕಡಿಮೆ ಮಾಡಿದ್ದೇನೆ. ಸಿಬ್ಬಂದಿ ಬಳಕೆ ಕಡಿಮೆ ಮಾಡಿದ್ದೇನೆ. ದುಂದುವೆಚ್ಚ ಏನೂ ಮಾಡಲ್ಲ. ರಾಜ್ಯದಲ್ಲಿ ಸರ್ಕಾರ ಒಂದು ಎಸ್ಕಾರ್ಟ್ ವಾಹನ ಕೊಟ್ಟಿದೆ. ದೆಹಲಿಗೆ ರೈಲಿನಲ್ಲಿ ಹೋಗಲು ಆಗಲ್ಲ, ಫ್ಲೈಟ್ ಅನಿವಾರ್ಯ. ಸ್ಥಳೀಯವಾಗಿ ರೈಲು ಪ್ರಯಾಣಕ್ಕೆ ಆದ್ಯತೆ ಕೊಡುತ್ತೇನೆ ಎಂದರು. ಜನರು ದುಂದುವೆಚ್ಚ ಕಡಿಮೆ ಮಾಡಬೇಕು. ರಾಜ್ಯ ಸರ್ಕಾರ ದರ ಏರಿಕೆ ಮಾಡಿ ಜನರ ಮೇಲೆ ದೊಡ್ಡ ಹೊರೆಯನ್ನೇ ಹೊರಿಸಿದೆ ಎಂದು ಹೇಳಿದರು.

ರಾಜ್ಯಕ್ಕೆ ಹೆಚ್ಚುವರಿ 1,122 ವೈದ್ಯ ಸೀಟು

ಪುಟ ೧➜ಕೇಂದ್ರ ಮತ್ತು ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯು ಮೇ 15ರಂದು ಅಂತಿಮ ಮುದ್ರೆ ಹಾಕಿದೆ. ಒಟ್ಟಾರೆಯಾಗಿ ರಾಜ್ಯಕ್ಕೆ 1,090 ಕೋಟಿ ರೂ. ದೊರೆಯಲಿದೆ ಎಂದು ಹೇಳಿದರು. ಒಂದು ಸಾವಿರ ಮೆಡಿಕಲ್ ಸೀಟ್ ರಾಜ್ಯವೊಂದಕ್ಕೆ ಸಿಕ್ಕಿರುವುದು ದಾಖಲೆಯಾಗಿದೆ. ಕರ್ನಾಟಕದ ಸಾಧನೆಗೆ ಇದು ಪೂರಕವಾದ ಸಾಕ್ಷಿಯಾಗಿದೆ ಎಂದು ಡಾ. ಪಾಟೀಲ್ ಹೇಳಿದರು. ವೈದ್ಯ ಕ್ಷೇತ್ರದಲ್ಲಿ ಸಾಧನೆ ಮಾಡುವವರಿಗೆ ಅತಿ ಹೆಚ್ಚು ಸಾಧನೆ ಮಾಡಲು ಕರ್ನಾಟಕದಲ್ಲಿ ಈಗ ವಿಪುಲ ಅವಕಾಶಗಳು ದೊರೆತಂತಾಗುತ್ತದೆ. ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಡಾ. ಶರಣಪ್ರಕಾಶ ಪಾಟೀಲ್ ಸಲಹೆ ನೀಡಿದರು.

ಕೋರ್ಟ್ ನಿರ್ದೇಶನದಲ್ಲಿ ನೀಟ್ ತನಿಖೆಯಾಗಲಿ

• ಬೆಂಗಳೂರು: ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಇಡೀ ವಿದ್ಯಾರ್ಥಿ ಸಮೂಹಕ್ಕೆ ಮಾಡಿರುವ ಬಹುದೊಡ್ಡ ಅನ್ಯಾಯವಾಗಿದೆ. ವೈದ್ಯರಾಗಬೇಕು ಎಂಬ ಸಾವಿರಾರು ಕನಸುಗಳನ್ನು ಹೊತ್ತ ವಿದ್ಯಾರ್ಥಿಗಳ ಭವಿಷ್ಯಕ್ಕೆ ಕೇಂದ್ರ ಸರ್ಕಾರ ಕೊಳ್ಳಿ ಇಟ್ಟಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ್ ಟೀಕಿಸಿದ್ದಾರೆ. ನೀಟ್ ಬದಲು ಕರ್ನಾಟಕದಲ್ಲಿರುವ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಅತ್ಯುತ್ತಮ ಮಾದರಿಯಾಗಿದೆ. ಇದನ್ನು ಅಳವಡಿಸಿಕೊಂಡರೆ ಉತ್ತಮ. ಈ ಬಗ್ಗೆ ನಾವು ಕೇಂದ್ರ ಸರ್ಕಾರಕ್ಕೆ ಹಲವು ಬಾರಿ ಮನವಿ ಮಾಡಿದ್ದೇವೆ. ಆದರೂ ಕೇಂದ್ರ ಸರ್ಕಾರ ಗಮನವಹಿಸಿಲ್ಲ ಎಂದರು. ಪ್ರತಿ ವರ್ಷವೂ ನೀಟ್ ವೇಳೆ ಗೊಂದಲಗಳು ಆಗುತ್ತಲೇ ಇವೆ. ಈ ಬಾರಿ ಆಗಿರುವ ಅನಾಹುತಕ್ಕೆ ಸಂಬಂಧಪಟ್ಟ ಸಚಿವರು ರಾಜೀನಾಮೆ ನೀಡಬೇಕು. ನ್ಯಾಯಾಲಯದ ನಿರ್ದೇಶದಲ್ಲಿಯೇ ತನಿಖೆ ನಡೆಯಬೇಕು ಎಂದು ಡಾ. ಪಾಟೀಲ್ ಆಗ್ರಹಿಸಿದರು.

ಅಸೀಮ ಕನಸಿನ ಭಾರತ

ಪುಟ ೧➜ಇದರಿಂದ ಭಾರತದ ಸಾಮರ್ಥ್ಯ ವರ್ಧಿಸುವುದಲ್ಲದೆ, ತಮಗೆ ಹೂಡಿಕೆ ಮೇಲೆ ಲಭಿಸುವ ಆದಾಯ ಕೂಡ ಅತ್ಯಧಿಕವಾಗುವುದು ಮತ್ತು ಇದು ಮೋದಿ ಗ್ಯಾರಂಟಿ ಎಂದು ಪ್ರಧಾನಿ ಮೋದಿ ಅಲ್ಲಿದ್ದ ಜನಸ್ತೋಮದ ಮೆಚ್ಚುಗೆಯ ಕರತಾಡನದ ಮಧ್ಯೆ ಘೋಷಿಸಿದರು.

ಪ್ರಯತ್ನಗಳೂ ಅಸೀಮ: ಇಂದಿನ ಭಾರತವು ಬೃಹತ್ತಾದ ಕನಸುಗಳನ್ನು ಕಾಣುತ್ತಿದೆ. ದೇಶವೆಂದು ಏನು ಹೇಳುತ್ತಿದೆಯೆಂದರೆ, ನಾವು ಕೇವಲ ಪರಿವರ್ತನೆ ಬಯಸುತ್ತಿಲ್ಲ, ಶ್ರೇಷ್ಠತೆಯನ್ನು ಬಯಸುತ್ತೇವೆ. ಬರೇ ಶ್ರೇಷ್ಠತೆಯಲ್ಲ, ತ್ವರಿತಗತಿಯನ್ನೂ ಆಶಿಸುತ್ತಿದ್ದೇವೆ. ಹಾಗಾಗಿ ಭಾರತದಲ್ಲಿ ಆಶೋತ್ತರಗಳು ಅಸೀಮವಿರುವಾಗ ಪ್ರಯತ್ನಗಳೂ ಮೇರೆಮೀರುತ್ತಿವೆ ಎಂದು ಪ್ರಧಾನಿ ಮೋದಿ ಬಣ್ಣಿಸಿದರು.

ಚಾರಿತ್ರಿಕ ಚಂದ್ರಯಾನ ಮಿಷನ್: ಭಾರತ ಪ್ರಸಕ್ತ ಅಭೂತಪೂರ್ವ ಪರಿವರ್ತನೆಗಳಿಗೆ ಸಾಕ್ಷಿಯಾಗುತ್ತಿದೆ. ಭಾರತದ ಆತಿಥೇಯದಲ್ಲಿ ಜಗತ್ತಿನ ಬೃಹತ್ ಮತ್ತು ಅತ್ಯಂತ ಯಶಸ್ವೀ ಎಐ ಶೃಂಗಸಭೆ ಈಚೆಗಷ್ಟೇ ಸಂಪನ್ನಗೊಂಡಿದೆ. ಇದಕ್ಕೆ ಮುನ್ನ ಜಿ 20 ಶೃಂಗಸಭೆಯನ್ನು ಭಾರತ ಯಶಸ್ವೀ ಆಯೋಜಿಸಿದೆ. ಹಾಗೆಂದು ಇದು ಕೇವಲ ಒಮ್ಮೆಯಷ್ಟೆ ನಡೆಯುವ ಕಾರ್ಯಕ್ರಮವಲ್ಲ. ಇಂತಹ ಕಾರ್ಯಕ್ರಮಗಳೀಗ ಇಂದಿನ ಭಾರತದ ನಿರಂತರ ಲಕ್ಷಣವಾಗಿದೆ. ಯಾರೂ ಇದುವರೆಗೂ ಕಾಲಿಡದ ಚಂದ್ರನ ದೂರದ ಭಾಗ ಅಥವಾ ಕತ್ತಲೆ ಅಂಗಣಕ್ಕೆ 2023ರಲ್ಲಿ ನಮ್ಮ ಬಾಹ್ಯಾಕಾಶ ವಿಜ್ಞಾನಿಗಳು ಪದಾರ್ಪಿಸಿ, ಭಾರತದ ತ್ರಿವರ್ಣ ಧ್ವಜವನ್ನಲ್ಲಿ ನೆಟ್ಟಿದ್ದಾರೆ. ಈ ಮೂಲಕ ಭಾರತವು ಅಭೂತಪೂರ್ವ ಚರಿತ್ರೆ ಸೃಷ್ಟಿಸಿದೆ ಎಂದು ಪ್ರಧಾನಿ ಮೋದಿ ಬಾಹ್ಯಾಕಾಶ ರಂಗದಲ್ಲಿ ಭಾರತೀಯರ ಸಾಧನೆ ಕೊಂಡಾಡಿದರು.

125 ಮೀರಿದೆ ಯೂನಿಕಾರ್ನ್: 2014ರಲ್ಲಿ ಭಾರತದಲ್ಲಿದ್ದುದು ಬರೇ ನಾಲ್ಕು ಯೂನಿಕಾರ್ನ್‌ಗಳು. ಇಂದೀಗ ಸಕ್ರಿಯ ಯೂನಿಕಾರ್ನ್‌ಗಳ ಸಂಖ್ಯೆ 125 ಮೀರಿದೆ. ಎಐ, ರಕ್ಷಣಾರಂಗ, ಬಾಹ್ಯಾಕಾಶ ರಂಗಗಳಲ್ಲಿ ನಮ್ಮ ಸ್ಟಾರ್ಟ್‌ಅಪ್‌ಗಳು ಗಮನಾರ್ಹ ಕೆಲಸ ಮಾಡುತ್ತಿವೆ. ಸಂಶೋಧನೆ ಮತ್ತು ಆವಿಷ್ಕಾರಗಳ ಪ್ರಸ್ತುತ ಸಂಸ್ಕೃತಿ ದಿನೇದಿನೆ ವಿಸ್ತೃತಗೊಳ್ಳುತ್ತಿದೆ. ಆಶೋತ್ತರಪೂರ್ವಕ ಭಾರತದ ಯಾನವು ಆದರ ಪ್ರಜಾಸತ್ತೆಯ ಬಲವರ್ಧಿಸುತ್ತಿದೆ ಎಂದು ಹಲವು ವಲಯಗಳಲ್ಲಿನ ಈಚಿನ ವಿಧಾನಸಭಾ ಚುನಾವಣೆಗಳನ್ನು ಉಲ್ಲೇಖಿಸಿದರು.

ಪ.ಬಂಗಾಳ, ಕೇರಳ, ತಮಿಳುನಾಡು ಮತ್ತು ಪುದುಚೇರಿಯಲ್ಲಿ 80ರಿಂದ 90ಶೇಕಡಾ ಮತದಾನವಾಗಿದೆ. ಮಹಿಳೆಯರ ಪಾಲ್ಗೊಳ್ಳುವಿಕೆ ಗಮನಾರ್ಹವಾಗಿ ಹೆಚ್ಚಿದೆ. ಪ್ರತಿ ರಾಜ್ಯದಲ್ಲೂ ಇದೇ ಟ್ರೆಂಡ್ ಗೋಚರಿಸಿದೆ. ಇಂದಿನ ಭಾರತದ ಮತದಾರರು ತುಂಬು ಪ್ರಜ್ಞಾವಂತರು. ಪ್ರತಿ ವರ್ಷವೂ ಮತದಾನದ ದಾಖಲೆ ಮುರಿಯುತ್ತಿರುವುದು ಹೆಮ್ಮೆಯ ಸಂಗತಿ ಎಂದು ಪ್ರಧಾನಿ ಮೋದಿ ನೆಮ್ಮದಿ ವ್ಯಕ್ತಪಡಿಸಿದರು.

ಪ್ರಧಾನಿ ಮೋದಿ ಸ್ವಾಗತಕ್ಕೆ ಗರ್ಬಾ ನೃತ್ಯ ಪ್ರದರ್ಶನ

ಪುಟ ೧➜**ಭಾರತೀಯ ಸಮುದಾಯದ ಹಲವು ನೃತ್ಯ ಕಲಾವಿದರು ಪ್ರಧಾನಿ ಮೋದಿ ಉಳಿದುಕೊಂಡಿದ್ದ ಹೋಟೆಲ್‌ನ ಹೊರಭಾಗದಲ್ಲಿ ಸಾಂಸ್ಕೃತಿಕ ಮತ್ತು ಶಾಸ್ತ್ರೀಯ ನೃತ್ಯಗಳನ್ನು ಪ್ರದರ್ಶಿಸಿದರು ಮತ್ತು ಪಿಎಂ ಮೋದಿ ಜತೆ ಸಂವಾದ ನಡೆಸುವ ಅವಕಾಶ ಸಿಕ್ಕಿದ ಬಗ್ಗೆ ತುಂಬು ಧನ್ಯತೆ ವ್ಯಕ್ತಪಡಿಸಿದರು. ಗರ್ಬಾ ನೃತ್ಯ ಪ್ರದರ್ಶನ ಮಾಡಿ ಪ್ರಧಾನಿ ಮೋದಿ ಅವರನ್ನು ಸ್ವಾಗತಿಸಿದ ಕಲಾ ತಂಡದಲ್ಲಿದ್ದ ಕಲಾವಿದ ಗೌತಮ್, ಪ್ರಧಾನಿ ಮೋದಿ ಅವರೊಂದಿಗೆ ಮಾತನಾಡಲು ನಮಗೆಲ್ಲ ಅವಕಾಶ ದೊರೆಯಿತು. ತುಂಬು ಖುಷಿಯಾಯಿತು ಎಂದು ಹರ್ಷ ವ್ಯಕ್ತಪಡಿಸಿದ್ದಾರೆ. ಇದೊಂದು ಅದ್ಭುತ ಅನುಭವ ಎಂದು ಕಲಾವಿದೆ ರೀಮಾ ಖುಷಿ ವ್ಯಕ್ತಪಡಿಸಿದ್ದಾರೆ.**

ವಿಶೇಷ ಕ್ಷಣದಲ್ಲೇ ಭೇಟಿ

ಪುಟ ೧➜**ಡಚ್ ಪ್ರಧಾನಿ ರೋಬ್ ಜೆಟೆನ್ ಜತೆ ದ್ವಿಪಕ್ಷೀಯ ಮಾತುಕತೆ ನಡೆಸಲಿರುವ ಪ್ರಧಾನಿ ಮೋದಿ, ದೊರೆ ವಿಲಿಯಂ ಅಲೆಕ್ಸಾಂಡರ್ ಮತ್ತು ಮಹಾರಾಣಿ ಮ್ಯಾಕ್ಸಿಮಾರನ್ನು ಭೇಟಿಯಾಗುವರು. ಸಮುದಾಯ ಕಾರ್ಯಕ್ರಮವೊಂದನ್ನುದ್ದೇಶಿಸಿ ಪ್ರಧಾನಿ ಮೋದಿ ಭಾಷಣ ಮಾಡುವ ನಿರೀಕ್ಷೆಯಿದೆ.**

ಜನಸಂಖ್ಯೆ ಹೆಚ್ಚಳಕ್ಕೆ ಆಂಧ್ರ ಹೊಸ ತಂತ್ರ

ಪುಟ ೧➜ಈಗ ಜನನ ಪ್ರಮಾಣ ಹೆಚ್ಚಿಸುವುದು ಅಗತ್ಯವಾಗಿದೆ' ಎಂದು ಹೇಳಿದರು. ಈ ಯೋಜನೆಯ ಸಂಪೂರ್ಣ ಮಾರ್ಗಸೂಚಿಗಳನ್ನು ಒಂದು ತಿಂಗಳೊಳಗೆ ಪ್ರಕಟಿಸುವುದಾಗಿ ಸರ್ಕಾರ ತಿಳಿಸಿದೆ.

ಈ ಹಿಂದೆ ಎರಡನೇ ಮಗುವಿಗೆ 25 ಸಾವಿರ ರೂ. ಪ್ರೋತ್ಸಾಹಧನ ನೀಡುವ ಪ್ರಸ್ತಾವವನ್ನೂ ಸರ್ಕಾರ ಮುಂದಿಟ್ಟಿತ್ತು. ಆದರೆ ಬಳಿಕ ಸರ್ಕಾರ ಮೂರನೇ ಹಾಗೂ ನಾಲ್ಕನೇ ಮಗುವಿನತ್ತ ಹೆಚ್ಚು ಒತ್ತು ನೀಡುವ ನಿರ್ಧಾರ ಕೈಗೊಂಡಿದೆ.

ಜನಸಂಖ್ಯೆ ಸಮತೋಲನಕ್ಕೆ ಹೊಡೆತ: ಜನನ ಪ್ರಮಾಣ ಕುಸಿತದ ಬಗ್ಗೆ ಆತಂಕ ವ್ಯಕ್ತಪಡಿಸಿದ ನಾಯ್ಡು, 'ಆದಾಯ ಹೆಚ್ಚಾದಂತೆ ಕೆಲ ದಂಪತಿಗಳು ಒಂದೇ ಮಗುವಿಗೆ ಸೀಮಿತರಾಗುತ್ತಿದ್ದಾರೆ. ಕೆಲವರು ಗಂಡು ಮಗು ಆಗದಿದ್ದರೆ ಮಾತ್ರ ಎರಡನೇ ಮಗುವಿನ ಬಗ್ಗೆ ಯೋಚಿಸುತ್ತಿದ್ದಾರೆ. ಇದು ಭವಿಷ್ಯದಲ್ಲಿ ರಾಜ್ಯದ ಜನಸಂಖ್ಯೆ ಸಮತೋಲನಕ್ಕೆ ಹೊಡೆತ ನೀಡಬಹುದು' ಎಂದು ಹೇಳಿದರು.

ರಾಜ್ಯದಲ್ಲಿ ಟೋಟಲ್ ಫರ್ಟಿಲಿಟಿ ರೇಟ್(ಟಿಎಫ್‌ಆರ್) ಕನಿಷ್ಠ 2.1 ಮಟ್ಟದಲ್ಲಿರಬೇಕು ಎಂದು ಹೇಳಿದ ಅವರು, ಜನಸಂಖ್ಯೆ ಕುಸಿತ ಮತ್ತು ವೃದ್ಧರ ಸಂಖ್ಯೆ ಹೆಚ್ಚಳದಿಂದ ಹಲವು ದೇಶಗಳ ಆರ್ಥಿಕತೆ ಸಂಕಷ್ಟಕ್ಕೀಡಾಗಿದೆ ಎಂದು ಎಚ್ಚರಿಸಿದರು. 'ಮಕ್ಕಳು ಹೊರೆ ಅಲ್ಲ, ಸಂಪತ್ತು' ಎಂಬ ಸಂದೇಶವನ್ನೂ ಅವರು ನೀಡಿದರು.

ಇದಕ್ಕೂ ಮುನ್ನ ಸರ್ಕಾರದ ಮಟ್ಟದಲ್ಲಿ ನಡೆದ ಚರ್ಚೆಗಳಲ್ಲಿ ಮೂರನೇ ಮತ್ತು ನಾಲ್ಕನೇ ಮಗುವಿಗೆ ನಗದು ಪ್ರೋತ್ಸಾಹದ ಜೊತೆಗೆ ಪೌಷ್ಟಿಕ ಆಹಾರ ಸಹಾಯ ನೀಡುವ ಪ್ರಸ್ತಾವವೂ ಚರ್ಚೆಗೆ ಬಂದಿತ್ತು. ತಾಯಿಯ ಖಾತೆಗೆ ನೇರ ಹಣ ಜಮೆ, ಎನ್‌ಟಿಆರ್ ಬೇಬಿ ಕಿಟ್, ತಿಂಗಳಿಗೆ ಸಿರಿಧಾನ್ಯ ವಿತರಣೆ ಮೊದಲಾದ ಅಂಶಗಳೂ ಪ್ರಸ್ತಾಪಗೊಂಡಿದ್ದವು.

ಅರ್ಹ ಮತದಾರರ ಹೆಸರು ರದ್ದಾಗಲ್ಲ: ಆರ್.ಅಶೋಕ

• **ಬೆಂಗಳೂರು:** ಪ್ರತಿ ಬೂತ್‌ನಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಏಜೆಂಟ್ ಇರುವಾಗ ಅರ್ಹ, ನಿಜವಾದ ಮತದಾರರ ಹೆಸರು ರದ್ದಾಗಲು ಸಾಧ್ಯವೇ ಇಲ್ಲ ಎಂದು ವಿಪಕ್ಷ ನಾಯಕ ಆರ್. ಅಶೋಕ ಹೇಳಿದರು.

ವಿಧಾನಸೌಧದಲ್ಲಿ ಶನಿವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಮಹದೇವಪುರ, ಚಿಕ್ಕಮಗಳೂರು, ಕೊಡಗು ಕಾಫಿ ಎಸ್ಟೇಟ್‌ಗಳಲ್ಲಿ ಸಾವಿರಾರು ಬಾಂಗ್ಲಾ



ದೇಶೀಯರಿದ್ದಾರೆ. ಇದಕ್ಕೆ ಎಸ್‌ಐಆರ್ ಅಂತ್ಯ ಹಾಡಲಿದೆ. ಗುರುತಿನ ಚೀಟಿ ಇರುವವರು ಭಯ ಪಡಬೇಕಿಲ್ಲ ಎಂದರು. ಕರ್ನಾಟಕದಲ್ಲಿ 10 ಲಕ್ಷಕ್ಕೂ ಅಧಿಕ ಬಾಂಗ್ಲಾ ಪ್ರಜೆಗಳಿದ್ದಾರೆ. ಇಲ್ಲ ಎಂದು ಯಾರಾದರೂ ಸವಾಲು ಹಾಕಿದರೆ ನಾನೇ ಅವರನ್ನು ಕರೆದುಕೊಂಡು ಹೋಗಿ ತೋರಿಸುತ್ತೇನೆ. ಇತ್ತೀಚೆಗೆ ಪೊಲೀಸ್ ಆಯುಕ್ತರು 65 ಲಕ್ಷ ರೂ. ಖರ್ಚು ಮಾಡಿ 250 ಬಾಂಗ್ಲಾ ದೇಶದವರನ್ನು ವಿಮಾನದಲ್ಲಿ ಕಳುಹಿಸಿ ಗಡಿವರೆಗೆ ಬಿಟ್ಟು ಬಂದಿದ್ದಾರೆ ಎಂದು ತಿಳಿಸಿದರು. ಪಶ್ಚಿಮ ಬಂಗಾಳದಲ್ಲಿ ಹೆಸರು ರದ್ದಾದವರಲ್ಲಿ ಹೆಚ್ಚು ಹಿಂದೂಗಳಿದ್ದಾರೆ. ಇದರ ವಿರುದ್ಧ ಹಿಂದೂ ಸಂಘಟನೆಗಳು ಹಾಗೂ ಬಿಜೆಪಿ ಪ್ರತಿಭಟಿಸಿಲ್ಲ. ರಾಜ್ಯದಲ್ಲಿ 10 ಲಕ್ಷ ಬಾಂಗ್ಲಾ ನಿವಾಸಿಗಳಿಗೆ ಗುರುತಿನ ಚೀಟಿ ಕೊಟ್ಟಿದ್ದು, ಅವರನ್ನು ಕಳುಹಿಸಬಾರದೆಂದು ಕಾಂಗ್ರೆಸ್ ಬಯಸುತ್ತಿದೆ ಎಂದರು.

ತೈಲ ದರ ಶೇ.3 ರಷ್ಟು ಏರಿಕೆ: ಕಳೆದ 49 ತಿಂಗಳಿಂದ ಪ್ರಧಾನಿ ಮೋದಿ ತೈಲ ದರ ಏರಿಸಿಲ್ಲ. ಯುದ್ಧದ ವಾತಾವರಣ ಇರುವುದರಿಂದ ಪೆಟ್ರೋಲ್, ಡೀಸೆಲ್ ದರ ಏರಿಕೆಯಾಗಿದೆ. ಕಾಂಗ್ರೆಸ್ ಪ್ರಕಾರ, ಇಡೀ ಜಗತ್ತಿನಲ್ಲಿ ಭಾರತದಲ್ಲಿ ಮಾತ್ರ ತೈಲ ದರ ಏರಿಕೆಯಾಗಿದೆ. ಮಲೇಷಿಯಾದಲ್ಲಿ ಶೇ.71 ರಷ್ಟು, ಪಾಕಿಸ್ತಾನದಲ್ಲಿ ಶೇ.44 ರಷ್ಟು, ಯುಎಇನಲ್ಲಿ ಶೇ.86 ರಷ್ಟು, ಯುಎಸ್‌ನಲ್ಲಿ ಶೇ.48 ರಷ್ಟು, ಶ್ರೀಲಂಕಾದಲ್ಲಿ ಶೇ.41ರಷ್ಟು ನೇಪಾಳದಲ್ಲಿ ಶೇ.51 ರಷ್ಟು ಏರಿಕೆಯಾಗಿದೆ. ಆದರೆ ಭಾರತದಲ್ಲಿ ಅತಿ ಕಡಿಮೆ ಎಂದರೆ ಶೇ.3 ರಷ್ಟು ಏರಿಕೆಯಾಗಿದೆ ಎಂದು ವಿವರಿಸಿದರು.

ಸಿಎಂಗೆ ಆಹ್ವಾನ



ತುಮಕೂರಿನಲ್ಲಿ ಮೇ 19ರಂದು ನಡೆಯಲಿರುವ ಮೂರು ವರ್ಷದ ಪ್ರಗತಿಯತ್ತ ಕರ್ನಾಟಕ ಸಾಧನಾ ಸೇವೆಯ ಸಮರ್ಪಣೆ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶನಿವಾರ ಬೆಂಗಳೂರಿನ ಕಾವೇರಿ ನಿವಾಸದಲ್ಲಿ ಭೇಟಿ ಮಾಡಿದ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರು ಅಧಿಕೃತವಾಗಿ ಆಹ್ವಾನಿಸಿದರು.

ಮೇ23ಕ್ಕೆ ಸಿಎಂ ಭೂಮಿಪೂಜೆ

• **ಆನೇಕಲ್:** ತಾಲೂಕಿನ ಇಂಡ್ಲವಾಡಿಯ ಸೂರ್ಯಸಿಟಿ 4ನೇ ಹಂತದಲ್ಲಿ 75 ಎಕರೆಯಲ್ಲಿ ಸುಸಜ್ಜಿತ ಅಂತಾರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣವಾಗಲಿದ್ದು, ಮೇ 23ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭೂಮಿ ಪೂಜೆ ನೆರವೇರಿಸಲಿದ್ದಾರೆ ಎಂದು ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ತಿಳಿಸಿದರು.



ಸೂರ್ಯಸಿಟಿಯಲ್ಲಿ ಅಂತಾರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣ

ಪಟ್ಟಣದಲ್ಲಿ ಸ್ಥಳ ಪರಿಶೀಲನೆ ಮಾಡಿ ಮಾತನಾಡಿದ ಅವರು, ಅಂತಾರಾಷ್ಟ್ರೀಯ ಕ್ರೀಡಾಂಗಣದ ಭೂಮಿ ಪೂಜೆಗೆ ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿಡ್, ಜಾವಗಲ್ ಶ್ರೀನಾಥ್, ಜಿ. ವಿಶ್ವನಾಥ್ ಸೇರಿದಂತೆ ಕ್ರಿಕೆಟ್ ದಿಗ್ಗಜರು ಆಗಮಿಸಲಿದ್ದಾರೆಂದು ತಿಳಿಸಿದರು.

ಆನೇಕಲ್ ತಾಲೂಕಿನ ಇಂಡ್ಲವಾಡಿ ಸಮೀಪ ನಿರ್ಮಾಣವಾಗುತ್ತಿರುವ 4ನೇ ಹಂತದ ಸೂರ್ಯಸಿಟಿ ಬಡಾವಣೆಯಲ್ಲಿ 1241 ಕೋಟಿ ರೂ. ವೆಚ್ಚದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ಉದ್ಘಾಟನೆ ಆಗುತ್ತಿದೆ. ಸುಮಾರು 27 ಕ್ರೀಡೆಗಳಿಗೆ ಒಳಪಟ್ಟ ಕ್ರೀಡಾಂಗಣ ಇದಾಗಲಿದೆ ಎಂದು ಅವರು ಮಾಹಿತಿ ನೀಡಿದರು.

ನಿರ್ಮಾಣಕ್ಕೆ 8500 ಎಕರೆ ಭೂ ಸ್ವಾಧೀನ ಪಡೆಸಿಕೊಂಡು, ಅಲ್ಲಿ ದೇಶದಲ್ಲೆ ಎರಡನೇ ಅತಿದೊಡ್ಡ ಅಂತಾರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣವಾಗುತ್ತಿರುವುದು ಶ್ಲಾಘನೀಯ. ಮೇ 23ರಂದು ನಡೆಯುವ ಭೂಮಿ ಪೂಜೆಗೆ ತಾಲೂಕಿನ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಶಾಸಕ ಬಿ.ಶಿವಣ್ಣ ಮನವಿ ಮಾಡಿದರು. ಗೃಹ ಮಂಡಳಿಯ ಅಧ್ಯಕ್ಷ ಶಿವಲಿಂಗೇಗೌಡ, ಶಾಸಕ ಬಿ.ಶಿವಣ್ಣ, ವಸತಿ ಆಯುಕ್ತ ಕೆ.ಎ.ದಯಾನಂದ, ಇಂಡ್ಲವಾಡಿ ನಾಗರಾಜು, ಹರೀಶ್ ಗೌಡ, ಅಚ್ಯುತ್ ರಾಜ್, ಐಸಿಎಂ ಕೃಷ್ಣಮೂರ್ತಿ, ಪುಷ್ಪರಾಜು, ಕಾರ್ಯಪಾಲಕ ಅಭಿಯಂತರರಾದ ಶಂಭುಲಿಂಗ ಮತ್ತಿರರಿದ್ದರು.

ಕಿರುಸುದ್ದಿ

ನುಡಿದಂತೆ ನಡೆದ ಸರ್ಕಾರ: ಡಾ. ಶರಣಪ್ರಕಾಶ ಪಾಟೀಲ್

• **ಬೆಂಗಳೂರು:** ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೂರು ವರ್ಷದಲ್ಲಿ ನುಡಿದಂತೆ ನಡೆದಿದೆ. ಅದೇ ಕಾರಣಕ್ಕೆ ಸಾಧನ ಸಮಾವೇಶ ಮಾಡುತ್ತಿದ್ದೇವೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ್ ತಿಳಿಸಿದ್ದಾರೆ. ಶನಿವಾರ ವಿಕಾಸಸೌಧದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಚಿವರು, ಸಾಧನಾ ಸಮಾವೇಶ ಎನ್ನುವುದು ನಮ್ಮ ಸಾಧನೆಗಳನ್ನು ಜನರಿಗೆ ತಿಳಿಸುವುದಕ್ಕೆ ಎಂದರು. ಪ್ರತಿಪಕ್ಷಗಳು ಈ ಬಗ್ಗೆ ಯಾವುದೇ ಟೀಕೆಗಳನ್ನು ಮಾಡುವ ಅವಶ್ಯಕತೆ ಇಲ್ಲ. ಕರ್ನಾಟಕದಲ್ಲಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದ ನಂತರವೂ ಆರ್ಥಿಕ ಸ್ಥಿತಿ ಉತ್ತಮವಾಗಿದೆ ಎಂದರು. ಚುನಾವಣೆಗೆ ಮುನ್ನ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಗಳನ್ನು ಬಹುತೇಕ ಈಡೇರಿಸಲಾಗಿದೆ. ನಮ್ಮ ಸರ್ಕಾರ ಸಮರ್ಥ ಆಡಳಿತ ನೀಡಿದೆ. ಕಾಂಗ್ರೆಸ್ ಎಂದರೆ ನುಡಿದಂತೆ ನಡೆಯುವ ಪಕ್ಷ ಎಂಬುದು ಸಾಬೀತಾಗಿದೆ ಎಂದು ಡಾ. ಪಾಟೀಲ್ ತಿಳಿಸಿದರು. ತುಮಕೂರು ಸಮಾವೇಶದ ಬಳಿಕ ಕೆಲವು ಬದಲಾವಣೆ ಆಗಲಿದೆ ಎಂಬ ಚರ್ಚೆ ನಡೆಯುತ್ತಿದೆ. ಇದು ಹೈಕಮಾಂಡ್ಗೆ ಬಿಟ್ಟ ವಿಚಾರ. ಮೂರು ವರ್ಷದ ನಂತರ ಸಚಿವ ಸಂಪುಟದಲ್ಲಿ ಬದಲಾವಣೆ ಆಗೋದು ಸಹಜ ಎಂದರು. ನಮ್ಮ ಹೈಕಮಾಂಡ್ ಈ ಬಗ್ಗೆ ಸ್ಪಷ್ಟ ನಿರ್ಧಾರ ಕೈಗೊಳ್ಳುತ್ತದೆ. ಗೊಂದಲಗಳು ಯಾವುದೂ ಇಲ್ಲ. ಒಂದು ಸಣ್ಣಪುಟ್ಟ ಸಮಸ್ಯೆಗಳಿದ್ದರೆ ಅದನ್ನು ವರಿಷ್ಠರು ಬಗೆಹರಿಸುತ್ತಾರೆ ಎಂದು ಡಾ. ಶರಣಪ್ರಕಾಶ ಪಾಟೀಲ್ ಸ್ಪಷ್ಟಪಡಿಸಿದರು.

ಲಾಕರ್ ಸಮೇತ 70 ಲಕ್ಷ ಮೌಲ್ಯದ ಚಿನ್ನಾಭರಣ ಕಳ್ಳತನ

• **ಹಾವೇರಿ:** ಇತ್ತೀಚಿನ ದಿನಗಳಲ್ಲಿ ಬೆಳ್ಳಿ ಬಂಗಾರದ ಬೆಲೆ ಹೆಚ್ಚಾಗುತ್ತಿದ್ದಂತೆ ಜಿಲ್ಲೆಯ ಅಲ್ಲಲ್ಲಿ ಸರಗಳ್ಳತನ ಹೆಚ್ಚಿವೆ. ಆದರೆ, ಇದೀಗ ಹಾನಗಲ್ಲ ತಾಲೂಕಿನಲ್ಲಿ ಚಿನ್ನಾಭರಣದ ಅಂಗಡಿಗೆ ಕನ್ನ ಕೊರೆದಿರುವ ಕಳ್ಳರು, ಲಕ್ಷಾಂತರ ರೂಪಾಯಿ ಮೌಲ್ಯದ ಆಭರಣಗಳನ್ನು ಇಟ್ಟಿದ್ದ ಲಾಕರ್‌ನ್ನೇ ಹೊತ್ತೊಯ್ದಿರುವುದು ಜಿಲ್ಲೆಯ ಜನರನ್ನು ಆತಂಕಕ್ಕೆ ಈಡು ಮಾಡಿದೆ. ಹಾನಗಲ್ಲ ತಾಲೂಕಿನ ಚಿಕ್ಕಾಂಶಿ ಹೊಸೂರಿನಲ್ಲಿರುವ ಶಾರದಾ ಜ್ಯುವೆಲರ್ಸ್ ಅಂಗಡಿಯಲ್ಲಿ ಭಾರೀ ಕಳ್ಳತನ ನಡೆದಿದ್ದು, ಕಳ್ಳರ ಕೈಚಳಕ ಕಂಡು ಸ್ಥಳೀಯರು ಬೆಚ್ಚಿ ಬಿದ್ದಿದ್ದಾರೆ. ಶುಕ್ರವಾರ ತಡರಾತ್ರಿ 1.30ರ ಸುಮಾರಿಗೆ ಕಳ್ಳತನ ನಡೆದಿರಬಹುದು ಎಂದು ಅಂದಾಜಿಸಲಾಗಿದೆ. ಬಂಗಾರದ ಅಂಗಡಿಗೆ ಅಳವಡಿಸಲಾಗಿದ್ದ ಎರಡು ಷಟರ್ಸ್ ಕಟ್ ಮಾಡಿ ಒಳನುಗ್ಗಿರುವ ಕಳ್ಳರು ಚಿನ್ನಾಭರಣ ಹಾಗೂ ಬೆಳ್ಳಿ ವಸ್ತುಗಳನ್ನಿಟ್ಟಿದ್ದ ಲಾಕರನ್ನೇ ಹೊತ್ತೊಯ್ದಿದ್ದಾರೆ. ಈ ಲಾಕರ್‌ನಲ್ಲಿ ಅಂದಾಜು 750ಗ್ರಾಂ ತೂಕದ ಬಂಗಾರದ ಆಭರಣಗಳು ಹಾಗೂ 3-4 ಕೆಜಿ ತೂಕದ ಬೆಳ್ಳಿ ವಸ್ತುಗಳು ಇದ್ದವು ಎನ್ನಲಾಗಿದೆ. ಘಟನಾ ಸ್ಥಳಕ್ಕೆ ಆಗಮಿಸಿದ ಬೆರಳಚ್ಚು ತಜ್ಞರು ಪರಿಶೀಲನೆ ನಡೆಸಿದ್ದು, ಶ್ವಾನದಳದ ತಂಡ ಕೂಡಾ ಶೋಧ ಕಾರ್ಯ ನಡೆಸಿದೆ.

ಮಾರ್ಟ್‌ನಲ್ಲಿ ಲಿಫ್ಟ್ ಅವಘಡ: ಯುವಕ ಸಾವು

• **ಮಂಗಳೂರು:** ನಗರದ ಕುಂಟಿಕಾನದ ಮಾರ್ಟ್‌ವೊಂದರಲ್ಲಿ ಶನಿವಾರ ಸಂಜೆ ಸಂಭವಿಸಿದ ಲಿಫ್ಟ್ ಅವಘಡದಲ್ಲಿ ಯುವಕನೊಬ್ಬ ಮೃತಪಟ್ಟಿದ್ದಾರೆ. ಬೆಳಾಲು ಗ್ರಾಮದ ಪೂಂಜಕೆರೆ ನಿವಾಸಿ ನೌಫಾಲ್ (28) ಮೃತಪಟ್ಟ ಯುವಕ. ಶನಿವಾರ ಸಂಜೆ ನೌಫಾಲ್ ಕೆಲಸದಲ್ಲಿ ನಿರತರಾಗಿದ್ದ ವೇಳೆ ಲಿಫ್ಟ್‌ನಲ್ಲಿ ಅವಘಡ ಸಂಭವಿಸಿದೆ. ತಕ್ಷಣ ಇತರರು ಈತನನ್ನು ಅಪಾಯದಿಂದ ಪಾರು ಮಾಡಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ ಎನ್ನಲಾಗಿದೆ. ನೌಫಾಲ್ ಅವಿವಾಹಿತ ಎಂದು ತಿಳಿದುಬಂದಿದೆ. ಈ ಬಗ್ಗೆ ಉರ್ವ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದು ರಾಷ್ಟ್ರ ಒಂದು ಚುನಾವಣೆ ಪ್ರಸ್ತಾವನೆಯು ಅಧಿಕಾರ ಕೇಂದ್ರಿತ

ರಾಜಕೀಯಪ್ರೇರಿತ: ಡಿಕೆಶಿ

• **ಬೆಂಗಳೂರು:** ಕೇಂದ್ರ ಸರಕಾರದ ಉದ್ದೇಶಿತ ಒಂದು ರಾಷ್ಟ್ರ ಒಂದು ಚುನಾವಣೆ ಪ್ರಸ್ತಾವನೆಯು ಅಧಿಕಾರ ಕೇಂದ್ರಿತ, ರಾಜಕೀಯ ಪ್ರೇರಿತ ಯೋಜನೆಯಾಗಿದ್ದು, ರಾಜ್ಯಗಳನ್ನು ದುರ್ಬಳಗೊಳಿಸುವ ಮೂಲಕ ಒಕ್ಕೂಟ ವ್ಯವಸ್ಥೆಗೆ ತೀವ್ರ ಧಕ್ಕೆ ತರಲಿದೆ. ಇದೊಂದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ತರುವ ಅಪಾಯವಿದೆ. ಹೀಗಾಗಿ ನಾವು ಇದನ್ನು ವಿರೋಧಿಸಲಿದ್ದೇವೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ. ಕೆ. ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಲೋಕ ಸಭೆಯ ಜಂಟಿ ಸಂಸದೀಯ ಅಧ್ಯಯನ ಸಮಿತಿಯು ಶನಿವಾರ ಆಯೋಜಿಸಿದ್ದ ಒಂದು ರಾಷ್ಟ್ರ ಒಂದು ಚುನಾವಣೆ ಕುರಿತ ಸಂವಾದದಲ್ಲಿ ಅವರು ಅಭಿಪ್ರಾಯ ಮಂಡಿಸಿದರು. ಇದೊಂದು ಕೇಂದ್ರದಲ್ಲಿ ಆಡಳಿತ ಚುಕ್ಕಾಣಿ ಹಿಡಿದಿರುವವರ ಅನುಕೂಲಕ್ಕೆ ತಕ್ಕಂತೆ ಹೆಣೆಯಲಾಗುತ್ತಿರುವ ಈ ಪ್ರಸ್ತಾವನೆಯನ್ನು ಕೆಪಿಸಿಸಿ ಅಧ್ಯಕ್ಷನಾಗಿ ಹಾಗೂ ಕರ್ನಾಟಕ ಸರಕಾರದ ಉಪಮುಖ್ಯಮಂತ್ರಿ ಆಗಿ ಸರಸಗಟಾಗಿ ತಿರಸ್ಕರಿಸುತ್ತೇನೆ ಎಂದು ಸ್ಪಷ್ಟಪಡಿಸಿದರು.

ವಿಧಾನಸಭೆಯ ನಿರ್ಣಯ ಓದಿದ ಡಿಸಿಎಂ: ಒಂದು ದೇಶ ಒಂದು ಚುನಾವಣೆ ವಿರೋಧಿಸಿ ಕರ್ನಾಟಕ ವಿಧಾನ ಸಭೆಯು ಈಗಾಗಲೇ ನಿರ್ಣಯವನ್ನೂ ಅಂಗೀಕರಿಸಿದೆ ಎಂದೂ ಹೇಳಿದರು. ಆ ನಿರ್ಣಯ ವನ್ನೂ ಸಭೆಯಲ್ಲಿ ಓದಿದರು. ಒಂದೊಮ್ಮೆ ರಾಜಕೀಯ ಅಸ್ಥಿರತೆ, ಅವಿಶ್ವಾಸ, ಬಹುಮತದ ಕೊರತೆಯಿಂದ ಒಂದು ಸರಕಾರ ಅರ್ಧಾವಧಿಯಲ್ಲೇ ಉರುಳಿ ಹೋದರೆ ಆಗ ಏನು ಮಾಡುವುದು? ಇದಕ್ಕೆ ಪರಿಹಾರ ಎಲ್ಲಿದೆ? ಎಂದು ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು. ಒಂದೊಂದು ರಾಜ್ಯದಲ್ಲಿ ಒಂದೊಂದು ಅವಧಿಗೆ ಚುನಾವಣೆ ನಡೆಯುತ್ತದೆ. ಕರ್ನಾಟಕದಲ್ಲಿ ಮೂರು ವರ್ಷಗಳ ಹಿಂದೆ ಆಗಿತ್ತು. ತಮಿಳುನಾಡು, ಕೇರಳದಲ್ಲಿ ಮೊನ್ನೆಯಷ್ಟೇ ಆಗಿದೆ. ಪಂಜಾಬ್, ತೆಲಂಗಾಣದಲ್ಲಿ ಬೇರೆ ಕಾಲದಲ್ಲಿ ಆಗಿದೆ. ವಿವಿಧ ಕಾಲಾವಧಿಯ ಈ ಚುನಾವಣೆಗಳನ್ನು ಸಮಯಕರಿಸುವುದು ಹೇಗೆ? ಎಂದು ಪ್ರಶ್ನಿಸಿದರು.

ಒಂದು ದೇಶ ಒಂದು ಚುನಾವಣೆ ಜಾರಿಗೆ ಬಿಜೆಪಿ ಮನವಿ




• **ಬೆಂಗಳೂರು:** ದೇಶದಲ್ಲಿ ಚುನಾವಣಾ ವೆಚ್ಚ ನಿಯಂತ್ರಣ, ಪಾರದರ್ಶಕ ಆಡಳಿತಕ್ಕಾಗಿ ಒಂದು ದೇಶ ಒಂದು ಚುನಾವಣೆ ತರುವುದು ಒಳ್ಳೆಯ ನಿರ್ಧಾರ ಇದಕ್ಕೆ ರಾಜ್ಯ ಬಿಜೆಪಿಯ ಸಂಪೂರ್ಣ ಸಹಮತವಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು. ಲೋಕಸಭಾ ಜಂಟಿ ಸಂಸದೀಯ ಸಮಿತಿಯು ಶನಿವಾರ ನಗರದ ತಾಜ್ ವೆಸ್ಟ್ ಎಂಡ್‌ನಲ್ಲಿ ಹಮ್ಮಿಕೊಂಡಿದ್ದ ಒಂದು ದೇಶ ಒಂದೇ ಚುನಾವಣೆ ಕುರಿತ ಸಾಂವಿಧಾನಿಕ ತಿದ್ದುಪಡಿ ವಿಚಾರದಲ್ಲಿ ರಾಜಕೀಯ ಪಕ್ಷಗಳ ಜತೆಗೆ ಸಮಿತಿಯು ಹಮ್ಮಿಕೊಂಡಿದ್ದ ಚರ್ಚೆಯಲ್ಲಿ ಭಾಗವಹಿಸಿ ಅಭಿಪ್ರಾಯ ವ್ಯಕ್ತಪಡಿಸಿದರು. ಭ್ರಷ್ಟಾಚಾರ ರಹಿತ, ಪಾರದರ್ಶಕ ಹಾಗೂ ಚುನಾವಣಾ ವೆಚ್ಚವನ್ನು ನಿಯಂತ್ರಣಕ್ಕಾಗಿ ಒಂದು ದೇಶ ಒಂದು ಚುನಾವಣೆ ಜಾರಿಗೆ ತರುವ ಅಗತ್ಯವಿದೆ. ಬಿಜೆಪಿಯೂ ಕೂಡಾ ಇದಕ್ಕೆ ಬೆಂಬಲ ವ್ಯಕ್ತಪಡಿಸುತ್ತದೆ ಎಂದು, ಆದಷ್ಟು ಬೇಗ ಒಂದು ದೇಶ-ಒಂದು ಚುನಾವಣೆ ಜಾರಿಗೆ ತರಬೇಕು ಎಂದು ವಿಜಯೇಂದ್ರ ಪ್ರತಿಪಾದಿಸಿದರು. ಅಲ್ಲದೇ, ರಾಜ್ಯ ಬಿಜೆಪಿ ವತಿಯಿಂದ ಮನವಿಯೂ ಸಲ್ಲಿಸಲಾಯಿತು. ಈ ಕುರಿತ ಚರ್ಚೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ, ಸಂಸದರಾದ ಪಿ.ಸಿ.ಮೋಹನ್, ಯದುವೀರ್ ಒಡೆಯರ್, ಡಾ. ಸಿ.ಎನ್. ಮಂಜುನಾಥ್, ಶಾಸಕರಾದ ಎಲ್.ರವಿ ಸುಬ್ರಹ್ಮಣ್ಯ, ಸುರೇಶ್ ಗೌಡ, ಜ್ಯೋತಿ ಗಣೇಶ್, ವಿಧಾನ ಪರಿಷತ್ ಸದಸ್ಯರಾದ ಕೆ.ಎಸ್.ನವೀನ್, ರಾಜ್ಯ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ, ರಾಜ್ಯ ಮುಖ್ಯ ವಕ್ತಾರ ಅಶ್ವತ್ಥನಾರಾಯಣ್ ಉಪಸ್ಥಿತರಿದ್ದರು.

> ಇದು ಪ್ರಾದೇಶಿಕ ಪಕ್ಷಗಳು ಹಾಗೂ ಎದುರಾಳಿ ಪಕ್ಷಗಳ ಧ್ವನಿ ಅಡಗಿಸುವ ಹುನ್ನಾರವಾಗಿದೆ. ಈ ಪ್ರಸ್ತಾವನೆ ಬಗ್ಗೆ ಕರ್ನಾಟಕ ಸರಕಾರದ ಸಹಮತವಿಲ್ಲ. ನಮ್ಮ ಪಕ್ಷದ ರಾಷ್ಟ್ರೀಯ ಮುಖಂಡರ ಒಟ್ಟಾರೆ ನಿಲುವಿಗೆ ನಾವು ಬದ್ಧರಾಗಿದ್ದೇವೆ.
>
> ■ **ಡಿ.ಕೆ.ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ಶಾಲೆಗಳಲ್ಲಿ ಪ್ರತಿದಿನ ನಾಡಗೀತೆ ಕಡ್ಡಾಯ

• **ಬೆಂಗಳೂರು:** ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಪ್ರತಿದಿನ ನಾಡಗೀತೆಯನ್ನು ಕಡ್ಡಾಯ ವಾಗಿ ಹಾಡುವಂತೆ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.



ಜಯ ಭಾರತ ಜನನಿಯ ತನುಜಾತೆ ನಾಡಗೀತೆಯ ಮೂಲಕ ವಿದ್ಯಾರ್ಥಿಗಳಲ್ಲಿ ರಾಜ್ಯಾಭಿಮಾನ, ದೇಶಭಕ್ತಿ ಹಾಗೂ ಸಾಂಸ್ಕೃತಿಕ ಅರಿವು ಬೆಳೆಸುವ ಉದ್ದೇಶ ದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಇಲಾಖೆ ತಿಳಿಸಿದೆ. ಸುತ್ತೋಲೆಯ ಪ್ರಕಾರ, ಪ್ರತಿದಿನ ಪ್ರಾರ್ಥನಾ ಸಮಯದಲ್ಲಿ ವಿದ್ಯಾರ್ಥಿಗಳು ನಾಡಗೀತೆಯನ್ನು ಸಾಮೂಹಿಕವಾಗಿ, ಲಯಬದ್ಧವಾಗಿ ಹಾಗೂ ಸರಿಯಾದ ಉಚ್ಚಾರಣೆಯೊಂದಿಗೆ ಹಾಡಬೇಕು. ಸಂಗೀತ ಶಿಕ್ಷಕರ ಮೂಲಕ ವಿದ್ಯಾರ್ಥಿಗಳಿಗೆ ಸರಿಯಾದ ಸ್ವರ, ಲಯದ ತರಬೇತಿ ನೀಡಲು ಸೂಚಿಸಲಾಗಿದೆ.

ಸ್ವಾತಂತ್ರ್ಯ ದಿನಾಚರಣೆ, ಗಣ ರಾಜ್ಯೋತ್ಸವ, ಕನ್ನಡ ರಾಜ್ಯೋತ್ಸವ ಸೇರಿದಂತೆ ರಾಷ್ಟ್ರೀಯ ಹಾಗೂ ನಾಡ ಹಬ್ಬಗಳ ಸಂದರ್ಭಗಳಲ್ಲಿ, ಶಾಲಾ ವಾರ್ಷಿಕೋತ್ಸವ ಮತ್ತು ಇತರ ರಾಜ್ಯಮಟ್ಟದ ಕಾರ್ಯಕ್ರಮಗಳಲ್ಲಿ ನಾಡಗೀತೆಯನ್ನು ಕಡ್ಡಾಯವಾಗಿ ಹಾಡಬೇಕು ಎಂದು ಇಲಾಖೆ ತಿಳಿಸಿದೆ. ನಾಡ ಗೀತೆಯ ಅರ್ಥ ಮತ್ತು ಮಹತ್ವವನ್ನು ಕನ್ನಡ ಭಾಷಾ ಶಿಕ್ಷಕರ ಮೂಲಕ ವಿದ್ಯಾರ್ಥಿಗಳಿಗೆ ತಿಳಿಸಬೇಕು. ಇದರಿಂದ ವಿದ್ಯಾರ್ಥಿಗಳು ಅದರ ಭಾವಾರ್ಥವನ್ನು ಅರ್ಥಮಾಡಿಕೊಂಡು ಸ್ವಯಂಪ್ರೇರಣೆಯಿಂದ ಹಾಡಲು ಅನು ಕೂಲವಾಗಲಿದೆ ಎಂದು ಹೇಳಲಾಗಿದೆ.

ಸುತ್ತೋಲೆಯ ಅನುಷ್ಠಾನವನ್ನು ಶಾಲಾ ಮುಖ್ಯೋಪಾಧ್ಯಾಯರು, ದೈಹಿಕ ಶಿಕ್ಷಕರು ಹಾಗೂ ಇತರ ಶಿಕ್ಷಕರು ನಿಯಮಿತ ವಾಗಿ ಪರಿಶೀಲಿಸಬೇಕು. ನಿಯಮಗಳನ್ನು ಪಾಲಿಸದಿದ್ದಲ್ಲಿ ಸಂಬಂಧಿತ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಇಲಾಖೆ ಎಚ್ಚರಿಸಿದೆ.

ಖಾಲಿ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಿ

ಬೆಂಗಳೂರು: ರಾಜ್ಯದ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ 2015ರ ಡಿ. 31 ರೊಳಗೆ ನಿಧನ, ನಿವೃತ್ತಿ, ರಾಜೀನಾಮೆ ಸೇರಿದಂತೆ ಇತರೆ ಕಾರಣಗಳಿಂದ ತೆರವಾದ ಖಾಲಿ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ಶಾಲಾ ಶಿಕ್ಷಣ ಇಲಾಖೆ ಮಹತ್ವದ ಸುತ್ತೋಲೆ ಹೊರಡಿಸಿದೆ. ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರು ಹೊರಡಿಸಿರುವ ಈ ಸುತ್ತೋಲೆಯಲ್ಲಿ, ಸರ್ಕಾರದ ಹಿಂದಿನ ಆದೇಶಗಳ ಅನ್ವಯ ಅರ್ಹ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶ ನೀಡಲಾಗಿದ್ದರೂ, ಅನೇಕ ಶಾಲಾ ಆಡಳಿತ ಮಂಡಳಿಗಳು ಇದುವರೆಗೆ ಯಾವುದೇ ಪ್ರಸ್ತಾವನೆ ಸಲ್ಲಿಸಿಲ್ಲ.ಇದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಅಡ್ಡಿಯಾಗುತ್ತಿರುವುದಾಗಿ ಇಲಾಖೆ ತಿಳಿಸಿದೆ.

ಉಡುಪಿ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವ್ಯಂಗ್ಯ

ಕೇಂದ್ರದ ಆರ್ಥಿಕ ನೀತಿ ಸರಿಯಿಲ್ಲ

• **ಉಡುಪಿ:** ಜನರಿಗೆ ಹೇಳೋದಾಯ್ತು, ಇವರೇನು ಮಾಡಿದ್ದಾರೆ ಅದನ್ನು ಮೊದಲು ಹೇಳಲಿ ಎಂದು ಉಡುಪಿ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸವಾಲು ಹಾಕಿದ್ದಾರೆ.

ಉಡುಪಿಯಲ್ಲಿ ಮಾಧ್ಯಮದವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮೋದಿ ಅವರು ಚಪ್ಪಾಳೆ ಹೊಡೀರಿ ಅಂದ್ರೆ ಹೊಡೀತೇವೆ. ಪೆಟ್ರೋಲ್ ಡೀಸೆಲ್ ಜಾಸ್ತಿ ಬಳಸಬೇಡಿ ಅಂದ್ರೆ ನಾವು ಪಾಲಿಸುತ್ತೇವೆ. ಬಂಗಾರ ಖರೀದಿಸಬೇಡಿ ಎಂದರೆ ಬಿಡುತ್ತೇವೆ. ದೇಶಕ್ಕಾಗಿ ಇತಿ ಮಿತಿಯನ್ನು ಪಾಲಿಸೋಣ. ಆದರೆ ಇಂತಹ ಪರಿಸ್ಥಿತಿ ಆಗೋದಕ್ಕೆ ಕಾರಣ ಯಾರು? ಅದು ಮಾಡಿ ಇದು ಮಾಡಿ ಅನ್ನೋದೇ ಆಯ್ತು. ಆದರೆ ಇವರೇನು ಮಾಡ್ತಿದಾರೆ, ಮುಂಜಾಗ್ರತಾ ಕ್ರಮವಾಗಿ ಏನು ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಎನ್ನೋದು ಬೇಕಲ್ವಾ ಎಂದು ಪ್ರಶ್ನಿಸಿದರು.



ಈಗ ಮೋದಿ ಬಂಗಾರ ಖರೀದಿ ಮಾಡಬೇಡಿ ಎನ್ನುತ್ತಿದ್ದಾರೆ. ಏನೇನೋ ಹೇಳುತ್ತ ಬಂದಿದ್ದಾರೆ. ಆದರೆ ಅಮೆರಿಕ ಯಾವ ರೀತಿ ನಮ್ಮ ಪ್ರಧಾನ ಮಂತ್ರಿಯನ್ನು ಕಂಟ್ರೋಲ್ ಮಾಡುತ್ತಿದೆ ಅಂತ ಮಾಧ್ಯಮದಲ್ಲೇ ನೋಡುತ್ತಿದ್ದೇವೆ. ಭಾರತದ ಬಗ್ಗೆ ಟ್ರಂಪ್ ಏನು ಹೇಳುತ್ತಿದ್ದಾರೆ ಗೊತ್ತಲ್ಲ.. ಎಂದು ವ್ಯಂಗ್ಯವಾಡಿದರು. ಚುನಾವಣೆ ಮುಗಿದ ಕೂಡಲೇ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡಿದ್ದಾರೆ. ಇದು ಕಂಪ್ಲೀಟ್ ರಾಜಕಾರಣ. ಈಗೇನೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲ ಬೆಲೆ ಏರಿಕೆಯಾಗಿಲ್ಲ. ಮನಮೋಹನ್ ಸಿಂಗ್ ಸರ್ಕಾರ ಇದ್ದಾಗ ಕಚ್ಚಾ ತೈಲ ಬೆಲೆ ಎಷ್ಟು ಏರಿತ್ತು ಗೊತ್ತಿದೆ. ಆದ್ರೂ ಜನರಿಗೆ ಬರೆ ಹಾಕುವ ಕೆಲಸ ಮಾಡಿಲ್ಲ. ಈಗ ದಿಢೀರ್ ಆಗಿ 3 ರೂಪಾಯಿ ಬೆಲೆ ಏರಿಸಿ ಜನರ ಮೇಲೆ ಹೊರೆ ಹಾಕಿದ್ದಾರೆ ಎಂದು ಹೇಳಿದರು.

ಹಿಜಾಬ್ ವಿವಾದ ಕುರಿತ ಪ್ರಶ್ನೆಗೆ, ಶಿಕ್ಷಣದಲ್ಲಿ ರಾಜಕಾರಣ ಯಾವತ್ತೂ ಮಾಡಬಾರದು. ಮಕ್ಕಳು ಮುಗ್ಧರಿದ್ದಾರೆ, ಪಾಲಕರು ಕಲಿಯುವುದಕ್ಕೆಂದು ಶಾಲೆಗೆ ಕಳಿಸುತ್ತಾರೆ. ಈ ವಿಚಾರದಲ್ಲಿ ಹೆಚ್ಚು ಚರ್ಚೆ ಮಾಡದೆ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಒಳ್ಳೆಯ ವಾತಾವರಣ ಸೃಷ್ಟಿ ಮಾಡಬೇಕೆಂದು ಮಾತ್ರ ಹೇಳುತ್ತೇನೆ. ಅವರ ಭವಿಷ್ಯದ ಜೊತೆ ಚೆಲ್ಲಾಟ ಆಡಬಾರದು. ಹಿಜಾಬ್ ಅಥವಾ ಇನ್ನಾವುದೇ ವಿಚಾರದ ಬಗ್ಗೆ ನಾನು ಮಾತನಾಡುವುದಿಲ್ಲ. ಮಕ್ಕಳ ಭವಿಷ್ಯ ತಲೆಯಲ್ಲಿಟ್ಟು ರಾಜಕಾರಣ ಮಾಡಬೇಕು ಅಂತ ಹೇಳುತ್ತೇನೆ ಎಂದು ಪ್ರತಿಕ್ರಿಯಿಸಿದರು.

ಮುಖ್ಯಮಂತ್ರಿ ಬದಲಾವಣೆ, ಸಚಿವ ಸಂಪುಟದ ವಿಸ್ತರಣೆ ಬಗ್ಗೆ ಕೇಳಿದ ಪ್ರಶ್ನೆಗೆ, ಅದು ಎಲ್ಲವೂ ಪಕ್ಷದ ಹೈಕಮಾಂಡ್ ತೀರ್ಮಾನ. ನಾವು ಪಕ್ಷದ ಶಿಸ್ತಿನ ಸಿಪಾಯಿಗಳು. ನಾವೇನೂ ಪ್ರತಿಕ್ರಿಯೆ ನೀಡಲ್ಲ ಎಂದರು.

ಜೂ.1ಕ್ಕೆ ರಾಜ್ಯಾದ್ಯಂತ ಶಾಲೆ ಪ್ರಾರಂಭ

• **ಬೆಂಗಳೂರು:** ಮುಂಬರುವ ಜೂ.1ರಂದು ರಾಜ್ಯಾದ್ಯಂತ ಶಾಲಾ ಪ್ರಾರಂಭೋತ್ಸವ ವಿಜೃಂಭಣೆಯಿಂದ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿದ್ಯಾರ್ಥಿಗಳನ್ನು ಶಾಲೆಗೆ ಸ್ವಾಗತಿಸಲಿದ್ದಾರೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ತಿಳಿಸಿದರು.



ರಾಜ್ಯದ 46 ಸಾವಿರ ಸರ್ಕಾರಿ ಶಾಲೆಗಳ ಮುಖ್ಯೋಪಾಧ್ಯಾಯರು, ಶಿಕ್ಷಕರು ಹಾಗೂ ಡಿಡಿಪಿಐ, ಡಿಡಿಪಿಯು, ಬಿಇಒ ಸೇರಿದಂತೆ ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳನ್ನು ಉದ್ದೇಶಿಸಿ ವಿಡಿಯೋ ಕಾನ್ಫರೆನ್ಸ್ ಮೂಲಕ ಮಹತ್ವದ ಸಭೆ ನಡೆಸಿದ ಸಚಿವರು, ಮುಖ್ಯಮಂತ್ರಿಗಳು ರಾಜ್ಯಾದ್ಯಂತ ಎಲ್ಲಾ ಶಾಲೆಗಳಲ್ಲಿ ಏಕಕಾಲದಲ್ಲಿ ನಡೆಯುವ ಮಹಾ ಪೋಷಕ-ಶಿಕ್ಷಕರ ಸಭೆಯನ್ನು ಉದ್ದೇಶಿಸಿ ವಿಡಿಯೋ ಕಾನ್ಫರೆನ್ಸ್ ಮೂಲಕ ವಿದ್ಯಾರ್ಥಿಗಳು ಹಾಗೂ ಪೋಷಕರೊಂದಿಗೆ ನೇರ ಸಂವಾದ ನಡೆಸಲಿದ್ದಾರೆ ಎಂದು ಸಚಿವರು ಪ್ರಕಟಿಸಿದರು.

ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿಯನ್ನು ಗರಿಷ್ಠ ಮಟ್ಟಕ್ಕೆ ಏರಿಸುವುದು ಮೊದಲ ಆದ್ಯತೆಯಾಗಬೇಕು. ಅನುತ್ತೀರ್ಣರಾದ ವಿದ್ಯಾರ್ಥಿಗಳನ್ನು ಗುರುತಿಸಿ, ಜಾಗೃತಿ ಮೂಡಿಸಿ ಮರಳಿ ಶಾಲೆಗೆ ತರಬೇಕು ಎಂದರು.

ಬಿಸಿಯೂಟ ಯೋಜನೆ: ಶಾಲಾ ಬಿಸಿಯೂಟ ಯೋಜನೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ನಿರ್ವಹಿಸಬೇಕು. ಮಕ್ಕಳ ಆರೋಗ್ಯದ ದೃಷ್ಟಿಯಿಂದ ಇದರಲ್ಲಿ ಯಾವುದೇ ರೀತಿಯ ಲೋಪದೋಷಗಳಾಗದಂತೆ ಎಚ್ಚರವಹಿಸುವುದು ಕಡ್ಡಾಯ. ಜತೆಗೆ, ಶಾಲಾ ಪ್ರಾರಂಭದಲ್ಲೇ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ, ಸಮವಸ್ತ್ರ ಸೇರಿದಂತೆ ಎಲ್ಲಾ ಅಗತ್ಯ ಸಾಮಗ್ರಿಗಳನ್ನು ಸಕಾಲದಲ್ಲಿ ವಿತರಿಸಬೇಕು ಎಂದು ತಿಳಿಸಿದರು.

ಶಿವಮೊಗ್ಗದಲ್ಲಿ ಕೆಪಿಎಸ್ ಶಾಲೆಗೆ ಶಂಕುಸ್ಥಾಪನೆ: ಶಾಲಾ ಪ್ರಾರಂಭೋತ್ಸವದ ಶುಭ ಸಂದರ್ಭದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಿವಮೊಗ್ಗದಲ್ಲಿ ಕರ್ನಾಟಕ ಪಬ್ಲಿಕ್ ಸ್ಕೂಲ್ (ಕೆಪಿಎಸ್) ನೂತನ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಹಾಗೆಯೇ, ರಾಜ್ಯಮಟ್ಟದಲ್ಲಿ ಶಿವಮೊಗ್ಗದಿಂದ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಅಡಿಗಲ್ಲು ಕಾರ್ಯಕ್ರಮವನ್ನು ನೆರವೇರಿಸಲಿದ್ದಾರೆ ಎಂದು ತಿಳಿಸಿದರು.

ಶಿಕ್ಷಕರಿಗೆ ಬದ್ಧತೆ ಇರಲಿ

ಎಸ್‌ಎಸ್‌ಎಲ್‌ಸಿ ಒಂದು ಅರ್ಹತಾ ಪರೀಕ್ಷೆಯಾಗಿದ್ದು, ಉನ್ನತ ಶಿಕ್ಷಣಕ್ಕೆ ಸೇತುವೆಯಂತಿದೆ. ವಿದ್ಯಾರ್ಥಿಗಳೇ ಕರ್ನಾಟಕದ ಮಾನವ ಸಂಪನ್ಮೂಲದ ಮೂಲಾಧಾರವಾಗಿದ್ದಾರೆ. ಹೀಗಾಗಿ, ಎಸ್‌ಎಸ್‌ಎಲ್‌ಸಿ ಫಲಿತಾಂಶದ ಸಂಪೂರ್ಣ ಸುಧಾರಣೆಗೆ ಪ್ರತಿಯೊಬ್ಬ ಶಿಕ್ಷಕರು ಬದ್ಧತೆಯಿಂದ ಕೆಲಸ ಮಾಡಬೇಕು ಎಂಬ ಮುಖ್ಯಮಂತ್ರಿಗಳ ಆಶಯವನ್ನು ಸಚಿವರು ಸಭೆಯಲ್ಲಿ ಪುನರುಚ್ಚರಿಸಿದರು.

ಎಸ್‌ಎಸ್‌ಎಸ್ ಕರ್ನಾಟಕ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ | ಶಾಸಕ ಮಹೇಶ ಟೆಂಗಿನಕಾಯಿ ಅಭಿಪ್ರಾಯ

ದೇಶದಲ್ಲಿ ಸನಾತನ ಧರ್ಮ ಉಳಿಸಿ, ಜನಜಾಗೃತಿ ಬೆಳೆಸಿ

• **ಹುಬ್ಬಳ್ಳಿ:** ಹಿಂದು ಧರ್ಮದ ಬಗ್ಗೆ ನಡೆಯುತ್ತಿರುವ ಅಪಪ್ರಚಾರ ಕುರಿತು ಜನರಲ್ಲಿ ಜಾಗೃತಿ ಮೂಡಿಸಬೇಕಿದೆ. ಸನಾತನ ಧರ್ಮವನ್ನು ಸಂಘಟಿಸುವ ಮೂಲಕ ಇನ್ನಷ್ಟು ಬೆಳೆಸಬೇಕಿದೆ ಎಂದು ಶಾಸಕ ಮಹೇಶ ಟೆಂಗಿನಕಾಯಿ ತಿಳಿಸಿದರು.

ಶನಿವಾರ ವಿದ್ಯಾನಗರ ಶಿರೂರ ಪಾರ್ಕ್‌ನ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ಶಬರಿಮಲೈ ಅಯ್ಯಪ್ಪ ಸೇವಾ ಸಮಾಜಂ (ಎಸ್‌ಎಎಸ್‌ಎಸ್) ಕರ್ನಾಟಕ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಉದ್ಘಾಟಿಸಿ ಮಾತನಾಡಿದರು. ಕರ್ನಾಟಕ ಹಾಗೂ ಕೇರಳ ರಾಜ್ಯಗಳ ನಡುವೆ ಅವಿನಾಭಾವ ಸಂಬಂಧವಿದೆ. ಅದಕ್ಕೆ ಕಾರಣ ಶಬರಿಮಲೈ ಅಯ್ಯಪ್ಪ ಸ್ವಾಮಿ. ಶಬರಿಮಲೈ ಅಯ್ಯಪ್ಪ ಸೇವಾ ಸಮಾಜಂ (ಎಸ್‌ಎಎಸ್‌ಎಸ್) ನ ಲಕ್ಷಾಂತರ ಜನರಿಗೆ ಅನ್ನಪ್ರಸಾದ ಮಾಡುತ್ತಿರುವುದು ಶ್ಲಾಘನೀಯ. ಅಯ್ಯಪ್ಪ ಸ್ವಾಮಿಗೆ ದೇಶದಲ್ಲಿ ಅಷ್ಟೇ ಅಲ್ಲ ವಿಶ್ವದಲ್ಲೂ ಭಕ್ತರು ಇದ್ದಾರೆ ಎಂದರು.

ಶ್ರೀರಾಮ ಸೇನಾ ರಾಷ್ಟ್ರಾಧ್ಯಕ್ಷ ಪ್ರಮೋದ ಮುತಾಲಿಕ್ ಮಾತನಾಡಿ, ಶಬರಿಮಲೈ ಬಗ್ಗೆ ಅಪಪ್ರಚಾರ, ಅಪಮಾನ ಮಾಡುತ್ತ ಬರಲಾಗುತ್ತಿದೆ. ಇದನ್ನು ಹೋಗಲಾಡಿಸಲು ಸಮಿತಿ ರಚನೆ ಅವಶ್ಯಕತೆ ಇತ್ತು. ಹಿಂದು ಸಮಾಜದ ಸುರಕ್ಷತೆ ಇಂದು ಬಹಳ ಅವಶ್ಯಕವಾಗಿದೆ ಎಂದರು. ಹಿಂದು ಧರ್ಮ ಮತ, ಮಂದಿರಗಳಿಂದ ಉಳಿದಿದೆ. ಇವುಗಳಿಂದ ಸಮಾಜ ನಿರ್ಮಾಣವಾಗಿದೆ. ಇಸ್ಲಾಂ, ಕ್ರಿಶ್ಚಿಯನ್ ಹಾಗೂ ಕಮ್ಯುನಿಸ್ಟ್ ಮುಖ್ಯ ಉದ್ದೇಶ ಆಧ್ಯಾತ್ಮದ ಮೇಲೆ ದಾಳಿ ಮಾಡುವುದಾಗಿದೆ. ಸಂಸ್ಕೃತಿ ಹಾಗೂ ಪರಂಪರೆಯಿಂದ ಹಿಂದು ಧರ್ಮ ಸದೃಢವಾಗಿದ್ದು, ಅದನ್ನು ಸರ್ವನಾಶ ಮಾಡಲು ಹೊರಟಿದ್ದಾರೆ ಎಂದರು.



ದೇಶದ ಸಂಪ್ರದಾಯವಾದ ಗುರುಕುಲ ಪದ್ಧತಿ ಹೋಗಲಾಡಿಸಿ ಕಾನ್ವೆಂಟ್ ಶಾಲೆಗಳ ತಂದರು. ಮೂಲ ನಂಬಿಕೆ ಹಾಳು ಮಾಡುತ್ತಿದ್ದು, ಇದಕ್ಕೆ ನಾವೆಲ್ಲರೂ ಸಂಘಟಿತರಾಗುವ ಮೂಲಕ ಇವರ ವಿರುದ್ಧ ಹೋರಾಡಬೇಕಿದೆ ಎಂದು ಹೇಳಿದರು.

ಎಸ್‌ಎಎಸ್‌ಎಸ್ ರಾಷ್ಟ್ರೀಯ ಉಪಾಧ್ಯಕ್ಷ ಆನಂದ ವಾಮನ ನಾಯಕ್ ಗೋ ಪೂಜೆ ನೆರವೇರಿ ಸಿದರು. ಹಿರಿಯ ಮಾರ್ಗದರ್ಶಕ ಸೇತು ಮಾಧವನ್ ಧ್ವಜಾರೋಹಣ ನೆರವೇರಿಸಿದರು. ರಾಷ್ಟ್ರೀಯ ಅಧ್ಯಕ್ಷ ಎಸ್. ಜೆ.ಆರ್.ಕುಮಾರ ಅಧ್ಯಕ್ಷತೆ ವಹಿಸಿದ್ದರು. ದೇವಸ್ಥಾನದ ಧರ್ಮದರ್ಶಿ ಆನಂದ ಗುರುಸ್ವಾಮಿ ಸಾನ್ನಿಧ್ಯ ವಹಿಸಿದ್ದರು. ಮಾಜಿ ಮೇಯರ್ ವೀಣಾ ಬರದ್ವಾಡ, ರಾಷ್ಟ್ರೀಯ ಕಾರ್ಯಕಾರಿ ಟಿ.ಬಿ.ಶೇಖರ್, ಪ್ರಮುಖರಾದ ಎ.ಆರ್. ಮೋಹನ, ಸೆಲ್ವನ್ ಮುರುಘನ್, ಪ್ರಕಾಶ ಗಣಪತಿ ಪೈ, ಈರೋಡು ಎನ್. ರಾಜನ್, ದುರ್ಗೇಶಂಕರ, ವಿನೋದ, ಡಾ.ಎನ್.ಜಯರಾಂ ಇದ್ದರು.

ಭಕ್ತರಿಗೆ ಹೆಚ್ಚಿನ ಸೌಲಭ್ಯ

ಹಿಂದೆ ಶಬರಿಮಲೈಗೆ ಹೋಗಬೇಕಾದರೆ ಸಾಕಷ್ಟು ಸಮಸ್ಯೆ, ಅಸ್ವಚ್ಛತೆ ಕಾಡುತ್ತಿತ್ತು. ಅದನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಸಮಾಜಂ ಜಾಗೃತಿ ಮೂಡಿಸುತ್ತಿದೆ. 10ಲಕ್ಷಕ್ಕೂ ಹೆಚ್ಚು ಭಕ್ತರು ಶ್ರದ್ಧೆ, ಭಕ್ತಿಯಿಂದ ಭೇಟಿ ನೀಡುತ್ತಾರೆ. ಅವರಿಗೆ ಸೇವೆ ಒದಗಿಸುವುದು ಅಷ್ಟು ಸರಳ, ಸುಲಭದ ಕೆಲಸವಲ್ಲ. ಈಗ ಅಲ್ಲಿ ತುಂಬಾ ಬದಲಾವಣೆ ಆಗಿದೆ. ಸ್ವಚ್ಛತೆ ಕಾಪಾಡಲಾಗಿದೆ. ಭಕ್ತರಿಗೆ ಹೆಚ್ಚಿನ ಸೌಲಭ್ಯ, ಸವಲತ್ತು ಸೇವೆಗಳನ್ನು ನೀಡಲಾಗುತ್ತಿದೆ ಎಂದು ಅನ್ನದಾನ ಸಮಿತಿ ಸದಸ್ಯ ಹಾಗೂ ಉದ್ಯಮಿ ಎಸ್‌ಎ ಪ್ರಸಾದ ಹೇಳಿದರು.

ಸೌಲಭ್ಯಗಳು ಸಿಗುತ್ತಿಲ್ಲ

ಸಂಘಟನೆ ಸಶಕ್ತಗೊಳಿಸಲು ಚಿಂತನ ಮಂಥನ ನಡೆಸಲಾಗುತ್ತಿದೆ. ಶಬರಿಮಲೈ ಶ್ರದ್ಧಾ ಕೇಂದ್ರ. ಭಕ್ತಿ ಜೊತೆ ಶಕ್ತಿ ಅವಶ್ಯವಾಗಿದೆ. ಆದರೆ, ಹಿಂದು ವಿರೋಧಿಗಳ ಕಪಿಮುಷ್ಟಿಯಲ್ಲಿ ಹಿಂದೂ ಭಕ್ತರಿಗೆ ದೊರೆಯಬೇಕಾದ ಸವಲತ್ತು, ಸೌಲಭ್ಯಗಳು ಸಿಗುತ್ತಿಲ್ಲ. ಅವುಗಳ ಪಡೆಯುವ ನಿಟ್ಟಿನಲ್ಲಿ ಕೆಲಸ ಮಾಡಬೇಕಿದೆ.ಭಾರತೀಯ ಸಮಾಜ ಭಕ್ತಿ ಮತ್ತು ಶಕ್ತಿಗೆ ಸಮಾನ ಸ್ಥಾನ ನೀಡಲಾಗಿದೆ. ಭಕ್ತಿಯ ಪರಾಕಾಷ್ಠೆ ಹೊಂದಿದೆ. ದಕ್ಷಿಣ ಭಾರತದ ಬಹುತೇಕ ಜಿಲ್ಲೆಗಳಲ್ಲಿ ಸಾಸ್ ಸಂಘಟನೆ ಇದೆ. ಭಾರತವನ್ನು ಜಗತ್ತು ನಮ್ಮಲ್ಲಿನ ಪವಿತ್ರ ಕ್ಷೇತ್ರಗಳಿಂದ ಗುರುತಿಸಬೇಕು. ಭಾರತವು ಜಗತ್ತಿಗೆ ಪರಿಚಿತವಾಗಬೇಕು ಎಂದು ಎಸ್‌ಎಎಸ್‌ಎಸ್ ಕರ್ನಾಟಕ ರಾಜ್ಯ ಸಂಯೋಜಕ ಪಿ.ಎಸ್.ಪ್ರಕಾಶ ತಿಳಿಸಿದರು.

ನೀಟ್ 2026 ಅಕ್ರಮ: ಎಬಿವಿಪಿ ಪ್ರತಿಭಟನೆ

• **ಕಲಬುರಗಿ:** ನೀಟ್-ಯುಜಿ 2026 ಪರೀಕ್ಷೆಯಲ್ಲಿ ನಡೆದಿರುವ ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ವಿವಿಧ ಪರೀಕ್ಷಾ ಅಕ್ರಮಗಳ ಕುರಿತು ಕೇಂದ್ರ ಸರ್ಕಾರ ನಿಷ್ಪಕ್ಷಪಾತ ತನಿಖೆ ನಡೆಸಿ, ಪರೀಕ್ಷಾ ಅಕ್ರಮ ವಿರೋಧಿ ವಿಶೇಷ ಕಠಿಣ ಕಾಯ್ದೆ ಯನ್ನು ಜಾರಿಗೆ ತರಬೇಕು ಎಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಆಗ್ರಹಿಸಿದೆ.

ನಗರದ ಜಿಲ್ಲಾಧಿಕಾರಿ ಮೂಲಕ ಈ ಸಂಬಂಧ ಪ್ರಧಾನ ಮಂತ್ರಿಗಳಿಗೆ ಮನವಿ ಸಲ್ಲಿಸಿದ ಎಬಿವಿಪಿ ಕಾರ್ಯಕರ್ತರು,ದೇಶದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯಕ್ಕೆ ಸಂಬಂಧಿಸಿದ ರಾಷ್ಟ್ರೀಯ ಮಟ್ಟದ ಪರೀಕ್ಷೆಗಳಲ್ಲಿ ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆ ಕಾಪಾಡುವುದು ಅತ್ಯಂತ ಅಗತ್ಯವಾಗಿದೆ ಎಂದು ತಿಳಿಸಿದರು. ಎಬಿವಿಪಿ ವಿಭಾಗ ಸಂಘಟನಾ ಕಾರ್ಯದರ್ಶಿ ಹೇಮಂತ ಆರಳಿ, ಮಹಾನಗರ ಕಾರ್ಯದರ್ಶಿ ಶರಣು ಪೂಜಾರಿ, ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಸಿದ್ಧಲಿಂಗ ತಳವಾರ, ಮನೋಜ ಪಾಟೀಲ, ಶ್ರವಣ ಜಳಕಿ, ರಾಜಪ್ಪ, ಸಾವನ್ ಸೇರಿದಂತೆ ಕಾರ್ಯಕರ್ತರು ಉಪಸ್ಥಿತರಿದ್ದರು.

ಪ್ರಶ್ನೋತ್ತರ ರತ್ನಮಾಲಿಕೆ

◆ ವಿದ್ವಾನ್ ನರಸಿಂಹ ಭಟ್

ಲಕ್ಷ್ಮಿಯು ಯಾರನ್ನು ವರಿಸುವಳು?

▸ಆಲಸ್ಯ ರಹಿತನನ್ನು ಮತ್ತು ನೀತಿವಂತನಿಗೆ

ಈ ಪ್ರಶ್ನೋತ್ತರದಲ್ಲಿ ಕಾರ್ಯಕಾರಣಭಾವವಿದೆ. ಲಕ್ಷ್ಮಿಯು ಕಾರ್ಯವಾದರೆ ಉತ್ಸಾಹ ಅಥವಾ ಆಲಸ್ಯವಿಲ್ಲದಿರುವಿಕೆ ಮತ್ತು ನೀತಿ ಕಾರಣ. ಏಕೆಂದರೆ ಲಕ್ಷ್ಮಿಯು ಒಲಿಯಬೇಕಾದರೆ ಯಾವ ಅರ್ಹತೆ ಇರಬೇಕಾಗುತ್ತದೆ ಎಂಬ ವಿಷಯ ಇಲ್ಲಿದೆ. ಆ ವ್ಯಕ್ತಿಯಲ್ಲಿ ಆಲಸ್ಯ ಇರಬಾರದು ಮತ್ತು ಆತ ನೀತಿಯಿಂದ ಕೂಡಿರಬೇಕು ಎಂದು. ಈ ಎರಡು ಗುಣಗಳಿರುವವನನ್ನು ಲಕ್ಷ್ಮಿಯೂ ಬಿಡುವುದಿಲ್ಲ ಎಂದರ್ಥ. ಇಲ್ಲಿ ಲಕ್ಷ್ಮಿ ಎಂದರೆ ಮಹಾವಿಷ್ಣುವಿನ ಮನದನ್ನೆ ಎಂಬ ಅರ್ಥ ಮಾತ್ರ ಅಲ್ಲ. ಇದಕ್ಕೆ ಸಂಪತ್ತು ಎಂಬ ಅರ್ಥವನ್ನು ತೆಗೆದುಕೊಳ್ಳಬೇಕು. ಸಂಪಾದಿಸಿದ ಸಂಪತ್ತನ್ನು ಸರಿಯಾಗಿ ಬಳಸಿಕೊಂಡಲ್ಲಿ ಮಹಾಲಕ್ಷ್ಮಿಯ ಪತಿಯಾದ ಮಹಾವಿಷ್ಣು ಸಿಗದಿರನು.

ಯಾವುದೇ ಕಾರ್ಯದ ಫಲಿತವನ್ನು ಇಲ್ಲಿ 'ಲಕ್ಷ್ಮಿ' ಎಂಬುದಾಗಿ ತಿಳಿಯಬೇಕು. ಅಂದರೆ ಒಂದು ಫಲರೂಪವಾದುದರಿಂದ ಲಕ್ಷ್ಮಿಯು ಅನೇಕ ಪ್ರಕಾರವಾಗಿ ಇರುತ್ತಾಳೆ. ಅಷ್ಟಲಕ್ಷ್ಮಿಯರ ರೂಪದಲ್ಲಿ ನಾವು ಲಕ್ಷ್ಮಿಯನ್ನು ಭಾವಿಸುತ್ತೇವೆ. ಯಾವುದೇ ವಿಧವಾದ ಲಕ್ಷ್ಮಿ ನಮಗೆ ಲಭಿಸಬೇಕಾದರೆ ಅದಕ್ಕೆ ಬೇಕಾದ ಪೂರಕವಾದ ಸಾಮಗ್ರಿಗಳು ಇರಬೇಕಾಗುತ್ತವೆ. ಸಾಮಾನ್ಯವಾಗಿ ಒಂದು ಕಾರ್ಯವಾಗಬೇಕಾದರೆ ಅಲ್ಲಿ ಕಾರಣವಿರಬೇಕು. ಮತ್ತು ಆ ಕಾರ್ಯಕ್ಕೆ ಪ್ರತಿಬಂಧಕ ಅಥವಾ ವಿಘ್ನ ಇರಬಾರದು. ಮತ್ತು ಪ್ರತಿಬಂಧಕ ಇದ್ದರೂ ಕಾರ್ಯವನ್ನುಂಟುಮಾಡುವ ಉತ್ತೇಜಕವಾದ ಕಾರಣ ಸಾಮಗ್ರಿ ಇದ್ದರೆ ಕಾರ್ಯಸಂಪನ್ನವಾಗುತ್ತದೆ ಎಂಬುದಾಗಿ ಶಾಸ್ತ್ರವು ಕಾರ್ಯಕಾರಣಗಳಿಗಿರುವ ಸಂಬಂಧವನ್ನು ಹೀಗೆ ವಿವರಿಸುತ್ತದೆ. ಅಂದರೆ ಸಂಪತ್ತು ಬರಬೇಕಾದರೆ ಅದಕ್ಕೆ ಇರುವ ಪ್ರತಿಬಂಧಕವೇ ಆಲಸ್ಯ. ಮತ್ತು ಬಂದ ಫಲವು ಉಳಿಯಬೇಕಾದರೆ ಏನು ಮಾಡಬೇಕು ಎಂಬ ವಿಷಯವೂ ಈ ಉತ್ತರದಲ್ಲಿ ನಿರೂಪಿತವಾಗಿದೆ. ಹಾಗೂ ಹೀಗೂ ಕಷ್ಟಪಟ್ಟು ಲಕ್ಷ್ಮಿಯನ್ನು ಸಂಪಾದಿಸಬಹುದು. ಸಹಜವಾಗಿ ಆಕೆ ಚಂಚಲೆ. ಅವಳನ್ನು ಉಳಿಸಿಕೊಳ್ಳುವುದಕ್ಕೂ ಸಹ ಒಂದು ಜಾಣ್ಮೆಯೇ ಬೇಕು. ಅದಕ್ಕಾಗಿ ಏನು ಬೇಕು ಎಂಬುದನ್ನು ಇಲ್ಲಿ ಹೇಳಲಾಗಿದೆ. ಅಲ್ಲಿ ಒಂದು ನಿಯತ್ತು ಅಥವಾ ನೀತಿ ಬೇಕು. ಬದ್ಧತೆ ಅಥವಾ ಕ್ಷಮತೆ ಇರಬೇಕಾಗುತ್ತದೆ. ಅವಳು ಉಳಿಯಬೇಕಾದರೆ ನಮ್ಮಲ್ಲಿ ಆ ಅರ್ಹತೆಯು ಸದಾ ಜಾಗೃತವಾಗಿರುವಂತೆ ಕಾಪಾಡಿಕೊಳ್ಳಬೇಕಾಗುತ್ತದೆ. ಹಾಗಿದ್ದಾಗ ಬಂದ ಸಂಪತ್ತು ಅಲ್ಲಿ ನೆಲೆಗೊಳ್ಳುತ್ತದೆ. ಹಾಗಾಗಿ ಈ ಎರಡು ಲಕ್ಷಣಗಳಿದ್ದರೆ ಮಾತ್ರ ಮಹಾಲಕ್ಷ್ಮಿ ನೆಲೆಗೊಳ್ಳುತ್ತಾಳೆ ಎಂಬುದಾಗಿ ಈ ಪ್ರಶ್ನೋತ್ತರ ಸಾರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಮಹಾಭಾರತದ ವಿದುರನೀತಿ ಹೀಗೆ ಹೇಳಿದೆ–ಯಾವನಿಗೆ ಮಹಾಲಕ್ಷ್ಮಿ ಅನಾಯಾಸವಾಗಿ ಒಲಿಯುತ್ತಾಳೆ ಎಂದು. ಉತ್ಸಾಹಸಂಪನ್ನಮ್ ಅದೀರ್ಘಸೂತ್ರಂ ಕ್ರಿಯಾವಿಧಿಜ್ಞಂ ವ್ಯಸನೇಷ್ವಸಕ್ತಮ್ । ಶೂರಂ ಕೃತಜ್ಞಂ ದೃಢಸೌಹೃದಂ ಚ ಲಕ್ಷ್ಮೀಃ ಸ್ವಯಂ ಯಾತಿ ನಿವಾಸಹೇತೋಃ॥ ಎಂದು. ವ್ಯಕ್ತಿಯಲ್ಲಿ ಸಂಕಲ್ಪಿಸಿದ ಕಾರ್ಯ ಸಿದ್ಧಿಸುವತನಕ ನಿರಂತರ ಉತ್ಸಾಹವಿರಬೇಕು, ವಿಳಂಬವಿರಬಾರದು, ಅರಿತು ಕೆಲಸ ಮಾಡುವವನಾಗಿರಬೇಕು, ಚಟಗಳಲ್ಲಿ ಆಸಕ್ತನಾಗಿರಬಾರದು, ಶೂರನಾಗಿರಬೇಕು, ಕೃತಜ್ಞತೆಯ ಭಾವ ಉಳ್ಳವನಾಗಿರಬೇಕು, ಮಾಡುವ ಕಾರ್ಯದಲ್ಲಿ ತಲ್ಲೀನತೆಯಿರಬೇಕು. ಈ ಏಳು ಗುಣವುಳ್ಳವನನ್ನು ಲಕ್ಷ್ಮಿಯು ತಾನಾಗಿಯೇ ಆತನ ಮನೆಯಲ್ಲಿ ವಾಸಿಸಲು ಇಚ್ಛಿಸುತ್ತಾಳೆ ಎಂಬುದಾಗಿ. ಇದೇ ಅರ್ಥವನ್ನೇ ಇನ್ನೊಂದು ರೀತಿಯಲ್ಲಿ ಈ ಪ್ರಶ್ನೋತ್ತರದಲ್ಲೂ ಹೇಳಲಾಗಿದೆ.

ವ್ಯಾಸ ವೀಕ್ಷಿತ

◆ ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ಯುಧಿಷ್ಠಿರನ ಹರ್ಷ; ಕೃಷ್ಣನ ನಿರ್ಗಮನ

ಅಂತೂ ಜರಾಸಂಧ ವಧೆಯಾಯಿತು, ಆತನ ಉತ್ತರಕ್ರಿಯೆಯೂ ಆಯಿತು. ಆತನ ಪುತ್ರನ ಪಟ್ಟಾಭಿಷೇಕವೂ ಆಯಿತು. ಸೆರೆಯಾಗಿದ್ದ ರಾಜರುಗಳ ಬಿಡುಗಡೆಯೂ ಆಯಿತು. ಇತ್ತ ಕೃಷ್ಣನೂ ಅರಸರು ಅರ್ಪಿಸಿದ ಮಹೈಶ್ವರ್ಯವನ್ನು ಹೊಂದಿದವನಾಗಿ, ಅವರಿತ್ತ ಭೂರಿರತ್ನಗಳನ್ನು ತೆಗೆದುಕೊಂಡು, ಭೀಮಾರ್ಜುನರೊಂದಿಗೆ ಅಲ್ಲಿಂದ ಇಂದ್ರಪ್ರಸ್ಥಕ್ಕೆ ಬಂದವನೇ, ಧರ್ಮರಾಜನಲ್ಲಿಗೆ ಬಂದು ಸಂತೋಷದಿಂದ ನುಡಿದನು:

ಯುಧಿಷ್ಠಿರಾ, ಭೀಮನು ಜರಾಸಂಧನನ್ನು ಸಂಹರಿಸಿದನು. ಇದು ನಮ್ಮ ಸೌಭಾಗ್ಯ. ಸೆರೆಯಾಗಿದ್ದ ರಾಜರುಗಳನ್ನೆಲ್ಲಾ ಬಿಡಿಸಿದ್ದಾಗಿದೆ. ಭೀಮಾರ್ಜುನರು ಕುಶಲಿಗಳಾಗಿಯೇ ಹಿಂದಿರುಗಿದ್ದಾರೆ. ಅವರಿಗೆ ಯಾವ ಕ್ಷತಿಯೂ ಉಂಟಾಗಿಲ್ಲ ಎಂದು. ಈ ಮಾತಿಗೆ ಸಂತುಷ್ಟನಾದ ಯುಧಿಷ್ಠಿರನು ಕೃಷ್ಣನನ್ನು ಯಥೋಚಿತವಾಗಿ ಸತ್ಕರಿಸಿದನು. ಹಾಗೂ ಪ್ರಹರ್ಷದಿಂದ ಭೀಮಾರ್ಜುನರನ್ನು ಆಲಿಂಗಿಸಿಕೊಂಡನು. ಜರಾಸಂಧ ನಾಶ ಹಾಗೂ ತನ್ನ ಭ್ರಾತೃಗಳು ಸಾಧಿಸಿದ ವಿಜಯಗಳಿಂದಾಗಿ ಯುಧಿಷ್ಠಿರನಿಗೆ ಅಮಿತ ಸಂತೋಷವಾಯಿತು. ಕೃಷ್ಣನನ್ನು ಕುರಿತು ಹೀಗೆ ಹೇಳಿದನು: ನರಶ್ರೇಷ್ಠನೇ, ಪ್ರತಾಪಶಾಲಿಯೂ ಮದೋನ್ಮತ್ತನೂ ಆದ ಜರಾಸಂಧನನ್ನು ಭೀಮನು ಬೀಳಿಸಲಾದುದು ನೀನು ಜೊತೆಗಿದ್ದೆಯಾದ್ದರಿಂದಲೇ. ಈಗ ಇದೋ ಶ್ರೇಷ್ಠಯಜ್ಞವಾದ ರಾಜಸೂಯವನ್ನು ನಾನು ನಿಶ್ಚಿಂತನಾಗಿ ನೆರವೇರಿಸಬಲ್ಲೆ. ನಿನ್ನ ಬುದ್ಧಿ ಬಲದಿಂದಾಗಿಯೇ ನನಗೆ ಯಾಗವನ್ನು ಮಾಡಲು ಅರ್ಹತೆಯೆಂಬುದು ಬಂದಿರುವುದು. ಜರಾಸಂಧನೊಡನೆ ಮಾಡಿದ ಈ ಯುದ್ಧದಿಂದಾಗಿ, ಭೂಮಿಯ ಮೇಲೆಲ್ಲ ನಿನ್ನ ಕೀರ್ತಿಯು ವ್ಯಾಪಿಸಿರುವುದು. ಜರಾಸಂಧ ವಧದಿಂದಾಗಿ ವಿಪುಲವಾದ ಸಂಪತ್ತನ್ನೂ ಗಳಿಸಿದಂತಾಯಿತು.

ಹೀಗೆ ಹೇಳಿದ ಯುಧಿಷ್ಠಿರನು ಪ್ರಭುವಾದ ಶ್ರೀಕೃಷ್ಣನಿಗೆ ಶ್ರೇಷ್ಠವಾದ ರಥವೊಂದನ್ನಿತ್ತನು. ಅದರೊಳಗೆ ಅರ್ಜುನನೊಂದಿಗೆ ಕುಳಿತ ಜನಾರ್ದನನೂ ಯುಧಿಷ್ಠಿರನ ವಿಷಯದಲ್ಲಿ ಬಹುಸಂತುಷ್ಟನೇ ಆದನು. ಆ ಬಳಿಕ ತನ್ನ ಸಹೋದರರೊಂದಿಗೆ ಯುಧಿಷ್ಠಿರನು ಹೊರಟು ಎಲ್ಲ ರಾಜರನ್ನೂ ಯಥೋಚಿತವಾಗಿ ಸತ್ಕರಿಸಿ ಅವರೆಲ್ಲರನ್ನೂ ಬೀಳ್ಕೊಟ್ಟನು. ಸಂತೋಷಗೊಂಡ ಆ ರಾಜರುಗಳೂ, ಯುಧಿಷ್ಠಿರನ ಅಪ್ಪಣೆಯನ್ನು ಪಡೆದು ತಮ್ಮ ದೇಶಗಳಿಗೆ ಹೊರಟುಬಂದರು.

ನರಶ್ರೇಷ್ಠನೂ ಮಹಾಬುದ್ಧಿಶಾಲಿಯೂ ಆದ ಕೃಷ್ಣನು ಹೀಗೆ ಜರಾಸಂಧ ವಧೆಯನ್ನು ಸಾಧಿಸಿದನಷ್ಟೆ. ಕಾರ್ಯವು ಸಿದ್ಧಿಸಿರಲು, ಇನ್ನೀಗ ಹೊರಟುನಿಂತನು. ಯುಧಿಷ್ಠಿರನನ್ನೇ ಮುಂದಿಟ್ಟುಕೊಂಡು ಆ ಪಾಂಡವರೆಲ್ಲರೂ ಅಕ್ಲಿಷ್ಟಕಾರಿಯಾದ ಕೃಷ್ಣನಿಗೆ ಪ್ರದಕ್ಷಿಣೆ ಮಾಡಿದರು. ಯಾವುದೇ ಕಾರ್ಯವನ್ನು ಅನಾಯಾಸವಾಗಿ, ಎಂದರೆ ಕ್ಲೇಶವಿಲ್ಲದೆ ಮಾಡುವಂತಹವನಿಗೆ ಅಕ್ಲಿಷ್ಟಕಾರಿಯೆನ್ನುವರು. ಯುಧಿಷ್ಠಿರ ಹಾಗೂ ದ್ರೌಪದಿ ಇವರುಗಳ ಆಜ್ಞೆಯನ್ನು ಕೃಷ್ಣನು ಪಡೆದನು. ಹಾಗೆಯೇ ಸುಭದ್ರೆ, ಭೀಮಸೇನ, ಅರ್ಜುನ, ಯಮಳರಾದ (ಅವಳಿ–ಜವಳಿ) ನಕುಲ–ಸಹದೇವರು, ಹಾಗೂ ಧೌಮ್ಯ–ಇವರೆಲ್ಲರ ಅನುಮತಿಯನ್ನು ಪಡೆದು, ಸ್ವನಗರಿಗೆ ಹೊರಟನು. ಅದಕ್ಕಾಗಿ ಆತನು ಬಳಸಿದ ರಥವು ಆಗಷ್ಟೆ ಯುಧಿಷ್ಠಿರನು ಆತನಿಗೆ ಕೊಟ್ಟುದಾಗಿತ್ತು. ಅದು ಮನೋವೇಗದಲ್ಲಿ ಸಂಚರಿಸುವ ರಥ! ತನ್ನ ದಿವ್ಯನಾದದಿಂದ ದಿಕ್ಕುಗಳಲ್ಲೆಲ್ಲ ಪ್ರತಿಧ್ವನಿಯನ್ನು ಉಂಟುಮಾಡುವಂತಹುದು!

ದೇವಕೀಪುತ್ರನಾದ ಕೃಷ್ಣನು ಹೊರಟುಬರಲು, ದೊಡ್ಡ ಜಯವನ್ನು ಸಾಧಿಸಿದಂತಾಗಿದ್ದ ಯುಧಿಷ್ಠಿರನು, ಅಲ್ಲಿ ನೆರೆದಿದ್ದ ರಾಜರಿಗೆಲ್ಲ ಅಭಯವನ್ನಿತ್ತನು. ಆ ಕಾರ್ಯದಿಂದಾಗಿ ಆತನ ಕೀರ್ತಿಯು ಮತ್ತೂ ಹೆಚ್ಚಿತು. ಪಾಂಡವರು ದ್ರೌಪದಿಗೂ ಪರಮ ಸಂತೋಷವನ್ನೇ ತಂದುಕೊಟ್ಟಂತಾಯಿತು. ಹಾಗೂ ಆ ಕಾಲಕ್ಕೆ ಹೇಗೆ ಯುಕ್ತವೋ ಅಂತಹ ಪ್ರಜಾಪಾಲನ ಕಾರ್ಯವನ್ನು ಯುಧಿಷ್ಠಿರನು ಧರ್ಮಾನುಸಾರವಾಗಿ ನೆರವೇರಿಸಿದನು.

ನೆನೆದವರ ಮನದಲ್ಲಿ...

ವಕ್ರದೃಷ್ಟಿ

◆ ಎನ್. ರಾಮನಾಥ್
anakuramanath@gmail.com



ಬಾಲ್ಕನಿಯಲ್ಲಿ ಇರಿಸಿದ್ದ ಕುಂಡವೊಂದರಲ್ಲಿ ತುಂಬಿದ್ದ ಹಿಂದಿನ ರಾತ್ರಿಯ ಮಳೆಯ ನೀರನ್ನು ಸಾಮಾನ್ಯವಾಗಿ ನಿರ್ಜನವಾಗಿರುತ್ತಿದ್ದ ಪಕ್ಕದ ಗಲ್ಲಿಯತ್ತ ಸುರಿದೆ. ಆ ಸಮಯದಲ್ಲಿ ಆ ಗಲ್ಲಿಯು ನಿರ್ಜನವಾಗಿರಲಿಲ್ಲ ಎನ್ನುವುದು ಅಲ್ಲಿಂದ ಹೊರಟ ಚೀತ್ಕಾರ ಮತ್ತು ಜಗತ್ತಿನ ಅತ್ಯಂತ ಕೊಳಕು ಬೈಗುಳಗಳ ಸರಮಾಲೆಯಿಂದ ವೇದ್ಯವಾಯಿತು. ಬಾಲ್ಕನಿಯ ಅಂಚಿಗೆ ನನ್ನ ದೇಹದ ಮೇಲ್ಭಾಗವನ್ನು ಛಜ್ಜಾದಂತಾಗಿಸಿ ಗಲ್ಲಿಯತ್ತ ಇಣುಕಿದೆ. ಕುಂಡದಲ್ಲಿದ್ದ ಮಣ್ಣಿನ ಮಗನ ಅಮ್ಮನನ್ನು ಕೂಡಿಕೊಂಡಿದ್ದಂತಹ ಭೀಷ್ಮನ ತಾಯಿಯು ಗಲ್ಲಿಯಲ್ಲಿ ಧಾವಿಸುತ್ತಿದ್ದ ಮಹಿಳೆಯ ಹಿಮಾಲಯದ ಹಿಮಾಚ್ಛಾದಿತ ಬಿಳುಪಿನ ವಸ್ತ್ರವನ್ನು ತುಂಬಿದ ಪೀಕದಾನಿಯ ಬಣ್ಣಕ್ಕೆ ತಿರುಗಿಸಿದ್ದಳು. ತತ್ಪರಿಣಾಮವೇ ಮಹಿಳೆಯ ಜಿಹ್ವೆಗೆ ಸಾನಿಯಾ ಮಿರ್ಜಾಳ ರಾಕೆಟ್ಟಿಂದ ಹೊರಟ ಚೆಂಡಿನ ವೇಗವು ದೊರಕಿತ್ತು ಮತ್ತು ಆಕೆಯ ಚಿತ್ತದಲ್ಲಿ ಅಡಗಿದ್ದ ವಿಶೇಷ ಬೈಗುಳಗಳ ಸುರಿಮಳೆಯ ಮೂಲಕ ನನ್ನ ಪೂರ್ವಿಕರೆಲ್ಲರೂ ಪಾವನರಾಗುತ್ತಿದ್ದರು.

ನೆನೆಯುವುದು ಉರುಫ್ ಒದ್ದೆಯಾಗುವುದು ಹುಟ್ಟಿಗಿಂತ ಮುಂಚಿನಿಂದಲೂ ಆರಂಭವಾಗುವ ಕ್ರಿಯೆ. ಗರ್ಭದಲ್ಲಿ ಇರುವಷ್ಟು ಸಮಯವೂ ದ್ರವದಲ್ಲಿಯೇ ಈಜಾಡುವ ಶಿಶುವು 'ಈಸಬೇಕು, ಈಸಿ ಜನಿಸಬೇಕು' ಎಂಬ ಕ್ರಮವನ್ನು easyಯಾಗಿ ಪಾಲಿಸುತ್ತದೆ. ನೆನೆದೇ ಹುಟ್ಟಿ, ನೆನೆಯುತ್ತಲೇ ಬೆಳೆಯುವ ಮನುಜ ಕಂತೆ ಒಗೆದು ಕಟ್ಟಿಗೆಯನ್ನು ಏರುವಾಗಲೂ ಒದ್ದೆಯಾಗಿಯೇ ತೆರಳುವುದು. ನೆನೆದಾಗ ಗರ್ಭಸ್ಥ ಮಗುವಿನ ಮನದಲ್ಲಿ, ಚಟ್ಟವೇರುವ ಮುನ್ನ ಶವದ ಮನದಲ್ಲಿ ಏನಾಗುವುದೆಂದು ತಿಳಿಯದಿದ್ದರೂ ಬದುಕಿನ ವಿವಿಧ ಮಜಲುಗಳಲ್ಲಿ ನೆನೆದವರ ಮನದಲ್ಲಿ ಏನಾಗಬಹುದು? ಯಾವ ಭಾವಗಳು ಏಳಬಹುದು? ಇದನ್ನು ತಿಳಿಯಲೆಂದೇ ಆ ಮಳೆಗಾಲದಂದು ಕ್ಯಾಮರಾವನ್ನು ಹೆಗಲಿಗೇರಿಸಿ ಬೀದಿಗೆ ಬಿದ್ದೆ.



ಅನತಿ ದೂರದಲ್ಲಿಯೇ ಒಂದು ಚಲನಚಿತ್ರದ ಮಳೆ ಸೀನಿನ ಶೂಟಿಂಗ್ ನಡೆಯುತ್ತಿತ್ತು. ಭರ್ರನೆ ಷವರ್ನಿಂದ ತುಂತುರುತ್ತಿದ್ದ ನೀರಿನ ಕೆಳಗೆ ನಿಂತಿದ್ದ ಹೀರೋಯಿನ್ನನ್ನು "ನೆನೆದವರ ಮನದಲ್ಲಿ ಕಾರ್ಯಕ್ರಮದ ವತಿಯಿಂದ ನಿಮಗೆ ಈ ಪ್ರಶ್ನೆ. ನೆನೆಯುತ್ತಿರುವ ನಿಮ್ಮ ಮನದಲ್ಲಿ ಯಾವ ಭಾವನೆಗಳಿವೆ?" ಎಂದು ಪ್ರಶ್ನಿಸಿದೆ.

"ಸೀನ್ ಮುಗಿಯುವವರೆಗೆ ಸೀನುವುದನ್ನು ತಡೆದುಕೊಳ್ಳುವುದು ಹೇಗೆ ಎನ್ನುವುದೇ ನನ್ನ ಮನದಲ್ಲಿ ಮೂಡಿರುವ ಚಿಂತೆ. ಚಿತ್ರದ ಡೈರೆಕ್ಟರ್ ಮೊದಲು ದೋಸೆ ಹೋಟೆಲ್ ಇಟ್ಟಿದ್ದನಂತೆ. ಬೇಳೆಯನ್ನು ನೆನೆಹಾಕಿ ತನ್ನ ಬೇಳೆ ಬೇಯಿಸಿಕೊಂಡವನಿಗೆ ಎಲ್ಲವನ್ನೂ ನೆನೆಸುವುದರಲ್ಲಿಯೇ ಖುಷಿ" ಎಂದಳು ಲಲನೆ. ಧ್ವನಿಯಲ್ಲಿ ಆಗಲೇ ಥಂಡಿಯ ಗೊರಗೊರ ಸೇರಿತ್ತು.

ಶೀತಲನಾಸಿಕೆಯಿಂದ ಬೀಳ್ಕೊಂಡು ಮುನ್ನಡೆದೆ. ಅಲ್ಲೊಂದು ಪಾಟ್ಹೋಲ್; ಇತ್ತಣಿಂದೊಂದು ವಾಹನ ಧಾವಿಸಿ ಪಾಟ್ಹೋಲಲ್ಲಿ 'ಧಢ್ಡಿಸಿ' ಮುಂದೋಡಿತು. ಹಳ್ಳದಲ್ಲಿ ತುಂಬಿದ್ದ ವರ್ಷಶೇಷವು ಪಕ್ಕದಲ್ಲಿ ನಿಂತಿದ್ದವನು ವಾಷಿಂಗ್ ಪೌಡರ್ ನಿರ್ಮಾ ಬಳಸಿ ಒಗೆದು ತೊಟ್ಟಿದ್ದ ಹಾಲಿನಂಥ ಬಿಳುಪು ಅಂಗಿಯನ್ನು ಕಮಂಗಿಯಾಗಿಸಿತು.

"ನಮಸ್ಕಾರ. 'ನೆನೆದವರ ಮನದಲ್ಲಿ' ಕಾರ್ಯಕ್ರಮಕ್ಕೆ ನಿಮಗೆ ಸ್ವಾಗತ. ಛಿಳ್ಳನೆ ಹಾರಿದ ನೀರು ಫಳ್ಳನೆ ಹೊಳೆಯುತ್ತಿದ್ದ ಶರ್ಟನ್ನು ತೋಯಿಸಿರುವ ಈ ಸಂದರ್ಭದಲ್ಲಿ ನೆನೆದವರ ಮನದ ಮಾತುಗಳೇನು?" ಎಂದೆ.

ಕಮಂಗಿಯವನು ಗಲ್ಲಿಯವಳು ಓದಿದ ಸ್ಕೂಲಿನಲ್ಲೇ ಓದಿದವನೋ ಏನೋ; ಅವಳು ಬಳಸಿದ ಭಾಷೆಯನ್ನೇ ಒಂದಷ್ಟು 'ಇಂಪ್ರೂವ್' ಮಾಡಿ ಪ್ರಶ್ನಿಸಿದ ನನ್ನನ್ನು, ಕೊಚ್ಚೆ ಹಾರಿಸಿದ ಡ್ರೈವರನ್ನು, ಗುಂಡಿ ಮುಚ್ಚದ ನಗರ ಪಾಲಿಕೆಯನ್ನು, ರಾಜ್ಯ ಸರ್ಕಾರವನ್ನು, ಕಡೆಗೆ ದೇಶದ ಪ್ರಧಾನಿಯನ್ನು ತನ್ನ ಪೊಲೀಸ್ ಸಂಸ್ಕೃತದಲ್ಲಿ ನಿವಾಳಿಸಿ ಎಸೆದ. ಅಷ್ಟರ ಮಧ್ಯೆಯೂ ನಾನು "ನಿಮಗೆ ಹಿಂದಿ ಫಿಲ್ಮ್ ಇಷ್ಟವೇ?" ಎಂದು ಕೇಳಿದೆ.

"ಹೂಂ. ಏಕೆ?"

"ಹಿಂದಿ ಚಿತ್ರಗಳ ಹೀರೋಗಳು ಗುಂಡಿ ಮುಚ್ಚಕೂಡದು ಎಂದು ತೋರಿಸಿಕೊಟ್ಟಿದ್ದಾರೆ. ಅವರ ಶರ್ಟಿನ ಗುಂಡಿಗಳೆಲ್ಲ ತೆರೆದೇ ಇರುತ್ತವೆ. ಇದೂ ಡಿಟ್ಟೋ. ಆದ್ದರಿಂದ ಈ ಗುಂಡಿಗಳನ್ನು ಮುಚ್ಚದ ಕಾಂಟ್ರ್ಯಾಕ್ಟರ್ ಸಹ ಹಿಂದಿ ಚಿತ್ರಗಳ ಅಭಿಮಾನಿ ಎಂದಾಯಿತು. ಅಲ್ಲಿಗೆ ನೀವಿಬ್ಬರೂ ಒಂದೇ ಬಳ್ಳಿಯ ಹೂಗಳು. ನೀವೇನಂತೀರಿ?" ಎಂದೆ.

ಅವನು ತನ್ನ ಹೊಲಸುಭಾಷಾ ಪದಕೋಶದಿಂದ ಮತ್ತಷ್ಟು ಪದಗಳನ್ನು ಹೆಕ್ಕಿ ನನ್ನತ್ತ ಒಗೆದ. "ಮೆತ್ತಗೆ ಮಾತನಾಡಿದ್ದು ನಿನಗೇ; ಜೋರಾಗಿ ಮಾತನಾಡಿದ್ದು ಗಾಳಿಗೆ" ಎಂಬ ಧೋರಣೆಯನ್ನು ಅನುಸರಿಸುವ ನಾನು ನೆನೆದ ಮತ್ತೊಬ್ಬರನ್ನು ಅರಸುತ್ತಾ ಹೊರಟೆ. ಇದ್ದಕ್ಕಿದ್ದಂತೆ ಕಾರ್ಮೋಡಗಳು ದಟ್ಟೈಸಿದವು. ಕುಂಭದ್ರೋಣ ಮಳೆಗೆ ಹಳ್ಳಕೊಳ್ಳಗಳಲ್ಲದೆ ಕೆಳಪ್ರದೇಶದಲ್ಲಿರುವ ಗುಡಿಸಲು, ವಸತಿಗಳು ಸಹ ತುಂಬಿಕೊಂಡವು.

"ನಿಮ್ಮ ಮನೆಯೆಲ್ಲ ನೆನೆದಿದೆ. ನೀವೂ ನೆನೆದಿದ್ದೀರಿ. 'ನೆನೆದವರ ಮನದಲ್ಲಿ' ಕಾರ್ಯಕ್ರಮದಲ್ಲಿ ನಿಮ್ಮ ಅಭಿಪ್ರಾಯವು ಅಮೂಲ್ಯವೆನಿಸುತ್ತದೆ. ಈಗ ನಿಮ್ಮ ಮನಸ್ಸಿನಲ್ಲಿರುವ ಭಾವನೆಗಳೇನು?" ಎಂದೆ.

"ಸರ್ಕಾರವು ಘೋಷಿಸದೆ ಕೊಟ್ಟಿರುವ ಬಿಟ್ಟಿಭಾಗ್ಯಗಳಲ್ಲಿ ಇದೂ ಒಂದು. ರಾಜಕಾಲುವೆಯನ್ನು ಮುಚ್ಚಿ ಬಹುಮಹಡಿ ಕಟ್ಟಡವನ್ನು ಕಟ್ಟಿದಾಗಿನಿಂದ ನಮಗೆ 'ಇರುವಲ್ಲೇ ಸ್ನಾನ' ಭಾಗ್ಯ ಒದಗಿದೆ. ಇದರಲ್ಲಿ ಒಂದು ಸಂತಸದ ಸಂಗತಿ, ಒಂದು ಬೇಸರದ ಸಂಗತಿಗಳೂ ಇವೆ. ನಮ್ಮೊಡನೆಯೇ ನಮ್ಮ ಮನೆಯ ಪೀಠೋಪಕರಣಗಳು, ಹಾಸಿಗೆ ದಿಂಬುಗಳಿಗೂ ಸ್ನಾನವಾಗುವುದು ಬೇಸರದ ಸಂಗತಿ. ನಮ್ಮ ಮನೆಯ ನಾಯಿಗೆ ಸ್ನಾನ ಮಾಡಿಸುವುದೆಂದರೆ ಹರಸಾಹಸ. ಹೀಗೆ ಮಳೆನೀರು ನುಗ್ಗಿದಾಗ ಅದು ಶ್ರಮವಿಲ್ಲದೆಯೇ ನೆರವೇರುವುದು ಸಂತಸದ ಸಂಗತಿ" ಎಂದನೊಬ್ಬ ಮುಳುಗುಮನೆಯವ.

"ಇಲ್ಲಿಂದ ಒಂದು ಕಿಲೋಮೀಟರ್ ದೂರದಲ್ಲಿ ಕೆರೆಯೊಂದಿದೆ. ಅದರ ತೂಬನ್ನು ಆಗಾಗ್ಗೆ ಸ್ವಲ್ಪ ಸಮಯ ತೆಗೆದು ನಮ್ಮ ಬಡಾವಣೆಗೆ ನೀರನ್ನು ಹರಿಸಿದರೆ ವರ್ಷವಿಡೀ ನಾವು ನೆನೆಯಲು ಅನುಕೂಲವಾಗುತ್ತದೆ. ಅದರಿಂದ ಮಳೆಯಿಲ್ಲದ ತಿಂಗಳುಗಳಲ್ಲಿ ನಾವು ಬಳಸಬೇಕಾದ ಸೆಂಟಿನ ಖರ್ಚು ಉಳಿತಾಯವಾಗುತ್ತದೆ, ನೆನೆದವರ ಮನದಲ್ಲಿ ಉಳಿತಾಯದ ಸಂತೋಷ ಮೂಡುತ್ತದೆ" ಎಂದ ಮತ್ತೊಬ್ಬ ಮುಳುಗುಗೃಹಸ್ಥ.

"ಸೆಲ್ಫಿ ಏಕೆ ತೆಗೆದುಕೊಳ್ಳಲಿಲ್ಲವಯ್ಯಾ? ಬೇರೆಯವರ ಅವಸ್ಥೆಯನ್ನು ಸೆಲ್ಫಿಯಲ್ಲಿ ಸೆರೆಹಿಡಿದು ರೀಲ್ಸ್ ಮಾಡುವ ನಿಮಗೆ ನಾವು ನೆನೆದಷ್ಟೂ ಖುಷಿಯೇ. ಹಿಡ್ಕೋ ಈ ಬಕೆಟ್ಟನ್ನ, ತುಂಬಿದ ನೀರನ್ನು ಆಚೆ ಸುರಿ ಬಾ" ಎಂದನೊಬ್ಬ ಹಿರೀಕ.

ಆತನಿಂದ ತಪ್ಪಿಸಿಕೊಂಡು ಕೊಳಕು ನೀರಿನಲ್ಲಿಯೇ ಈಜುತ್ತಿದ್ದ ಪೋರನನ್ನು 'ನೆನೆದವನ ಮನದಲ್ಲಿ ಏನೇನು ನಡೆಯುತ್ತಿದೆ?" ಎಂದು ಕೇಳಿದೆ.

"ನಾನು ತುಂಬಾ ಸಾಹುಕಾರ ಅನ್ನಿಸ್ತಿದೆ" ಎಂದನಾ ಪೋರ.

"ಏಕೆ?"

"ಎಲ್ಲರೂ ಮನೆಯಿಂದ ಸ್ವಿಮಿಂಗ್ ಪೂಲ್ಗೆ ಹೋಗುತ್ತಾರೆ. ನನ್ನ ವಿಷಯದಲ್ಲಿ ನಾನಿರುವ ಮನೆಗೇ ಸ್ವಿಮಿಂಗ್ ಪೂಲ್ ಬರುತ್ತದೆ! ಫೀಸಿನ ಕೋಟಲೆ ಇಲ್ಲ, ಟೈಮಿಂಗಿನ ಹಂಗಿಲ್ಲ. ದಿಸ್ ಈಸ್ ಲೈಫ್" ಎನ್ನುತ್ತಾ ಈಜಿ ದೂರ ಸರಿದನವ.

ಏರಿಯಾದ ಬುದ್ಧಿಜೀವಿಗೂ ಇದೇ ಪ್ರಶ್ನೆಯನ್ನು ಒಗೆದೆ. "ಇದನ್ನು ಪುಲಕೇಶಿ ನಗರ ಎಂದು ಕರೆಯುತ್ತಿದ್ದಾರೆ. ಕೂಡಲೆ ಇದರ ಹೆಸರನ್ನು ಬದಲಿಸಬೇಕು" ಎಂದನವ.

"ನೆನೆದಾಗ ನಿಮ್ಮ ಮನದಲ್ಲಿ ಬರುವ ಆಲೋಚನೆ ಇದೇ ಏನು?"

"ಹೌದು. ಮನೆಗೆ ನೀರು ನುಗ್ಗಿದರೂ ಪ್ರತಿಭಟಿಸದ ಜನರಿರುವ ಬಡಾವಣೆಗೆ ಪುಲಕೇಶಿಯಂತಹ ವೀರನ ಹೆಸರು ಸರಿಯಲ್ಲ, ಪುಕ್ಕಲೇಶಿ ನಗರ ಎಂದೋ, ಮಳೆಗಾಲದ ಬಂದೊಡನೆ ಎಲ್ಲರೂ ಈಜಲೇಬೇಕಾದ್ದರಿಂದ ಈಜೀಪುರ ಎಂದೋ ಹೆಸರಿಸುವುದು ಸೂಕ್ತ" ಎಂದನವ.

ಮನೆಗೆ ಬಂದೆ. "ನೆನೆದವರ ಮನದಲ್ಲಿ ಏನಿರುತ್ತದೆಂದು ನಿನ್ನ ಅಭಿಪ್ರಾಯ?" ಎಂದು ಮಡದಿಯನ್ನು ಕೇಳಿದೆ.

"ಮತ್ತೆ ನೆನೆಯಬೇಕೆಂಬ ಕಾತುರ ಇರುತ್ತದೆ. ಮೂರು ದಿನದಿಂದ ಕಾರ್ಪೊರೇಷನ್ ನೀರು ಬಂದಿಲ್ಲ, ಸಂಪ್ ಖಾಲಿ ಇದೆ. ವಾಟರ್ ಸಪ್ಲೈ ಡಿಪಾರ್ಟ್ಮೆಂಟಿಗೆ ಹೋಗಿ ಟ್ಯಾಂಕರನ್ನು ಹಿಡಿದುಕೊಂಡು ಬನ್ನಿ, ಮಿಂದ ನಂತರ ನಿಮ್ಮ ಪ್ರಶ್ನೆಗೆ ಉತ್ತರಿಸುತ್ತೇನೆ" ಎಂದಳು ಮಡದಿ.

ಜಲಮಂಡಳಿಗೆ ಬಂದೆ. ಎಲ್ಲೋ ಹೋಗಿರುವ ಟ್ಯಾಂಕರ್ ಇನ್ನೂ ಬಂದಿಲ್ಲ. ಮೂರು ಗಂಟೆಗಳಿಂದ ಬಿರುಬಿಸಿಲಿನಲ್ಲಿ ಬೆವೆತು ನೆನೆದಿದ್ದೇನೆ. ಬೆವರಿನಿಂದ ನೆನೆದವನ ಮನದಲ್ಲಿ ಮೂಡುತ್ತಿರುವ ಪದಗಳನ್ನು ಶಿಷ್ಟಾಚಾರದ ಕಾರಣ ಬರೆಯಲಾರೆ, ಬರೆಯಲಾರೆ, ಬರೆಯಲಾರೆ.


ಪೆಟ್ರೋಲ್ ಬೆಲೆಯೇರಿಕೆ :ಇಂಧನ ಬಿಕ್ಕಟ್ಟು ವಿವಿಧ ರಾಷ್ಟ್ರಗಳಲ್ಲಿ

▸ ನಾರಾಯಣ ಯಾಜಿ



ಶುಕ್ರವಾರ ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಲೀಟರಿಗೆ ಮೂರು ರೂಪಾಯಿ ಏರಿಸಿದ ಸಂಗತಿ ಅನಿರೀಕ್ಷಿತವೇನೂ ಆಗಿರಲಿಲ್ಲ. ಫೆಬ್ರವರಿ ತಿಂಗಳ ಕೊನೆಯಲ್ಲಿ ಇರಾನಿನ ಮೇಲೆ ಅಮೆರಿಕಾದ ಪ್ರವಾಹ ನಂತರ ಹಾರ್ಮೋಜ್ ಜಲಸಂಧಿಯ ಬಿಕ್ಕಟ್ಟು ಕೇವಲ ಭಾರತಕ್ಕಲ್ಲ, ಜಗತ್ತಿಗೇ ಒಕ್ಕರಿಸಿದೆ. ಇರಾನ್ ಈ ಜಲಸಂಧಿಯ ಮೇಲೆ ತನ್ನ ಹಿಡಿತವನ್ನು ಬಿಗಿಮಾಡಿದೆ. ಉತ್ಸಾಹದಿಂದ ಯುದ್ಧಕ್ಕೆ ಮುನ್ನುಗ್ಗಿದ ಟ್ರಂಪಣ್ಣ ಈಗ ಯುದ್ಧವನ್ನು ನಿಲ್ಲಿಸುವ ಉಪಾಯಕ್ಕಾಗಿ ಚೈನಾಕ್ಕೆ ಹೋಗಿದ್ದಾರೆ. ಜಗತ್ತಿನ ಎಲ್ಲಾ ದೇಶಗಳಿಗೂ ಈ ಯುದ್ಧ ನಿಂತರೆ ಸಾಕಾಗಿದೆ. ಯುದ್ಧ ನಿಂತರೂ ಸಹ ಪರಿಸ್ಥಿತಿ ಸುಧಾರಿಸಲು ಇನ್ನೂ ಒಂದು ವರ್ಷಗಳವರೆಗೆ ಬೇಕಾಗಬಹುದೆಂದು ಅಂತಾರಾಷ್ಟ್ರೀಯ ರಾಜತಾಂತ್ರಿಕರು ಚಿಂತಿತರಾಗಿದ್ದಾರೆ. ಜಾಗತಿಕವಾಗಿ ಶೇ.20ರಷ್ಟು ತೈಲ ಸಾಗಣೆಯ ಹಾರ್ಮೋಜ್ ಜಲಸಂಧಿಯನ್ನು ತೆರವುಗೊಳಿಸುವುದು ಹೇಗೆ ಎನ್ನುವುದೇ ಇಂದು ಜಗತ್ತನ್ನು ಕಾಡುತ್ತಿರುವ ಪ್ರಶ್ನೆ. ಯುದ್ಧ ಪ್ರಾರಂಭವಾಗುವ ಮೊದಲು ಕಚ್ಚಾ ತೈಲದ ಬೆಲೆ ಬ್ಯಾರೆಲ್ಲಿಗೆ 65 ರಿಂದ 70 ಡಾಲರಿನ ಆಸುಪಾಸಿನಲ್ಲಿದ್ದದ್ದು ಇದೀಗ ಒಮ್ಮೆಲೇ 110 ಡಾಲರ್ ದಾಟಿದೆ. ಯುದ್ಧಕ್ಕಿಂತ ಮೊದಲು ರಷ್ಯಾ ಭಾರತಕ್ಕೆ ಮಾರುಕಟ್ಟೆ ದರಕ್ಕಿಂತ ಕಡಿಮೆ ದರದಲ್ಲಿ ತೈಲವನ್ನು ನೀಡುತ್ತಿತ್ತು. ಇಷ್ಟೆಲ್ಲ ಸಂಕಟದ ನಡುವೆಯೂ ಜಗತ್ತಿನಲ್ಲಿ ಭಾರತ ಮಾತ್ರ ಜನಸಾಮಾನ್ಯರಿಗೆ ಹೊರೆಯಾಗದಂತೆ ಪೆಟ್ರೋಲಿನ ಬೆಲೆಯನ್ನು ಏರಿಸಿರಲಿಲ್ಲ. ಈ ನಡುವೆ ಯುಪಿಎ ಅವಧಿಯಲ್ಲಿ ಪೆಟ್ರೋಲ್ ಬೆಲೆಯೇರಿಕೆಯನ್ನು ತಡೆಯುವ ಹಿನ್ನೆಲೆಯಲ್ಲಿ ತೈಲ ಕಂಪನಿಗೆ ನೀಡಲಾದ ತೈಲ ಬಾಂಡ್ 1.34 ಲಕ್ಷ ಕೋಟಿ ರೂಪಾಯಿಯನ್ನು ಬಡ್ಡಿ ಸೇರಿಸಿ 2.36 ಲಕ್ಷ ಕೋಟಿ ರೂಪಾಯಿಯನ್ನು ಈ ವರ್ಷದ ಮಾರ್ಚ್ ತಿಂಗಳಲ್ಲಿ ತೈಲ ಕಂಪನಿಗೆ ಮರುಪಾವತಿ ಮಾಡುವ ಒತ್ತಡಕ್ಕೂ ಸರ್ಕಾರ ಸಿಲುಕಿತ್ತು. ಈ ಮೊತ್ತವನ್ನು ಸಂಪೂರ್ಣವಾಗಿ ಮರುಪಾವತಿ ಮಾಡಲಾಗಿದೆ ಎಂದು ತಾ. 12.03.2026 ರಂದು ರಾಜ್ಯಸಭೆಯಲ್ಲಿ ಇಂಧನ ಖಾತೆ ರಾಜ್ಯ ಸಚಿವ ಸುರೇಶ ಗೋಪಿ ಉತ್ತರಿಸಿದ್ದಾರೆ. ಇಷ್ಟೆಲ್ಲಾ ಸಂಕಟದ ನಡುವೆಯೂ ಸರ್ಕಾರ ಅಂತಾರಾಷ್ಟ್ರೀಯವಾಗಿ ತೈಲದ ಬೆಲೆ ಏರಿಕೆಯಾದಾಗಲೂ ಭಾರತದಲ್ಲಿ ಏರಿಸಿರಲಿಲ್ಲ. ಬದಲಾಗಿ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ 10ರೂಪಾಯಿ ಅಬಕಾರಿ ಸುಂಕವನ್ನು ಕಡಿಮೆ ಮಾಡಿತ್ತು. ಈ ಹೊರೆಯನ್ನೂ ಸಹ ತೈಲ ಕಂಪನಿಗಳೇ ಭರಿಸಿದ್ದವು ಹೊರತು ರಾಜ್ಯಸರ್ಕಾರಕ್ಕೆ ಇದರಿಂದ ಏನೂ ತೊಂದರೆ ಆಗಿರಲಿಲ್ಲ. ಜೊತೆಗೆ ಜಾಗತಿಕವಾಗಿ ಸುಮಾರು 3000 ಕಾರ್ಗೋ ಹಡಗುಗಳು ಪ್ರತಿ ತಿಂಗಳೂ ಹಾರ್ಮೋಜ್ ಜಲಸಂಧಿಯಿಂದ ದಾಟುತ್ತಿದ್ದರೆ ಈ ಸಂಖ್ಯೆ ಎಪ್ರಿಲ್ ತಿಂಗಳಲ್ಲಿ ಕೇವಲ 191 ತೈಲ ಟ್ಯಾಂಕರುಗಳು ಹಾರ್ಮುಜ್ ಜಲಸಂಧಿಯನ್ನು ದಾಟಿವೆ ಎಂದು CNN ವರದಿ ಮಾಡಿದೆ. ಇದರಲ್ಲಿ ಭಾರತಕ್ಕೆ 10 ಹಡಗುಗಳು ಸೇರಿವೆ. ಪರಿಣಾಮವಾಗಿ ತೈಲ ಕಂಪನಿಗಳು ಪ್ರತಿದಿನವೂ ಸುಮಾರು 1600 ಕೋಟಿ ರೂಪಾಯಿಯಷ್ಟು ನಷ್ಟವನ್ನನುಭವಿಸುತ್ತಿದ್ದವು. ಆದರೂ ತೈಲಬೆಲೆ ಮತ್ತು ಪೂರೈಕೆ ಭಾರತದಲ್ಲಿ ಸ್ಥಿರವಾಗಿತ್ತು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲ ಬೆಲೆಗಳು ಗಗನಕ್ಕೇರುತ್ತಿದ್ದಂತೆ, ಪೆಟ್ರೋಲ್ ಬೆಲೆಯು ಆಯಾ ದೇಶಗಳ ಆರ್ಥಿಕವಾಗಿ ಸವಾಲುಗಳನ್ನು ತಡೆದುಕೊಳ್ಳುವ ಶಕ್ತಿ (Symbol of the Economic resilence) ಎಷ್ಟಿದೆ ಎಂದು ಪರೀಕ್ಷಿಸುವ ಸಂಕೇತವಾಯಿತು. ಕೆಲವು ದೇಶಗಳಲ್ಲಿ ಪೆಟ್ರೋಲ್ ಬೆಲೆ ರಾತ್ರೋರಾತ್ರಿ ಏರಿಕೆಯಾದರೆ, ಇನ್ನು ಕೆಲವು ದೇಶಗಳು ತಮ್ಮ ನಾಗರಿಕರನ್ನು ರಕ್ಷಿಸಲು ಸಂಕೀರ್ಣವಾದ ಆರ್ಥಿಕ ರಕ್ಷಾಕವಚಗಳನ್ನು ಬಳಸಿಕೊಂಡವು. ಈ ಕುರಿತು ವಿವರವನ್ನು ಗಮನಿಸೋಣ. ಕೆಳಗೆ ಕೊಟ್ಟಿರುವ ಬೆಲೆಯನ್ನು ಭಾರತೀಯ ರೂಪಾಯಿಗೆ ಪರಿವರ್ತಿಸಲಾಗಿದೆ.



ಯುಎಇ

ಐತಿಹಾಸಿಕವಾಗಿ ಅಗ್ಗದ ಇಂಧನಕ್ಕೆ ಹೆಸರಾಗಿದ್ದ ಯುಎಇಯ ಸಹ ತೈಲಬೆಲೆಯನ್ನು ಏರಿಸದೇ ಇರಲು ಸಾಧ್ಯವಾಗಿಲ್ಲ. ಭಾರತೀಯ ರೂಪಾಯಿಯಲ್ಲಿ ಲೆಕ್ಕ ಹಾಕಿದಾಗ, ಅಲ್ಲಿನ ಬೆಲೆ ಸರಿಸುಮಾರು ರೂ.58.87 ರಿಂದ ರೂ.83.19ಕ್ಕೆ ಅಂದರೆ +41.31% ದಷ್ಟು ಏರಿಕೆಯಾಗಿದೆ. ಇಂದು ಯುಎಇ ಪ್ರತಿ ತಿಂಗಳು ಜಾಗತಿಕ ಮಾನದಂಡಗಳಿಗೆ ಅನುಗುಣವಾಗಿ ಬೆಲೆಗಳನ್ನು ಸರಿಹೊಂದಿಸುವುದರಿಂದ, ಇದು ಇನ್ನಷ್ಟು ಏರಿಕೆಯಾಗಬಹುದು.

ಅಮೆರಿಕದ ಅಸ್ಥಿರತೆ

ಈ ಬಿಕ್ಕಟ್ಟಿಗೆ ಅತಿ ಹೆಚ್ಚು ಏರಿಸಿದ ದೇಶವೆಂದರೆ ಅಮೆರಿಕ. ಸಂಪೂರ್ಣವಾಗಿ ಮಾರುಕಟ್ಟೆ ಆಧಾರಿತ ವ್ಯವಸ್ಥೆಯನ್ನು ಹೊಂದಿರುವ ಅಮೆರಿಕದಲ್ಲಿ ಚಿಲ್ಲರೆ ಮಾರಾಟದ ಬೆಲೆಗಳು ಸುಮಾರು 60% ರಷ್ಟು ಏರಿಕೆಯಾದವು. ಅಂದರೆ ಬೆಲೆಯು ರೂ.61.79 ರಿಂದ ಗರಿಷ್ಠ ರೂ.98.53 ಕ್ಕೆ ಜಿಗಿದಿದೆ.

ಸಬ್ಸಿಡಿಯ ರಕ್ಷಣೆ ಕೊಟ್ಟ ಸೌದಿ ಅರೇಬಿಯಾ

ಮತ್ತೊಂದೆಡೆ ಸೌದಿ ಅರೇಬಿಯಾ ಸಂಪೂರ್ಣ ವಿಭಿನ್ನವಾದ ಹಾದಿಯನ್ನು ಅನುಸರಿಸಿತು. ಅಲ್ಲಿನ ಸರ್ಕಾರವು ಇಂಧನಕ್ಕೆ ಭಾರಿ ಸಬ್ಸಿಡಿ ನೀಡುವ ಮೂಲಕ ತನ್ನ ದೇಶದ ಆರ್ಥಿಕತೆಯನ್ನು ಜಾಗತಿಕ ಏರಿಳಿತಗಳಿಂದ ಸಂಪೂರ್ಣವಾಗಿ ಮುಕ್ತಗೊಳಿಸಿತು. ಅಲ್ಲಿ ಪೆಟ್ರೋಲ್ ಬೆಲೆ ರೂ.51.87 ಕ್ಕೇ ಸ್ಥಿರವಾಗಿತ್ತು. ಈ ಮಾದರಿಯು ಕೇವಲ ಬೃಹತ್ ಪ್ರಮಾಣದಲ್ಲಿ ತೈಲ ರಫ್ತು ಮಾಡುವ ದೇಶಗಳಿಗೆ ಮಾತ್ರ ಸಾಧ್ಯ.

ಚೀನಾದ 'ಹೈಬ್ರಿಡ್' ಮಾದರಿ ಮತ್ತು ಬೆಲೆ ನಿಯಂತ್ರಣ

ಚೀನಾವು ಅಮೆರಿಕದಂತೆ ಸಂಪೂರ್ಣ ಮುಕ್ತ ಮಾರುಕಟ್ಟೆಯನ್ನಾಗಲಿ ಅಥವಾ ಸೌದಿ ಅರೇಬಿಯಾದಂತೆ ಸಂಪೂರ್ಣ ಸಬ್ಸಿಡಿಯನ್ನಾಗಲಿ ಅವಲಂಬಿಸಿಲ್ಲ. ಬದಲಾಗಿ, ಇದು 'ಪ್ರೈಸ್ ಸೀಲಿಂಗ್' (ಬೆಲೆ ಏರಿಕೆಯ ಗರಿಷ್ಠ ಮಿತಿ) ಎಂಬ ತಂತ್ರವನ್ನು ಬಳಸುತ್ತದೆ. ಯುದ್ಧಕ್ಕೂ ಮೊದಲು ಚೀನಾದಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ ಸರಿಸುಮಾರು 8.20 ಯುವಾನ್ (ಭಾರತೀಯ ರೂಪಾಯಿಯಲ್ಲಿ ಸುಮಾರು 95) ಇತ್ತು. ಯುದ್ಧದ ನಂತರ ಇದು 9.15 ಯುವಾನ್‌ಗೆ (ಸುಮಾರು ರೂ.106.14) ತಲುಪಿತು. ಅಂದರೆ ಬೆಲೆಯಲ್ಲಿ ಸುಮಾರು 11.58% ರಷ್ಟು ಏರಿಕೆಯಾಯಿತು.

ಚೈನಾದ ಬೆಲೆ ನಿಯಂತ್ರಣ ತಂತ್ರ

ಜಾಗತಿಕವಾಗಿ ಕಚ್ಚಾ ತೈಲದ ಬೆಲೆ ಒಂದು ನಿರ್ದಿಷ್ಟ ಮಟ್ಟವನ್ನು (ಬ್ಯಾರೆಲ್‌ಗೆ 130) ದಾಟಿದಾಗ, ಚೀನಾ ಸರ್ಕಾರವು ತನ್ನ ದೇಶದ ಚಿಲ್ಲರೆ ಮಾರಾಟದ ಬೆಲೆಗಳನ್ನು ಏರಿಸದಂತೆ ನಿರ್ಬಂಧ ಹೇರುತ್ತದೆ. ಅಲ್ಲದೆ, ತನ್ನ ಬೃಹತ್ 'ಸ್ಟ್ರಾಟೆಜಿಕ್ ಪೆಟ್ರೋಲಿಯಂ ರಿಸರ್ವ್'ನಿಂದ ತೈಲವನ್ನು ಬಿಡುಗಡೆ ಮಾಡುವ ಮೂಲಕ ಬೆಲೆಯನ್ನು ನಿಯಂತ್ರಣದಲ್ಲಿಡುತ್ತದೆ.

ಇನ್ನು ಪಾಕಿಸ್ತಾನದಲ್ಲಿ ಪೆಟ್ರೋಲ್ ಬೆಲೆ ಪಾಕಿಸ್ತಾನದ ರೂಪಾಯಿಯಲ್ಲಿ ರೂ. 414 ರೂಪಾಯಿ ದಾಟಿದ್ದು ಭಾರತೀಯ ರೂಪಾಯಿಯಲ್ಲಿ ಅದರ ಮೌಲ್ಯ 179 ರೂಪಾಯಿಗಳಾಗುತ್ತವೆ. ಇನ್ನೊಂದು ಬಹುಮುಖ್ಯವಾದ ವಿಷಯವೆಂದರೆ ಪೆಟ್ರೋಲಿನ ಮೇಲೆ ಲೀಟರೊಂದಕ್ಕೆ ಕೇಂದ್ರ ಅಬಕಾರಿ ಸುಂಕ ರೂ.19.90 (ಸ್ಥಿರ) ವಿದ್ದರೆ ರಾಜ್ಯಗಳು ವಿಧಿಸುವ ಸುಂಕ ಸುಮಾರು ರೂ.15.00–ರೂ.22.00ರಷ್ಟಿದೆ. ಹಾಗಾಗಿ ಬೆಲೆಯೇರಿಕೆಯಲ್ಲಿ ರಾಜ್ಯಗಳ ಪಾಲೂ ಇವೆ ಎನ್ನುವುದನ್ನು ಮರೆಯಬಾರದು.

ಜಾಗತಿಕವಾಗಿ ಈ ಎಲ್ಲ ದೇಶಗಳು ಬೆಲೆಯೇರಿಕೆಯ ಸವಾಲುಗಳನ್ನು ಎದುರಿಸಲು ಸಾಧ್ಯವಾಗದೇ ಬೆಲೆಯೇರಿಕೆಯ ಮಾರ್ಗವನ್ನು ಹಿಡಿದಿರುವುದನ್ನು ಗಮನಿಸಬಹುದು. ಹೆಚ್ಚಿನ ಕಡೆ ಈ ಏರಿಕೆ ಶೇ.40ಕ್ಕಿಂತಲೂ ಹೆಚ್ಚಿರುವಾಗ ಭಾರತದಲ್ಲಿ ಮಾತ್ರ ಕೇವಲ ಶೇ.3.17 ರಷ್ಟು ಏರಿಕೆಯಾಗಿರುವುದಕ್ಕೆ ಕಾರಣ ಈ ದೇಶದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಆಪತ್ಕಾಲಕ್ಕೆಂದು ಪೆಟ್ರೋಲಿನ ದಾಸ್ತಾನನ್ನು ಸುಮಾರು 75 ದಿನಗಳ ತನಕ ಇರುವಂತೆ ನೋಡಿಕೊಂಡಿರುವುದು.

ಇದೀಗ ನಮ್ಮ ದೇಶದಲ್ಲಿ 69ದಿನಗಳ ತನಕ ಸಾಲುವಷ್ಟು ಪೆಟ್ರೋಲ್ ಮತ್ತು 45 ದಿನಗಳ ತನಕ ಸಾಕಾಗುವಷ್ಟು ಅಡುಗೆ ಅನಿಲದ ದಾಸ್ತಾನು ಇರುವುದು ಸಂತಸದ ಮತ್ತು ಸಮಾಧಾನಕರ ಸಂಗತಿ. ಇದನ್ನು ಅತ್ಯಂತ ಜತನದಿಂದ ಉಪಯೋಗಿಸಬೇಕಾದ ಜವಾಬ್ದಾರಿ ಸರ್ಕಾರದ ಮೇಲಿದೆ. ಈ ಕಾರಣದಿಂದ ಸರ್ಕಾರ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಅವಲಂಬಿಸುವ ಸಹಿತವಾಗಿ ಮನೆಯಿಂದಲೇ ಕೆಲಸ ಮೊದಲಾದ ಸಲಹೆಗಳನ್ನು ನೀಡಿರುವುದು. ಅನಿವಾರ್ಯ ಪರಿಸ್ಥಿತಿಯಲ್ಲಿ ಜನಸಾಮಾನ್ಯರಿಗೆ ಹೊರೆಯಾಗದಂತೆ ಅಲ್ಪ ಪ್ರಮಾಣದಲ್ಲಿ ಬೆಲೆಯೇರಿಸಿದ ಸರ್ಕಾರದ ನಿಲುವು ಈ ಕಠಿಣ ಪರಿಸ್ಥಿತಿಯಲ್ಲಿ ಅನಿವಾರ್ಯ ಕೂಡ.

ಪತ್ರ ಮಿತ್ರ

ನುಡಿದಂತೆ ನಡೆವ ಪ್ರಧಾನಿ

ನಮ್ಮ ದೇಶದಲ್ಲಿ ಅತ್ಯಂತ ಸುಲಭದ, ಯಾವುದೇ ರಿಸ್ಕ್ ಇಲ್ಲದ ಕೆಲಸ ಅಂದರೆ ಉಪದೇಶ ಮಾಡುವುದು. ಹಾಗೆ ಮಾಡಬೇಡಿ, ಹೀಗೆ ಮಾಡಬೇಡಿ ಮುಂತಾಗಿ ಸಲಹೆ ನೀಡುವುದು ಸುಲಭ. ಈ ಎಲ್ಲ ಉಪದೇಶಗಳು ನುಡಿದವರ ನಡೆಯಲ್ಲಿ ಇದ್ದೀತೆ ಅಂತ ಕೇಳಿದರೆ ಸರಿಯಾದ ಉತ್ತರ ಸಿಗಲಿಕ್ಕಿಲ್ಲ. ನಮ್ಮ ಹಿರಿಯರೆನ್ನುವವರು, ಅಧಿಕಾರದಲ್ಲಿರುವವರು, ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಗಳೆನಿಸಿಕೊಂಡವರಲ್ಲಿ ಅನೇಕರು ಕೇವಲ ನುಡಿಯಲ್ಲಷ್ಟೇ ಸುಭಗರು. ಆಚರಣೆಯಲ್ಲಲ್ಲ.

ಆದರೆ, ನಮ್ಮ ಪ್ರಧಾನಿ ಮೋದಿಯವರು ನುಡಿದಂತೆ ನಡೆದುಕೊಳ್ಳುತ್ತಿದ್ದಾರೆ ಎಂಬುದು ಸಂತೋಷಕರ ಮತ್ತು ಸ್ಫೂರ್ತಿದಾಯಕ. ಕೆಲ ದಿನಗಳ ಹಿಂದಷ್ಟೇ ಪಂಚಸೂತ್ರದ ಜಪ ಪಠಿಸಿದಾಗ, ಮುಖ್ಯವಾಗಿ ಕಂಡಿದ್ದು ಮಿತ ಇಂಧನ ಬಳಕೆ. ಸದ್ಯದ ಪರಿಸ್ಥಿತಿಯಲ್ಲಂತೂ ಇದು ತೀರಾ ಆವಶ್ಯಕ. ಅದನ್ನೇ ಮೋದಿಯವರೂ ಅನುಸರಿಸುತ್ತಿದ್ದಾರೆ.ತಮ್ಮ ಬೆಂಗಾವಲು ವಾಹನಗಳ ಸಂಖ್ಯೆ ಕಡಿಮೆ ಮಾಡಿದ್ದಾರೆ. ನೋಡಲು ಇದೇನು ಮಹಾ ಅಂತ ಅನಿಸಿದರೂ, ಅವರ ಈ ನಡೆ ಕೇಂದ್ರ ಮತ್ತು ರಾಜ್ಯ ಸಚಿವರ ಮೇಲೂ ಪರಿಣಾಮ ಬೀರಿದೆ. ಎನ್‌ಡಿಎ ಆಡಳಿತದ ರಾಜ್ಯಗಳ ಮುಖ್ಯಮಂತ್ರಿಗಳೂ ಇದೇ ದಾರಿ ತುಳಿಯಲು ನಿರ್ಧರಿಸಿದ್ದಾರೆ. ಇದನ್ನೇ, ಇನ್ನು ಮುಂದೆ, ದೇಶದ ಹಲವಾರು ಉದ್ಯಮಿಗಳು, ಶ್ರೀಮಂತರೂ ಅನುಕರಿಸಬಹುದು. ಮೋದಿ ಕರೆಯ ಬಳಿಕ ಕೆಲವರು ಎಲೆಕ್ಟ್ರಿಕ್ ವಾಹನಗಳನ್ನು ಖರೀದಿಸುತ್ತಿರುವುದು ಕಂಡು ಬಂದಿದೆ. ಇದು ಸಣ್ಣ ವಿಷಯ ಅಲ್ಲವೇ ಅಲ್ಲ. ಹೇಳುವುದೊಂದು; ಮಾಡುವುದು ಇನ್ನೊಂದು ಎಂಬುದು ಹೆಚ್ಚಿನವರ ಜಾಯಮಾನವಾಗಿರುವಾಗ ಪ್ರಧಾನಿ ಮೋದಿಯವರು ಆದರ್ಶ ನಡೆ ಇಟ್ಟಿದ್ದಾರೆ.

ಇಂದು ವಿಶ್ವವೇ ಒಂದು ರೀತಿಯ ಅಸ್ಥಿರತೆಯಲ್ಲಿದೆ. ಅದಕ್ಕೆ ಕಾರಣಗಳನ್ನೂ ವಿವರಿಸಬೇಕಾಗಿಲ್ಲ. ಇಂತಹ ಕಠಿಣ ಸಮಯದಲ್ಲಿ ಕೆಲ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುವುದೂ ದೇಶದ ಹಿತ ದೃಷ್ಟಿಯಿಂದ ಒಳಿತೇ. ಪ್ರಧಾನಿಯವರ ದಾರಿಯನ್ನು ದೇಶವಾಸಿಗಳೆಲ್ಲ ತುಳಿದರೆ, ಭಾರತವು ಈಗಿನ ಬಿಕ್ಕಟ್ಟನ್ನು ಸಮರ್ಥವಾಗಿ ನಿಭಾಯಿಸುವುದರಲ್ಲಿ ಸಂಶಯವೇ ಇಲ್ಲ !

–ಶಂಕರನಾರಾಯಣ ಭಟ್, ಮಾಡಗೇರಿ

ರಾಜಕಾರಣಿಗಳ ಸ್ಪಂದನೆ ಇರಲಿ

ಇತ್ತೀಚಿನ ದಿನಗಳಲ್ಲಿ ರಾಜಕಾರಣಿಗಳ ಹೇಳಿಕೆಗಳು ಸಾಮಾಜಿಕ ಮಾಧ್ಯಮಗಳಲ್ಲಿ ಕ್ಷಣಾರ್ಧದಲ್ಲೇ ಲಕ್ಷಾಂತರ ಜನರಿಗೆ ತಲುಪುತ್ತಿವೆ. ಆ ಹೇಳಿಕೆಗಳಿಗೆ ಜನರು ಸಕಾರಾತ್ಮಕವಾಗಿಯೂ, ನಕಾರಾತ್ಮಕವಾಗಿಯೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ವಾಸ್ತವವಾಗಿ, ಈ ಪ್ರತಿಕ್ರಿಯೆಗಳು ಜನಮನದ ನೇರ ಪ್ರತಿಬಿಂಬವಾಗಿದ್ದು, ಆಡಳಿತದ ಯಶಸ್ಸು– ವಿಫಲತೆಗಳನ್ನು ಅಳೆಯುವ ಕನ್ನಡಿ ಎನ್ನಬಹುದು.

ಆದರೆ ವಿಷಾದಕರ ಸಂಗತಿಯೇನೆಂದರೆ, ಬಹುತೇಕ ರಾಜಕಾರಣಿಗಳು ಅಥವಾ ಅವರ ಮಾಧ್ಯಮ ಕಾರ್ಯದರ್ಶಿಗಳು ಜನರ ಕಾಮೆಂಟ್‌ಗಳನ್ನು ಗಮನಿಸಿ ಪ್ರತಿಕ್ರಿಯಿಸುವ ಮನೋಭಾವ ತೋರಿಸುತ್ತಿಲ್ಲ. ಪ್ರೆಸ್ ಮೀಟ್‌ಗಳಲ್ಲಿ ಹೇಳಿಕೆ ನೀಡುವುದು ಮಾತ್ರವೇ ತಮ್ಮ ಕರ್ತವ್ಯ ಎಂದು ಅವರು ಭಾವಿಸಿದಂತಾಗಿದೆ.

ನೇರವಾಗಿ ತಮ್ಮ ಸಮಸ್ಯೆಗಳನ್ನು ಹೇಳಲು ಸಾಧ್ಯವಾಗದ ಅನೇಕ ಸಾಮಾನ್ಯ ಜನರು ಸಾಮಾಜಿಕ ಮಾಧ್ಯಮದ ಕಾಮೆಂಟ್‌ಗಳ ಮೂಲಕವೇ ತಮ್ಮ ನೋವು, ಅಸಮಾಧಾನ ಮತ್ತು ನಿರೀಕ್ಷೆಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಆದ್ದರಿಂದ ರಾಜಕಾರಣಿಗಳು ತಮ್ಮ ಹೇಳಿಕೆಗಳಿಗೆ ಬಂದ ಪ್ರತಿಕ್ರಿಯೆಗಳನ್ನು ಕೇವಲ ಟೀಕೆ ಎಂದು ತಳ್ಳಿಹಾಕದೇ, ಜನರ ನಾಡಿ ಮಿಡಿತವನ್ನು ಅರಿಯುವ ಅವಕಾಶವಾಗಿ ನೋಡಬೇಕು.

ಜನರ ಅಭಿಪ್ರಾಯಗಳನ್ನು ಆಲಿಸಿ, ಅವುಗಳ ಆಧಾರದ ಮೇಲೆ ತಮ್ಮ ಕಾರ್ಯವೈಖರಿಯನ್ನು ಪರಿಶೀಲಿಸಿ ತಿದ್ದಿಕೊಳ್ಳುವ ರಾಜಕಾರಣಿಗಳೇ ನಿಜವಾದ ಜನನಾಯಕರು ಆಗಲು ಸಾಧ್ಯ. ಸಾಮಾಜಿಕ ಮಾಧ್ಯಮವನ್ನು ಕೇವಲ ಪ್ರಚಾರದ ವೇದಿಕೆಯಾಗಿಯೇ ಅಲ್ಲ, ಜನಸಂಪರ್ಕ ಮತ್ತು ಆತ್ಮಪರಿಶೀಲನೆಯ ಸಾಧನವಾಗಿಯೂ ಬಳಸುವ ಅಗತ್ಯ ಇಂದು ಹೆಚ್ಚಾಗಿದೆ.

– ಜಿ.ನಾಗೇಂದ್ರ ಕಾವೂರು, ಸಂಡೂರು

ಟ್ರಂಪ್‌ನ್ನು ನಂಬಬಾರದು

ಒಬ್ಬ ಜಾಗತಿಕ ಮುಖಂಡ ಹೇಗಿರಬಾರದೋ ಅದಕ್ಕೆ ಉದಾಹರಣೆಯಂತಿದ್ದಾರೆ ಟ್ರಂಪ್. ಟ್ರಂಪ್ ತಮ್ಮ ವೈಯಕ್ತಿಕ ಲಾಭಕ್ಕಾಗಿ ತಮ್ಮ ಸ್ನೇಹಿತರನ್ನೆ ಬಲಿಕೊಡಲು ಸಿದ್ಧರು. ಭಯೋತ್ಪಾದಕ ರಾಷ್ಟ್ರ ಪಾಕಿಸ್ತಾನಕ್ಕೆ ಅವರು ನೀಡುತ್ತಿರುವ ಪ್ರಾಮುಖ್ಯತೆ ಇದನ್ನು ಸಾಬೀತುಪಡಿಸುತ್ತದೆ. ಇದೇವೇಳೆ, ತಮ್ಮ ಲಾಭಕ್ಕಾಗಿ ಅವರು ತೈವಾನನ್ನು ಕಬಳಿಸಲು ಚೀನಾಕ್ಕೆ ಅವಕಾಶ ಮಾಡಿಕೊಡುವ ಸಾಧ್ಯತೆಯೂ ಇದೆ. ಈವರೆಗೆ ತೈವಾನಿನ ರಕ್ಷಣೆಗೆ ಸದಾ ಸಿದ್ಧ ಎಂದು ಅಮೆರಿಕವು ಹೇಳುತ್ತಿದ್ದರೆ, ತೈವಾನಿಗೆ ಚೀನಾದ ವಿರುದ್ಧ ರಕ್ಷಣೆಗಾಗಿ ಸಾಕಷ್ಟು ಶಸ್ತ್ರಾಸ್ತ್ರಗಳನ್ನು ಒದಗಿಸುತ್ತಿದ್ದರೆ, ಟ್ರಂಪ್ ಅದೆಲ್ಲವನ್ನು ಈಗ ಬದಿಗೆ ಸರಿಸುತ್ತಿರುವಂತಿದೆ. ಚೀನಾಕ್ಕೆ ಭೇಟಿ ನೀಡಿ ಬಂದ ಮೇಲೆ ಅವರ ವರಸೆಯೇ ಬದಲಾಗಿದ್ದು, ತೈವಾನ್ ಮೇಲೆ ಚೀನಾ ದಾಳಿ ಮಾಡಿದರೆ ತೈವಾನ್ ರಕ್ಷಣೆಗೆ ಅಮೆರಿಕ ಧಾವಿಸುವ ಸಾಧ್ಯತೆಗಳು ಕ್ಷೀಣವಾಗಿರುವಂತೆ ತೋರಿಬರುತ್ತಿದೆ. ಭಾರತವಂತೂ ಟ್ರಂಪ್‌ರನ್ನು ಎಂದಿಗೂ ನಂಬುವಂತಿಲ್ಲ. ಇರಾನ್ ಮೇಲಿನ ಸಮರದ ನೆಪದಲ್ಲಿ ಟ್ರಂಪ್ ತೆಗೆದುಕೊಳ್ಳುತ್ತಿರುವ ಕೆಲವು ನಿರ್ಧಾರಗಳು ಭಾರತದ ಆರ್ಥಿಕ ಪ್ರಗತಿಯನ್ನು ತಡೆಯುವ ಉದ್ದೇಶವನ್ನೂ ಹೊಂದಿರುವಂತಿದೆ.

–ಚಿದಾನಂದ ರಾವ್, ಕುಂದಾಪುರ

ಕಿರುಸುದ್ದಿ

ಹಿಜಾಬ್‌ಗೆ ಅನುಮತಿ : ಆದೇಶ ಹಿಂಪಡೆಯಲು ಸೋಮವಾರಪೇಟೆ ಬಿಜೆಪಿ ಆಗ್ರಹ

ಮಡಿಕೇರಿ : ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರು ಹಿಜಾಬ್ ಧರಿಸಲು ಅನುಮತಿ ನೀಡಿರುವ ರಾಜ್ಯ ಸರಕಾರದ ಕ್ರಮ ಖಂಡನೀಯವೆಂದು ಸೋಮವಾರಪೇಟೆ ಬಿಜೆಪಿ ಮಂಡಲದ ವಕ್ತಾರ ಬಲ್ಲಾರಂಡ ಕಂಠಿ ಕಾರ್ಯಪ್ಪ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು ಹಿಜಾಬ್ ಪ್ರಕರಣ ನ್ಯಾಯಾಲಯದಲ್ಲಿದ್ದು, ವಿಚಾರಣೆ ಪೂರ್ಣಗೊಳ್ಳುವ ಮೊದಲೇ ಸರಕಾರ ನೀಡಿರುವ ಆದೇಶ ಕಾನೂನಿಗೆ ವಿರುದ್ಧವಾಗಿದೆ. ಈ ಆದೇಶವನ್ನು ತಕ್ಷಣ ಹಿಂಪಡೆಯಬೇಕೆಂದು ಒತ್ತಾಯಿಸಿದ್ದಾರೆ.

2022ರಲ್ಲಿದ್ದ ಹಿಜಾಬ್ ನಿಷೇಧ ಆದೇಶವನ್ನು ಹಿಂಪಡೆದಿರುವ ಕಾಂಗ್ರೆಸ್ ಸರಕಾರ ಒಂದು ಸಮುದಾಯದ ಓಲೈಕೆಗಾಗಿ ವಿದ್ಯಾರ್ಥಿಗಳ ಸಮಾನತೆಯ ಹಕ್ಕನ್ನು ಕಸಿದುಕೊಳ್ಳುತ್ತಿದೆ. ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳೆಲ್ಲರೂ ಸರ್ವ ಸಮಾನರು ಮತ್ತು ಐಕ್ಯತೆಯಿಂದ ಶಿಕ್ಷಣದ ಗುರಿ ಸಾಧಿಸಬೇಕೆನ್ನುವ ಉದ್ದೇಶದಿಂದ ಸಮವಸ್ತ್ರದ ವ್ಯವಸ್ಥೆಯನ್ನು ಪಾಲಿಸಲಾಗುತ್ತಿದೆ. ಆದರೆ ಕಾಂಗ್ರೆಸ್ ಸರಕಾರ ಶಿಕ್ಷಣದ ಹಕ್ಕನ್ನು ಎತ್ತಿ ಹಿಡಿಯುವ ಕಾರಣ ನೀಡಿ ವಿದ್ಯಾರ್ಥಿಗಳ ಸಮಾನತೆಯ ಹಕ್ಕನ್ನು ಕಸಿದುಕೊಳ್ಳುತ್ತಿದೆ. ರಾಜಕೀಯ ಲಾಭಕ್ಕಾಗಿ ವಿದ್ಯಾರ್ಥಿಗಳಲ್ಲಿ ಭೇದಭಾವ ಮೂಡಿಸುತ್ತಿದೆ ಎಂದು ಆರೋಪಿಸಿದ್ದಾರೆ.

ದಾವಣಗೆರೆ ಉಪಚುನಾವಣೆಯಲ್ಲಿ ಒಂದು ಸಮುದಾಯದ ಮಂದಿ ರಾಜ್ಯ ಸರಕಾರದ ವಿರುದ್ಧ ತಿರುಗಿ ಬಿದ್ದ ಕಾರಣ ಕಾಂಗ್ರೆಸ್ ಹಿಜಾಬ್ ರಾಜಕಾರಣವನ್ನು ಆರಂಭಿಸಿದೆ. ಕಳೆದ 3 ವರ್ಷಗಳಲ್ಲಿ ಹಿಜಾಬ್ ಹಕ್ಕಿನ ಕುರಿತು ಸರಕಾರಕ್ಕಿಲ್ಲದ ಕಾಳಜಿ ಇದೀಗ ದಿಢೀರ್ ಆಗಿ ಉದ್ಭವಿಸಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೇಸರಿ ಶಾಲಿನ ಕುರಿತು ಸಚಿವ ಪ್ರಿಯಾಂಕ ಖರ್ಗೆ ಅವರು ನೀಡಿರುವ ಹೇಳಿಕೆ ಖಂಡನೀಯ. ಕೇಸರಿ ಶಾಲು ಧರಿಸುವುದು ಹಿಂದೂಗಳ ಹಕ್ಕಾಗಿದೆ. ಒಂದು ಸಮುದಾಯದ ಓಲೈಕೆಗಾಗಿ ಹಿಂದೂ ಸಮಾಜದ ಹಕ್ಕಿನ ಮೇಲೆ ಸವಾರಿ ಮಾಡುವುದನ್ನು ಬಿಜೆಪಿ ಎಂದಿಗೂ ಸಹಿಸುವುದಿಲ್ಲವೆಂದು ಕಂಠಿ ಕಾರ್ಯಪ್ಪ ತಿಳಿಸಿದ್ದಾರೆ.

ಹವಾಮಾನ ಸಂಕಷ್ಟ: ಈಗಲೇ ಕ್ರಮ ಕೈಗೊಳ್ಳಬೇಕಿದೆ

ಪುತ್ತೂರು: ಸಂತ ಫಿಲೋಮಿನಾ ಕಾಲೇಜು (ಸ್ವಾಯತ್ತ) ವತಿಯಿಂದ ಭೌತಶಾಸ್ತ್ರ ವಿಭಾಗದ ಆಶ್ರಯದಲ್ಲಿ 'ಹವಾಮಾನ ಸಂಕಷ್ಟ: ಈಗಲೇ ಕ್ರಮ ಕೈಗೊಳ್ಳಬೇಕಿದೆ' ಎಂಬ ವಿಷಯದ ಕುರಿತು ಅತಿಥಿ ಉಪನ್ಯಾಸ ಕಾರ್ಯಕ್ರಮವು ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಉಪಪ್ರಾಂಶುಪಾಲ ಡಾ. ವಿಜಯಕುಮಾರ್ ಎಂ. ವಹಿಸಿ, ಇತ್ತೀಚಿನ ಹವಾಮಾನ ಬದಲಾವಣೆಗಳು ಹಾಗೂ ಅವುಗಳಿಂದ ಉಂಟಾಗುತ್ತಿರುವ ಸಮಸ್ಯೆಗಳ ಬಗ್ಗೆ ಆತಂಕ ವ್ಯಕ್ತಪಡಿಸಿದರು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಬಂಟ್ವಾಳ ಶ್ರೀ ವೆಂಕಟರಮಣ ಸ್ವಾಮಿ ಕಾಲೇಜು ಸಹಾಯಕ ಪ್ರಾಧ್ಯಾಪಕ ಡಾ. ವಿನಾಯಕ ಕೆ.ಎಸ್. ಮಾತನಾಡಿ, ಬಿಎಸ್ಸಿ ವಿದ್ಯಾರ್ಥಿಗಳಿಗೆ ಹವಾಮಾನ ಸಂಕಷ್ಟದ ಗಂಭೀರತೆ, ಅದರ ಪ್ರಮುಖ ಕಾರಣಗಳು ಹಾಗೂ ಭವಿಷ್ಯದಲ್ಲಿ ಅದನ್ನು ನಿಯಂತ್ರಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಮಾಹಿತಿ ನೀಡಿ, ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು. ವಿಜ್ಞಾನ ವಿಭಾಗದ ಉಪನ್ಯಾಸಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಭೌತಶಾಸ್ತ್ರ ವಿಭಾಗ ಮುಖ್ಯಸ್ಥ ಡಾ. ಕೆ. ಚಂದ್ರಶೇಖರ್ ಕಾರ್ಯಕ್ರಮ ನಿರ್ವಹಿಸಿದರು.

ಮೇ 22 ರಂದು 10ನೇ ಕೊಡವ ಪುಸ್ತಕ ಪತ್ತಾಯ ಸ್ಥಾಪನೆ

ಮಡಿಕೇರಿ: ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ವತಿಯಿಂದ 10ನೇ ಕೊಡವ ಪುಸ್ತಕ ಪತ್ತಾಯವನ್ನು ಚೇರಂಬಾಣೆಯಲ್ಲಿರುವ ಬೇಂಗ್‌ನಾಡ್ ಕೊಡವ ಸಮಾಜದಲ್ಲಿ ಮೇ 22 ರಂದು ಮಧ್ಯಾಹ್ನ 2.30 ಗಂಟೆಗೆ ಸ್ಥಾಪಿಸಲಾಗುವುದು. ಅಕಾಡೆಮಿಯ ಅಧ್ಯಕ್ಷರಾದ ಅಜ್ಜಿನಿಕಂಡ ಸಿ.ಮಹೇಶ್ ನಾಚಯ್ಯ ಉದ್ಘಾಟಿಸಲಿರುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಮಾಜದ ಅಧ್ಯಕ್ಷ ಬಾಚರಣಿಯಂಡ ದಿನೇಶ್ ಗಣಪತಿ ವಹಿಸಲಿರುವರು. ಮುಖ್ಯ ಅತಿಥಿಗಳಾಗಿ ನಿವೃತ್ತ ಮುಖ್ಯೋಪಾಧ್ಯಾಯ ಅಯ್ಯಂಡ ರಾಮಕೃಷ್ಣ ಪುಸ್ತಕ ಪತ್ತಾಯವನ್ನು ಅನಾವರಣಗೊಳಿಸಲಿರುವರು. ಕೊಡವ ಸಾಹಿತ್ಯ ಅಕಾಡೆಮಿಯ ಸದಸ್ಯರು, ಸಾಹಿತ್ಯಾಭಿಮಾನಿಗಳು ಆಗಮಿಸಲಿರುವರು. ಈ ವೇಳೆ ನಾಪಂಡ, ಮಣವಟ್ಟಿರ, ಚೀಯಬೆರ ಹಾಗೂ ಕೊಟ್ಟ್‌ಕತ್ತಿರ ಕುಟುಂಬಕ್ಕೆ ದುಡಿ ವಿತರಿಸಲಾಗುವುದು ಎಂದು ಅಕಾಡೆಮಿ ಪ್ರಕಟಣೆಯಲ್ಲಿ ರಿಜಿಸ್ಟ್ರಾರ್ ಅವರು ತಿಳಿಸಿದ್ದಾರೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಅನಿಲ್ ಕುಮಾರ್, 'ಅಮ್ಮ ನಿಲಯ', ರಾಧಮ್ಮ ಹೆಗ್ಗಡ್ತಿ ರಸ್ತೆ, ಮೈನ್ ರೋಡ್, ಶಿರ್ವ, ಮಂಚಕಲ್.
2. ಡಾ। ಪ್ರಿಯಾಂಕ ಶೆಟ್ಟಿ, ರಾಯರ ಮನೆ, ಕುಬೆವೂರು, ಕೆಂಚನಕೆರೆ -ಕಟೀಲು ಗೋಪಾಲಕೃಷ್ಣ ಆಸ್ರಣ್ಣ ಸಭಾ ಭವನ.
3. ಸದಾನಂದ ಶೆಟ್ಟಿ, ನವಿ ಮುಂಬಾಯಿ – ಸಂಜೀವ ಶೆಟ್ಟಿ ಮಲ್ಟಿ ಪರ್ಪಸ್ ಹಾಲ್ ವಠಾರ, ಒಂಟಿಕಟ್ಟೆ, ಮೂಡುಬಿದ್ರಿ.
4. ದಿ। ವಿಶ್ವನಾಥ ಶೆಟ್ರ ಸ್ಮರಣಾರ್ಥ ಪತ್ನಿ ನಳಿನಿ ಮತ್ತು ಮಕ್ಕಳು, ಕಂಬ್ಲಕೋಡಿ ಹೌಸ್, ಇರುವೈಲು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
5. ಎಂ.ಎಸ್. ನಾಗೇಶ ರಾವ್, ಚನ್ನಸಂದ್ರ, ಆರ್.ಆರ್. ನಗರ, ಬೆಂಗಳೂರು – ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
6. ಚೇತನ್ ಎಂ. ಶೆಟ್ಟಿ, ಸಾಯಿ ಮಾತ ಗಾರ್ಡನ್, ಕಾನ, ಸುರತ್ಕಲ್ – ಕಟೀಲು ಪಿ.ಯು. ಕಾಲೇಜ್ ವಠಾರದಲ್ಲಿ.
7. ದಿ। ರವಿ ಆಚಾರ್ಯರ ಸ್ಮರಣಾರ್ಥ ಮನೆಯವರು, 'ಜಯಂತಿ ನಿವಾಸ', ಹೊಸ ಕಾಲನಿ, ಇನ್ನಾ.

ಶ್ರೀ ಧರ್ಮಸ್ಥಳ ಮೇಳ

ಬೈಂದೂರಿನಲ್ಲಿ
ಶ್ರೀ ರಾಘವೇಂದ್ರ S/o. ದಿ.ಗಣಪತಿ, ಚಿನ್ನಮ್ಮನ ಮನೆ, ಪಡುವರಿ

ಶ್ರೀ ಹನುಮಗಿರಿ ಮೇಳ

ಮೈಸೂರಿನಲ್ಲಿ

ಶ್ರೀ ಪಾವಂಜೆ ಮೇಳ

ನಾಗವೃಜ ಕ್ಷೇತ್ರ ಪಾವಂಜೆಯಲ್ಲಿ
ಪಾಪಣ್ಣ ವಿಜಯ, ಗುಣಸುಂದರಿ



ಉಡುಪಿಯ ಜಿಲ್ಲಾ ಪಂಚಾಯತ್‌ನ ಡಾ. ವಿ.ಎಸ್. ಆಚಾರ್ಯ ಸಭಾಂಗಣದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ, ಕಾಪು ತಾಲೂಕಿನ ಮಲ್ಲಾರು ಪಕೀರಣಕಟ್ಟೆಯ ಭೀಕರ ಅಗ್ನಿದುರಂತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ವಿಶೇಷ ಧನಸಹಾಯದ ಚೆಕ್‌ಗಳನ್ನು ವಿತರಿಸಿದರು.

ಮೇ 19: ಪಂಜಿಮಾರು ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡ 'ಉದ್ಭವ' ಉದ್ಘಾಟನೆ

ಶಿರ್ವ: ಶಿರ್ವ ಗ್ರಾ.ಪಂ. ವ್ಯಾಪ್ತಿಯ ಪಂಜಿಮಾರು ಹಾಲು ಉತ್ಪಾದಕರ ಸಹಕಾರ ಸಂಘ ಪಂಜಿಮಾರು ಇದರ ನೂತನ ಕಟ್ಟಡ 'ಉದ್ಭವ' ಉದ್ಘಾಟನೆ ಮಾ.19ರಂದು ಬೆಳಿಗ್ಗೆ 10ಕ್ಕೆ ಜರುಗಲಿದೆ. ದ.ಕ ಹಾಲು ಉತ್ಪಾದಕರ ಒಕ್ಕೂಟದ ಅಧ್ಯಕ್ಷ ರವಿರಾಜ್ ಹೆಗ್ಡೆ ಕೊಡವೂರು ಉದ್ಘಾಟನೆ ನೆರವೇರಿಸುವರು. ಮುಲ್ಕಾಡಿ ಶ್ರೀದುರ್ಗಾಪರಮೇಶ್ವರೀ ದೇವಸ್ಥಾದ ಸಭಾಂಗಣದಲ್ಲಿ ಜರುಗುವ ಸಭಾ ಕಾರ್ಯಕ್ರಮವನ್ನು ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಉದ್ಘಾಟಿಸಲಿದ್ದು, ಅಧ್ಯಕ್ಷತೆಯನ್ನು ಪಂಜಿಮಾರು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಸಂತೋಷ್ ಶೆಟ್ಟಿ ಕೋಡು ವಹಿಸುವರು. ಮುಖ್ಯ ಅತಿಥಿಗಳಾಗಿ ದ.ಕ ಹಾಲು ಉತ್ಪಾದಕರ ಒಕ್ಕೂಟದ ಉಪಾಧ್ಯಕ್ಷ ಉದಯ ಎಸ್. ಕೊಟ್ಯಾನ್, ನಿರ್ದೇಶಕರುಗಳಾದ ಎನ್.ಮಂಜಯ್ಯ ಶೆಟ್ಟಿ, ಸುಧಾಕರ ಶೆಟ್ಟಿ ಮೂಡಾರು, ಕೆ.ಶಿವಮೂರ್ತಿ, ಐಕಳಬಾವ ಡಾ. ದೇವಿಪ್ರಸಾದ್ ಶೆಟ್ಟಿ ಬೆಳಮ, ಮಮತಾ ಆರ್ ಶೆಟ್ಟಿ, ವ್ಯವಸ್ಥಾಪಕ ನಿರ್ದೇಶಕ ವಿವೇಕ್ ಡಿ, ಶೇಖರಣೆ ಮತ್ತು ತಾಂತ್ರಿಕ ವಿಭಾಗದ ವ್ಯವಸ್ಥಾಪಕ ಡಾ.ರವಿರಾಜ್ ಉಡುಪ, ಶ್ರೀಕ್ಷೇತ್ರ ಧ.ಗ್ರಾ.ಯೋಜನೆ ಕಾಪು ಇದರ ಯೋಜನಾಧಿಕಾರಿ ಮಮತಾ ಶೆಟ್ಟಿ, ಶ್ರೀಮುಲ್ಕಾಡಿ ಶ್ರೀದುರ್ಗಾಪರಮೇಶ್ವರೀ ದೇವಳದ ಆಡಳಿತ ಮೊಕ್ತೇಸರ ಸುಧೀರ್ ಹೆಗ್ಡೆ, ಮುಂಬೈ ಉದ್ಯಮಿ ವಲದೂರು ಪಡುಮನೆ ಗಣೇಶ್ ಪೂಜಾರಿ, ಶಿರ್ವ ವ್ಯ.ಸೇ.ಸ.ಸಂಘದ ಅಧ್ಯಕ್ಷ ಕುತ್ಯಾರು ಪ್ರಸಾದ್ ಶೆಟ್ಟಿ, ವಲದೂರು ವೆಲ್ಫೇರ್ ಅಸೋಸಿಯೇಶನ್ ಅಧ್ಯಕ್ಷ ಅಶೋಕ್ ಕುಮಾರ್ ವಲದೂರು, ಬಂಟಕಲ್ಲು ಶ್ರೀಗಣೇಶೋತ್ಸವ ಸಮಿತಿ ಅಧ್ಯಕ್ಷ ಬಂಟಕಲ್ಲು ಮಾಧವ ಕಾಮತ್, ಕೋಡು ಶಾಲಾ ಹಳೆವಿದ್ಯಾರ್ಥಿ ಸಂಘದ ಅಧ್ಯಕ್ಷ ಧೀರಜ್ ಶೆಟ್ಟಿ ಭಾಗವಹಿಸುವರು. ದ.ಕ ಹಾಲು ಒಕ್ಕೂಟದ ಉಪವ್ಯವಸ್ಥಾಪಕ ಡಾ.ಮಾಧವ ಐತಾಳ್, ಸಹಾಯಕ ವ್ಯವಸ್ಥಾಪಕ ಡಾ.ಪ್ರಶಾಂತ್ ಆರ್.ಜಿ, ವಿಸ್ತರಣಾಧಿಕಾರಿ ಅಬ್ದುಲ್ ಶಮೀರ್, ಪಂಜಿಮಾರು ಸಂಘದ ಉಪಾಧ್ಯಕ್ಷ ನಿತ್ಯಾನಂದ ನಾಯಕ್ ಪಾಲಮೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುಕೇಶ್ ಪೂಜಾರಿ ವಲದೂರು ಉಪಸ್ಥಿತರಿರುವರು ಎಂದು ಸಂಘದ ಪ್ರಕಟನೆ ತಿಳಿಸಿದೆ.

ಪೊನ್ನಂಪೇಟೆಯಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ಸಮಿತಿ ಸಭೆ

ಮುಂಗಾರು ಸಂಬಂಧ ಅಗತ್ಯ ಸಿದ್ಧತೆಗೆ ಸೂಚನೆ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಮುಂಗಾರು ಶೀಘ್ರವೇ ಆರಂಭವಾಗುವ ಲಕ್ಷಣಗಳು ಕಾಣುತ್ತಿದ್ದು, ವೀರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅಗತ್ಯ ಮುನ್ನೆಚ್ಚರಿಕಾ ಕ್ರಮ ವಹಿಸುವಂತೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ವೀರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಅವರು ಸೂಚಿಸಿದರು.

ಪೊನ್ನಂಪೇಟೆಯ ತಾ.ಪಂ. ಸಭಾಂಗಣದಲ್ಲಿ ನಡೆದ ವೀರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತಾಲೂಕು ಮಟ್ಟದ ಕಾರ್ಯಪಡೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈಗಾಗಲೇ ಜಿಲ್ಲೆಯ ಅಲ್ಲಲ್ಲಿ ಗಾಳಿ ಮಳೆಗೆ ಮರದ ಕೊಂಬೆಗಳು ಬೀಳುತ್ತಿದ್ದು, ಇದರಿಂದ ವಿದ್ಯುತ್ ಹಾಗೂ ಸಾರಿಗೆ ಸಂಪರ್ಕಕ್ಕೆ ಅಡಚಣೆ ಉಂಟಾಗುತ್ತದೆ. ಆದ್ದರಿಂದ ರಸ್ತೆ ಬದಿ ಬೀಳುವ ಕೊಂಬೆಗಳನ್ನು ಕಡಿಯುವುದು, ಚರಂಡಿ ಹೂಳು ತೆಗೆಯುವುದು, ಗುಂಡಿ ಬಿದ್ದ ರಸ್ತೆಗಳನ್ನು ಸರಿಪಡಿಸುವುದು, ಮತ್ತಿತರ ಅಗತ್ಯ ಕ್ರಮವಹಿಸುವಂತೆ ಅವರು ನಿರ್ದೇಶನ ನೀಡಿದರು.

ಗ್ರಾಮ ಪಂಚಾಯತ್ ಮಟ್ಟದಲ್ಲಿ ಪಿಡಿಒಗಳು ಸಾರ್ವಜನಿಕರ ಅಹವಾಲುಗಳನ್ನು ಆಲಿಸಿದಲ್ಲಿ ತಳಮಟ್ಟದಲ್ಲಿಯೇ ಸಮಸ್ಯೆಗಳನ್ನು ಬಗೆಹರಿಸ ಬಹುದಾಗಿದೆ. ಆ ನಿಟ್ಟಿನಲ್ಲಿ ಇಚ್ಛಾಶಕ್ತಿ ತೋರಬೇಕು ಎಂದು ಶಾಸಕರು ತಾಕೀತು ಮಾಡಿದರು.

ಸಾರ್ವಜನಿಕರು ಗ್ರಾಮ ಮಟ್ಟದಲ್ಲಿ ಆಗಬೇಕಿರುವ ಸಣ್ಣ ಪುಟ್ಟ ಕೆಲಸಗಳಿಗೂ ನನ್ನ ಬಳಿಗೆ ಆಗಮಿಸುತ್ತಾರೆ. ಆದ್ದರಿಂದ ಗ್ರಾಮ



ಪಂಚಾಯತ್ ಮಟ್ಟದಲ್ಲಿಯೇ ಸಂಬಂಧಪಟ್ಟ ಇಂಜಿನಿಯರ್ ಅಥವಾ ಅಧಿಕಾರಿಗಳ ಗಮನಕ್ಕೆ ತಂದರೆ ಸಮಸ್ಯೆಗಳನ್ನು ಪರಿಹರಿಸಬಹುದಾಗಿದೆ. ಆ ನಿಟ್ಟಿನಲ್ಲಿ ಎಲ್ಲಾ ಹಂತದ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಶಾಸಕರು ಒತ್ತಿ ಹೇಳಿದರು.

ಅಂಗನವಾಡಿ, ಶಾಲಾ-ಕಾಲೇಜುಗಳ ಕಟ್ಟಡಗಳು ಸುಸ್ಥಿತಿ ಬಗ್ಗೆ ಗಮನಹರಿಸಬೇಕು. ಹಳೆಯ ಕಟ್ಟಡಗಳು ಬೀಳುವ ಹಂತದಲ್ಲಿದ್ದರೆ ವರದಿ ನೀಡಬೇಕೆಂದು ಸೂಚಿಸಿದ ಶಾಸಕರು, ಹಳೆಯ ವಿದ್ಯುತ್ ಕಂಬಗಳನ್ನು ಬದಲಿಸುವುದು, ವಿದ್ಯುತ್ ಪರಿವರ್ತಕಗಳನ್ನು ದಾಸ್ತಾನು ಮಾಡಿಕೊಂಡು ಅಳವಡಿಸುವುದು ಮತ್ತಿತರ ಕಾರ್ಯದ ಬಗ್ಗೆ ಸೆಸ್ಕ್ ಇಲಾಖೆ ಇಂಜಿನಿಯರ್ ಗಮನಹರಿಸುವಂತೆ ಹೇಳಿದರು.

ಕೆಲವು ಕಡೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದಲ್ಲಿ ಪರಿಹರಿಸುವಂತಾಗಬೇಕು. ಕುಡಿಯುವ ನೀರು ಸಮರ್ಪಕ ಪೂರೈಕೆಗೆ ಹೆಚ್ಚಿನ ಗಮನ ನೀಡಬೇಕು. ರಸ್ತೆ ಬದಿಯ ಗಿಡಗಂಟಿಗಳನ್ನು ಕಡಿಯದಿದ್ದಲ್ಲಿ ಸೆಸ್ಕ್, ಲೋಕೋಪಯೋಗಿ, ಪಂಚಾಯತ್ ರಾಜ್ ಇಲಾಖೆಗೆ ಕೆಲಸ ಹೆಚ್ಚಾಗಲಿದೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಲಿದೆ. ಆದ್ದರಿಂದ ಈ ಕೆಲಸವನ್ನು ಶೀಘ್ರ ಪೂರ್ಣಗೊಳಿಸಬೇಕೆಂದು ಶಾಸಕರು ನಿರ್ದೇಶನ ನೀಡಿದರು.

ಹೆಚ್ಚಿನ ಮಳೆಯಿಂದಾಗಿ ಮನೆ ಹಾನಿಯಾದಲ್ಲಿ ಕೂಡಲೇ ಪರಿಹಾರ ವಿತರಿಸಲು ಕ್ರಮವಹಿಸಬೇಕು. ಮಳೆಗಾಲದ ಸಂದರ್ಭದಲ್ಲಿ ಆಹಾರಧಾನ್ಯವನ್ನು ಸಮರ್ಪಕವಾಗಿ ಪೂರೈಸಬೇಕು. ನದಿ, ಹೊಳೆ ಬದಿಯಲ್ಲಿ ವಾಸಿಸುವ ಕುಟುಂಬಗಳಿಗೆ ಮುನ್ನೆಚ್ಚರಿಕೆಯಾಗಿ ಮಾಹಿತಿ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಲಹೆ ಮಾಡಿದರು.

ಮಳೆಗಾಲದಲ್ಲಿ ಸಾಂಕ್ರಾಮಿಕ ರೋಗ ಹರಡದಂತೆ ಎಚ್ಚರವಹಿಸಬೇಕು. ಆಸ್ಪತ್ರೆಗಳಲ್ಲಿ ಅಗತ್ಯ ಔಷಧಿ ದಾಸ್ತಾನು ಇರಬೇಕು ಎಂದು ಶಾಸಕರು ಹೇಳಿದರು.

ಈ ಸಂದರ್ಭ ಮಾತನಾಡಿದ ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಪ್ರಶಾಂತ್ ಅವರು, ಶ್ರೀಮಂಗಲ ಆಸ್ಪತ್ರೆಯಲ್ಲಿ ಜ್ವರದ ಔಷಧಿಯೇ ಇಲ್ಲ. ಈ ರೀತಿಯಾದರೆ ಹೇಗೆ ಎಂದು ಸಭೆಯ ಗಮನಕ್ಕೆ ತಂದರು.

ಮಳೆಗಾಲದ ಸಂದರ್ಭದಲ್ಲಿ ಜಾನುವಾರು ರಕ್ಷಣೆಗೂ ಗಮನಹರಿಸಬೇಕು. ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ರಸ್ತೆ ಹಾಗೂ ಸೇತುವೆ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಶಾಸಕರು ಸೂಚಿಸಿದರು.

ಮಡಿಕೇರಿ ತಾ.ಪಂ.ಇಒ ಶೇಖರ್ ಅವರು ಮಾತನಾಡಿ, ಮುಂಗಾರು ಸಂದರ್ಭದಲ್ಲಿ ಮುನ್ನೆಚ್ಚರ ವಹಿಸುವಲ್ಲಿ ಈಗಾಗಲೇ ಹಲವು ಸಿದ್ಧತೆ ಮಾಡಿಕೊಳ್ಳಲಾಗಿದೆ. ಪಂಚಾಯತ್ ರಾಜ್, ಕಂದಾಯ, ಪೊಲೀಸ್, ಇಂಜಿನಿಯರಿಂಗ್ ವಿಭಾಗ ಸೇರಿದಂತೆ ವಿವಿಧ ಇಲಾಖೆಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸುವ ನಿಟ್ಟಿನಲ್ಲಿ ಈಗಾಗಲೇ ಹಲವು ಕಾರ್ಯ ಕೈಗೊಳ್ಳಲಾಗಿದೆ. ಗ್ರಾ.ಪಂ. ಮಟ್ಟದಲ್ಲಿಯೂ ಸಹ ಆಡಳಿತ ಅಧಿಕಾರಿಗಳು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಸಭೆ ನಡೆಸಿ, ಹಲವು ಸಲಹೆ ಮಾರ್ಗದರ್ಶನ ನೀಡಲಾಗಿದೆ ಎಂದರು.

ವೀರಾಜಪೇಟೆ ತಹಶೀಲ್ದಾರ್ ಪ್ರವೀಣ್ ಕುಮಾರ್ ಅವರು ಮಾತನಾಡಿ, ಮುಂಗಾರು ಸಂದರ್ಭದಲ್ಲಿ ಮುನ್ನೆಚ್ಚರ ವಹಿಸುವ ಬಗ್ಗೆ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು.

ಲಾಲು ಅಪ್ಪಣ್ಣ ಅವರು ಮಾತನಾಡಿ ಬಿರುನಾಣಿ, ಬಿ.ಶೆಟ್ಟಿಗೇರಿ ವ್ಯಾಪ್ತಿಯಲ್ಲಿ ಮಳೆ ಆರಂಭವಾದ ನಂತರ ಜಂಗಲ್ ಕಟ್ಟಿಂಗ್, ಗುಂಡಿ ಮುಚ್ಚುವುದು, ಚರಂಡಿ ಸ್ವಚ್ಛಗೊಳಿಸುವುದು ಸೇರಿದಂತೆ ಯಾವುದೇ ರೀತಿಯ ಕೆಲಸ ಮಾಡಲು ಕಷ್ಟಸಾಧ್ಯ, ಆದ್ದರಿಂದ ಮಳೆ ಆರಂಭಕ್ಕೂ ಮೊದಲೇ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕಿದೆ ಎಂದರು.

ಪೊನ್ನಂಪೇಟೆ ತಹಶೀಲ್ದಾರ್ ಸಂಜನಾ, ತಾ.ಪಂ.ಇಒ, ಮಹಿಳಾ ಮತ್ತು ಅಭಿವೃದ್ಧಿ, ಸೆಸ್ಕ್, ಲೋಕೋಪಯೋಗಿ, ಪಂಚಾಯತ್ ರಾಜ್, ವೀರಾಜಪೇಟೆ ಪುರಸಭೆ ಮುಖ್ಯಾಧಿಕಾರಿ, ಕ್ಷೇತ್ರ ಶಿಕ್ಷಣಾಧಿಕಾರಿ, ಪೊಲೀಸ್ ಅಧಿಕಾರಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಮಳೆಗಾಲದ ಸಂದರ್ಭದಲ್ಲಿ ಕೈಗೊಂಡ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಮಾಹಿತಿ ನೀಡಿದರು.

- ಪಿಡಿಒಗಳು ಸಾರ್ವಜನಿಕರ ಅಹವಾಲುಗಳನ್ನು ಆಲಿಸಿದಲ್ಲಿ ತಳಮಟ್ಟದಲ್ಲಿಯೇ ಸಮಸ್ಯೆಗಳನ್ನು ಬಗೆಹರಿಸ ಬಹುದಾಗಿದು
- ಅಂಗನವಾಡಿ, ಶಾಲಾ-ಕಾಲೇಜುಗಳ ಕಟ್ಟಡಗಳ ಸುಸ್ಥಿತಿ ಬಗ್ಗೆ ಗಮನಹರಿಸಬೇಕು
- ವಿದ್ಯುತ್ ಪರಿವರ್ತಕಗಳನ್ನು ದಾಸ್ತಾನು ಮಾಡಿಕೊಂಡು ಅಳವಡಿಸುವುದು

ರೂ.1.50 ಕೋಟಿ ಬಿಡುಗಡೆ

ಕುಡಿಯುವ ನೀರು ವಿಭಾಗದ ಇಂಜಿನಿಯರ್ ಭಾಸ್ಕರ ಅವರು ಮಾತನಾಡಿ ಕುಡಿಯುವ ನೀರು ಕಾಮಗಾರಿಗೆ ಸರ್ಕಾರದಿಂದ ಒಂದೂವರೆ ಕೋಟಿ ರೂ ಅನುದಾನ ಬಿಡುಗಡೆ ಆಗಿದ್ದು, ಕಾಮಗಾರಿ ಸಂಬಂಧ ಅನುಮೋದನೆ ನೀಡಬೇಕಿದೆ ಎಂದು ಕೋರಿದರು.

ವಿಶ್ವಕರ್ಮ ಬ್ಯಾಂಕಿನ ಸಂಸ್ಥಾಪನಾ ದಿನ

ಮಾನವೀಯ ಮಿಡಿತದ ಸೇವೆ ಮುಖ್ಯ

ಮಂಗಳೂರು: ಸಂಸ್ಥೆಯ ಸ್ಥಾಪನೆಯ ಹಿನ್ನಲೆ ಮತ್ತು ಉದ್ದೇಶವನ್ನು ಅರಿತುಕೊಂಡು ಸಿಬ್ಬಂದಿಗಳು ಅದಕ್ಕೆ ಪುರಕವಾಗಿ ಕಾರ್ಯನಿರ್ವಹಿಸಿದರೆ ಸಂಸ್ಥಾಪಕರ ಆಶಯವು ಪೂರ್ಣಗೊಳ್ಳುತ್ತದೆ ಎಂದು ವಿಶ್ವಕರ್ಮ ಕಲಾ ಪರಿಷತ್ತಿನ ಅಧ್ಯಕ್ಷ ಡಾ. ಎಸ್. ಪಿ. ಗುರುದಾಸ್ ಅವರು ಹೇಳಿದರು.

ವಿಶ್ವಕರ್ಮ ಬ್ಯಾಂಕಿನ ಸಂಸ್ಥಾಪನಾ ದಿನ ಸುಸಂದರ್ಭದಲ್ಲಿ ಬ್ಯಾಂಕಿನ ಸಿಬ್ಬಂದಿಗಳನ್ನು ಉದ್ದೇಶಿಸಿ ಅವರು ಮಾತನಾಡುತಿದ್ದರು.

ಬ್ಯಾಂಕ್ ನಡೆದು ಬಂದ ಹಾದಿ ಹಾಗೂ ಸಂಸ್ಥಾಪಕರಿಂದ ಹಿಡಿದು ಇಂದಿನವರೆಗಿನ ಆಡಳಿತ ನಿರ್ದೇಶಕರು ಮತ್ತು ಸಿಬ್ಬಂದಿಗಳು ಬ್ಯಾಂಕಿನ ಬೆಳವಣಿಗೆಗಾಗಿ ಸಲ್ಲಿಸಿದ ತ್ಯಾಗ ಮತ್ತು ಅವಿರತ ಶ್ರಮವನ್ನು ಅವರು ಸ್ಮರಿಸಿದರು.

ಸಿಬ್ಬಂದಿಗಳ ಮಾನವೀಯ ಸ್ಪರ್ಶದಿಂದ ಸಮರ್ಪಿತ ಸೇವೆಯಿಂದ ಗ್ರಾಹಕರ ವಿಶ್ವಾಸಾರ್ಹತೆ ಬೆಳೆಯುತ್ತದೆ. ಮಧ್ಯಮ ಮತ್ತು ಕೆಳವರ್ಗದ ಸದಸ್ಯರಿಂದ ಕೂಡಿದ ಸಂಸ್ಥೆಯಲ್ಲಿ ಸದಸ್ಯರಿಗೆ ಹಣಕಾಸು ವ್ಯವಸ್ಥೆಯ ಅರಿವು ಮತ್ತು ಜಾಗೃತಿಯನ್ನು ಸಿಬ್ಬಂದಿಗಳು ಮೂಡಿಸಬೇಕಾಗಿದೆ ಎಂದು ಈ ಸಂದರ್ಭದಲ್ಲಿ ಅವರು



ಮುಂದುವರಿದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಶ್ವಕರ್ಮ ಸಹಕಾರ ಬ್ಯಾಂಕಿನ ಅಧ್ಯಕ್ಷ ಡಾ. ಎಸ್. ಆರ್. ಹರೀಶ್ ಆಚಾರ್ಯ ಅವರು ಮಾತನಾಡಿ, ಬ್ಯಾಂಕಿನ ಬೆಳವಣಿಗೆಯನ್ನು ಅದರ ಪರಂಪರೆಯನ್ನು ಅರಿತುಕೊಂಡು ಮುಂದುವರಿಸುವ ಗುರುತರವಾದ ಜವಾಬ್ದಾರಿ ಸಿಬ್ಬಂದಿಗಳ ಮೇಲೆ ಇದೆ. ಸಿಬ್ಬಂದಿಗಳು ಬ್ಯಾಂಕಿನ ಸದಸ್ಯರೊಂದಿಗೆ ನಿರಂತರ ಸಂಪರ್ಕವನ್ನು ಇಟ್ಟುಕೊಂಡು ಅವರಲ್ಲಿ ಜಾಗೃತಿ ಮತ್ತು ಅರಿವನ್ನು ಮೂಡಿಸುವ ಆಪ್ತ ಸಮಾಲೋಚಕರ ರೀತಿ ಕಾರ್ಯನಿರ್ವಹಿಸಬೇಕಾಗಿದೆ ಎಂದು ಹೇಳಿದರು.

- ಸಿಬ್ಬಂದಿಗಳ ಮಾನವೀಯ ಸ್ಪರ್ಶದಿಂದ ಸಮರ್ಪಿತ ಸೇವೆಯಿಂದ ಗ್ರಾಹಕರ ವಿಶ್ವಾಸಾರ್ಹತೆ ಬೆಳೆಯುತ್ತದೆ.
- ಬ್ಯಾಂಕಿನ ಬೆಳವಣಿಗೆಯನ್ನು ಅದರ ಪರಂಪರೆಯನ್ನು ಅರಿತುಕೊಂಡು ಮುಂದುವರಿಸುವ ಗುರುತರವಾದ ಜವಾಬ್ದಾರಿ ಸಿಬ್ಬಂದಿಗಳ ಮೇಲೆ ಇದೆ.

ಬ್ಯಾಂಕಿನ ಉಪಾಧ್ಯಕ್ಷ ಪಿ. ಜಗದೀಶ್ ಆಚಾರ್ಯ, ನಿರ್ದೇಶಕರಾದ ಭಾಸ್ಕರ ಆಚಾರ್ಯ ಡಿ., ಸೀತಾರಾಮ ಆಚಾರ್ಯ ಬೆಳುವಾಯಿ, ಜಗದೀಶ್ ಆಚಾರ್ಯ ಕಪ್ಪೆಟ್ಟು, ಬಿ. ಗುರುಪ್ರಸಾದ್ ಶೆಟ್ಟಿ, ಹರಿಪ್ರಸಾದ್, ಶರತ್ ಕೆ. ಆಚಾರ್ಯ, ಭರತ್ ನಿಡ್ಪಳ್ಳಿ, ಜಯಶ್ರೀ ವಿ. ಆಚಾರ್ಯ, ಪಿ. ಪ್ರಶಾಂತ್ ಆಚಾರ್ , ಬಿಜು ಜಯ, ಬಿ. ಜಯಪ್ರಕಾಶ್ ಆಚಾರ್ಯ, ಶ್ರುತಿ ಆಚಾರ್ಯ ಕೆ. ವ್ಯವಸ್ಥಾಪಕ ನಿರ್ದೇಶಕರಾದ ವಸಂತ ಅಡ್ಯಂತಾಯ ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮಳೆಗಾಲದ ಪೂರ್ವ ಸಿದ್ಧತೆ | ಅಧಿಕಾರಿಗಳ ಜೊತೆ ಶಾಸಕರ ಸಭೆ

ಅನಾಹುತ ನಡೆಯದಂತೆ ಕಾರ್ಯನಿರ್ವಹಿಸಿ

ಮುಲ್ಕಿ: ತಾಲೂಕು ಆಡಳಿತದ ಪ್ರಜಾಸೌಧದ ಸೇವಕ ಕಚೇರಿಯಲ್ಲಿ ಮುಲ್ಕಿ ಮೂಡಬಿದ್ರೆ ಶಾಸಕ ಉಮಾನಾಥ ಕೋಟ್ಯಾನ್ ತಾಲೂಕು ವ್ಯಾಪ್ತಿಯ ಮೆಸ್ಕಾಂ, ಲೋಕೋಪಯೋಗಿ ಇಲಾಖೆ, ಅರಣ್ಯ ಇಲಾಖೆ ಅಧಿಕಾರಿಗಳ ಸಭೆ ನಡೆಸಿದರು.

ಮುಂದಿನ ಮಳೆಗಾಲದ ಪೂರ್ವ ಸಿದ್ಧತೆಗಳನ್ನು ಅಧಿಕಾರಿ ವರ್ಗದವರು ಸರಿಯಾಗಿ ಕಾರ್ಯ ನಿರ್ವಹಿಸಬೇಕಾಗಿದೆ. ಮೆಸ್ಕಾಂ ಇಲಾಖೆಯ ಸಿಬ್ಬಂದಿ ವರ್ಗ ಪ್ರಾಕೃತಿಕ ವಿಕೋಪ ಎದುರಿಸಲು ಸನ್ನದ್ಧರಾಗಬೇಕಾಗಿದೆ. ಮಳೆಗಾಲದ ಪೂರ್ವಭಾವಿಯಾಗಿ ತಾಲೂಕು ವ್ಯಾಪ್ತಿಯಲ್ಲಿ ಅಪಾಯಕಾರಿ ಮರಗಳನ್ನು ಕೂಡಲೇ ತೆರವುಗೊಳಿಸಬೇಕು. ಮಳೆಗಾಲದಲ್ಲಿ ಯಾವುದೇ ಅವಘಡ ನಡೆಯದಂತೆ ಎಚ್ಚರಿಕೆ ವಹಿಸಬೇಕು ಎಂದು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಶಾಸಕರು ಸೂಚನೆ ನೀಡಿದರು

ಮುಲ್ಕಿ ಮೂಡಬಿದ್ರೆ ರಾಜ್ಯ ಹೆದ್ದಾರಿಯ ಇಕ್ಕೆಲಗಳಲ್ಲಿ ಸೂಕ್ತ ಚರಂಡಿ ನಿರ್ಮಾಣ ಮಾಡಬೇಕು ಎಂದು ಲೋಕೋಪಯೋಗಿ ಇಲಾಖೆ



- ಮೆಸ್ಕಾಂ ಇಲಾಖೆಯ ಸಿಬ್ಬಂದಿ ವರ್ಗ ಪ್ರಾಕೃತಿಕ ವಿಕೋಪ ಎದುರಿಸಲು ಸನ್ನದ್ಧರಾಗಬೇಕು
- ತಾಲೂಕು ವ್ಯಾಪ್ತಿಯಲ್ಲಿ ಅಪಾಯಕಾರಿ ಮರಗಳನ್ನು ಕೂಡಲೇ ತೆರವುಗೊಳಿಸಬೇಕು.

ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭ ಮುಲ್ಕಿ ತಹಶಿಲ್ದಾರ್ ಶ್ರೀಧರ ಮುಂದಲಮನಿ, ಕಿನ್ನಿಗೋಳಿ ಪಟ್ಟಣ ಪಂಚಾಯತ್ ಅಧ್ಯಕ್ಷ ಗುರುರಾಜ್ ಮಲ್ಲಿಗೆಯಂಗಡಿ, ಮುಲ್ಕಿ ನ.ಪಂ. ಮುಖ್ಯಾಧಿಕಾರಿ ಮಧುಕರ್, ಕಿನ್ನಿಗೋಳಿ ಪ. ಪಂ.ಮುಖ್ಯಾಧಿಕಾರಿ ಜಯಶಂಕರ್, ಮುಲ್ಕಿ ಮೆಸ್ಕಾಂ ಉಪ ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ರಾಮಕೃಷ್ಣ ಐತಾಳ, ಎಸ್.ಒ. ಕೃಷ್ಣಪ್ಪ, ಲೋಕೋಪಯೋಗಿ ಇಲಾಖೆಯ ಅಧಿಕಾರಿ ಶ್ರೀಧರ್ ಮತ್ತು ಅರಣ್ಯ ಇಲಾಖೆಯ ಸಹಾಯಕ ಅಧಿಕಾರಿಗಳು ಉಪಸ್ಥಿತರಿದ್ದರು..

ಅರ್ಧಕ್ಕೆ ನಿಂತಿದ್ದ ಮನೆ ಪೂರ್ಣಗೊಳಿಸಿದ ಗಿಳಿಯಾರು ಜನಸೇವಾ ಟ್ರಸ್ಟ್

ವಿಶೇಷ ಚೇತನ ಮಕ್ಕಳಿಬ್ಬರ ಕುಟುಂಬಕ್ಕೆ ಮನೆ ಹಸ್ತಾಂತರ

ಕೋಟ: ಮನೆ ಯಜಮಾನನಿಗೆ ಅನಾರೋಗ್ಯ. ಅವರ ಇಬ್ಬರು ಮಕ್ಕಳು ವಿಶೇಷ ಚೇತನರು. ಮನೆಯಜಮಾನಿಯೇ ಎಲ್ಲವನ್ನೂ ನೋಡಿಕೊಳ್ಳಬೇಕಿತ್ತು. ಆದರೂ ಸ್ವಂತ ಮನೆ ಬೇಕೆಂದು 15 ವರ್ಷಗಳ ಹಿಂದೆ ನಿರ್ಮಾಣ ಕಾರ್ಯ ಆರಂಭವಾಗಿತ್ತು. ಈ ನಡುವೆ ಆರ್ಥಿಕ ಪರಿಸ್ಥಿತಿ ತೀರಾ ಹದಗೆಟ್ಟು ಮನೆ ನಿರ್ಮಾಣ ಕಾರ್ಯ ಅರ್ಧದಲ್ಲಿಯೇ ನಿಂತಿತ್ತು. ಮೇ 15ರಂದು ಈ ಕುಟುಂಬದ ಮೊಗದಲ್ಲಿ ನಗು ಅರಳಿತು. ಇದಕ್ಕೆ ಕಾರಣ ಗಿಳಿಯಾರು ಜನಸೇವಾ ಟ್ರಸ್ಟ್.

ಗಿಳಿಯಾರು ಹೊನ್ನಾರಿ ಬೊಬ್ಬರ್ಯ ದೈವಸ್ಥಾನ ಸಮೀಪದ ನಿವಾಸಿ ವೀರು ಪೂಜಾರಿಯವರ ಕುಟುಂಬ ಆರ್ಥಿಕ ಸಂಕಷ್ಟ ಹಾಗೂ ಅನಾರೋಗ್ಯದ ನಡುವೆಯೇ ಜೀವನ ಸಾಗಿಸುತ್ತಿತ್ತು. ತಂದೆಗೆ ತೀವ್ರ ಕಾಲುನೋವು ಹಾಗೂ



ವಿಶೇಷ ಚೇತನಳಿಗೆ ಉದ್ಯೋಗ

ಮನೆ ಹಸ್ತಾಂತರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕುಂದಾಪುರ ಶಾಸಕ ಕಿರಣ್ ಕುಮಾರ್ ಕೊಡ್ಗಿ ವಿಶೇಷಚೇತನ ಯುವತಿಗೆ ಉದ್ಯೋಗದ ಅಗತ್ಯವಿದೆ ಎಂದರು. ಇದೇ ಸಂದರ್ಭದಲ್ಲಿ ಕೋಟ ಅಮೃತೇಶ್ವರಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಆನಂದ ಸಿ.ಕುಂದರ್ ತಮ್ಮ ಸಂಸ್ಥೆಯಲ್ಲಿ ಉದ್ಯೋಗ ನೀಡುವ ಭರವಸೆ ನೀಡಿ, ಜೂನ್ 1ರಿಂದ ಕೆಲಸಕ್ಕೆ ಹಾಜರಾಗುವಂತೆ ಸೂಚಿಸಿದರು ಹಾಗೂ ಮನೆ ನಿರ್ಮಿಸಿ ಕೊಟ್ಟಿರುವುದು ಮಾದರಿ ಕಾರ್ಯ. ಇಂತಹ ಸೇವಾಕಾರ್ಯಗಳು ಇತರ ಸಂಘ-ಸಂಸ್ಥೆಗಳಿಗೂ ಪ್ರೇರಣೆ ಯಾಗಬೇಕು ಎಂದು ಹೇಳಿದರು.

ಅನಾರೋಗ್ಯ ಕಾಡುತ್ತಿದ್ದು, ಅವರ ಇಬ್ಬರು ಮಕ್ಕಳು ವಿಶೇಷಚೇತನರಾಗಿದ್ದಾರೆ. ಮಗನ ಸಂಪೂರ್ಣ ಜವಾಬ್ದಾರಿಯನ್ನು ತಾಯಿಯೇ ನೋಡಿಕೊಳ್ಳಬೇಕಾದ ಪರಿಸ್ಥಿತಿ ಇದ್ದರೆ. ಹೀಗಾಗಿ ಮನೆ ಕಟ್ಟಬೇಕೆಂಬ ಕನಸಿ ನಿಂದ ಪಂಚಾಂಗ ಹಾಕಿದರೂ ಹಲವು ಸಮಸ್ಯೆಗಳ ಪರಿಣಾಮ ಕಾಮಗಾರಿ ಮುಂದುವರಿಸಲು ಸಾಧ್ಯವಾಗಿರಲಿಲ್ಲ. ಈ ವೇಳೆ ನೆರವಿಗೆ ಬಂದ ಮೂಡು ಗಿಳಿಯಾರು ಜನಸೇವಾ ಟ್ರಸ್ಟ್ ಹಾಗೂ ಟೀಮ್ ಅಭಿಮತದ ಗೆಳೆಯರು ಸುಮಾರು 9 ಲಕ್ಷ ವೆಚ್ಚದಲ್ಲಿ ಸುಸಜ್ಜಿತ ಮನೆ ನಿರ್ಮಿಸಿ ಕುಟುಂಬಕ್ಕೆ ಹಸ್ತಾಂತರಿಸಿದರು. ಜನಸೇವಾ ಟ್ರಸ್ಟ್‌ನ ಮಾನವೀಯ ಕಾರ್ಯಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ.

ಮನೆಯ ಕೀಲಿಕೈ ಪಡೆದು ಮಾತನಾಡಿದ ವೀರು ಪೂಜಾರಿ, 'ಪಂಚಾಂಗ ಹಾಕಿ ಹಲವು ವರ್ಷಗಳಾದರೂ ಮನೆ ಪೂರ್ಣಗೊಳಿಸಲು ಸಾಧ್ಯವಾಗಿರಲಿಲ್ಲ. ಬದುಕು ಸಾಗಿಸುವುದೇ ಕಷ್ಟವಾಗಿದ್ದ ಸಂದರ್ಭದಲ್ಲಿ ಗಿಳಿಯಾರು ಜನಸೇವಾ ಟ್ರಸ್ಟ್ ನಮ್ಮ ನೆರವಿಗೆ ಬಂದಿದೆ. ಮಗಳಿಗೆ ಉದ್ಯೋಗವೂ ದೊರೆತಿರುವುದು ನಮ್ಮ ಕುಟುಂಬಕ್ಕೆ ಹೊಸ ಭರವಸೆಯಾಗಿದೆ' ಎಂದು ಭಾವುಕರಾದರು.

ಜನಸೇವಾ ಟ್ರಸ್ಟ್‌ನ ಪ್ರವರ್ತಕ ವಸಂತ ಗಿಳಿಯಾರು ಮಾತನಾಡಿ, ಅಸಹಾಯಕರ ನೆರವಿಗೆ ನಮ್ಮ ಟ್ರಸ್ಟ್ ಸದಾ ಸಿದ್ಧವಾಗಿದೆ. ಒಂದೆಡೆ ಕುಟುಂಬಕ್ಕೆ ಮನೆ ಸಿಕ್ಕಿದರೆ, ಮತ್ತೊಂದೆಡೆ ಮಗಳಿಗೆ ಉದ್ಯೋಗ ದೊರೆತಿರುವುದು ನಮಗೂ ಸಂತೋಷ ತಂದಿದೆ ಎಂದರು. ಕೋಟ ಗ್ರಾ.ಪಂ.ಮಾಜಿ ಅಧ್ಯಕ್ಷೆ ಜ್ಯೋತಿ ಭರತ್ ಕುಮಾರ್ ಶೆಟ್ಟಿ, ಖ್ಯಾತ ಜಾದುಗಾರ ಸತೀಶ್ ಹೆಮ್ಮಾಡಿ, ಜನಸೇವಾ ಟ್ರಸ್ಟ್ ನ ಪ್ರಮುಖರು, ಸ್ಥಳೀಯ ಗಣ್ಯರು ಉಪಸ್ಥಿತರಿದ್ದರು. ಕೆ.ಸಿ. ರಾಜೇಶ್ ಕಾರ್ಯಕ್ರಮ ನಿರೂಪಿಸಿದರು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ (ನಂ.KR-754) ಡ್ರಾ ಮೇ 16ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
KG 684929 (KOLLAM)

Consolation Prize Rs.5,000/-
KA 684929 KB 684929 KC 684929 KD 684929
KE 684929 KF 684929 KH 684929 KJ 684929
KK 684929 KL 684929 KM 684929

2nd Prize Rs.25,00,000/- [25 Lakhs]
KD 788060 (KASARAGOD)

3rd Prize Rs.10,00,000/- [10 Lakhs]
KE 651917 (CHITTUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0466 0572 0623 1169 1868 3393 4219 4386 4942 5336 6142 7337 7348 7727 8112 8435 9117 9161 9628

5th Prize Rs.2,000/-
1607 3198 3603 7424 7969 8111

6th Prize Rs.1,000/-
0648 0670 0684 1016 1635 2175 2537 2934 2952 2996 3519 4085 4564 4969 5223 5453 5519 5592 6335 7959 8068 8185 8644 9087 9172

7th Prize Rs.500/-
0366 0464 0589 0685 0732 1148 1196 1362 1385 1438 1517 1551 1828 1913 2139 2166 2309 2332 2457 2719 2879 2989 3079 3096 3143 3191 3200 3444 3772 3849 3913 3944 3967 4033 4052 4153 4176 4513 4592 4696 4898 5192 5206 5312 5553 5859 5907 6014 6058 6222 6514 6812 6826 7002 7064 7250 7381 7628 7855 8139 8197 8331 8390 8987 9253 9256 9387 9429 9516 9542 9593 9700 9719 9781 9912 9936

8th Prize Rs.200/-
0180 0242 0446 0489 0768 0770 1073 1280 1516 1599 1620 1646 1722 1889 1922 1975 2016 2289 2336 2357 2359 2585 2701 2773 2816 2836 2870 3056 3058 3218 3269 3302 3513 3740 3752 3756 3948 3957 4250 4536 4589 4788 4855 4861 4901 4950 5017 5067 5231 5340 5661 5677 5765 5879 6385 6504 6631 6667 6779 6813 6854 7053 7179 7383 7413 7492 7505 7552 7561 7684 7705 8061 8193 8276 8495 8724 8750 8758 8764 8929 9106 9201 9369 9382 9390 9569 9573 9667 9762 9774 9975 9981

9th Prize Rs.100/-
0029 0141 0203 0223 0269 0304 0314 0320 0514 0584 0597 0819 0877 0903 1101 1233 1294 1326 1327 1359 1424 1485 1508 1528 1532 1634 1776 1860 1921 1925 1943 1973 2015 2027 2101 2114 2226 2303 2311 2321 2427 2465 2493 2552 2562 2636 2670 2969 2991 3059 3220 3433 3456 3480 3562 3673 3691 3818 3824 3850 3877 3886 4069 4074 4076 4358 4446 4462 4500 4538 4582 4599 4625 4706 4789 4946 4992 5021 5563 5577 5586 5602 5622 5652 5657 5704 5916 5920 5994 6086 6174 6233 6370 6398 6464 6548 6781 6861 7026 7083 7107 7218 7355 7365 7399 7431 7481 7502 7567 7685 7699 7711 7758 7908 7991 7998 8028 8135 8158 8167 8209 8239 8277 8463 8520 8602 8630 8636 8643 8647 8771 8822 8995 9000 9199 9212 9474 9476 9553 9599 9629 9660 9869 9880

ನಗರ ಯೋಜನಾ ಪ್ರಾಧಿಕಾರ
ಪುತ್ತೂರು ಸ್ಥಳೀಯ ಯೋಜನಾ ಪ್ರದೇಶ

ಕುಂಬಾರರ ಗುಡಿ ಕೈಗಾರಿಕಾ ಸಹಕಾರಿ ಸಂಘ, ಕುಲಾಲ್ ಭವನ ಕಟ್ಟಡ,
ಪುತ್ತೂರು –574201, ದಕ್ಷಿಣ ಕನ್ನಡ ಜಿಲ್ಲೆ
e-mail:putturnagarayojanapradhikara@gamil.com
ದೂರವಾಣಿ: 08251–237065

ಕ್ರಮಾಂಕ: ಪು.ಸ್ಥ.ಯೋ.ಪ್ರಾ.ಪು/ಪ.ಸಂ/193/2026–27 ದಿನಾಂಕ: 14.05.2026

ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 14(ಎ) ರಡಿಯಲ್ಲಿ ದ.ಕ. ಜಿಲ್ಲೆ ಪುತ್ತೂರು ತಾಲೂಕು ಪುತ್ತೂರು ಹೋಬಳಿ, ಪುತ್ತೂರು ಕಸಬಾ ಗ್ರಾಮದ ಸ.ನಂ. 113/6ಎ1 ರಲ್ಲಿ 0.25 ಎಕ್ರೆ ಜಮೀನನ್ನು ವಸತಿ ವಲಯದಿಂದ ವಾಣಿಜ್ಯ ಅಥವಾ ಕೈಗಾರಿಕಾ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಕುರಿತು.

ಉಲ್ಲೇಖ: ಅರ್ಜಿದಾರರ ಮನವಿ ದಿನಾಂಕ: 06.05.2026

ವಿಷಯಕ್ಕೆ ಸಂಬಂಧಿಸಿದಂತೆ ಕೆ. ಅಜಿತ್ ನಾಯಕ್ ಬಿನ್. ಕೆ. ಕೇಶವ ನಾಯಕ್ ರವರ ಅರ್ಜಿ ಹಾಗೂ ದಾಖಲೆಗಳನ್ನು ಸಲ್ಲಿಸಿದ್ದು, ಪರಿಶೀಲಿಸಲಾಗಿ ಅರ್ಜಿದಾರರು ಪುತ್ತೂರು ತಾಲೂಕು, ಪುತ್ತೂರು ಹೋಬಳಿ, ಪುತ್ತೂರು ಕಸಬಾ ಗ್ರಾಮದ ಸ.ನಂ. 113/6ಎ1 ರಲ್ಲಿ 0.25 ಎಕ್ರೆ ಜಮೀನು ಪುತ್ತೂರು ಪಟ್ಟಣಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ ವಸತಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿದೆ. ಸದರಿ ಜಮೀನಿನ ಭೂ–ಉಪಯೋಗವನ್ನು ವಸತಿ ವಲಯದಿಂದ ವಾಣಿಜ್ಯ ಅಥವಾ ಕೈಗಾರಿಕಾ ಉದ್ದೇಶಕ್ಕಾಗಿ ಭೂ ಬದಲಾವಣೆ ಮಾಡಿಕೊಡಲು ಕೋರಿರುತ್ತಾರೆ.

ಈ ಜಮೀನಿನ ಭೂ–ಉಪಯೋಗವನ್ನು ವಸತಿ ಉದ್ದೇಶದಿಂದ ವಾಣಿಜ್ಯ ಅಥವಾ ಕೈಗಾರಿಕಾ ಉದ್ದೇಶಕ್ಕಾಗಿ ಬದಲಾವಣೆ ಮಾಡುವ ಸಂಬಂಧ ಸಾರ್ವಜನಿಕರ ಆಕ್ಷೇಪಣೆ ಸಲಹೆಗಳು ಇದ್ದಲ್ಲಿ **ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗೆ** ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು ಪುತ್ತೂರು ನಗರ ಯೋಜನಾ ಪ್ರಾಧಿಕಾರ ಕುಲಾಲ್ ಭವನ ಕಟ್ಟಡ, ಪುತ್ತೂರು** ಇವರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿಯ ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ

ಸಹಿ/– ಸದಸ್ಯ ಕಾರ್ಯದರ್ಶಿ
ನಗರ ಯೋಜನಾ ಪ್ರಾಧಿಕಾರ ಪುತ್ತೂರು

(ಕರ್ನಾಟಕ ಸರ್ಕಾರ)

ಕಾರ್ಯಪಾಲಕ ಇಂಜಿನಿಯರ್‌ರವರ ಕಾರ್ಯಾಲಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:08/2026–27
ದಿನಾಂಕ:12.05.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ ಹಾಸನ ರವರು, ಅರಕಲಗೂಡು ಉಪ ವಿಭಾಗ ವ್ಯಾಪ್ತಿಯ 2025–26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಮೂಲಸೌಕಾರ್ಯ ಅಭಿವೃದ್ಧಿ ಯೋಜನೆಯಡಿ INDENT NO:(1) RDPR/2025-26/BD/WORK_INDENT25516/CALL-2 ಕಾಮಗಾರಿಗಳಿಗೆ ಸ್ಪರ್ಧಾತ್ಮಕ ಟೆಂಡರ್‌ಅನ್ನು ಇ–ಪ್ರೊಕ್ಯೂರ್‌ಮೆಂಟ್ ಅಡಿ KW-4 ರ ರೀತ್ಯಾ ಅಂತರ್ಜಾಲದಲ್ಲಿ ದಿ: 13.05.2026 ರಿಂದ ದಿ:20.05.2026ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು www.kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ:20.05.2026ರ ಸಂಜೆ 4.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿ:18.05.2026 ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ಪ್ರೀ–ಬಿಡ್ ಮೀಟಿಂಗನ್ನು ದಿನಾಂಕ:15.05.2026 ಬೆಳಗೆ 11.00 ಗಂಟೆಗೆ ಕಾರ್ಯಪಾಲಕ ಅಭಿಯಂತರರು,ಪಂಚಾಯತ್ ರಾಜ್ ಇಂಜಿನಿಯಿರಂಗ್ ವಿಭಾಗ,ಹಾಸನ ಕಛೇರಿಯಲ್ಲಿ ನಿಗಧಿ ಪಡಿಸಲಾಗಿದೆ. ದಿ:21.05.2026 ರಂದು ಸಂಜೆ 4.05 ಗಂಟೆಯ ನಂತರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು ಹಾಗೂ ತಾಂತ್ರಿಕ ಬಿಡ್ಡು ಅನುಮೋದನೆ ಆದ ನಂತರ ಹಣಕಾಸು ಬಿಡ್ಡನ್ನು ತೆರೆಯಲಾಗುವುದು. ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಪ.ರಾಜ್.ಇಂ. ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/133/ಕೆಎಸ್‌ಎಂಸಿಎ/2026–27

ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ

ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ

ಕೆಪಿಪಿ ಪೋರ್ಟ್‌ಲ್ ಟೆಂಡರ್ ಪ್ರಕಟಣೆ ಸಂಖ್ಯೆ:18/2025–26 ದಿನಾಂಕ: 02.03.2026,
ಕೆಪಿಪಿ ಪೋರ್ಟ್‌ಲ್ ಟೆಂಡರ್ ಪ್ರಕಟಣೆ ಸಂಖ್ಯೆ:18(1)/2025–26 ದಿನಾಂಕ: 19.04.2026

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ– II ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಕೆಪಿಪಿ ಪೋರ್ಟ್‌ಲ್ ಏಕ & ದ್ವಿ ಲಕೋಟೆ ಪದ್ಧತಿಯಲ್ಲಿ ಚಿಕ್ಕಬಳ್ಳಾಪುರ ವಿಭಾಗ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಕೆಪಿಪಿ ಪೋರ್ಟ್‌ಲ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ **(https://kppp.karnataka.gov.in)** ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. **(1)** kppportal ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿ ಗಳನ್ನು ವೆಬ್ ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ **ದಿನಾಂಕ: 19.05.2026 ರ 16.30 ರವರೆಗೆ. (2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 20.05.2026ರಂದು 4.35 ನಂತರ. (3)** ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ): ಹಿಂದಿರುಗಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:62/ಕೆಎಸ್‌ಎಂಸಿಎ/2026–27

ಕರ್ನಾಟಕ ಸರ್ಕಾರ

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಪಂ.ರಾ.ಇಂ. ವಿಭಾಗ, ಕೆ.ಆರ್.ನಗರ

ಸಂಖ್ಯೆ: ಕಾಇಂ/ಪಂರಾಇಂವಿ/ಕೃರಾನ/ಎ.ಇ/ಟೆಂಡರ್/2026–27
ದಿನಾಂಕ : 12.05.2026

ಇ–ಪ್ರೊಕ್ಯೂರ್‌ಮೆಂಟ್ ರೀತ್ಯಾ ಟೆಂಡರ್ ಪ್ರಕಟಣೆ –ಸಂಖ್ಯೆ 02/2026–27
ದಿನಾಂಕ: 12.05.2026

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು K.W –1/K.W-2 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ನಿಯಮಾನುಸಾರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು G.O. No. FD 9 PCL 2004 Dt. 06-08-2005 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕೆ.ಆರ್.ನಗರ ರವರ ಪರವಾಗಿ ಈ ಕೆಳಗೆ ನಮೂದಿಸಿರುವ ವಿವಿಧ ಲೆಕ್ಕಶೀರ್ಷಿಕೆಯ ಯೋಜನೆಯಡಿ ಕಾಮಗಾರಿಯನ್ನು ಕೈಗೊಳ್ಳಲು https://kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. **1)** ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿ ಷೆಡ್ಯೂಲ್–ಬಿ ಅಪ್ ಲೋಡ್ (Upload) ಮಾಡುವ ಅಂದಾಜು ದಿ: 13.05.2026ರ ಬೆಳಿಗ್ಗೆ 10.30 ಗಂಟೆಯಿಂದ **2)** ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿ ಷೆಡ್ಯೂಲ್–ಬಿ ನಲ್ಲಿ ದರ ನಮೂದಿಸುವ ಕೊನೆಯ ದಿ: 29.05.2026ರ ಸಂಜೆ 5.00 ಗಂಟೆಯ ವರೆಗೆ. **3)** ತಾಂತ್ರಿಕ ಬಿಡ್(ಕೆಡಬ್ಲ್ಯೂ–1,2) ತೆರೆಯುವ ದಿನಾಂಕ 30.05.2026 ರ ಸಂಜೆ 12.30 ಗಂಟೆಯಿಂದ. **4)** ಆರ್ಥಿಕ ಬಿಡ್(ಕೆಡಬ್ಲ್ಯೂ–1,2) ತೆರೆಯುವ ದಿನಾಂಕ ತಾಂತ್ರಿಕವಾಗಿ ಅರ್ಹತೆಗೊಂಡ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು

ಕಾಮಗಾರಿಗಳ ವಿವರ

ತಾಲ್ಲೂಕು	ಹೆಚ್.ಡಿ.ಕೋಟೆ	ಸರಗೂರು	ಒಟ್ಟು
ಒಟ್ಟುಕಾಮಗಾರಿಗಳ ಸಂಖ್ಯೆ	12	03	15
ಸಾಮಾನ್ಯ	08	03	11
ಪ.ಜಾತಿ	02	0	02
ಪ.ಪಂಗಡ	0	0	0
ಪ್ರವರ್ಗ –1	01	0	01
ಪ್ರವರ್ಗ–2ಎ	01	0	01

ಆನ್ ಲೈನ್ ನಲ್ಲಿ ಮಾತ್ರ ನಿರ್ವಹಿಸಲಾಗುವುದು, ವಿವರಗಳಿಗೆ https://kppp.karnataka.gov.in ನಲ್ಲಿ ಸಂಪರ್ಕಿಸಬಹುದಾಗಿದೆ ಹಾಗೂ ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ. ದೂರವಾಣಿ ಸಂಖ್ಯೆ 08223–262228.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಪಂಚಾಯತ್ ರಾಜ್ ತಾಂತ್ರಿಕ ವಿಭಾಗ, ಕೆ.ಆರ್.ನಗರ

DIPR/DDMYS/186/KSMCA/140/2026-27

IN THE COURT OF THE HON'BLE DISTRICT JUDGE OF KASARAGOD.
(Testamentary and intestate jurisdiction)
O.P. (Probate) No. 35/2026.

Petition for probate of a registered will dated 05-02-2014 executed by Mrs. Saraswathi Amma alias M Saraswathi, Aged 70 years, W/o. M. Narayana Bhat, (D/o Subramanya Bhat) house wife, resided at Mungila house, Puthige Post and Village, Kasaragod Taluk and District-671321 Kerala State

1. **Shridhara Bhat M.** aged 50 years S/o. M. Narayanan Bhat and M. Saraswathi Residing at Mungila house, Puthige Post & Village, Manjeshwara Taluk Kasaragod District-671321

...Petitioner

And

1. Mrs. Lalitha @ Divya **3. Mrs. Shantha**
2. Mrs. Pramalatha @ Navya **4. Mrs. Shyamala**

... Respondents

(The petitioner and respondents are children of M. Naryanan Bhat and M. Saraswathi, Residing at Mungila house, Puthige Post & Village, Manjeshwara Taluk, Kasaragod District-671321)

TO WHOM IT MAY CONCERN:

Please take notice that the above petition for grant of probate in respect of the will dated 05-02-2014 executed by Mrs. Saraswathi Amma alias M. Saraswathi, Aged 70 years, W/o. M. Narayana Bhat, (D/o Subramanya Bhat) house wife, resided at Mungila house, Puthige Post and Village, Kasaragod Taluk and District-671321 Kerala State, is posted 26th day of May 2026 at 11 AM. Any person who are interested in the matter may appear on the date of hearing to show cause why probate should not be granted. And also take notice in default of you to appear and show cause, the court will proceed to grant in your absence.

Description of property

Property situated in Puthige Village(Old Arikady), Manjeshwar taluk (formerly Kasaragod taluk) and Kasaragod district, within S.R.O. Badiadka Which is within the jurisdiction of this court.

Sl. No.	R.S. No.	Extent. A.C. H. A. Sqm.	Boundaries	Class
1	30/1A5 (As per the Doc. No. 160/1985 R S No. 30)	80 cents 0-32-37	**Boundaries:** East: R S No. 30/1A4, South: R. S. 30/1A7, West: R S No. 30/1A2, North: R. S. No. 30/1A3	Punja
2	30/1A8(As per the Doc. No. 160/1985 RS No. 30/1A)	one Acra 0-40-47	**Boundaries:** East: R S No. 30/1A1, South: R.S. No. 30/1B, West: R. S. 30/1A, North: R S No. 30/1A1	Punja

With all appurtenant thereto, including easement, mamool pathway plants, tress etc.
(By order of the Court)
Kasaragod **Sd/- (Suresh KP)**
Date : 27-03-2026 Advocate for petitioner

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ನಂ.02, ವಿಶ್ವೇಶ್ವರಯ್ಯ ನಾಲಾ ವಿಭಾಗ, ಮದ್ದೂರು,
ಜಿಲ್ಲೆ: ಮಂಡ್ಯ ಪಿನ್‌ಕೋಡ್–571428

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ :01/2026–27 ದಿ:13.05.2026

ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ : 01/2026–27 ದಿನಾಂಕ: 13.05.2026 ರಲ್ಲಿ ಒಟ್ಟು ಆರು ಸಂಖ್ಯೆಯ ಕಾಮಗಾರಿಗಳಿಗೆ (ಅಂದಾಜಿನ ಕನಿಷ್ಠ ಮೊತ್ತ 43.00 ಲಕ್ಷ & ಗರಿಷ್ಠ ಮೊತ್ತ 96.20 ಲಕ್ಷ) QCBS ರ ಅನ್ವಯ ಅರ್ಹ ಕೆಪಿಡಬ್ಲೂಡಿ ಗುತ್ತಿಗೆದಾರರು/ಏಜೆನ್ಸಿ ರವರಿಂದ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಟೆಂಡರ್‌ನ್ನು ತೆರೆಯುವ ದಿನಾಂಕ as per KPPP-portal ಮತ್ತು ಹೆಚ್ಚಿನ ವಿವರಗಳಿಗೆ http://kppp.karnataka.gov.in ನಲ್ಲಿ ಅಥವಾ ಈ ಕಛೇರಿಯ ದೂರವಾಣಿ ಸಂಖ್ಯೆ 08231–200282 ನಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಕಾವೇರಿ ನೀರಾವರಿ ನಿಗಮ ನಿಯಮಿತ, ನಂ.02, ವಿ.ಸಿ.ವಿಭಾಗ,
ಮದ್ದೂರು

ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿಎ/130/2026–27

ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಚಿಕ್ಕಮಗಳೂರು–577101

(Autonomous Medical Institution,Government of Karnataka)
Phone: 08262-295347
E-Mail AddressL directorcims2020@gmail.com

ಸಂಖ್ಯೆ:ಸಿಮ್ಸ್/ಸರಬ/ಟೆಂಡರ್/ಪತ್ರಿಕಾ ಪ್ರಕಟಣೆ/01/2026-27
ದಿನಾಂಕ:14-05-2026

ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ
(ದ್ವಿಲಕೋಟೆ ಪದ್ಧತಿ)

ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅರಳಗುಪ್ಪೆ ಮಲ್ಲೇಗೌಡ ಜಿಲ್ಲಾಆಸ್ಪತ್ರೆಯ ಓಬಿಜಿ ವಿಭಾಗಕ್ಕೆ ಅವಶ್ಯವಿರುವ **Fetal Heart Monitors** ಗಳನ್ನು ಸರಬರಾಜು ಮಾಡಲು ಉತ್ಪಾದಕರವರಿಂದ/ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ/ ಅರ್ಹ ಉದ್ದಿಮೆದಾರರಿಂದ ದ್ವಿ - ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಮರು ಇ–ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್‌ನ ಅಂದಾಜು ಮೊತ್ತ **ರೂ.40.00ಲಕ್ಷಗಳು** ಟೆಂಡರ್‌ನ ಇ.ಎಂ.ಡಿ ಮೊತ್ತ. ಇ-ಟೆಂಡರ್ ಅರ್ಜಿ ಸಲ್ಲಿಸುವ ಪ್ರಾರಂಭ ಮತ್ತು ಅಂತಿಮ ದಿನಾಂಕ ಮತ್ತಿತರೆ ಹೆಚ್ಚಿವ ವಿವರಗಳನ್ನು **https://kppp.karnataka.gov.in** ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದು.

ಸಹಿ/- ನಿರ್ದೇಶಕರು
ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಚಿಕ್ಕಮಗಳೂರು

ಲೋಕೋಪಯೋಗಿ ಇಲಾಖೆ

ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ, ಧಾರವಾಡ ವಿಭಾಗ,
ಧಾರವಾಡ. ದೂ.: 0836–2747944, ಇ–ಮೇಲ್: eepwddha@gmail.com

ಕ್ರಸಂ: ಕಾನಿಇಂಧಾ/ಗುತ್ತಿಗೆ/ಪಿ.ಬಿ.1/2026–27/771 ದಿನಾಂಕ: 15–05–2026

ಟೆಂಡರ್ ಪ್ರಕಟಣೆ

I.F.T – KW –1,2,3,4
ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ)

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ 2000 ರನ್ವಯ ಮತ್ತು ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1,2,3,4ರ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. (kppp.karnataka.gov.in) ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಕನಿಷ್ಠ ರೂ.2.28 ಲಕ್ಷಗಳಿಂದ ಗರಿಷ್ಟ ರೂ.625.00 ಲಕ್ಷಗಳ ವರೆಗೆ, 4059–80–051–0–29–386 ಇಲಾಖಾ ಕಟ್ಟಡಗಳ ನಿರ್ಮಾಣ, 8443 Deposit construction, 4059–80–051–0–60–132, 4059–80–051–0–60–423 (ಟಿ.ಎಸ್.ಪಿ), 4059–80–051–0–60–422 (ಎಸ್.ಸಿ.ಪಿ) ಸನ್ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆ, 2059–80–053–4–00–200 ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ/ನಿರ್ವಹಣೆ, 5054–80–190–0–01–132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ, 5054 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ ಲೆಕ್ಕಶೀರ್ಷಿಕೆ ಅಡಿ ಬರುವ ಕಾಮಗಾರಿಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರ ಈ ಕೆಳಗಿನಂತಿದೆ.

1. Calender of Events: ಸಾಮಾನ್ಯ
1) PWD/2025-26/BD/WORK_INDENT29190/CALL-4 2) PWD/2025-26/SE1161 3) PWD/2026-27/RD/WORK_INDENT35487/CALL-2 4) PWD/2025-26/RD/WORK_INDENT35092/Call-3 5) PWD/2024-25/SE0244/CALL-3 6) PWD/2026-27/SE1189/Call-2 7) PWD/2025-26/BD/WORK_INDENT31543
1) ಪ್ರೀ–ಬಿಡ್/ಆಕ್ಷೇಪಣೆ–ಸಂದೇಹ ದಿನಾಂಕ: 25–05–2026 (ಬೆಳಿಗ್ಗೆ 12:30 ಗಂಟೆಯವರೆಗೆ) 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 26–05–2026 (ಸಾಯಂಕಾಲ 16:00 ಗಂಟೆಯವರೆಗೆ) 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 27–05–2026 (ಸಾಯಂಕಾಲ 16:30 ಗಂಟೆಯ ನಂತರ) 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 29–05–2026 (ಸಾಯಂಕಾಲ 16:30 ಗಂಟೆಯ ನಂತರ)

2. Calender of Events: ಸಾಮಾನ್ಯ
8) PWD/2026-27/BD/WORK_INDENT35679 (Extension) 9) PWD/2026-27/IND0256 10) PWD/2026-27/IND0258 11) PWD/2026-27/BD/WORK_INDENT35403 12) PWD/2025-26/BD/WORK_INDENT34943/CALL-2
13) PWD/ 2025-26/BD/WORK_INDENT34990/CALL-2
14) PWD/2025-26/BD/ WORK_INDENT34272/Call-2
ಪ್ರವರ್ಗ–2ಎ
15) PWD/2025-26/RD/WORK_INDENT33456/CALL-2
ಪ್ರವರ್ಗ–1
16) PWD/2025-26/RD/WORK_INDENT33455/CALL-2
1) ಪ್ರೀ–ಬಿಡ್/ಆಕ್ಷೇಪಣೆ–ಸಂದೇಹ ದಿನಾಂಕ: 04–06–2026 (ಬೆಳಿಗ್ಗೆ 12:30 ಗಂಟೆಯವರೆಗೆ) 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 05–06–2026 (ಸಾಯಂಕಾಲ 16:00 ಗಂಟೆಯವರೆಗೆ) 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06–06–2026 (ಸಾಯಂಕಾಲ 16:30 ಗಂಟೆಯ ನಂತರ) 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 08–06–2026 (ಸಾಯಂಕಾಲ 16:30 ಗಂಟೆಯ ನಂತರ)

ಕಾಮಗಾರಿಗಳಿಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಅಂತರ್‌ಜಾಲ ವಿಳಾಸ http://www.kppp.karnataka.gov.in ದಲ್ಲಿ ಹಾಗೂ **ಲೋಕೊಪಯೋಗಿ ಇಲಾಖೆ ಧಾರವಾಡ ವಿಭಾಗ** ಕಚೇರಿಯಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ. ಒಂದು ವೇಳೆ ಟೆಂಡರ್ ತೆರೆಯುವ ದಿನಾಂಕದಂದು ರಜಾ ದಿನಗಳು ಬಂದಲ್ಲಿ ಕಚೇರಿಯ ಕೆಲಸದ ದಿನದಂದು ಟೆಂಡರ್ ತೆರೆಯಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.

ಡಿಐಪಿಆರ್/ಧಾರವಾಡ/189/ಮಣಿಪಾಲ್/2026–27

KRISHNA BHAGYA JALA NIGAM LIMITED

(A Government of Karnataka Undertaking)
Office of the Executive Engineer, KBJNL, IBC O&M Division-8, Zalaki- 586204. Tq:Indi,
Dist:Vijayapur. Email:eezalaki1@gmail.com

No: KBJNL/IBCDn-8/ZALAKI/DB/Tender-1/ERM SURVEY-NON SR/QTN/2026-27/77 Dated: 14.05.2026

INFORMATION QUOTATION THROUGH KPPP PORTAL FOR PREPARATION OF ESTIMATION ONLY

Information quotations regarding rates are invited for works under **Consultancy Services for preparation of PFR and other allied works for approval from CWC for the work of "Remodelling of IBC from Ch. 64.00 km to 172.00 Km Distributaries, Laterals and Sub-Laterals Including Structures there under,** FOR THE YEAR 2026-27 as per the standard norms of KBJNL by the undersigned on behalf of the Managing Director, KBJNL Bangalore from the registered consultant agencies/Contractors, Last date to receive information quotation is **26.05.2026 @ 4.30 PM,**Details of salient features can be obtained from this office.

(The blank Quotations can be obtained through website www.kppp.karnataka.gov.in and can be submitted through electronic tender box).

Name of Work : **Consultancy Services for preparation of PFR and other allied works for approval from CWC for the work of "Remodelling of IBC from Ch. 64.00 km to 172.00 Km Distributaries, Laterals and Sub-Laterals Including Structures there under.**[KBJNL/2026-27/PREQUAL_TENDER_NUMBER_22]

Work consists of the following items.

Sl.No	Description of Items	Unit	Quantity	Rate (Excluding of GST)
1	Preparation of Pre-Feasibility Report (PFR) for IBC Ch: 64.00 to 172.00 Km as per the standard guidelines of CWC year 2017 and uploading the same in e-PAMS portal of CWC & Liaisoning with various Directorates viz,. for approval of PFR including attending meetings, Preparation of presentation and technical clarification to CWC offices etc., complete as directed by Engineer-in-Charge.	Job	1	
2	**STAGE-1**: Preparation of 10-daily computations of Crop Water Requirement (CWR) by estimating Reference Evapotranspiration (ETo) using recent 30 years climatological data influencing the command area & compiling the total water demand separately for Irrigation, domestic, industrial and power generation for following projects executed under Upper Krishna Project (UKP) Stage I including submission to CWC, New Delhi and providing technical clarification if any sought by CWC offices etc., complete as directed Engineer-in-Charge			
	Narayanapura Left Bank Canal (NLBC) - 47,223 Ha	Job	1	
	Shahpura Branch Canal (SBC) - 1,22,120 Ha	Job	1	
	Mudbal Branch Canal (MBC) - 51,000 Ha	Job	1	
	Jewargi Branch Canal (JBC) - 57,100 Ha	Job	1	
	Indi Branch Canal (IBC) - 1,31,260 Ha	Job	1	
	Almatti Left Bank Canal (ALBC) - 20,235 Ha	Job	1	
3	**STAGE-2**: Preparation of 10-daily computations of Crop Water Requirement (CWR) by estimating Reference Evapotranspiration (ETo) using recent 30 years climatological data influencing the command area & compiling the total water demand separately for Irrigation, domestic, industrial and power generation for following projects executed under Upper Krishna Project (UKP) Stage II including submission to CWC, New Delhi and providing technical clarification if any sought by CWC offices etc., complete as directed Engineer-in-Charge			
	Narayanapura Right Bank Canal (NRBC) - 84,000 Ha	Job	1	
	Almatti Right Bank Canal (ARBC) - 16,100 Ha	Job	1	
	Mulwad LIS (MLIS) - 30,850 Ha	Job	1	
	Rampur LIS (RLIS) - 20235 Ha	Job	1	
	Indi LIS (ILIS) - 41,900 Ha	Job	1	
	Narayanapura Right Bank Canal (NRBC) - 84,000 Ha	Job	1	
4	Prepartion of 10-daily Working Table for Almatti and Narayanapura Reservoirs considering the recent 30 years inflow,outflow & utilization data and assess the Combined Reservoir Performance & submission to CWC, New Delhi and providing technical clarification if any sought by CWC offices etc., complete as directed Engineer-in-Charge, complete as directed Engineer-in-Charge.	Job	1	

NOTE : 1] ಇ–ಪ್ರಾಕ್ಯೂರಮೆಂಟ್ http://kppp.karnataka.gov.in ವೆಬಸೈಟನಲ್ಲಿರುವ ಕಾಮಗಾರಿಯ ಐಟಂಗಳಿಗೆ ಕೋಟೇಶನ ಸಲ್ಲಿಸುವ ದಿನಾಂಕ: 19.05.2026 ರಿಂದ 26.05.2026 ರ ಸಾಯಂಕಾಲ 4.30 ಗಂಟೆಯವರೆಗೆ ಸಲ್ಲಿಸುವದು. 2] ಭರ್ತಿಗೊಳಿಸಿದ ಕೋಟೇಶನ್ ಸಲ್ಲಿಸಲು ಕೊನೆಯ ದಿನಾಂಕ: 26.05.2026 ರಸಾಯಂಕಾಲ 4.30 ಘಂಟೆಯವರೆಗೆ. 3] ಕೋಟೇಶನ ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಇಂಶಾಕಾ, ನಿಮಪೋ, ವಿಭಾಗ ಸಂ:8, ಝಳಕಿ ಕಛೇರಿಯಲ್ಲಿ ದಿನಾಂಕ: 29.05.2026 ರ ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವದು. 4] ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕ ಪರಿಗಣಿಸುವದು. ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಇಂಶಾಕಾ, ವಿಭಾಗ ಸಂ: 8, ಝಳಕಿ ಕಛೇರಿ ವೇಳೆಯಲ್ಲಿ ಪಡೆಯಬಹುದು ಅಥವಾ http://kppp.karnataka.gov.in ವೆಬ್ ಸೈಟ್ ನಿಂದ ಪಡೆಯಬಹುದು. 5] The Concerned agencies/firms should visit the site of Remodelling of IBC from Ch.64.00 km to 172.00 Km Distributaries, Laterals and Sub-Laterals Including Structures there under and preparation of PFR and other allied works for approval from CWC Hence,obtain the Technical Data from undersigned. The rates shall be quoted for Individual items. 6] Goods and Service Tax (GST) is excluded in the above amount and shall be payable as applicable. 7] All rights are reserved by the undersigned to accept or Reject the quotations.

Sd/- Executive Engineer,
KBJNL, IBC O&M Division-8, Zalaki.
Tq: Indi, Dist: Vijayapur

ವಾಸಾಸಂಇ/ವಿಜಯಪುರ/99/ಕೆಎಸ್‌ಎಂಸಿಎ/2026–27

ಹೆರೂರಿನ ಗಿರಿಜನ ಹಾಡಿಯೊಳಗೆ ಅಕ್ರಮ ಕಟ್ಟಡ ನಿರ್ಮಾಣ | ಸ್ಥಳೀಯರ ಪ್ರತಿಭಟನೆ | ಸ್ಥಳಕ್ಕೆ ಅಧಿಕಾರಿಗಳ ಭೇಟಿ

ಅನಧಿಕೃತ ಚರ್ಚ್: ತಮಿಳ್ನಾಡು ಮಂದಿ ಪೊಲೀಸ್ ವಶಕ್ಕೆ





ಸುಂಟಿಕೊಪ್ಪ : ಸುಂಟಿಕೊಪ್ಪ ಠಾಣಾ ವ್ಯಾಪ್ತಿಯ ಹೆರೂರಿನ ಗಿರಿಜನ ಹಾಡಿಯೊಳಗೆ ಅಕ್ರಮ ಕಟ್ಟಡ ಕಟ್ಟಿದ್ದು ಮಾತ್ರವಲ್ಲದೆ ಅನಧಿಕೃತವಾಗಿ ಚರ್ಚ್ ಎಂದು ಉದ್ಘಾಟನೆಗೆ ಆಗಮಿಸಿದ ಮಂದಿಯನ್ನು ತಮಿಳುನಾಡು ಮೂಲದ ವ್ಯಕ್ತಿಗಳನ್ನು ಸುಂಟಿಕೊಪ್ಪ ಪೊಲೀಸರು ವಶಕ್ಕೆ ಪಡೆದ ಘಟನೆ ವರದಿಯಾಗಿದೆ.

ಶನಿವಾರದಂದು ನೆರೆಯ ರಾಜ್ಯ ತಮಿಳುನಾಡುವಿನಿಂದ 2-4 ಟಿಟಿವಾಹನಗಳಲ್ಲಿ ಆಗಮಿಸಿದ ವ್ಯಕ್ತಿಗಳು ಅಕ್ರಮ ಕಟ್ಟಡದಲ್ಲಿ ಟೇಪ್ ಕತ್ತರಿಸಿ ಉದ್ಘಾಟನೆಗೆ ಮುಂದಾಗಿದ್ದನ್ನು ಪ್ರಶ್ನಿಸಿದ ಸ್ಥಳೀಯ ಗ್ರಾಮಸ್ಥರೊಂದಿಗೆ ನಾಕೂರು ಶಿರಂಗಾಲ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಮಂದೋಡಿ ಜಗನ್ನಾಥ್, ಚಂದ್ರಶೇಖರ್ ಹೆರೂರು ಸೇರಿದಂತೆ ಗ್ರಾಮದ ಮುಖಂಡರು ಸುಂಟಿಕೊಪ್ಪ ಪೊಲೀಸ್‌ಠಾಣೆಗೆ ಲಿಖಿತ ಡಿವೈಎಸ್‌ಪಿ ದೂರನ್ನು ಸಲ್ಲಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಕುಶಾಲನಗರ ವೃತ್ತ ನಿರೀಕ್ಷಕ ದಿನೇಶ್‌ಕುಮಾರ್ ಸುಂಟಿಕೊಪ್ಪ ಠಾಣಾಧಿಕಾರಿ ಮೋಹನ್‌ರಾಜ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಪರಿಸ್ಥಿತಿಯನ್ನು ಹತೋಟಿಗೆ ತಂದಿದ್ದಾರೆ. ಕೂಡಲೇ ಚರ್ಚ್ ಬಳಿಯಲ್ಲಿದ್ದವರನ್ನು ವಾಹನ ಸಮೇತ ಪೊಲೀಸ್ ಠಾಣೆಗೆ ಕರೆ ತಂದಿದ್ದು, ದೂರು ದಾಖಲಿಸಿದ ಸಂದರ್ಭ ಸ್ಥಳದಲ್ಲಿ ಚಂದ್ರಶೇಖರ್ ಸುಂಟಿಕೊಪ್ಪ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಪಿ.ಆರ್. ಸುನಿಲ್‌ಕುಮಾರ್, ಅರುಣ್ ಚೆಂಗಪ್ಪ, ಗಣೇಶ್ ,ಚರಣ್, ಸಂಜು, ಹೇಮಚಂದ್ರ, ಗಗನ್, ಚಂದ್ರಶೇಖರ್, ಡಯಾನ್, ರಾಜೇಶ್, ದಿಶಾಂತ್, ರಮೇಶ್, ಶಿವು, ಸುನಿಲ್ ಮತ್ತಿತರರು ಇದ್ದರು.

ಸ್ಥಳಕ್ಕೆ ನಾಕೂರು ಶಿರಂಗಾಲ ಗ್ರಾಮ ಪಂಚಾಯತ್ ಆಡಳಿತಾಧಿಕಾರಿ ಶ್ರೀಕಾಂತ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಆಸ್ಮ ಭೇಟಿ ನೀಡಿ ಪರಿಶೀಲಿಸಿದರು.

ಇದೇ ಸಂದರ್ಭದಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ಜಗನ್ನಾಥ್ ಮಾತನಾಡಿ, ಇದೊಂದು ಹೆರೂರು ಗ್ರಾಮಕ್ಕೆ ಆತಂಕಕಾರಿ ವಿಚಾರವಾಗಿದೆ. ಪರಿಶಿಷ್ಟ ಪಂಗಡಕ್ಕೆ ದೊರೆಯುವ ಎಲ್ಲಾ ಸವಲತ್ತುಗಳನ್ನು ಪಡೆದುಕೊಂಡು ಮತ್ತೊಂದು ಧರ್ಮದ ಪರಿಪಾಲನೆ ನಡೆಯುತ್ತಿದೆ. ಇಂತಹವರ ವಿರುದ್ಧ ಸಮಾಜ ಕಲ್ಯಾಣ ಇಲಾಖೆ ಕಟ್ಟುನಿಟ್ಟಿನ ಕ್ರಮವಹಿಸಬೇಕಿದೆ. ದಿಢೀರ್ ಬೆಳವಣಿಗೆಯಲ್ಲಿ ಮನೆ ನಿರ್ಮಿಸಿಕೊಳ್ಳುತ್ತಿದ್ದಾರೆ ಎಂದು ಭಾವಿಸಿದ ಕಟ್ಟಡವನ್ನು ಚರ್ಚ್ ನಿರ್ಮಿಸಿರುವುದು ಗ್ರಾಮಸ್ಥರನ್ನು ಭೀತಿಗೊಳಿಸುವ ಕಾರ್ಯತಂತ್ರವಾಗಿದೆ ಎಂದು ಜಗನ್ನಾಥ್ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಇಲ್ಲಿಯ ತನಕ ಹೊರೂರು ನಡೆಯುತ್ತಿದ್ದ ಚಟುವಟಿಕೆಯು ಹೆರೂರು ಹಾಡಿಯೊಳಗೆ ನಡೆಸಲು ಪ್ರಯತ್ನಿಸಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಎಚ್ಚೆತ್ತುಕೊಂಡು ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸಬೇಕೆಂದು ಬಿಜೆಪಿ ಯುವ ಮುಖಂಡ ಹೆರೂರು ಚಂದ್ರಶೇಖರ್ ಹೇಳಿದರು.

ಸುಂಟಿಕೊಪ್ಪ ಗ್ರೇಡ್ 1 ಗ್ರಾ.ಪಂ. ಮಾಜಿ ಅಧ್ಯಕ್ಷಪಿ.ಆರ್.ಸುನಿಲ್‌ಕುಮಾರ್ ಮಾತನಾಡಿ ಇದು ಧಾರ್ಮಿಕ ಸಾಮರಸ್ಯವನ್ನು ನಮ ಸಹಬಾಳ್ವೆಯನ್ನು ಕದಡುವ ಷಡ್ಯಂತ್ರದ ಒಂದು ಭಾಗವಾಗಿದೆ ಸಂಬಂಧಿಸಿದ ಇಲಾಖೆಯು ಸ್ಥಳೀಯ ಅಧಿಕಾರಿಗಳ ಮೂಲಕ ಹಾಡಿಗಳಲ್ಲಿ ಎಂತಹ ಕಾರ್ಯಚಟುವಟಿಕೆಗಳು ನಡೆಯುತ್ತಿದೆ ಎಂದು ಪರಿಶೀಲಿಸಿದರೆ ಈ ರೀತಿಯ ಬೆಳವಣಿಗೆಗಳು ಆಗುತ್ತಿರಲಿಲ್ಲ ಎಂದು ಸಂಬಂಧಿಸಿದ ಇಲಾಖೆ ಪೊಲೀಸ್ ಇಲಾಖೆಗೆ ಸೂಕ್ತ ದೂರನ್ನು ಸಲ್ಲಿಸುವ ಮೂಲಕ ಹಾಡಿಯಲ್ಲಿ ನಡೆದಿರುವ ಅಕ್ರಮ ಚಟುವಟಿಕೆಯ ಪೂರ್ಣ ವಿವರವನ್ನು ಸಾರ್ವಜನಿಕರ ಮುಂದೆ ಇಡಬೇಕು, ಇಲ್ಲದಿದ್ದಲ್ಲಿ ಕಾಲವಕಾಶ ನೀಡಿ ಪ್ರತಿಭಟನೆ ಹಮ್ಮಿಕೊಳ್ಳುವ ಬಗ್ಗೆ ಕೂಡ ಚಿಂತಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಇದೇ ಸಂದರ್ಭ ಹಾಡಿಯ ನಿವಾಸಿಗಳು ಹಾಗೂ ಸ್ಥಳೀಯರ ನಡುವೆ ಮಾತಿನ ಚಕಮಕಿ ನಡೆಯಿತು. ಪೊಲೀಸರ ಮಧ್ಯಸ್ಥಿಕೆಯಿಂದ ಪರಿಸ್ಥಿತಿ ತಿಳಿಯಾಯಿತು.

3 ಕ್ಲಿನಿಕ್, ವಕೀಲರ ಕಚೇರಿಯಲ್ಲಿ ಕಳವು

ಉಪ್ಪಿನಂಗಡಿ : ಇಲ್ಲಿನ ಪೇಟೆಯ ಹೃದಯ ಭಾಗದಲ್ಲಿರುವ ಮೂರು ವೈದ್ಯರ ಕ್ಲಿನಿಕ್ ಗಳಿಗೆ ಹಾಗೂ ಒಂದು ವಕೀಲರ ಕಚೇರಿಗೆ ನುಗ್ಗಿದ ಕಳ್ಳರು ಒಟ್ಟು 71500 ರೂ. ನಗದು ಹಣವನ್ನು ದೋಚಿದ ಘಟನೆ ಶನಿವಾರ ಬೆಳಕಿಗೆ ಬಂದಿದೆ.

ಉಪ್ಪಿನಂಗಡಿಯ ಖ್ಯಾತ ಮಕ್ಕಳ ತಜ್ಞ ಡಾ. ಎಂ. ಎನ್. ಭಟ್‌ರವರ ಕ್ಲಿನಿಕ್‌ನ ಬೀಗ ಮುರಿದು ಒಳ ನುಗ್ಗಿದ ಕಳ್ಳರು ಕ್ಲಿನಿಕ್ ನೊಳಗಿದ್ದ ರೂ. 55000 ನಗದನ್ನು ದೋಚಿದ್ದಾರೆ. ಕ್ಲಿನಿಕ್‌ಗೆ ಶನಿವಾರ ರಜಾ ದಿನವಾಗಿದ್ದರಿಂದ ಕಳವು ಕೃತ್ಯ ಶನಿವಾರ ಸಾಯಂಕಾಲದ ವೇಳೆ ಗಮನಕ್ಕೆ ಬಂದಿತ್ತು. ಇದೇ ಕಟ್ಟಡದ ಮುಂಭಾಗದ ಕಟ್ಟಡದಲ್ಲಿದ್ದ ಡಾ. ಗೋವಿಂದ ಪ್ರಸಾದ್ ಕಜೆ ಅವರ ಕ್ಲಿನಿಕ್‌ನ ಒಂದು ಬೀಗವನ್ನು ಮುರಿದ ಕಳ್ಳರು ಇನ್ನೊಂದು ಬೀಗವನ್ನು ತೆಗೆಯಲು ಸಾಧ್ಯವಾಗದೆ ಹಿಂತಿರುಗಿದ್ದಾರೆ. ಅದೇ ಕಟ್ಟಡದಲ್ಲಿರುವ ಡಾ. ರಾಜಾರಾಮ ಕೆ. ಬಿ. ಅವರ ದಂತ ಚಿಕಿತ್ಸಾಲಯಕ್ಕೆ ನುಗ್ಗಿದ ಕಳ್ಳರು ಹಣಕ್ಕಾಗಿ ವೈದ್ಯರ ಟೇಬಲ್‌ನ ಡ್ರಾಯರ್‌ನ್ನು ಮುರಿದಿದ್ದು, ದಾಖಲೆಗಳನ್ನು ಚೆಲ್ಲಾಪಿಲ್ಲಿಗೊಳಿಸಿದ್ದಾರೆ. ಅಲ್ಲಿ ಹಣವಿರಲಿಲ್ಲ. ಸನಿಹದಲ್ಲೇ ಇದ್ದ ಅರವಿಂದ ಭಂಡಾರಿ ಎಂಬ ನೋಟರಿ ವಕೀಲರ ಕಚೇರಿಯ ಬೀಗ ಮುರಿದು ಒಳನುಗ್ಗಿದ ಕಳ್ಳರು ಕಚೇರಿಯಲ್ಲಿದ್ದ 16500 ರೂ. ಹಣವನ್ನು ಎಗರಿಸಿದ್ದಾರೆ.

ಶುಕ್ರವಾರದಂದು ಉಪ್ಪಿನಂಗಡಿ ಠಾಣಾ ವ್ಯಾಪ್ತಿಯಲ್ಲಿ ಪೊಲೀಸ್ ಸಿಬ್ಬಂದಿಯ ಮನೆಗೆ ನುಗ್ಗಿ 15.80 ಲಕ್ಷ ರೂ. ಮೌಲ್ಯದ ನಗ ನಗದನ್ನು ದೋಚಿದ ಕಳ್ಳತನದ ಬೆನ್ನಲ್ಲೇ ಉಪ್ಪಿನಂಗಡಿ ಪೇಟೆಯಲ್ಲೇ ನಾಲ್ಕು ಕಡೆಗಳಲ್ಲಿ ಕಳ್ಳತನ ನಡೆದಿರುವುದು ನಾಗರಿಕ ವಲಯದಲ್ಲಿ ಕಳವಳ ಮೂಡಿಸಿದೆ.

ರಸ್ತೆ ವಿಭಜಕಕ್ಕೆ ಗುದ್ದಿದ ಕಾರು

ಮೂಡುಬಿದಿರೆ: ಕಾರ್ಕಳ- ಮೂಡುಬಿದಿರೆ ರಾಷ್ಟ್ರೀಯ ಹೆದ್ದಾರಿಯ ಬನ್ನಡ್ಕ- ಕೆಸರುಗದ್ದೆ ಮಾರ್ಗದಲ್ಲಿ ಕಾರೊಂದು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಜಖಂಗೊಂಡಿದೆ. ರಸ್ತೆಯಲ್ಲಿ ನೀರು ನಿಂತಿದ್ದರಿಂದ ಕಾರ್ಕಳ ಕಡೆಯಿಂದ ಮೂಡುಬಿದಿರೆಯತ್ತ ಬರುತ್ತಿದ್ದ ಕಾರು ಚಾಲಕ ತಕ್ಷಣ ಬ್ರೇಕ್ ಹಾಕಿದ ಪರಿಣಾಮ, ಕಾರು ನಿಯಂತ್ರಣ ಕಳೆದುಕೊಂಡು ತಿರುಗಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಕಾರಿನ ಮುಂಭಾಗ ಭಾಗಶಃ ಹಾನಿಯಾಗಿದ್ದು, ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಆಳ್ವಾಸ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಚೊಚ್ಚಲ ಹಿರಿಯ ವಿದ್ಯಾರ್ಥಿಗಳ ಸಮಾವೇಶ

ಆಳ್ವಾಸ್ ಸಂಸ್ಥೆ ಭಾರತೀಯ ಸಂವಿಧಾನದ ಮೌಲ್ಯಗಳ ಪ್ರತೀಕ



ಮೂಡುಬಿದಿರೆ: ಆಳ್ವಾಸ್ ಭಾರತೀಯ ಸಂವಿಧಾನದ ಮೌಲ್ಯಗಳನ್ನು ಅನುಸರಿಸಿ ವಿದ್ಯಾರ್ಥಿಗಳಲ್ಲಿ ಉತ್ತಮ ನಾಗರಿಕತ್ವವನ್ನು ಬೆಳೆಸುವ ಆದರ್ಶ ಶಿಕ್ಷಣ ಸಂಸ್ಥೆ ಎಂದು ಮಂಗಳೂರು ವಿವಿಯ ಕುಲಪತಿ ಡಾ ಪಿ ಎಲ್ ಧರ್ಮ ನುಡಿದರು. ಅವರು ಶನಿವಾರ ಆಳ್ವಾಸ್ ತಾಂತ್ರಿಕ ಮಹಾವಿದ್ಯಾಲಯದ ಚೊಚ್ಚಲ ಹಿರಿಯ ವಿದ್ಯಾರ್ಥಿಗಳ ಸಮಾವೇಶದಲ್ಲಿ ಮಾತನಾಡಿದರು.

ಆಳ್ವಾಸ್ ಶಿಕ್ಷಣ ಸಂಸ್ಥೆಯು ಕೇವಲ ಶಿಕ್ಷಣ ನೀಡುವುದಲ್ಲ; ವಿದ್ಯಾರ್ಥಿಗಳಲ್ಲಿ ಮಾನವೀಯತೆ, ಶಿಸ್ತು, ರಾಷ್ಟ್ರೀಯತೆ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಬೆಳೆಸುತ್ತಿದೆ. ವಿವಿಧ ರಾಜ್ಯಗಳಿಂದ ಬಂದ ವಿದ್ಯಾರ್ಥಿಗಳು ಇಲ್ಲಿ ಒಂದೇ ಕುಟುಂಬದಂತೆ ಬೆರೆತು ಬದುಕುವುದು ಭಾರತದ ಏಕತೆಯ ಸಂಕೇತವಾಗಿದೆ ಎಂದರು.

ಮಂಗಳೂರು ವಿವಿ ಕುಲಪತಿಗಳ ಹೆಸರು ಹಲವರಿಗೆ ತಿಳಿದಿರದೇ ಇರಬಹುದು, ಆದರೆ ಡಾ. ಮೋಹನ್ ಆಳ್ವರ ಹೆಸರು ಎಲ್ಲರಿಗೂ ಪರಿಚಿತವಾಗಿದೆ. ಅದು ಅವರ ವ್ಯಕ್ತಿತ್ವದ ಮಹತ್ವವನ್ನು ತೋರಿಸುತ್ತದೆ. ಡಾ. ಆಳ್ವರು ಶಿಕ್ಷಣ ಕ್ಷೇತ್ರದಲ್ಲಿ ವಿಶಿಷ್ಟ ಕೊಡುಗೆ ನೀಡಿದ ಮಹನೀಯರು. ಅವರು ಸ್ಥಾಪಿಸಿದ ಆಳ್ವಾಸ್ ಶಿಕ್ಷಣ ಸಂಸ್ಥೆ ಇಂದು ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ರೂಪಿಸುತ್ತಿರುವ ಜ್ಞಾನ ಮಂದಿರವಾಗಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೂ ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂಬ ಉದ್ದೇಶದಿಂದ ಅವರು ಶಿಕ್ಷಣ ಸೇವೆಯನ್ನು ಆರಂಭಿಸಿದರು. ಅವರ ಪರಿಶ್ರಮ ಮತ್ತು ದೂರದೃಷ್ಟಿಯ ಫಲವಾಗಿ ಆಳ್ವಾಸ್ ರಾಜ್ಯ ಮತ್ತು ದೇಶದ ಮಟ್ಟದಲ್ಲಿ ಖ್ಯಾತಿ ಪಡೆದಿದೆ.

ಹಿರಿಯ ವಿದ್ಯಾರ್ಥಿಗಳ ಸಮಾವೇಶವು ವಿದ್ಯಾರ್ಥಿಗಳು ಮತ್ತು ಸಂಸ್ಥೆಯ ನಡುವಿನ ಬಾಂಧವ್ಯವನ್ನು ಗಟ್ಟಿಗೊಳಿಸುವ ಉತ್ತಮ ವೇದಿಕೆ. ಈ ಕಾರ್ಯಕ್ರಮಗಳಲ್ಲಿ ಜೀವನದಲ್ಲಿ ಎದುರಿಸಿದ ಸಂಕಷ್ಟಗಳನ್ನು ಹೇಗೆ ಜಯಿಸಿದರು ಎಂಬುದನ್ನು ತಿಳಿಸುವ ಮೂಲಕ ಕಿರಿಯ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ ತುಂಬಬೇಕು ಎಂದರು.

ಕಟೀಲು ಕಾಲೇಜಿನ ನಿವೃತ್ತ ಪ್ರಾಚಾರ್ಯ ಎಂ. ಬಾಲಕೃಷ್ಣ ಶೆಟ್ಟಿ ಮಾತನಾಡಿ, ಹಿರಿಯ ವಿದ್ಯಾರ್ಥಿಗಳು ಸಂಸ್ಥೆಯ ಕಲ್ಪವೃಕ್ಷದ ಕೊಂಬೆಗಳಂತೆ. ಹಿರಿಯ ವಿದ್ಯಾರ್ಥಿಗಳು ತಮ್ಮ ಸಂಸ್ಥೆಯೊಂದಿಗೆ ಸದಾ ಭಾವನಾತ್ಮಕ ಬಾಂಧವ್ಯ ಹೊಂದಿರಬೇಕು. ಅವರು ತಮ್ಮ ಯಶಸ್ಸಿನ ಹಾದಿಯಲ್ಲಿ ಪಡೆದ ಶಿಕ್ಷಣ ಮತ್ತು ಮಾರ್ಗದರ್ಶನವನ್ನು ಮರೆಯದೆ, ಸಂಸ್ಥೆಯ ಅಭಿವೃದ್ಧಿಗೆ ಸಹಕಾರ ನೀಡಬೇಕು. ತಮ್ಮ ಅನುಭವವನ್ನು ಕಿರಿಯ ವಿದ್ಯಾರ್ಥಿಗಳೊಂದಿಗೆ ಹಂಚಿಕೊಳ್ಳುವ ಮೂಲಕ ಅವರು ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಬೇಕು. ಡಾ. ಮೋಹನ್ ಆಳ್ವರು ಲಾಭದ ಹಿಂದೆ ಹೋಗದೇ, ಮೌಲ್ಯಗಳ ಹಿಂದೆ ನಡೆದವರು. ಈ ಸಂಸ್ಥೆ ಕೇವಲ ಯಾಂತ್ರಿಕವಾಗಿ ನಿರ್ಮಾಣವಾಗಿಲ್ಲ; ಮನುಷ್ಯತ್ವದ ಅಡಿಪಾಯದಲ್ಲಿ ನಿರ್ಮಿಸಲಾಗಿದೆ ಎಂದರು.

ವಿದ್ಯಾರ್ಥಿಗಳೇ ಸಂಪತ್ತು

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ಮಾತನಾಡಿ, ಶಿಕ್ಷಣ ಸಂಸ್ಥೆಯ ಯಶಸ್ಸು ಅದರ ಕಟ್ಟಡಗಳು ಅಥವಾ ಆರ್ಥಿಕ ಸಂಪತ್ತಿನಿಂದ ಮಾತ್ರ ಅಳೆಯಲಾಗುವುದಿಲ್ಲ. ಆ ಸಂಸ್ಥೆಯಲ್ಲಿ ಕಲಿತು ಸಮಾಜದಲ್ಲಿ ಉತ್ತಮ ಸ್ಥಾನ ಪಡೆದಿರುವ ವಿದ್ಯಾರ್ಥಿಗಳೇ ಅದರ ನಿಜವಾದ ಗೌರವ ಮತ್ತು ಸಂಪತ್ತು. ಇಲ್ಲಿ ಕಲಿತ ವಿದ್ಯಾರ್ಥಿಗಳು ವೈದ್ಯರು, ಇಂಜಿನಿಯರ್‌ಗಳು, ಶಿಕ್ಷಕರು, ವಿಜ್ಞಾನಿಗಳು ಮತ್ತು ಸಮಾಜಸೇವಕರಾಗಿ ಬೆಳೆದು ಸಮಾಜಕ್ಕೆ ಸೇವೆ ಸಲ್ಲಿಸುತ್ತಾರೆ. ಅವರು ತಮ್ಮ ಸಾಧನೆಗಳ ಮೂಲಕ ಶಿಕ್ಷಣ ಸಂಸ್ಥೆಯ ಹೆಸರನ್ನು ಎತ್ತಿ ಹಿಡಿಯುತ್ತಾರೆ. ಆದ್ದರಿಂದ ಹಳೆಯ ವಿದ್ಯಾರ್ಥಿಗಳ ಸಾಧನೆ ಯಾವುದೇ ಹಣದ ಸಂಪತ್ತಿಗಿಂತ ಮೌಲ್ಯಯುತವಾಗಿದೆ ಎಂದರು.

2008ರಲ್ಲಿ ಆರಂಭವಾದ ಇಂಜಿನಿಯರಿಂಗ್ ಕಾಲೇಜು ಇಂದು ಗುಣಮಟ್ಟದ ಶಿಕ್ಷಣ ನೀಡುತ್ತಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ಯುಗದಲ್ಲಿ ಇಂಜಿನಿಯರಿಂಗ್ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವಿದೆ. ಯುವಕರು ತಾಂತ್ರಿಕ ಜ್ಞಾನವನ್ನು ಪಡೆದು ದೇಶದ ಅಭಿವೃದ್ಧಿಗೆ ಕೊಡುಗೆ ನೀಡಬೇಕು ಎಂದರು. ಆರಂಭದಲ್ಲೇ ಮೆಡಿಕಲ್ ಕಾಲೇಜು ಆರಂಭಿಸದೆ ಮೂಲಭೂತ ಶಿಕ್ಷಣಕ್ಕೆ ಆದ್ಯತೆ ನೀಡಿದ ನಿರ್ಧಾರವೇ ಆಳ್ವಾಸ್ ಸಂಸ್ಥೆಯ ಇಂದಿನ ಯಶಸ್ಸಿಗೆ ಕಾರಣವಾಗಿದೆ ಎಂದರು.

ಹಿರಿಯ ವಿದ್ಯಾರ್ಥಿಗಳ ಸಂಘದ ಸ್ಥಾಪನೆ ಹಾಗೂ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಟ್ರಸ್ಟಿ ವಿವೇಕ್ ಆಳ್ವ, ಕಾಲೇಜಿನ ಪ್ರಾಚಾರ್ಯ ಡಾ. ಪೀಟರ್ ಫೆನಾಂಡೀಸ್, ಕಾಲೇಜಿನ ಮಾಜಿ ಪ್ರಾಂಶುಪಾಲ ಗೋವಿಂದ ಗೌಡ ಹಾಗೂ ಕಾಲೇಜಿನ ಎಲ್ಲಾ ವಿಭಾಗಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

ಸಹಾಯಕ ಪ್ರಾಧ್ಯಾಪಕಿ ದೀಕ್ಷಾ ಕಾರ್ಯಕ್ರಮ ನಿರೂಪಿಸಿ, ವಾಸುದೇವ್ ಶಹಪುರ್ ಸ್ವಾಗತಿಸಿದರು.

ಕೋಟೆತ್ತಡ್ಕದಲ್ಲಿ ದಾಖಲೆ ತಿದ್ದಿ ಗಣಿಗಾರಿಕೆ ಪತ್ತೆ

ವಿಟ್ಲ: ಅಳಿಕೆ ಕೋಟೆತ್ತಡ್ಕದಲ್ಲಿ ಪರವಾನಿಗೆ ಅವಧಿ ಮುಗಿದ ಬಳಿಕವೂ ಕೆಂಪು ಕಲ್ಲು ಗಣಿಗಾರಿಕೆ ನಡೆಸಿದ ಬಗ್ಗೆ ವಿಟ್ಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಟ್ಲ ಪೊಲೀಸ್ ಠಾಣಾ ಪೊಲೀಸ್ ಉಪನಿರೀಕ್ಷಕರಾದ ರಾಮಕೃಷ್ಣರಿಗೆ ಮಾಹಿತಿ ಬಂದ ಮೇರೆಗೆ ಕೋಟೆತ್ತಡ್ಕಕ್ಕೆ ವಿಟ್ಲ ಪೊಲೀಸರು ತೆರಳಿ ದಾಖಲೆಯನ್ನು ಪರಿಶೀಲಿಸಿದ್ದಲ್ಲದೆ, ಗಣಿಗಾರಿಕೆಗೆ ಸಂಬಂಧಿಸಿದ ದಾಖಲಾತಿಗಳನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಮೂಲಕ ಪರಿಶೀಲಿಸಿದಾಗ ಏ.29ರಂದು ಪರವಾನಿಗೆ ಮುಕ್ತಾಯಗೊಂಡಿರುವುದು ದೃಢಪಟ್ಟಿದ್ದು, ಪತ್ರದಲ್ಲಿ ನಮೂದಿಸಲಾಗಿದ್ದ ದಿನಾಂಕವನ್ನು ಮೇ 29ಎಂದು ತಿದ್ದಿರುವುದು ಕಂಡು ಬಂದಿದೆ.

ಬಂಟ್ವಾಳ ಮೇರಮಜಲು ನಿವಾಸಿ ರಂಜೀತ್ ಕುಮಾರ್ ಎಂಬಾತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಪುತ್ತೂರು ಮಾರುಕಟ್ಟೆ ಧಾರಣೆ

16-05-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	440 - 470	ಹಳೆ ಕರಿಗೋಟು	265 - 295
ಚೋಲ್ ಅಡಿಕೆ	520 - 540	ಹಸಿ ಕೊಕ್ಕೋ	70 - 105
ಡಬಲ್ ಚೋಲ್	520 - 540	ಒಣ ಕೊಕ್ಕೋ	270 - 320
ಹೊಸ ಪಟೋರ	355 - 405		
ಹಳೆ ಪಟೋರ	375 - 405		
ಹೊಸ ಉಳ್ಳಿ	140 - 300		
ಹಳೆ ಉಳ್ಳಿ	130 - 300		
ಹೊಸ ಕೋಕಾ	325 - 345		
ಹಳೆ ಕೋಕಾ	325 - 345		
ಹೊಸ ಕರಿಗೋಟು	265 - 295		

ಕಾಳುಮೆಣಸು ಧಾರಣೆ

ಕಾಳುಮೆಣಸು : 450 - 685

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	256.00
ಆರ್‌ಎಸ್‌ಎಸ್ 2	211.00
ಸ್ಕ್ರಾಪ್ 1	151.50
ಸ್ಕ್ರಾಪ್ 2	140.00

ಬೆಳ್ತಂಗಡಿ, ಮೂಡುಬಿದಿರೆ, ಬಂಟ್ವಾಳ ತಾಲೂಕುಗಳಲ್ಲಿ ನಾಗರಿಕರನ್ನು ಅಕ್ಷರಶಃ ಬೆಚ್ಚಿಬೀಳಿಸಿದ ಶನಿವಾರದ ವರ್ಷಧಾರೆ

ಗಾಳಿ ಮಳೆಯ ರಭಸದಲ್ಲಿ ಕೊಚ್ಚಿಹೋದ ಕೃಷಿ, ಖುಷಿ


ಬೆಳ್ತಂಗಡಿ


ಮೂಡುಬಿದಿರೆ




ಬಂಟ್ವಾಳ

ಬೆಳ್ತಂಗಡಿ: ತಾಲೂಕಿನ ಗ್ರಾಮೀಣ ಭಾಗ ಈ ಬಾರಿ ಬೇಸಿಗೆ ಮಳೆಯೊಂದಿಗೆ ಬೀಸುತ್ತಿರುವ ಗಾಳಿಗೆ ಕತ್ತರಿಸಿ ಹೋಗಿದೆ. ಕಳೆದ ಎರಡು ತಿಂಗಳಿನಿಂದ ತಾಲೂಕಿನಲ್ಲಿ ಆಗಾಗ ಬೇಸಿಗೆ ಮಳೆ ಸುರಿಯುತ್ತಿದ್ದು ಕಳೆದ ನಾಲ್ಕೈದು ದಿನಗಳಿಂದ ಪ್ರತಿದಿನ ಸುರಿಯುತ್ತಿದೆ ಮಳೆಯಿಂದ ನೀರಿನ ಸಮಸ್ಯೆ ದೂರವಾಗಿದೆ. ಆದರೆ ಪ್ರತಿ ಮಳೆಯೊಂದಿಗೆ ಬೀಸುವ ಗಾಳಿ ಹೆಚ್ಚಿನ ಅವಾಂತರವನ್ನು ಉಂಟು ಮಾಡುತ್ತಿದ್ದು ಅಪಾರ ಪ್ರಮಾಣದ ನಷ್ಟಕ್ಕೂ ಕಾರಣವಾಗುತ್ತಿದೆ.

81 ಗ್ರಾಮಗಳನ್ನು ಹೊಂದಿರುವ ಬೆಳ್ತಂಗಡಿ ತಾಲೂಕು ಕೃಷಿ ಪ್ರಧಾನ ಪ್ರದೇಶವಾಗಿದ್ದು ಅಡಿಕೆ ರಬ್ಬರ್ ಬಾಳೆ ಮುಖ್ಯ ಬೆಳೆಗಳಾಗಿವೆ. ಇದರೊಂದಿಗೆ ತೆಂಗು ಕೊಕ್ಕೋ ಮೊದಲಾದ ಬೆಳೆಗಳನ್ನು ಬೆಳೆಯಲಾಗುತ್ತದೆ ತಾಲೂಕಿನ 80% ಜನರು ಕೃಷಿಯಿಂದಲೇ ಜೀವನ ನಡೆಸುವವರು ಈ ಬಾರಿ ಬೇಸಿಗೆ ಮಳೆಯೊಂದಿಗೆ ಬೀಸುವ ಗಾಳಿ ಕೃಷಿಕರ ಬದುಕನ್ನು ಅಲ್ಲೋಲಕಲ್ಲೋಲ ಗೊಳಿಸುತ್ತಿದೆ ಕಡಿಮೆ ಫಸಲು ಸ್ಥಿರತೆ ಇಲ್ಲದ ಬೆಲೆ ನಾನಾ ರೋಗಗಳು ಉತ್ಪಾದನಾ ವೆಚ್ಚದ ಹೆಚ್ಚಳ ವನ್ಯಜೀವಿಗಳ ಹಾವಳಿ ಇತ್ಯಾದಿಗಳಲ್ಲಿರುವಕೃಷಿಕರಬದುಕಿಗೆಮಳೆಯೊಂದಿಗೆ ಬೀಸುವ ಗಾಳಿ ಗಾಯದ ಮೇಲೆ ಬರೆ ಎಳೆಯುತ್ತಿದೆ. ಕಳೆದ ಎರಡು ತಿಂಗಳ ಅವಧಿಯಲ್ಲಿ ತಾಲೂಕಿನಲ್ಲಿ ಸುಮಾರು 25 ಸಾವಿರಕ್ಕಿಂತ ಅಧಿಕ ಅಡಿಕೆ, ರಬ್ಬರ್ ಗಿಡಗಳು ಮುರಿದು ಬಿದ್ದಿವೆ. ಒಂದು ಗಿಡವನ್ನು ಬೆಳೆಸಿ ಅದರ ಫಸಲು ಪಡೆಯುವ ಹೊತ್ತಿಗೆ ಹಾಗೂ ಉತ್ತಮ ಫಸಲು ನೀಡುವ ಮರಗಳು ಧರೆಗೆ ಉರುಳುತ್ತಿವೆ. ಹಲವು ವರ್ಷಗಳ ಕಾಲ ಪೋಷಣೆ ನಡೆಸಿ ಕಲೆ ನೀಡುವ ಹೊತ್ತಿಗೆ ಮರಗಳು ನಾಶವಾಗುತ್ತಿರುವುದು ಕೃಷಿಕರಿಗೆ ತೀವ್ರತರಹದ ನಷ್ಟವನ್ನು ಉಂಟುಮಾಡುತ್ತಿದೆ.

ಅಪಾರ ಕೃಷಿ ಹಾನಿ

ಕಳೆದ ವರ್ಷಗಳಿಗೆ ಹೋಲಿಸಿದರೆ ಈ ಬಾರಿ ಬೇಸಿಗೆ ಮಳೆಯೊಂದಿಗೆ ಹೆಚ್ಚಿನ ಗಾಳಿ ಬೀಸಿದ್ದು ಅಪಾರ ಪ್ರಮಾಣದ ಕೃಷಿ ಹಾನಿ ಉಂಟಾಗಿದೆ. ಗ್ರಾಮೀಣ ಭಾಗದ ವಿದ್ಯುತ್ ಪೂರೈಕೆ ವ್ಯವಸ್ಥೆಯಂತೂ ಸಂಪೂರ್ಣ ಹದಗೆಟ್ಟಿದೆ.

■ ನಾಗೇಶ್ ಎಂ., ಕೃಷಿಕ, ಕರಂಬಾರು

ಮುನ್ನೆಚ್ಚರಿಕೆ ಕ್ರಮ

ಯಾವುದೇ ಅನಾಹುತಗಳು ಉಂಟಾದ ಸಂದರ್ಭ ತಕ್ಷಣ ಕಂದಾಯ ಇಲಾಖೆ, ಸ್ಥಳೀಯ ಪಂಚಾಯತ್‌ಗೆ ತಕ್ಷಣ ಮಾಹಿತಿ ನೀಡಬೇಕು. ತಾಲೂಕಿನಲ್ಲಿ ಮಳೆಗಾಲದಲ್ಲಿ ಉಂಟಾಗುವ ಅಪಾಯಗಳ ಕುರಿತು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

■ ಪೃಥ್ವಿ ಸಾನಿಕಮ್, ತಹಸೀಲ್ದಾರರು, ಬೆಳ್ತಂಗಡಿ

ಶೌರ್ಯ ತಂಡದ ಸಹಕಾರ

ಶ್ರೀ ಕ್ಷೇತ್ರ ಧರ್ಮಸ್ಥಳ ಶೌರ್ಯ ವಿಪತ್ತು ನಿರ್ವಹಣಾ ತಂಡ ಮಳೆ ಗಾಳಿ ವೇಳೆ ಉಂಟಾಗುತ್ತಿರುವ ಸಮಸ್ಯೆಗಳಿಗೆ ತಕ್ಷಣ ಸ್ಪಂದನೆಯನ್ನು ನೀಡುತ್ತಿದೆ. ಇದರ ಸದಸ್ಯರು ಅಹರ್ನಿಶಿಯಾಗಿ ಸೇವೆ ಸಲ್ಲಿಸುತ್ತಿದ್ದು ಹಾನಿಯಾಗಾಗಿರುವ ದೇಶಗಳಲ್ಲಿ ವಿಶೇಷ ಸೇವೆ ಸಲ್ಲಿಸುವುದರ ಮೂಲಕ ವಿಪತ್ತಿನ ಸಂದರ್ಭ ಕೈಜೋಡಿಸುತ್ತಿದ್ದಾರೆ.

ಗಾಳಿಯಿಂದ ಗ್ರಾಮೀಣ ಭಾಗದ ಅನೇಕ ಮನೆಗಳು ಹಾನಿಗೊಳಗಾಗಿವೆ. ಮನೆಯ ಸೀಟು ಹಂಚುಗಳು ಹಾರಿಹೋಗಿರುವ ಅನೇಕ ಪ್ರಕರಣಗಳು ನಡೆದಿದೆ. ಮನೆಗಳ ಮೇಲೆ ಮರಗಳು ಬಿದ್ದು ಸಾಕಷ್ಟು ಹಾನಿ ಉಂಟಾಗಿದೆ. ಅನೇಕ ಕಡೆ ಅದಕ್ಕೆ ಒಣಗಿಸುವ ಸೋಲಾರ್ ಗೂಡುಗಳು ನೆಲಕಚ್ಚಿವೆ.

ಉರುಳುವ ಮರಗಳು

ಗಾಳಿಗೆ ಬೃಹತ್ ಗಾತ್ರದ ಮರಗಳು ತೋಟಗಳಲ್ಲಿ ಉರುಳಿ ಹೆಚ್ಚಿನ ಕೃಷಿಗಳಲ್ಲಿ ಮರಗಳು ಉರುಳಿ ಬಿದ್ದು ಗಂಟೆಗಟ್ಟಲೆ ಸಂಚಾರ ವ್ಯವಸ್ಥೆ ಉಂಟಾಗುತ್ತಿದೆ.

ವಿದ್ಯುತ್ ಅವ್ಯವಸ್ಥೆ

ಗಾಳಿಗೆ ಅನೇಕ ವಿದ್ಯುತ್ ಕಂಬಗಳು ಪ್ರತಿ ದಿನಧ ರಾಶೆಯಾಗುತ್ತಿದೆ ಇದರಿಂದ ಗ್ರಾಮೀಣ ಭಾಗಗಳಲ್ಲಿ ದಿನಗಟ್ಟಲೆ ವಿದ್ಯುತ್ ವ್ಯವಸ್ಥೆಯ ಉಂಟಾಗುತ್ತಿದೆ ಮರಗಳ ಗೆಲ್ಲುಗಳು ಒಣಕಟ್ಟಿಗೆ ತುಂಡು ವಿದ್ಯುತ್ ಮೇಲೆ ಬಿದ್ದು ವಿದ್ಯುತ್ ತಂತಿ ಕಡಿತ ಪರಿಹಾರಗಳಿಗೆ ಹಾನಿ ಮುಂದುವರಿದಿದೆ ಹೆಚ್ಚಿನ ಗ್ರಾಮೀಣ ಭಾಗಗಳಲ್ಲಿ ಮಳೆ ಆರಂಭವಾದನೆ ವಿದ್ಯುತ್ ಹೋದರೆ ಬಳಿಕ ಬರುವುದು ಮರುದಿನವೇ ಎಂಬಂತಾಗಿದೆ.

ಮೂಡುಬಿದಿರೆಯಲ್ಲಿ

ಇಲ್ಲಿನ ಪಾಲಡ್ಕ ಮತ್ತುಜೋಡಿಕಟ್ಟೆ ಪರಿಸರದಲ್ಲಿ ಸಂಭವಿಸಿದ ಭಾರಿ ಗಾಳಿಮಳೆಗೆ ಮರಗಳು ಹಾಗೂ ವಿದ್ಯುತ್ ಕಂಬಗಳು ಧರೆಗುರುಳಿ ಸಾರ್ವಜನಿಕ ಆಸ್ತಪಾಸ್ತಿಗಳಿಗೆ ತೀವ್ರ ಹಾನಿಯಾಗಿದೆ.

ಪಾಲಡ್ಕ ಮಾವಿನಕಟ್ಟೆಯಲ್ಲಿಕಿರಣ್ ವರ್ಣಬೆಟ್ಟುಅವರಆಟೋರಿಕ್ಷಾದ ಮೇಲೆ ಮರ ಬಿದ್ದಿದ್ದು, ವಾಹನ ಜಖಂಗೊಂಡಿದೆ. ಇದೇ ಪರಿಸರದ ಹರೀಶ್ಆಚಾರ್ಯ ಮಾವಿನಕಟ್ಟೆ ಹಾಗೂ ಡೇನಿಯಲ್ ಬರ್ಬೋಜಾ ಅವರ ಮನೆಗಳ ಮೇಲೆಯೂ ಮರಗಳು ಬಿದ್ದು ಮನೆಗಳಿಗೆ ಭಾರಿ ಹಾನಿ ಸಂಭವಿಸಿದೆ. ಜೋಡಿಕಟ್ಟೆರಸ್ತೆಗೆ ಮರ ಹಾಗೂ ವಿದ್ಯುತ್ ಕಂಬಗಳು ಉರುಳಿ ಬಿದ್ದ ಪರಿಣಾಮರಸ್ತೆ ಸಂಪೂರ್ಣ ಬ್ಲಾಕ್‌ಆಗಿತ್ತು.

ವಿಷಯ ತಿಳಿಯುತ್ತಿದ್ದಂತೆ ಕಾರ್ಯಪ್ರವೃತ್ತರಾದ ಮೆಸ್ಕಾಂ ಸಿಬ್ಬಂದಿ ಹಾಗೂ ಸ್ಥಳೀಯರು ರಸ್ತೆಗೆ ಬಿದ್ದಿದ್ದ ಮರ ಮತ್ತು ವಿದ್ಯುತ್ ಕಂಬಗಳನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಕಾರಿಂಜ, ಇಳಿಯೂರು ದೇವಳಕ್ಕೆ ಸಿಡಿಲಾಘಾತ

ಬಂಟ್ವಾಳ: ಇತಿಹಾಸ ಪ್ರಸಿದ್ಧ ಕಾರಂಜೇಶ್ವರ ಕ್ಷೇತ್ರದ ಪರಮೇಶ್ವರ ದೇವಸ್ಥಾನದ ಗರ್ಭಗುಡಿ ಹಾಗೂ ಮಣಿನಾಲ್ಕೂರು ಗ್ರಾಮದ ಇಳಿಯೂರು ದೇವಸ್ಥಾನಕ್ಕೆ ಸಿಡಿಲು ಬಡಿದು ಅಪಾರ ಪ್ರಮಾಣದ ನಷ್ಟ ಸಂಭವಿಸಿದ ಘಟನೆ ಶನಿವಾರ ಸಂಜೆ ನಡೆದಿದೆ. ಮಣಿನಾಲ್ಕೂರು ಗ್ರಾಮದಲ್ಲಿರುವ ಇಳಿಯೂರು ಶ್ರೀ ಮಹಾವಿಷ್ಣು ಮೂರ್ತಿ ದೇವಸ್ಥಾನದ ಗರ್ಭಗುಡಿಯ ಪ್ರಾಕಾರಕ್ಕೆ ಸಿಡಿಲು ಬಡಿದಿದ್ದು, ಪರಿಣಾಮ ಸುಮಾರು 1 ಕೋಟಿಯಷ್ಟು ನಷ್ಟ ಉಂಟಾಗಿದೆ ಎಂದು ಅಂದಾಜಿಸಲಾಗಿದೆ.

ಸಂಜೆ ಸುಮಾರು 4.30 ರ ವೇಳೆಗೆ ಸುರಿದ ಗಾಳಿ, ಮಳೆಯ ಜೊತೆಗೆ ಸಿಡಿಲಿನ ಅಬ್ಬರವು ಜೋರಾಗಿತ್ತು. ಭಾರೀ ಪ್ರಮಾಣದಲ್ಲಿ ಬಂದ ಸಿಡಿಲಿನ ಇಳಿಯೂರು ಶ್ರೀವಿಷ್ಣುಮೂರ್ತಿ ದೇವಸ್ಥಾನದ ಗರ್ಭ ಗುಡಿಯ ಮೇಲಿನ ಪ್ರಾಕಾರದ ಶಿಲಾ ಕಲ್ಲು ಛಿದ್ರ, ಛಿದ್ರಗೊಂಡು ನೆಲಕ್ಕಪ್ಪಳಿಸಿದೆ. ಈ ಸಂದರ್ಭ ದಲ್ಲಿ ದೇವಳದ ಅರ್ಚಕರು ಹೊರಭಾಗದಲ್ಲಿದ್ದುದರಿಂದ ಅವರಿಗೆ ಯಾವುದೇ ರೀತಿಯ ಅಪಾಯವುಂಟಾಗಿಲ್ಲ. ನಾಲ್ಕು ವರ್ಷಗಳ ಹಿಂದೆಯಷ್ಟೆ ದೇವಸ್ಥಾನ ನವೀಕರಣಗೊಂಡು ಬ್ರಹ್ಮಕಲಶೋತ್ಸವ ನಡೆದಿದ್ದು, ಸಿಡಿಲಿಗೆ ದೇವಸ್ಥಾನದ ದೇವರ ಗರ್ಭಗುಡಿಗೂ ಹಾನಿಯಾಗಿದ್ದು, ಕೋಟ್ಯಂತರ ರೂ.ನಷ್ಟ ಸಂಭವಿಸಿದೆ. ಸಿಡಿಲು ಬಡಿದ ಕಾರಣದಿಂದ ಮತ್ತೆ ದೇವರ ಗುಡಿಯ ನವೀಕರಣ ಕಾರ್ಯ ನಡೆಯಬೇಕಿದ್ದು ಎಂದು ಹೇಳಲಾಗುತ್ತಿದೆ. ದೇವಳದ ಆಡಳಿತ ಟ್ರಸ್ಟಿಗಳು ಸೇರಿದಂತೆಸ್ಥಳೀಯರುಜಮಾಯಿಸಿದ್ದರು.ಈಬಗ್ಗೆ ಕಂದಾಯ ಇಲಾಖೆಗೂ ಮಾಹಿತಿ ನೀಡಲಾಗಿದೆ.

ಬಂಟ್ವಾಳದಾದ್ಯಂತ ಸಂಜೆಯ ಹೊತ್ತಿಗೆ ಸಿಡಿಲು ಸಹಿತ ಮಳೆಯಾಗಿತ್ತು. ತಾಲೂಕಿನ ಎರಡು ಪ್ರತ್ಯೇಕ ಗ್ರಾಮಗಳಲ್ಲಿ ಮನೆಗೆ ಸಿಡಿಲು ಬಡಿದು ಹಾನಿಯಾಗಿದೆ. ಕಾವಳಪಡೂರು ಗ್ರಾಮದ ಮದ್ವ ಬರ್ಕಟ್ಟ ಎಂಬಲ್ಲಿ ಕವಿತ ಸೇಸಪ್ಪ ಪೂಜಾರಿ ಎಂಬುವರ ಮನೆಗೆ ಇಂದು ಸಿಡಿಲು ಬಡಿದು, ಭಾಗಷಃ ಹಾನಿಯಾದರೆ, ಕಡೇಶ್ವಾಲ್ಯ ಗ್ರಾಮದ ಅಣ್ಣಿ ಪೂಜಾರಿ ಅವರ ಮನೆಗೂ ಸಿಡಿಲು ಬಡಿದು ಹಾನಿ ಯಾಗಿದೆ. ಯಾವುದೇ ಪ್ರಾಣಾಪಾಯವಾಗಿಲ್ಲ.

ಕೊಡವೂರು ಶ್ರೀ ಶಂಕರನಾರಾಯಣ ದೇವಸ್ಥಾನದಲ್ಲಿ ಮಹಾರುದ್ರಯಾಗ | ಧಾರ್ಮಿಕ ಸಭೆ

ಕಷ್ಟ ಪರಿಹಾರಕ್ಕೆ ಭಕ್ತಿಪೂರ್ವಕ ಪ್ರಾರ್ಥನೆ: ಕಾಣಿಯೂರು ಶ್ರೀ

ಉಡುಪಿ: 'ಲಾಲಸೆ, ಕ್ರೋಧಗಳನ್ನು ಮರೆತು ರುದ್ರದೇವರನ್ನು ಭಕ್ತಿಪೂರ್ವಕವಾಗಿ ಪ್ರಾರ್ಥನೆ ಮಾಡಿದರೆ ನಮ್ಮ ಜೀವನದ ಎಲ್ಲಾ ಕಷ್ಟಗಳೂ ಪರಿಹಾರವಾಗುತ್ತವೆ ಎಂದು ಕಾಣಿಯೂರು ಮಠಾಧೀಶರಾದ ಶ್ರೀ ವಿಶ್ವವಲ್ಲಭತೀರ್ಥಶ್ರೀಪಾದರು ಆಶೀರ್ವಚನ ನೀಡಿದರು.



ಕೊಡವೂರು ಶ್ರೀ ಶಂಕರನಾರಾಯಣ ದೇವಸ್ಥಾನದಲ್ಲಿ ಜರುಗುತ್ತಿರುವ ಮಹಾರುದ್ರಯಾಗದ ಪ್ರಯುಕ್ತ ನಡೆದ ಎರಡನೇ ದಿನದ ಧಾರ್ಮಿಕ ಸಭಾ ಕಾರ್ಯಕ್ರಮದ ವೇದಿಕೆ ಯಲ್ಲಿ ಅವರು ಮಾತನಾಡಿದರು. ಸರಳ ಸ್ವಭಾವದ ಪ್ರಸಾದ್ ರಾಜ್ ಕಾಂಚನ್ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಈ ಮಹಾರುದ್ರಯಾಗದ ಮೂಲಕ ಸಮಸ್ತ ಜನರಿಗೂ ಸುಭಿಕ್ಷೆ ಲಭಿಸಲಿ ಎಂದು ಶ್ರೀಗಳು ಹರಸಿದರು.

ಧಾರ್ಮಿಕ ಸಭೆ ಮತ್ತು ಗಣ್ಯರ ಉಪಸ್ಥಿತಿ

ಮಹಾರುದ್ರಯಾಗದ ಕಾರ್ಯಾಧ್ಯಕ್ಷ ಪ್ರಸಾದ್ ರಾಜ್ ಕಾಂಚನ್ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭಾ ಕಾರ್ಯಕ್ರಮದ ವೇದಿಕೆಯಲ್ಲಿ ಕೊಡವೂರು ಭಕ್ತವೃಂದದ ಅಧ್ಯಕ್ಷ ದಿವಾಕರ ಶೆಟ್ಟಿ ತೋಟದ ಮನೆ, ಬನ್ನಂಜೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಅಧ್ಯಕ್ಷ ಮಾಧವ ಬನ್ನಂಜೆ, ಕೆನರಾ ಬ್ಯಾಂಕ್ ಜನರಲ್ ಮ್ಯಾನೇಜರ್ ಗಂಗಾಧರ್, ಪ್ರಮುಖ ಉದ್ಯಮಿ ಆನಂದ ಟಿ. ಸುವರ್ಣ, ತೊಟ್ಟಂ ಗಣೇಶೋತ್ಸವ ಸಮಿತಿಯ ಅಧ್ಯಕ್ಷ ಪ್ರಶಾಂತ್ ಸಾಲ್ಯಾನ್, ಬಡಾನಿಡಿಯೂರು ಪಂಡರೀನಾಥ ಭಜನಾ ಮಂದಿರದ ಅಧ್ಯಕ್ಷ ರಾಮಪ್ಪ ಸಾಲ್ಯಾನ್, ಸನ್ಯಾಸಿಮಠದ ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ದೇವಸ್ಥಾನದ ಅಧ್ಯಕ್ಷ ಹರೀಶ್ ಶೆಟ್ಟಿ, ರುದ್ರಯಾಗದ ಪ್ರಧಾನ ಸಂಚಾಲಕ ತಾರಾನಾಥ್ ಪೂಜಾರಿ, ಮಲ್ಪೆ ಬಿಲ್ಲವ ಸಂಘದ ಅಧ್ಯಕ್ಷ ಗೋಪಾಲ ಸಿ. ಬಂಗೇರ, ಕೊಡವೂರು ಬಬ್ಬುಸ್ವಾಮಿ ದೈವಸ್ಥಾನದ ಅಧ್ಯಕ್ಷ ಕೃಷ್ಣಪ್ಪ ಕೋಟ್ಯಾನ್, ಕಲ್ಯಾಣಪುರ ಶ್ರೀ ಬ್ರಹ್ಮ ಬೈದರ್ಕಲು ಗರೋಡಿಯ ಅಧ್ಯಕ್ಷ ವಿಠಲ್ ಪೂಜಾರಿ ಹಾಗೂ ಕೋಡಿ ಬೆಂಗ್ರೆ ದುರ್ಗಾದೇವಿ ಮಹಾಕಾಳಿ ದೇವಸ್ಥಾನದ ಅಧ್ಯಕ್ಷರಾದ ಸಂತೋಷ್ ನಾಯ್ಕ್ ಉಪಸ್ಥಿತರಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಶಂಕರನಾರಾಯಣ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಪ್ರಕಾಶ್ ಕೊಡವೂರು ಸ್ವಾಗತಿಸಿದರು. ಕೊನೆಯಲ್ಲಿ ರುದ್ರಯಾಗದ ಭಜನಾ ಸಂಚಾಲಕ ಸುರೇಶ್ ಮೆಂಡನ್ ಅವರು ಧನ್ಯವಾದ ಸಮರ್ಪಿಸಿದರು.

ಒಂದೇ ಮಳೆಗೆ ಸಂಕಷ್ಟಗಳ ಸುರಿಮಳೆ!

ಮುಲ್ಕಿ: ತಾಲೂಕು ವ್ಯಾಪ್ತಿಯಲ್ಲಿ ಶನಿವಾರ ಸಂಜೆ ವೇಳೆಗೆ ಗುಡುಗು ಸಹಿತ ಭಾರೀ ಮಳೆಯಾಗಿದ್ದು ಕೆಲ ಕಡೆ ಕೃತಕ ನೆರೆ ಹಾಗೂ ಹಾನಿ ಸಂಭವಿಸಿದೆ. ಭಾರೀ ಮಳೆಗೆ ಬಪ್ಪನಾಡು ದೇವಸ್ಥಾನದ ಒಳಗಡೆ ಮಳೆ ನೀರು ಬಂದು ಭಕ್ತಾದಿಗಳಿಗೆ ತೀವ್ರ ತೊಂದರೆಯಾಯಿತು. ಬಪ್ಪನಾಡು ದೇವಸ್ಥಾನದ ಎದುರು ಭಾಗದಲ್ಲಿ ದ್ವಾರ ಸ್ಥಳಾಂತರ ಕಾರ್ಯ ನಡೆಯುತ್ತಿದ್ದು ಸಮೀಪದಲ್ಲಿ ಮಳೆ ನೀರು ಹರಿದು ಹೋಗುವ ಚರಂಡಿಯ ಸ್ಲಾಬ್ ತುಂಡಾಗಿ ಬೃಹದಾಕಾರದ ರಂಧ್ರ ಉಂಟಾಗಿ ವಾಹನ ಸವಾರರಿಗೆ ಅಪಾಯಕಾರಿಯಾಗಿ ಪರಿಣಮಿಸಿತು



ರಸ್ತೆಗೆ ಬಿದ್ದ ಬೃಹದಾಕಾರದ ಮರ, ವಾಹನ ಸಂಚಾರ ಸ್ಥಗಿತ

ಭಾರೀ ಮಳೆಗಾಳಿಗೆ ಶಿಮಂತೂರು ದೇವಸ್ಥಾನದ ಸಂಪರ್ಕ ರಸ್ತೆಯ ರೈಲ್ವೇಟ್ರ್ಯಾಕ್ ಬಳಿ ಬೃಹದಾಕಾರದ ಹಾಳೆಮರ ವಿದ್ಯುತ್ ತಂತಿ ಮೇಲೆ ಬಿದ್ದು ರಸ್ತೆಗೆ ಉರುಳಿ ರಸ್ತೆ ತಡೆ ಉಂಟಾಯಿತು ಹಾಗೂ ವಾಹನ ಸವಾರರು ಸುತ್ತು ಬಳಸಿ ಸಂಚಾರ ನಡೆಸಿದರು. ಮರ ಬಿದ್ದ ಸಂದರ್ಭ ಸ್ಥಳೀಯ ಗುತ್ತಿಗೆದಾರ ನಿತಿನ್ ಶೆಟ್ಟಿ ಕಾರಿನಲ್ಲಿ ಶಿಮಂತೂರು ಕಡೆಗೆ ಬರುತ್ತಿದ್ದು ಭಾರೀ ಶಬ್ದ ಕೇಳಿ ಬೆಚ್ಚಿ ಬಿದ್ದಿದ್ದಾರೆ ಹಾಗೂ ಕೂದಲೆಳೆ ಅಂತರದಿಂದ ಪವಾಡ ಸದೃಶ ಪಾರಾಗಿದ್ದಾರೆ.

ಮರ ವಿದ್ಯುತ್ ತಂತಿಯ ಮೇಲೆ ಬಿದ್ದ ಕಾರಣ ವಿದ್ಯುತ್ ಕಂಬಕ್ಕೆ ಹಾನಿಯಾಗಿದೆ ಹಾಗೂ ಮುಲ್ಕಿ ಕುಬೆವೂರು, ಶಿಮಂತೂರು ಪರಿಸರದಲ್ಲಿ ವಿದ್ಯುತ್ ವ್ಯತ್ಯಯ ಉಂಟಾಯಿತು. ಕೂಡಲೇ ಸ್ಥಳೀಯ ಸಾಮಾಜಿಕ ಕಾರ್ಯಕರ್ತ ಅಶ್ವಿನ್ ಆಳ್ವ ನೇತೃತ್ವದಲ್ಲಿ ಮರ ತೆರವು ಉಳಿಸಿ ವಾಹನ ಸಂಚಾರ ಸುಗಮಗೊಳಿಸಿದರು.

ಭಾರೀ ಮಳೆ ಗಾಳಿಗೆ ಗೋಳಿಜೋರ ಶ್ರೀ ಹರಿ ಹರ ಭಜನಾ ಮಂದಿರದ ಆವರಣ ಗೋಡೆ ಕುಸಿತ ಉಂಟಾಗಿ ಭಾರೀ ನಷ್ಟ ಸಂಭವಿಸಿದೆ. ಹಳೆಯಂಗಡಿ, ಕಿನ್ನಿಗೋಳಿ, ಪಕ್ಷಿಕೆರೆ, ಪಡುಪಣಂಬೂರು, ಅತಿಕಾರಿ ಬೆಟ್ಟು, ಕಿಲ್ಪಾಡಿ ಪರಿಸರದಲ್ಲಿ ಶನಿವಾರ ಸಂಜೆ ಸುರಿದ ಭಾರೀ ಮಳೆ ಗಾಳಿಗೆ ಅಪಾರ ಹಾನಿಯಾಗಿದೆ.

ಮೈಮನ ರೋಮಾಂಚನಗೊಳಿಸಿತು ದೇಶ ವಿದೇಶ ಖ್ಯಾತಿಯ ಪಿಲಿಕೋಲ



ಕಾಪು: ಅಲಾ ಪಿಲಿ ಬುಡ್ತೆರ್‌ಗೆ. ಬತ್ತುಂಡು ತೂಲೆ, ಪಾರ್ಡ್ ಬತ್ತುಂಡ ತೂಲೆ. ತೂವೊಂದು ಪೋಲ. ಪಡ್ಡಾಯಿ ಕಲೊಕು ಪೋತುಂಡುಗೆ. ಕಾರ್‌ಡ್ ಕುಲ್ಲುದು ತೂವೊಡ್ಚಿ ಬತ್ತುದು ಪಿಲಿ ಪತ್ತುಂಡ್. ಜಾಗ್ರತೆ.. ಬಲಾ.. ಬಲಾ.. ಬಲಿಪ್ಪೊ ...

ಇದು ದೇಶ, ವಿದೇಶಗಳಲ್ಲಿಯೂ ಪ್ರಸಿದ್ಧಿಯನ್ನು ಪಡೆದಿರುವ ಅನಾದಿಕಾಲದಿಂದಲೂ ವಾಡಿಕೆಯಂತೆ ದ್ವೈವಾರ್ಷಿಕವಾಗಿ ನಡೆಯುವ ಕಾಪುವಿನ ಶ್ರೀ ಬ್ರಹ್ಮಮುಗ್ಗೇರ್ಕಳ ಹುಲಿಚಂಡಿ ದೈವಸ್ಥಾನದ ಪಿಲಿಕೋಲ (ಹುಲಿಕೋಲ)ದ ಜನಸಾಗರದ ನಡುವೆ ಕೇಳಿ ಬರುತ್ತಿದ್ದ ಮಾತುಗಳು.

ಮೇ 16ರ ಶನಿವಾರ ಸಂಪ್ರದಾಯ ಬದ್ಧವಾಗಿ ನಡೆದ ಈ ಪಿಲಿಕೋಲವು ತುಳುನಾಡಿನ ಇತರೆಡೆಗಳಲ್ಲಿನ ದೈವಾರಾಧನೆಗಿಂತ ಭಿನ್ನವಾಗಿದ್ದು, ಜಾನಪದ, ಧಾರ್ಮಿಕ ನಂಬಿಕೆ ನಡಾವಳಿಗಳು ಮೇಳೈಸಿದೆ.

ತುಳುವರ ವಿಶಿಷ್ಟ ಜನಪದ ಆಚರಣೆಗಳಲ್ಲಿ ಒಂದಾಗಿರುವ ಭೂತಾರಾಧನೆಯಲ್ಲಿ ಗಮನ ಸೆಳೆದಿರುವ ಅನಾದಿಕಾಲದಿಂದಲೂ ವಾಡಿಕೆಯಂತೆ ಕಾಪುವಿನ ದೈವಸ್ಥಾನದಲ್ಲಿ ಈ ಪಿಲಿಕೋಲವು ನಡೆದಿದ್ದು, ಇಲ್ಲಿ ಮಾರ ಗುರಿಕಾರ ವರ್ಗದವರ ಉಸ್ತುವಾರಿಯಲ್ಲಿ ಕಾಪು ಪಡುಗ್ರಾಮದ ಬೈರಗುತ್ತು, ದೊರಕಲಗುತ್ತು ಮತ್ತಿತರ 16 ಕಾಣಿಕೆ ಮನೆತನದವರ ಪಾಲ್ಗೊಳ್ಳುವಿಕೆಯಲ್ಲಿ ಪಿಲಿಕೋಲದ ಧಾರ್ಮಿಕ ಆಚರಣೆಗಳು ನಡೆಯಿತು. ಹಾಗೂ ಮುಗ್ಗೇರ್ಕಳ, ತನ್ನಿಮಾನಿಗ, ಬಬ್ಬರ್ಯ, ಗುಳಿಗ, ಪರಿವಾರ ದೈವಗಳ ನೇಮೋತ್ಸವವೂ ಜರಗಿತು.



ಹತ್ತಿರದ ಕೆರೆಯಲ್ಲಿ ಪಿಲಿದೈವ ನರ್ತಕ ಸ್ನಾನಾದಿ ಕಾರ್ಯ ಮುಗಿಸಿ ಬಳಿಕ ದೈವಸ್ಥಾನದ ಮುಂಭಾಗದಲ್ಲಿ ತೆಂಗಿನ ಗರಿಗಳಿಂದ ತಯಾರಿಸಲಾದ ಸಿರಿಯಿಂದ ಮಾಡಿದ ಒಲಿಮದೆ (ಒಲಿಗುಂಡ) ಗುಂಡದೊಳಗೆ ಹುಲಿವೇಷದ ಬಣ್ಣಗಾರಿಕೆ, ಸಂಪ್ರದಾಯಗಳೊಂದಿಗೆ ಸಿದ್ಧತೆಗಳನ್ನು ನಡೆಸಿದ ಬಳಿಕ ಪಿಲಿಕೋಲದ ದೈವ ವೇಷಧಾರಿಯು ಸಿರಿ ಒಲಿಗಳಿಂದಲೇ ನಿರ್ಮಿತ ಪಂಜರದಿಂದ ಹುಲಿಯಂತೆ ಆರ್ಭಟಿಸುತ್ತಾ ವೈಭವದಿಂದ ಹೊರ ಬಂದು ಬಳಿಕ ಬೇಟೆಗೆ ಹೊರಟಿತ್ತು.

ಇತರೇ ದೈವಗಳ ಕೋಲಗಳಂತೆ ಹತ್ತಿರದಿಂದ ಹುಲಿಕೋಲವನ್ನು ವೀಕ್ಷಿಸಲಾಗುವುದಿಲ್ಲ. ದೈವಕ್ಕೆ ಕೋಳಿ ಮತ್ತು ಹಾಲನ್ನು ಹರಕೆಯಾಗಿ ಭಕ್ತರು ಸಮರ್ಪಿಸುತ್ತಾರೆ.

ಪಿಲಿಕೋಲವನ್ನು ನೋಡಲು ಸಹಸ್ರಾರು ಸಂಖ್ಯೆಯಲ್ಲಿ ಜನಸಾಗರವೇ ಹರಿದು ಬಂದಿದ್ದು, ಹುಲಿ ವೇಷಧಾರಿಯನ್ನು ಹಗ್ಗಹಾಕಿ ನಿಯಂತ್ರಿಸಿದರೂ ಜನನಿಬಿಡ ಪ್ರದೇಶದಲ್ಲಿ (ಆಯ ಕಟ್ಟಿನ ಸ್ಥಳ ಹೊರತು ಪಡಿಸಿ) ಅಟ್ಟಾಡಿಸಿಕೊಂಡು ಹೋಗುವಾಗ ಸಾರ್ವಜನಿಕರು ಭಯಭೀತರಾಗಿ ಹುಲಿಯ ಕೈಯಿಂದ ತಪ್ಪಿಸಿಕೊಳ್ಳಲು ಎಲ್ಲೆಂದರಲ್ಲಿ ಓಡುವ ದೃಶ್ಯ ಕಂಡು ಬಂದಿತ್ತು. ಹೆದ್ದಾರಿಯ ಪ್ರದೇಶದಲ್ಲೂ ಜನಸಾಗರವೇ ಈ ಪಿಲಿಕೋಲಕ್ಕೆ ಸಾಕ್ಷಿ ನುಡಿಯುತ್ತಿತ್ತು. ಬೇಟೆಗೆ ಹೊರಟ ಹುಲಿ ಸಂಜೆ ವೇಳೆಗೆ ದೈವಸ್ಥಾನಕ್ಕೆ ವಾಪಸ್ಸಾಗುವ ಮೂಲಕ ವಿಜೃಂಭಣೆಯ ಪಿಲಿಕೋಲಕ್ಕೆ ತೆರೆಬಿದ್ದಿತ್ತು.

ಆ ವರೆಗೆ ಅನ್ಯ ಧರ್ಮೀಯರೋರ್ವರ ಸಹಿತ ಮೂವರನ್ನು ಹುಲಿ ಸ್ಪರ್ಶಿಸಿತ್ತು.

ಈ ಸಂದರ್ಭ ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ಮಾಜಿ ಶಾಸಕ ಲಾಲಾಜಿ ಆರ್. ಮೆಂಡನ್, ಉಪತಹಶೀಲ್ದಾರ್ ರವಿ ಕಿರಣ್ ಸಹಿತ ಗಣ್ಯರು ಉಪಸ್ಥಿತರಿದ್ದರು.

ಸೂಟರ್‌ಪೇಟೆಯಲ್ಲಿ ನೀರಿನ ದಿಕ್ಕು ಬದಲು | ಕೆಲ ಪ್ರದೇಶಗಳಿಗೆ ಕಡಿಮೆ ನೀರು

ಜಪ್ಪು ಪ್ರದೇಶದಲ್ಲಿ ನೀರು ಪೂರೈಕೆ ಸಮರ್ಪಕ

ದಿಗಂತ ವಾಟರ್ ಚೆಕ್

▸ ಹರೀಶ ಕುಲ್ಕುಂದ

ಮಂಗಳೂರು: ಸ್ವತಂತ್ರ ಮನೆಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ವಸತಿ ಸಮುಚ್ಚಯಗಳು ಕಡಿಮೆ ಇರುವ, ಗ್ರಾಮೀಣ ಪ್ರದೇಶದ ಲಕ್ಷಣಗಳನ್ನು ಒಳಗೊಂಡಿರುವ ಮನಪಾ ಜೆಪ್ಪು ವಾರ್ಡ್‌ನಲ್ಲಿ ಈ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಅಷ್ಟಾಗಿ ಕಾಣಿಸಿಕೊಂಡಿಲ್ಲ.

ಸೂಟರ್‌ಪೇಟೆ, ಜಪ್ಪು ಮಜಿಲ, ಜಪ್ಪು ಸೆಮಿನರಿ, ಜಪ್ಪು ಬಪ್ಪಾಲ್, ಕುಡುಪಾಡಿ, ಎಂಆರ್ ಭಟ್ ಲೇನ್, ಮಹಾಕಾಳಿಪಡ್ಪು ಒಂದು ಭಾಗ, ನೆಹರೂ ರೋಡ್, ಕನಕರ ಬೆಟ್ಟು, ಎಕ್ಕೂರು ಮೀನುಗಾರಿಕಾ ಕಾಲೇಜು, ಎಕ್ಕೂರು ಗುಡ್ಡ ಪ್ರದೇಶಗಳಲ್ಲಿ ವ್ಯಾಪಿಸಿರುವ ಜಪ್ಪು ವಾರ್ಡ್‌ನ ಅಲ್ಲಲ್ಲಿ ಸ್ವಲ್ಪ ಮಟ್ಟಿಗೆ ಮಾತ್ರ ನೀರಿನ ಸಮಸ್ಯೆಯಿದೆ.

ನೀರು ಪೂರೈಕೆಗೆ ರೇಷನಿಂಗ್ ಆರಂಭಗೊಳ್ಳುವ ಮೊದಲು ಈ ವಾರ್ಡ್‌ನ ಜೆಪ್ಪು ಬಪ್ಪಾಲ್, ಮಜಿಲ, ಕುಡುಪಾಡಿ, ಎಂಆರ್ ಭಟ್ ಲೇನ್‌ನಲ್ಲಿ ನೀರು ಸರಬರಾಜು ವ್ಯತ್ಯಯ ಉಂಟಾಗುತ್ತಿತ್ತು. ಇಲ್ಲಿಗೆ ನಿರಂತರ ನೀರು ಪೂರೈಕೆ ಇರಲಿಲ್ಲ. ಕಡಿಮೆ ಪ್ರಮಾಣದಲ್ಲಿ ನೀರು ಬರುತ್ತಿತ್ತು ಎಂಬ ದೂರುಗಳಿದ್ದವು. ಫಳ್ನೀರ್ ವಾರ್ಡ್‌ನ ಗೋರಿಗುಡ್ಡದಲ್ಲಿ ನೀರಿನ ಸಮಸ್ಯೆಯಿತ್ತು. ಗೋರಿಗುಡ್ಡಕ್ಕೆ ಸಮರ್ಪಕವಾಗಿ ನೀರು ಪೂರೈಸಲು ಜಪ್ಪು ವಾರ್ಡ್‌ನ ಸೂಟರ್ ಪೇಟೆ ಪ್ರದೇಶಕ್ಕೆ ನೀರು ಕಡಿತಗೊಳಿಸಲಾಗುತ್ತಿದೆ ಎಂಬ ಆರೋಪವಿದೆ. ಸೂಟರ್‌ಪೇಟೆಗೆ ಈ ಹಿಂದೆ ದಿನದ 24 ಗಂಟೆಯೂ ನೀರು ಲಭ್ಯವಾಗುತ್ತಿತ್ತು. ಆದರೆ, ಗೋರಿಗುಡ್ಡದ ನೀರಿನ ಸಮಸ್ಯೆ ಬಗೆಹರಿಸಲು ಸೂಟರ್‌ಪೇಟೆಗೆ ಬೇಗನೆ ನೀರು ಬಂದ್ ಮಾಡಲಾಗು ತ್ತಿದೆ ಎಂಬುದು ಇಲ್ಲಿನವರ ಆರೋಪ.



ಸೂಟರ್‌ಪೇಟೆ ಮಜಿಲ ರಸ್ತೆಗೆ ಡಾಂಬರು ಅಳವಡಿಸಲಾಗಿದೆ.

ಕೃತಕ ನೆರೆ ಸೃಷ್ಟಿ

ಜಪ್ಪು ವಾರ್ಡ್‌ನ ಸೂಟರ್‌ಪೇಟೆ, ಕನಕರಬೆಟ್ಟು, ಜಪ್ಪು ಬಪ್ಪಾಲ್ ಜನಾರ್ದನ ನಗರ, ಕುಡುಪಾಡಿ ದೋಟ ಮುಂತಾದ ಕಡೆಗಳಲ್ಲಿ ರಾಜಕಾಲುವೆ ಇದೆ. ಮಳೆಗಾಲದಲ್ಲಿ ನೀರಿನ ಹರಿವು ಅಧಿಕ ಗೊಂಡು ರಾಜಕಾಲುವೆಯಿಂದ ನೀರು ಉಕ್ಕಿ ಕೃತಕ ನೆರೆ ಸೃಷ್ಟಿಯಾಗುತ್ತದೆ. ಪಂಪ್ ವೆಲ್ ಬಳಿಯಿಂದ ರಾಜಕಾಲುವೆ ಮೂಲಕ ಬರುವ ನೀರು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಳವಾಗಿದೆ. ಪಂಪ್‌ವೆಲ್‌ನಿಂದ ಬರುವ ನೀರು ಜಪ್ಪಿನಮೊಗರು ಮೂಲಕ ರಾಷ್ಟ್ರೀಯ ಹೆದ್ದಾರಿ ದಾಟಿ ಜಪ್ಪು ವಾರ್ಡ್‌ನ ಪ್ರದೇಶಕ್ಕೆ ಬರುತ್ತದೆ. ಇದರಿಂದ ಜಪ್ಪು ವಾರ್ಡ್‌ನಲ್ಲಿ ಕೃತಕ ನೆರೆ ಉಂಟಾಗುತ್ತಿದೆ. ಈ ನೀರು ಹರಿಯುವ ರಭಸಕ್ಕೆ ಮಜಿಲ ಪ್ರದೇಶದ ನೀರು ಹರಿಯಲಾಗದೆ ಶೇಖರಣೆಗೊಂಡು ಕೃತಕ ನೆರೆ ಸೃಷ್ಟಿಯಾಗುತ್ತದೆ. ಪಂಪ್‌ವೆಲ್‌ನಿಂದ ರಾಜಕಾಲುವೆ ಮೂಲಕ ಬರುವ ನೀರನ್ನು ಜಪ್ಪಿನಮೊಗರುವಿನಿಂದ ನೇರವಾಗಿ ನೇತ್ರಾವತಿ ನದಿಗೆ ಹರಿಯುವಂತೆ ಮಾಡಬೇಕಿದೆ. ಕುಡುಪಾಡಿ ಭಾಗ, ಮಜಿಲ, ಕನಕರಬೆಟ್ಟು ಮುಂತಾದೆಡೆ ಕೃತಕ ನೆರೆ ಕಾಣಿಸಿಕೊಳ್ಳುತ್ತದೆ. ಕೃತಕ ನೆರೆ ತಡೆಗೆ ಅಲ್ಲಲ್ಲಿ ರಾಜಕಾಲುವೆ ನಿರ್ಮಿಸಲಾಗಿದೆ.

ಜಪ್ಪು ವಾರ್ಡ್‌ನ ಸೂಟರ್‌ಪೇಟೆ ಭಾಗಕ್ಕೆ ಬೆಂದೂರುವೆಲ್ ಟ್ಯಾಂಕ್‌ನಿಂದ ನೀರು ಬರುತ್ತಿದೆ. ವಾರ್ಡ್‌ನ ಉಳಿದ ಎಲ್ಲ ಪ್ರದೇಶಗಳಿಗೆ ಪಡೀಲ್ ಟ್ಯಾಂಕ್‌ನಿಂದ ನೀರು ನೀಡಲಾಗುತ್ತಿದೆ. ಪ್ರತಿದಿನ ರಾತ್ರಿ 12ರಿಂದ ಮಧ್ಯಾಹ್ನ 12ರವರೆಗೆ ನೀರು ಪೂರೈಸಲಾಗುತ್ತಿತ್ತು. ಎರಡು ದಿನಕ್ಕೊಮ್ಮೆ ಸಂಜೆಯೂ ನೀರು ಬರುತ್ತಿತ್ತು. ರೇಷನಿಂಗ್ ಆರಂಭಗೊಂಡ ಬಳಿಕ ಎರಡು ದಿನಕ್ಕೊಮ್ಮೆ ನೀರು ಬಿಡಲಾಗುತ್ತಿದೆ. ಆದರೆ, ನಿರ್ದಿಷ್ಟ ಸಮಯ ಎಂಬುದಿಲ್ಲ. ರೇಷನಿಂಗ್ ಬಳಿಕ ನೀರಿನ ಕೊರತೆ ಉಂಟಾಗಿಲ್ಲ. ನೀರು ಪೂರೈಕೆಗೆ ಸಮಯ ನಿಗದಿಪಡಿಸಿದರೆ ನೀರು ಸಂಗ್ರಹಿಸಿಟ್ಟು ಕೊಳ್ಳಲು ಅನುಕೂಲವಾಗುತ್ತದೆ ಎನ್ನುತ್ತಾರೆ ಸ್ಥಳೀಯರು.

ಈ ವಾರ್ಡ್‌ನಲ್ಲಿ ಇದುವರೆಗೆ ಟ್ಯಾಂಕರ್ ಮೂಲಕ ನೀರು ಪೂರೈಸುವ ಅನಿವಾರ್ಯತೆ ಉಂಟಾಗಿಲ್ಲ. ಸೂಟರ್‌ಪೇಟೆಯಲ್ಲಿ ನಾಲ್ಕು ಸರಕಾರಿ ಬಾವಿಗಳಿದ್ದು, ರಿಂಗ್ ಅಳವಡಿಸಿ ಅಭಿವೃದ್ಧಿಪಡಿಸಲಾಗಿದೆ. ಅಗತ್ಯ ಬಿದ್ದರೆ ಬಾವಿ ನೀರು ಉಪಯೋಗಿಸಬಹುದು. ಈ ವಾರ್ಡ್‌ನಲ್ಲಿ ಕೊಳವೆಬಾವಿಗಳಿಲ್ಲ.

ಜಲಸಿರಿ ಯೋಜನೆ ಕಾಮಗಾರಿಗಳು ಜಪ್ಪು ವಾರ್ಡ್‌ನಲ್ಲಿ ಬಹುತೇಕ ಪೂರ್ಣಗೊಂಡಿದೆ. ಮನಪಾ ನೀರು ಪೂರೈಕೆಯ ಹಳೆಯ ಪೈಪ್ ಲೈನ್‌ನಲ್ಲಿ ನೀರು ಸೋರಿಕೆ ಸಮಸ್ಯೆಯಿದ್ದು, ಜಲಸಿರಿ ಹೊಸ ಪೈಪ್‌ಲೈನ್ ಮೂಲಕ ನೀರಿನ ಸಂಪರ್ಕ ಒದಗಿಸಲಾಗಿದೆ. ಶೇ.75ರಷ್ಟು ಪ್ರದೇಶಗಳಲ್ಲಿ ಮನಪಾ ಪೂರೈಸುವ ನೀರನ್ನು ಜಲಸಿರಿ ಪೈಪ್‌ನಲ್ಲಿ ನೀಡಲಾಗುತ್ತಿದೆ. ಫಳ್ನೀರ್ ವಾರ್ಡ್‌ನ ಸೂಟರ್‌ಪೇಟೆಯಲ್ಲಿ ನೀರಿನ ಬೃಹತ್ ಟ್ಯಾಂಕ್ ನಿರ್ಮಾಣಗೊಂಡಿದೆ.


ಜಪ್ಪು ವಾರ್ಡ್‌ನಲ್ಲಿ ನೀರಿನ ಸಮಸ್ಯೆ ಅಷ್ಟಾಗಿ ಕಾಣಿಸಿಕೊಂಡಿಲ್ಲ. ಕೆಲ ಪ್ರದೇಶಗಳಿಗೆ ಮಾತ್ರ ನೀರು ಪೂರೈಕೆಯಲ್ಲಿ ಸ್ವಲ್ಪಮಟ್ಟಿಗೆ ವ್ಯತ್ಯಯ ಉಂಟಾಗುತ್ತಿದೆ. ಸೂಟರ್‌ಪೇಟೆಗೆ ಸಿಗಬೇಕಾದ ನೀರನ್ನು ಗೋರಿಗುಡ್ಡಕ್ಕೆ ತಿರುಗಿಸುವುದರಿಂದ ಸೂಟರ್‌ಪೇಟೆ ಜನರಿಗೆ ನಿಗದಿಪಡಿಸಿದ ಪ್ರಮಾಣದಲ್ಲಿ ನೀರು ದೊರೆಯುತ್ತಿಲ್ಲ.



ಜಪ್ಪು ವಾರ್ಡ್‌ನ ಸೂಟರ್‌ಪೇಟೆ, ನೆಹರೂ ರಸ್ತೆ, ಮಜಿಲ, ಜೆಪ್ಪು ಸೆಮಿನರಿ ಪ್ರದೇಶದಲ್ಲಿ ಡ್ರೈನೇಜ್ ಸಮಸ್ಯೆ ಇತ್ತು. ಶಾಸಕರ ಸಹಕಾರದಿಂದ ಅಮೃತ್ ಯೋಜನೆಯಡಿ ಹೊಸ ಯುಜಿಡಿ ಲೈನ್ ಅಳವಡಿಸಿ 800 ಹೊಸ ಮ್ಯಾನ್‌ಹೋಲ್‌ಗಳನ್ನು ನಿರ್ಮಿಸಿ ಶೇ.80ರಷ್ಟು ಒಳಚರಂಡಿ ಸಮಸ್ಯೆಯನ್ನು ಬಗೆಹರಿಸಲಾಗಿದೆ. ಮಜಿಲದಲ್ಲಿ ವೆಟ್‌ವೆಲ್ ಕಾಮಗಾರಿ ಪೂರ್ಣಗೊಂಡರೆ ಯುಜಿಡಿ ಸಮಸ್ಯೆ ಬಗೆಹರಿಯಲಿದೆ. ಸೂಟರ್ ಪೇಟೆ- ಮಜಿಲ ಸಂಪರ್ಕ ರಸ್ತೆ ಹೊಸದಾಗಿ ನಿರ್ಮಿಸಲಾಗಿದೆ. ಕನಕರಬೆಟ್ಟು ಅಂಡರ್‌ಪಾಸ್, ಸಂಪರ್ಕ ರಸ್ತೆ ನಿರ್ಮಿಸಲಾಗಿದೆ. ಕುಡುಪಾಡಿ ರಸ್ತೆ ಅಗಲೀಕರಣ ಮಾಡಲಾಗಿದೆ. ಸೂಟರ್‌ಪೇಟೆ ಯಲ್ಲಿ ನಮ್ಮ ಕ್ಲಿನಿಕ್ ಆರಂಭಿಸಲಾಗಿದೆ. ಇಡೀ ವಾರ್ಡ್‌ನಲ್ಲಿ ಸೋಲಾರ್ ದೀಪಕ್ಕೆ ಆದ್ಯತೆ ನೀಡಲಾಗಿದೆ.

■ ಭರತ್‌ಕುಮಾರ್ ಎಸ್., ಜಪ್ಪು ವಾರ್ಡ್ ನಿಕಟಪೂರ್ವ ಕಾರ್ಪೊರೇಟರ್

ಆರೆಂಜ್ ಕ್ಯಾಪ್ | ಪರ್ಪಲ್ ಕ್ಯಾಪ್



ಕ್ಲಾಸೆನ್ (ಹೈದರಾಬಾದ್) 508 ರನ್

ಭುವನೇಶ್ವರ್ (ಬೆಂಗಳೂರು) 22 ವಿಕೆಟ್

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ	12	8	4	0	16	+1.065
ಗುಜರಾತ್	12	8	4	0	16	+0.551
ಹೈದರಾಬಾದ್	12	7	5	0	14	+0.331
ಪಂಜಾಬ್	12	6	5	1	13	+0.355
ರಾಜಸ್ಥಾನ	11	6	5	0	12	+0.082
ಚೆನ್ನೈ	12	6	6	0	12	+0.027
ದಿಲ್ಲಿ	12	5	7	0	10	-0.993
ಕೆಕೆಆರ್	11	4	6	1	9	-0.198
ಮುಂಬೈ	12	4	8	0	8	-0.504
ಲಖನೌ	12	4	8	0	8	-0.701

ಕಿರುಸುದ್ದಿ




ದಿಗ್ಗಜ ಅಥ್ಲೀಟ್, ಭಾರತೀಯ ಒಲಿಂಪಿಕ್ಸ್ ಸಮಿತಿ ಅಧ್ಯಕ್ಷೆ ಪಿ. ಟಿ. ಉಷಾ ಅವರು, ಕುಟುಂಬ ಸಮೇತ ಶಬರಿಮಲೆಗೆ ಭೇಟಿ ನೀಡಿ ದರ್ಶನ ಪಡೆದರು.

ಸೂಪರ್ ಚೆಸ್: ಪ್ರಜ್ಞಾನಂದಗೆ ಜಯ

ಹೊಸದಿಲ್ಲಿ: ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿರುವ ಸೂಪರ್ ಚೆಸ್ ಕ್ಲಾಸಿಕ್ ರೊಮೇನಿಯಾ 2026 ಟೂರ್ನಿಯ ಎರಡನೇ ಸುತ್ತಿನಲ್ಲಿ ಹಾಲಿ ಚಾಂಪಿಯನ್ ಆರ್. ಪ್ರಜ್ಞಾನಂದ ಎರಡನೇ ಸುತ್ತಿನ ಪಂದ್ಯದಲ್ಲಿ ಗೆಲುವು ಸಾಧಿಸಿದ್ದಾರೆ. ಶುಕ್ರವಾರ ಬುಖಾರೆಸ್ಟ್‌ನಲ್ಲಿ ನಡೆದ ಪಂದ್ಯದಲ್ಲಿ ಅವರು ವಿಶ್ವ ಚಾಂಪಿಯನ್‌ಶಿಪ್ ಸವಾಲುಗಾರ ಜಾವೋಖಿರ್ ಸಿಂದಾರೋವ್ ಅವರನ್ನು ಕಪ್ಪು ಕಾಯಿಗಳಿಂದ ಮಣಿಸಿದರು. ಮೊದಲ ಸುತ್ತಿನಲ್ಲಿ ಅಲಿರೆಝಾ ಫಿರೋಜ್ಜಾ ವಿರುದ್ಧ ಸೋಲಿನ ಅಂಚಿನಿಂದ ಡ್ರಾ ಸಾಧಿಸಿದ್ದ ಪ್ರಜ್ಞಾನಂದ ಇದೀಗ ಎರಡು ಸುತ್ತುಗಳ ಬಳಿಕ 1.5 ಅಂಕಗಳೊಂದಿಗೆ ಆರಂಭಿಕ ಮುಂಚೂಣಿ ಗುಂಪಿನಲ್ಲಿ ಸ್ಥಾನ ಪಡೆದಿದ್ದಾರೆ. ಮೊದಲ ಸುತ್ತಿನ ಎಲ್ಲಾ ಐದು ಪಂದ್ಯಗಳೂ ಡ್ರಾದಲ್ಲಿ ಅಂತ್ಯಗೊಂಡಿದ್ದವು. ಈ ಗೆಲುವು ಪ್ರಜ್ಞಾನಂದಗೆ ಒಂದು ರೀತಿಯ ಪ್ರತೀಕಾರವೂ ಆಗಿತ್ತು. 2026ರ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಸಿಂದಾರೋವ್ ವಿರುದ್ಧ ಆಡಿದ ಎರಡೂ ಪಂದ್ಯಗಳಲ್ಲಿ ಅವರು ಸೋಲು ಕಂಡಿದ್ದರು. 10 ಆಟಗಾರರ ಕ್ಲಾಸಿಕಲ್ ರೌಂಡ್-ರಾಬಿನ್ ಮಾದರಿಯಲ್ಲಿ ನಡೆಯುತ್ತಿರುವ ಈ ಟೂರ್ನಿ, 2026ರ ಗ್ರ್ಯಾಂಡ್ ಚೆಸ್ ಟೂರ್‌ನ ಎರಡನೇ ಪ್ರಮುಖ ಸ್ಪರ್ಧೆಯಾಗಿದೆ.

ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣಕ್ಕೆ ಶಿಲಾನ್ಯಾಸ



ಗೋರಖಪುರ: ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮತ್ತು ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ, ಉತ್ತರಪ್ರದೇಶದ ಗೋರಖಪುರದಲ್ಲಿ ನಿರ್ಮಾಣವಾಗಲಿರುವ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಿದರು. ಶನಿವಾರ ನಡೆದ ಕ್ರೀಡಾಂಗಣದ ಶಂಕುಸ್ಥಾಪನೆ ಸಮಾರಂಭದಲ್ಲಿ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಬೆಂಬಲದೊಂದಿಗೆ ಕ್ರೀಡಾಂಗಣವನ್ನು ಅಭಿವೃದ್ಧಿಪಡಿಸಲಾಗುತ್ತಿದೆ.ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ನೆರವಿನೊಂದಿಗೆ ವಾರಣಾಸಿಯಲ್ಲಿ ಮತ್ತೊಂದು ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣವೂ ನಿರ್ಮಾಣವಾಗುತ್ತಿದೆ ಎಂದು ಹೇಳಿದರು.ಗೋರಖ್‌ಪುರದಲ್ಲಿರುವ ಹೊಸ ಕ್ರೀಡಾಂಗಣವು 46 ಎಕರೆಗಳಲ್ಲಿ ಹರಡಿರುವ 30,000 ಆಸನ ಸಾಮರ್ಥ್ಯವನ್ನು ಹೊಂದಿದ್ದು, ಮೀಸಲಾದ ಪಾರ್ಕಿಂಗ್ ಸೌಲಭ್ಯಗಳನ್ನು ಹೊಂದಿದೆ ಎಂದು ಅವರು ಹೈಲೈಟ್ ಮಾಡಿದರು. ಒಳಾಂಗಣ ಆಟಗಳಿಗಾಗಿ ನೆರೆಯ ಕ್ರೀಡಾ ಸಂಕೀರ್ಣಕ್ಕಾಗಿ ಹೆಚ್ಚುವರಿ 60 ಎಕರೆ ಭೂಮಿಯನ್ನು ಮೀಸಲಿಡಲಾಗಿದೆ.

ಅಗ್ರ ಎರಡಲ್ಲೇ ಉಳಿಯಲು ಆರ್‌ಸಿಬಿ ಪಣ | ಪಂಜಾಬ್‌ಗೆ ಗೆಲ್ಲಲೇಬೇಕಾದ ಅನಿವಾರ್ಯತೆ

ಪಂಜಾಬ್‌ಗೆ ಬೆಂಗಳೂರು ಸವಾಲು

ಧರ್ಮಶಾಲಾ: ಪ್ಲೇಆಫ್ ಖಾತ್ರಿಗಾಗಿ ಆರ್‌ಸಿಬಿ ಹಾಗೂ ಟೂರ್ನಿಯಲ್ಲಿ ಉಳಿಯುವುದಕ್ಕಾಗಿ ಪಂಜಾಬ್ ತಂಡಗಳು ಭಾನುವಾರದ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಎರಡನೇ ಪಂದ್ಯದಲ್ಲಿ ರಾಜಸ್ಥಾನ ಮಹತ್ವದ ಪಂದ್ಯದಲ್ಲಿ ದಿಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಲಿದೆ. ಆರು ಗೆಲುವಿನ ನಂತರ ಪಂಜಾಬ್ ಸತತ ಐದು ಪಂದ್ಯಗಳನ್ನು ಸೋತಿದೆ. ಆರ್‌ಸಿಬಿ ಅತ್ಯುತ್ತಮ ಪ್ರದರ್ಶನದೊಂದಿಗೆ ಅಗ್ರಸ್ಥಾನದಲ್ಲಿ ಕಾಣಿಸಿಕೊಂಡಿದೆ.

ಎರಡನೇ ಪಂದ್ಯದಲ್ಲಿ ಆಡಲಿರುವ ರಾಜಸ್ಥಾನ ಹಿಂದಿನ ಪಂದ್ಯದಲ್ಲಿ ಸೋಲನುಭವಿಸಿದ್ದು, ದೊಡ್ಡ ಹಿನ್ನಡೆಯೊಂದಿಗೆ ಬಹು ದಿನಗಳ ನಂತರ ಆಡಲಿದೆ. ಅದೇ ದಿಲ್ಲಿ ತಂಡ ಕೊನೆಯ ಹೋಪ್‌ನಲ್ಲಿದ್ದಲ್ಲದೆ, ಅಭಿಯಾನವನ್ನು ಗೆಲುವಿನೊಂದಿಗೆ ಮುಗಿಸಲು ಅಣಿಯಾಗುತ್ತಿದೆ. ಪ್ಲೇಆಫ್ ವಿಚಾರದಲ್ಲಿ ಎರಡೂ ಪಂದ್ಯಗಳು ಪ್ರಮುಖ ಪಾತ್ರ ವಹಿಸಲಿವೆ.

ಆರ್‌ಸಿಬಿ ಗೆದ್ದರೆ ಟಾಪ್ 2 ಖಚಿತ: 16 ಅಂಕಗಳನ್ನು ಹೊಂದಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮೊದಲನೇ ಸ್ಥಾನದಲ್ಲಿದೆ. ಲಖನೌ ಸೂಪರ್ ಜೇಂಟ್ಸ್ ಚೆನ್ನೈ ತಂಡವನ್ನು ಸೋಲಿಸಿದ ನಂತರ ಪಂದ್ಯಾವಳಿಯ ಪ್ಲೇಆಫ್ ಲೆಕ್ಕಾಚಾರ ಇನ್ನಷ್ಟು ಕುತೂಹಲ ಮೂಡಿಸಿದೆ. ಆರ್‌ಸಿಬಿಯ ಪ್ಲೇಆಫ್ ಬಹುತೇಕ ಖಚಿತವಾಗಿದೆ. ಈ ಪಂದ್ಯದಲ್ಲಿ ಗೆದ್ದರೆ 18 ಅಂಕಗಳೊಂದಿಗೆ ಆರ್‌ಸಿಬಿ ಅಗ್ರಸ್ಥಾನದಲ್ಲೇ ಉಳಿಯಲಿದೆ. ಅಲ್ಲದೆ, ಟಾಪ್ 2ರಲ್ಲಿ ಮುಗಿಸುವ ಸಾಧ್ಯತೆಗಳೂ ಹೆಚ್ಚಲಿವೆ. ಏಕೆಂದರೆ ಪಂಜಾಬ್ ನಿರಂತರ ಸೋಲುಗಳೊಂದಿಗೆ ಹಿನ್ನಡೆ ಅನುಭವಿಸಿದೆ. ಮೂರನೇ ಸ್ಥಾನದಲ್ಲಿರುವ ಹೈದರಾಬಾದ್ ಎಲ್ಲಾ ಪಂದ್ಯಗಳಲ್ಲಿ ಗೆಲ್ಲಬೇಕಿದೆ.

ಆತ್ಮವಿಶ್ವಾಸದಲ್ಲಿ ಬೆಂಗಳೂರು: ಈ ಆವೃತ್ತಿಯಲ್ಲಿ ಆರ್‌ಸಿಬಿಗೆ ಗೆಲುವಿನ ಹಿಂದಿರುವ ಪ್ರಮುಖ ಶಕ್ತಿಯಾಗಿ ಭುವನೇಶ್ವರ್ ಕುಮಾರ್ ಕಾಣಿಸಿಕೊಂಡಿದ್ದಾರೆ. ಪ್ರತಿ ಪಂದ್ಯದಲ್ಲಿ ಬೌಲಿಂಗ್ ಮೂಲಕ ಎದುರಾಳಿಗೆ ಕಾಡುವ ಅವರು, ಗೆಲುವಿನಲ್ಲಿ ಮಿಂಚುತ್ತಿದ್ದಾರೆ. ದೊಡ್ಡ ದೊಡ್ಡ ಬ್ಯಾಟರ್‌ಗಳನ್ನು ಆರಂಭದಲ್ಲೇ ಕಟ್ಟಿಹಾಕಿರುವ ಅವರು, ಆಡಿರುವ ಪಂದ್ಯಗಳಲ್ಲಿ ಬರೋಬ್ಬರಿ 23 ವಿಕೆಟ್ ಪಡೆದು ಪರ್ಪಲ್ ಕ್ಯಾಪ್ ಪಡೆದವರಾಗಿದ್ದಾರೆ. ಇತ್ತ ಅವರಿಗೆ ಜೋಶ್ ಹ್ಯಾಜೆಲ್ವುಡ್ ಜೋಶ್ ತುಂಬುತ್ತಿದ್ದರೆ, ತಂಡದಲ್ಲಿ ಡಫಿ ಅವರನ್ನು ಸೇರಿಸಿಕೊಂಡಿರುವುದು ವೇಗಕ್ಕೆ ಬಲ ತಂದಿದೆ.

ಒತ್ತಡದಲ್ಲಿ ಪಂಜಾಬ್: ಇತ್ತ ಐದು ಸತತ ಸೋಲುಗಳೊಂದಿಗೆ ಕಂಗೆಟ್ಟಿರುವ ಪಂಜಾಬ್ ಕಿಂಗ್ಸ್ ದೊಡ್ಡ ಹಿನ್ನಡೆ ಅನುಭವಿಸಿದ್ದು, ಪ್ಲೇಆಫ್ ವಿಚಾರದಲ್ಲಿ ಗೆಲ್ಲಲೇಬೇಕಾದ ಒತ್ತಡದಲ್ಲಿದೆ. ಐದು ಸತತ ಸೋಲು ಪಂಜಾಬ್ ತಂಡವನ್ನು ಹೊರಬೀಳಬಹುದಾದ ಸ್ಥಿತಿಗೆ ತಂದಿಟ್ಟಿದೆ. 13 ಅಂಕಗಳೊಂದಿಗೆ 4ನೇ ಸ್ಥಾನದಲ್ಲಿರುವ ಪಂಜಾಬ್ ಸೋತರೆ ತಕ್ಷಣಕ್ಕೆ ಪರಿಣಾಮ ಬೀರದಿದ್ದರೂ ರಾತ್ರಿ ನಡೆಯಲಿರುವ ಪಂದ್ಯದಲ್ಲಿ ರಾಜಸ್ಥಾನ ಗೆಲುವು ಸಾಧಿಸಿದರೆ ಪಂಜಾಬ್ ಐದನೇ ಸ್ಥಾನಕ್ಕೆ ಬೀಳಬಹುದು. ಹೀಗಾದರೆ ಮುಂದಿನ ಪಂದ್ಯಗಳಲ್ಲಿ ಗೆದ್ದರೂ ಪಂಜಾಬ್ ಪ್ರವೇಶ ಅನಿಶ್ಚಿತತೆ ಸೃಷ್ಟಿಯಾಗುತ್ತದೆ.

ದುಬಾರಿ ಬೌಲರ್, ಪಂಜಾಬ್‌ಗೆ ಚಿಂತೆ: ಪಂಜಾಬ ತಂಡದಲ್ಲಿ ಬೌಲರ್‌ಗಳು ದುಬಾರಿಯಾಗಿರುವುದೇ ದೊಡ್ಡ ಹಿನ್ನಡೆಯಾಗಿದೆ. ಹಿಂದಿನ ಪಂದ್ಯಗಳಲ್ಲಿ ಎಲ್ಲಾ ಬೌಲರ್‌ಗಳು ದಂಡಿಸಿಕೊಂಡಿದ್ದಾರೆ. ಮುಂಬೈ ವಿರುದ್ಧದ ಪಂದ್ಯದಲ್ಲಿ ಚಾಹಲ್ ಹೊರತು ಯಾವುದೇ ಬೌಲರ್‌ನಿಂದಲೂ ಹೇಳಿಕೊಳ್ಳುವ ಪ್ರದರ್ಶನ ಮೂಡಬಂದಿಲ್ಲ. ಬ್ಯಾಟಿಂಗ್ ವಿಚಾರಕ್ಕೆ ಬಂದರೆ, ಶ್ರೇಯಸ್ ಅಯ್ಯರ್, ಪ್ರಭಸಿಮ್ರನ್ ಸಿಂಗ್ ಬಿಟ್ಟರೆ ಇನ್ನುಳಿದವರು ಲಯಕ್ಕೆ ಬರಬೇಕಿದೆ.



ಪಿಚ್

ಧರ್ಮಶಾಲಾದಲ್ಲಿ ಪಂದ್ಯ ನಡೆಯಲಿದೆ. ಬ್ಯಾಟರ್‌ಗೆ ಲಾಭ ಕೊಡಲಿದ್ದು, ಸ್ಪಿನ್ನರ್‌ಗಳಿಗೂ ಬಲ ತರಲಿದೆ. ಮಳೆ ಸಾಧ್ಯತೆ ಕಡಿಮೆ. ಮೊದಲು ಬೌಲಿಂಗ್ ಮಾಡುವ ತಂಡವೇ ಹೆಚ್ಚು ಬಾರಿ ಗೆದ್ದಿದೆ. ಎರಡನೇ ಪಂದ್ಯ ದಿಲ್ಲಿಯಲ್ಲಿ ನಡೆಯಲಿದ್ದು, ಬ್ಯಾಟರ್‌ಗಳ ಪ್ರದರ್ಶನ ನಡೆಯಲಿದೆ.

ಬ್ಯಾಟಿಂಗ್ ಪಡೆಗೆ ಕೊಹ್ಲಿ ಬಲ

ವಿರಾಟ್ ಕೊಹ್ಲಿ ಶತಕ ಬಾರಿಸಿದ್ದಲ್ಲದೆ ಲಯಕ್ಕೆ ಮರಳಿರುವುದು ವಿಶ್ವಾಸ ಹೆಚ್ಚಿಸಿದೆ. ಸಾಲ್ಟ್ ಬದಲಿ ಆಟಗಾರರಾಗಿ ಕಣಕ್ಕಿಳಿದಿರುವ ಜೇಕಬ್ ಬೆಥೆಲ್ ಹೇಳಿಕೊಳ್ಳುವ ಪ್ರದರ್ಶನ ನೀಡಿಲ್ಲ. ಇತ್ತ ಮೂರನೇ ಕ್ರಮಾಂಕದಲ್ಲಿ ಬ್ಯಾಟ್ ಬೀಸುವ ಪಡಿಕ್ಕಲ್ ಪ್ರಭಾವ ಮೂಡಿಸಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ನಾಯಕ ಪಾಟಿದಾರ್ ತಮ್ಮ ಲಯದಲ್ಲಿದ್ದು, ಭರ್ಜರಿ ಪ್ರದರ್ಶನದೊಂದಿಗೆ ಮಿಂಚಿದ್ದಾರೆ. ಆದರೆ ಕೆಳಕ್ರಮಾಂಕದಲ್ಲಿ ರನ್ ಬರುತ್ತಿಲ್ಲ. ಡೇವಿಡ್ ಮಿಂಚಿದರೂ, ಜಿತೇಶ್ ಶರ್ಮ ಪರದಾಡುತ್ತಿದ್ದಾರೆ. ಆಲ್‌ರೌಂಡರ್ ಕೃಣಾಲ್ ಪಾಂಡ್ಯ ಹೆಚ್ಚುವರಿ ಬ್ಯಾಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, ತಂಡಕ್ಕೆ ಆನೆ ಬಲ ತಂದಿದೆ. ವೆಂಕಟೇಶ್ ಅಯ್ಯರ್ ಅವರಿಗೆ ಕಳೆದ ಪಂದ್ಯದಲ್ಲಿ ಅವಕಾಶ ಸಿಕ್ಕರೂ ಬ್ಯಾಟಿಂಗ್ ಮಾಡುವ ಪರಿಸ್ಥಿತಿ ಬಂದಿಲ್ಲ.

ದಿಲ್ಲಿ-ರಾಜಸ್ಥಾನ ಪಂದ್ಯ

ಇನ್ನೊಂದು ಪಂದ್ಯದಲ್ಲಿ ದಿಲ್ಲಿ ಹಾಗೂ ರಾಜಸ್ಥಾನ ತಂಡಗಳು ಎದುರಾಗಲಿವೆ. ಹಿಂದಿನ ಪಂದ್ಯಗಳಲ್ಲಿ ಸೋಲನುಭವಿಸಿರುವ ರಾಜಸ್ಥಾನ ಸೋತರೆ ದೊಡ್ಡ ಹಿನ್ನಡೆ ಅನುಭವಿಸಲಿದೆ. ಐದನೇ ಸ್ಥಾನದಲ್ಲಿರುವ ರಾಜಸ್ಥಾನ ಪ್ಲೇಆಫ್ ವಿಚಾರದಲ್ಲಿ ಗೆಲ್ಲಲೇಬೇಕು. ಹಾಗಾದರೆ, ಆರ್‌ಸಿಬಿ ಪಂಜಾಬ್ ವಿರುದ್ಧ ಗೆದ್ದರೆ, ನಾಲ್ಕನೇ ಸ್ಥಾನಕ್ಕೇರಲಿದೆ. ಇತ್ತ ದಿಲ್ಲಿ ಉಳಿದ ಪಂದ್ಯಗಳಲ್ಲಿ ಗೆದ್ದು ಕಾಯ್ದು ನೋಡುವ ಸ್ಥಾನದಲ್ಲಿದೆ.

ಥೈಲ್ಯಾಂಡ್ ಓಪನ್ ಬ್ಯಾಡ್ಮಿಂಟನ್ | ಭಾರತಕ್ಕೆ ಪದಕ ಖಚಿತ

ಫೈನಲ್‌ಗೆ ಸಾತ್ವಿಕ್-ಚಿರಾಗ್



ಕೊನೆ ಸೆಟ್

ಮೂರನೇ ಗೇಮ್‌ನಲ್ಲಿ 5-5 ಸಮಬಲದ ಬಳಿಕ ಸಾತ್ವಿಕ್-ಚಿರಾಗ್ ಸಂಪೂರ್ಣ ಮೇಲುಗೈ ಸಾಧಿಸಿದರು. ಸತತ ಆರು ಅಂಕಗಳನ್ನು ಗೆದ್ದು ಅವರು 16-8 ಮುನ್ನಡೆ ಪಡೆದರು. ಆ ಅಂತರವನ್ನು ಮಲೇಶಿಯಾ ಜೋಡಿಗೆ ಮುಚ್ಚಲು ಸಾಧ್ಯವಾಗದೇ, ಭಾರತೀಯ ಜೋಡಿ ಭರ್ಜರಿ ಗೆಲುವಿನೊಂದಿಗೆ ಫೈನಲ್ ಪ್ರವೇಶಿಸಿತು.

ಬ್ಯಾಂಕಾಕ್: ಥೈಲ್ಯಾಂಡ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಅಗ್ರ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಈ ವರ್ಷದ ತಮ್ಮ ಮೊದಲ ಫೈನಲ್‌ಗೆ ಪ್ರವೇಶಿಸಿದ್ದಾರೆ.

ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಅಗ್ರ ಶ್ರೇಯಾಂಕಿತ ಭಾರತೀಯ ಜೋಡಿ, ಮಲೇಷ್ಯಾದ ಮೂರನೇ ಶ್ರೇಯಾಂಕಿತ ಗೋಹ್ ಸ್ಜೆ ಫೇಯ್ ಮತ್ತು ನೂರ್ ಇಜ್ಜುದ್ದೀನ್ ಜೋಡಿಯನ್ನು 19-21, 22-20, 21-16 ಅಂತರದಲ್ಲಿ ಸೋಲಿಸಿತು. ಈ ಗೆಲುವಿನೊಂದಿಗೆ ಸಾತ್ವಿಕ್-ಚಿರಾಗ್ ತಮ್ಮ ಮುಖಾಮುಖಿ ದಾಖಲೆಯನ್ನು 8-2ಕ್ಕೆ ವಿಸ್ತರಿಸಿದರು.

ವಿಶ್ವ ನಂ. 4 ಸ್ಥಾನದಲ್ಲಿರುವ ಭಾರತೀಯ ಜೋಡಿ ಕೊನೆಯದಾಗಿ 2025ರ ಚೈನಾ ಮಾಸ್ಟರ್ಸ್ ಸೂಪರ್ 750 ಟೂರ್ನಿಯಲ್ಲಿ ಫೈನಲ್ ಆಡಿತ್ತು. ಎರಡು ವರ್ಷಗಳ ಹಿಂದೆ ಇದೇ ಥೈಲ್ಯಾಂಡ್ ಓಪನ್ ಪ್ರಶಸ್ತಿ ಗೆದ್ದ ಬಳಿಕ ಮತ್ತೊಮ್ಮೆ ಚಾಂಪಿಯನ್ ಆಗುವ ಗುರಿಯೊಂದಿಗೆ ಫೈನಲ್‌ಗೆ ಕಾಲಿಟ್ಟಿದ್ದಾರೆ.

ಎರಡು ಬಾರಿ ವಿಶ್ವ ಚಾಂಪಿಯನ್‌ಶಿಪ್ ಕಂಚಿನ ಪದಕ ವಿಜೇತರಾದ ಸಾತ್ವಿಕ್-ಚಿರಾಗ್, ಪ್ರಶಸ್ತಿಗಾಗಿ ಇಂಡೋನೇಷ್ಯಾದ ಲಿಯೋ ರೋಲಿ ಕಾರ್ನಾಂಡೋ ಮತ್ತು ಡೇನಿಯಲ್ ಮಾರ್ಟಿನ್ ಜೋಡಿಯನ್ನು ಎದುರಿಸಲಿದ್ದಾರೆ. 2 ವರ್ಷಗಳ ಬಳಿಕ ಮೊದಲ ಬಾರಿಗೆ ಜೊತೆಯಾಗಿ ಆಡುತ್ತಿರುವ ಇಂಡೋನೇಷ್ಯಾ ಜೋಡಿ ಈಗಾಗಲೇ ಗಮನ ಸೆಳೆದಿದೆ.

ಪಂದ್ಯದಲ್ಲಿ ಏನಾಯ್ತು?: ಒಂದು ಗಂಟೆ 22 ನಿಮಿಷಗಳ ಕಾಲ ನಡೆದ ಸೆಮಿಫೈನಲ್‌ನಲ್ಲಿ ಆರಂಭಿಕ ಗೇಮ್ ಭಾರೀ ಪೈಪೋಟಿಯಿಂದ ಕೂಡಿತ್ತು. ಆರಂಭದಲ್ಲಿ ಎರಡೂ ಜೋಡಿಗಳು ಮುನ್ನಡೆ ಬದಲಾಯಿಸಿಕೊಂಡರೂ, 7-7 ಸಮಬಲದ ಬಳಿಕ ಮಲೇಶಿಯಾ ಜೋಡಿ ಹಿಡಿತ ಸಾಧಿಸಿತು. ಒಂದು ಹಂತದಲ್ಲಿ ಅವರು 15-9 ಮುನ್ನಡೆ ಪಡೆದರು. ಭಾರತೀಯರು ಅಂತರ ಕಡಿಮೆ ಮಾಡಿ ಎರಡು ಗೇಮ್ ಪಾಯಿಂಟ್ ಉಳಿಸಿಕೊಂಡರೂ, ಕೊನೆಯಲ್ಲಿ ಸಾತ್ವಿಕ್ ನೆಟ್‌ಗೆ ಹೊಡೆದ ಪರಿಣಾಮ ಮೊದಲ ಗೇಮ್ ಕೈ ತಪ್ಪಿತು.

ಎರಡನೇ ಗೇಮ್ ಮತ್ತಷ್ಟು ರೋಚಕವಾಗಿತ್ತು. ಗರಿಷ್ಠ ಮೂರು ಅಂಕಗಳಷ್ಟೇ ಅಂತರ ಕಂಡುಬಂದ ಈ ಹೋರಾಟದಲ್ಲಿ ಭಾರತೀಯ ಜೋಡಿ 20-18 ಮುನ್ನಡೆಯಲ್ಲಿದ್ದಾಗ ಮಲೇಶಿಯಾ ಜೋಡಿ ಎರಡು ಗೇಮ್ ಪಾಯಿಂಟ್ ಉಳಿಸಿಕೊಂಡಿತು. ಆದರೆ ದೀರ್ಘ ರ್‍ಯಾಲಿಯ ಬಳಿಕ ಭಾರತೀಯರು ಮೂರನೇ ಅವಕಾಶ ಪಡೆದು ಸಮಬಲ ಸಾಧಿಸಿದರು. ಇಜ್ಜುದ್ದೀನ್ ಹೊಡೆದ ತಪ್ಪಾದ ಡ್ರೈವ್ ಡಬಲ್ಸ್ ಗಡಿಯಾಚೆ ಹೋಗಿದ್ದರಿಂದ ಪಂದ್ಯ ನಿರ್ಣಾಯಕ ಗೇಮ್‌ಗೆ ತಲುಪಿತು.

ಕರ್ನಾಟಕ ಓಪನ್ ಪಂದ್ಯಾವಳಿ: ಭಾರತೀಯರ ಆರ್ಭಟ

ಸಾಕೇತ್-ಪೂಣಚ್ಚ ಚಾಂಪಿಯನ್



ಬೆಂಗಳೂರು: ಗ್ರಿಗೊರಿ ಲೊಮಾಕಿನ್ ಮತ್ತು ಬಾರ್ ಬಿಯರ್ಕೋವ್ ಚಾಲೆಂಜ್ ಗೆದ್ದ ಭಾರತದ ನಂಬರ್ 1 ಜೋಡಿಗಳಾದ ನಿಕಿ ಪೂಣಚ್ಚ ಮತ್ತು ಸಾಕೇತ್ ಮೈನೇನಿ ಇಲ್ಲಿ ನಡೆದ ಪ್ರತಿಷ್ಠಿತ ಕರ್ನಾಟಕ ಓಪನ್ ಪಂದ್ಯಾವಳಿಯನ್ನು ಗೆದ್ದುಕೊಂಡರು.

ಐಪಿಎಲ್ ಹವಾ ನಡುವೆ ಬೆಂಗಳೂರಿನ ಎಸ್.ಎಮ್. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ನಡೆದ ಕರ್ನಾಟಕ ಓಪನ್ ಪಂದ್ಯಾವಳಿಗೆ ತೆರೆ ಬಿದ್ದಿತು. ಶನಿವಾರ ಮಧ್ಯಾಹ್ನ ನಡೆದ ಫೈನಲ್ ಪಂದ್ಯದಲ್ಲಿ ಸರ್ವ್ ಲಾಭ ಪಡೆದಿದ್ದಲ್ಲದೆ, ಸಂಯೋಜಿತ ಆಟ ಪ್ರದರ್ಶಿಸಿದ ನಿಕಿ ಪೂಣಚ್ಚ ಮತ್ತು ಸಾಕೇತ್ ಮೈನೇನಿ 6-2, 6-3ರಿಂದ ಗೆದ್ದರು. ಇದಕ್ಕೂ ಮೊದಲು ೧ ಜೋಡಿ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಭಾರತದ ಮನೀಶ್ ಕುಮಾರ್ ಮತ್ತು ಸಿದ್ಧಾರ್ಥ್ ರಾವತ್ ಸೋಲಿಸಿತ್ತು. ಶುಕ್ರವಾರದ ಸೆಮಿಫೈನಲ್ ಪಂದ್ಯದಲ್ಲಿ ಪ್ರಜ್ವಲ್ ದೇವ್, ನಿತಿನ್ ಕುಮಾರ್ ಅವರನ್ನು ಸೋಲಿಸಿತ್ತು. ಅತ್ತ ಫಿಲಿಪ್ ಸೆಕುಲಿಕ್ ಅವರನ್ನು ಮಣಿಸಿರುವ ಕೀಗನ್ ಸ್ಮಿತ್ ಸಿಂಗಲ್ ವಿಭಾಗದ ಚಾಂಪಿಯನ್ ಪಟ್ಟ ಅಲಂಕರಿಸಿದರು.

ಪೂಣಚ್ಚ-ಸಾಕೇತ್ ಪ್ರಾಬಲ್ಯ: ಮಳೆಯ ವಾತಾವರಣದ ನಡುವೆ ನಡೆದ ಪಂದ್ಯದಲ್ಲಿ ಭಾರತೀಯರು ಪ್ರಭಾವಶಾಲಿಯಾದರು. ಟಾಸ್ ಗೆಲುವಿನೊಂದಿಗೆ ಸರ್ವ್ ಆಯ್ಕೆ ಮಾಡಿಕೊಂಡ ಈ ಜೋಡಿ ಆರಂಭಿಕ ಸೆಟ್‌ನಿಂದಲೂ ಭದ್ರ ಹಿಡಿತ ಸಾಧಿಸಿತು. ಸರ್ವ್ ಮಾಡುವಾಗಲೇ ಶೇ.77ರಷ್ಟು ಅಂಕಗಳನ್ನು ಕಸಿದುಕೊಂಡಿತು. ಸಾಕೇತ್ ಬಿಗಿ ಸರ್ವ್‌ನೊಂದಿಗೆ ಪಂದ್ಯ ಶುರು ಮಾಡಿದರು. ಗ್ರಿಗೊರಿ ಲೊಮಾಕಿನ್ ಮತ್ತು ಬಾರ್ ಬಿಯರ್ಕೋವ್ ಉತ್ತಮ ಡಿಫೆನ್ಸ್ ಆಟವಾಡಿದರೂ ಭಾರತ ಜೋಡಿ ಗ್ಯಾಪ್‌ಗಳ ಮೂಲಕ ಮುನ್ನಡೆ ಸಾಧಿಸಿತು. ಬೆಂಗಳೂರು ಕೋರ್ಟ್‌ನ ಹೆಚ್ಚಿನ ಬೌನ್ಸ್ ಲಾಭ ಪಡೆದ ಸಾಕೇತ್-ಪೂಣಚ್ಚ 3 ಏಸ್ ಪಾಯಿಂಟ್‌ಗಳನ್ನು ದಾಖಲಿಸಿದರು. ಎದುರಾಳಿಗಳು ಎಷ್ಟೇ ಪ್ರಯತ್ನ ಪಟ್ಟರೂ ಎಲ್ಲಾ ಯೋಜನೆಗಳನ್ನು ತಡೆದ ಈ ಜೋಡಿ ಮೊದಲನೇ ಸೆಟ್ ಅನ್ನು 6-2ರಿಂದ ಗೆದ್ದಿತು.

ಎರಡನೇ ಸೆಟ್‌ನಲ್ಲಿ ಸಾಕೇತ್ ಇನ್ನಷ್ಟು ಆಕ್ರಮಣಕಾರಿ ಆಟ ಪ್ರದರ್ಶಿಸಿದರು. ಅತ್ತ ಪೂಣಚ್ಚ ಡಿಫೆನ್ಸ್ ನೋಡಿಕೊಂಡರು. ಒಟ್ಟಿನಲ್ಲಿ ಸಮಯೋಚಿತ ಆಟ ಪ್ರದರ್ಶಿಸಿದ ಈ ಜೋಡಿ ಎದುರಾಳಿಗೆ ಕಂಬ್ಯಾಕ್ ಮಾಡಲು ಬಿಡದೆ ಎರಡನೇ ಸೆಟ್ ಅನ್ನೂ 6-3ರಿಂದ ಗೆದ್ದುಕೊಂಡಿತು.

ಸಿಂಗಲ್ಸ್‌ನಲ್ಲಿ ಸ್ಮಿತ್ ಮಿಂಚು

ವೈಯಕ್ತಿಕ ವಿಭಾಗದಲ್ಲಿ ಕಗೀನ್ ಸ್ಮಿತ್ ಅವರು ಫಿಲಿಪ್ ಮೇಲೆ ಸ್ಪಷ್ಟ ಪ್ರಾಬಲ್ಯ ಸಾಧಿಸಿದರು. ಮೊದಲಿನಿಂದಲೂ ಮುನ್ನಡೆ ಸಾಧಿಸಿದ ಸ್ಮಿತ್ ಸರ್ವ್, ಬ್ರೇಕ್ ಮತ್ತು ಏಸ್‌ನಲ್ಲಿ ಪಾಯಿಂಟ್‌ಗಳನ್ನು ಪಡೆದರು. ಮೊದಲನೇ ಸೆಟ್ 6-2ರಿಂದ ಗೆದ್ದ ನಂತರ ಎರಡನೇ ಸೆಟ್‌ನಲ್ಲಿ ಅಲ್ಪ ಪೈಪೋಟಿ ಎದುರಿಸಿದರು. ಫಿಲಿಪ್ ಬ್ರೇಕ್‌ವರೆಗೂ ಕೊಂಡೊಯ್ದರು. ಆಕ್ರಮಣಕಾರಿ ಆಟ ಪ್ರದರ್ಶಿಸಿದ ಸ್ಮಿತ್ ಅಲ್ಲಿಯೂ 7-5ರಿಂದ ಗೆದ್ದು ಚಾಂಪಿಯನ್ ಪಟ್ಟ ಮುಡಿಗೇರಿಸಿಕೊಂಡರು.



ಮುಂದಿನ ತಿಂಗಳಿನಿಂದ ನಡೆಯಲಿರುವ ಮಹಿಳೆಯರ ಟಿ20 ವಿಶ್ವಕಪ್‌ಗಾಗಿ ಸಿದ್ಧತೆ ನಡೆಸಿರುವ ಭಾರತೀಯ ಮಹಿಳಾ ತಂಡವು ಶನಿವಾರದಂದು ಉಜ್ಜೈನಿಯ ಮಹಾಕಾಳೇಶ್ವರ ಜ್ಯೋತಿರ್ಲಿಂಗ ದೇವಾಲಯಕ್ಕೆ ಭೇಟಿ ನೀಡಿ ಭಸ್ಮಾರತಿಗೆ ಹಾಜರಾಯಿತು. ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್, ಶೆಫಾಲಿ ವರ್ಮಾ, ರೇಣುಕಾ ಸಿಂಗ್, ಶ್ರೇಯಾಂಕಾ ಪಾಟೀಲ್, ಕ್ರಾಂತಿ ಗೌಡ, ಭಾರತಿ ಫುಲ್ಮಾಲಿ, ಅರುಂಧತಿ ರೆಡ್ಡಿ, ದೀಪ್ತಿ ಶರ್ಮ ಸೇರಿದಂತೆ ಪ್ರಮುಖರು ಪೂಜೆ ವೇಳೆ ಹಾಜರಿದ್ದರು.

ಆಲೆನ್, ರಘುವಂಶಿ ಆರ್ಭಟ

ಕೋಲ್ಕತ್ತಾ: ಫಿನ್ ಆಲೆನ್(93), ಅಂಗ್ರಿಶ್ ರಘುವಂಶಿ(82★) ಮತ್ತು ಕ್ಯಾಮರನ್ ಗ್ರೀನ್(52) ಅಬ್ಬರಕ್ಕೆ ಗುಜರಾತ್ ಬೌಲರ್‌ಗಳು ತತ್ತರಿಸಿದ್ದು, ಇಲ್ಲಿ ನಡೆದ ಪಂದ್ಯದಲ್ಲಿ ಕೋಲ್ಕತ್ತಾ ದೊಡ್ಡ ಗುರಿ ನೀಡಿದೆ. ಪಂದ್ಯದ ಮೊದಲ ಇನ್ನಿಂಗ್ಸ್ ಮಾತ್ರದಲ್ಲಿ ಕೆಕೆಆರ್ 22 ಸಿಕ್ಸರ್ ಬಾರಿಸಿತು. ಪವರ್‌ಪ್ಲೇನಲ್ಲಿ 56, ಮಧ್ಯಮ ಓವರ್‌ನಲ್ಲಿ 136 ಮತ್ತು ಡೆತ್ ಓವರ್‌ನಲ್ಲಿ 55 ರನ್ ಬಾರಿಸಿದ್ದು, ಬರೋಬ್ಬರಿ 247 ರನ್ ಗಳಿಸಿತು. ಗುಜರಾತ್ ಕೇವಲ 2 ವಿಕೆಟ್ ಪಡೆದುಕೊಂಡಿತು.

ಆಲೆನ್-ರಘು ಅಬ್ಬರ: ಟಾಸ್ ಸೋತ ಕೆಕೆಆರ್ ಬ್ಯಾಟಿಂಗ್ ಆಹ್ವಾನ ಪಡೆಯಿತು. ಆಲೆನ್ ಯಥಾಸ್ಥಿತಿ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಆದರೆ ಅಜಿಂಕ್ಯಾ ರಹಾನೆ ಹೇಳಿಕೊಳ್ಳುವ ಬ್ಯಾಟಿಂಗ್ ಮಾಡಲಿಲ್ಲ. 14 ರನ್‌ಗೆ ಅವರು ವಿಕೆಟ್ ಕೊಟ್ಟ ನಂತರ 44ಗೆ ಕೆಕೆಆರ್ ಮೊದಲ ವಿಕೆಟ್ ಕಳೆದುಕೊಂಡಿತು. ಮೂರನೇ ವಿಕೆಟ್‌ಗೆ ಅಂಗ್ರಿಶ್ ರಘುವಂಶಿ ಹಾಗೂ ಫಿನ್ ಆಲೆನ್ ಒಂದಾಗಿ ಗುಜರಾತ್ ಟೈಟಾನ್ಸ್ ತಂಡವನ್ನು ದಂಡಿಸಲಾರಂಭಿಸಿದರು.

5ನೇ ಓವರ್‌ನಲ್ಲಿ ಶುರುವಾದ ಈ ಜೋಡಿಯ ಆರ್ಭಟ 12ನೇ ಓವರ್‌ವರೆಗೂ ನಡೆಯಿತು. ಬರೋಬ್ಬರಿ 10 ಸಿಕ್ಸರ್, 4 ಬೌಂಡರಿ ಬಾರಿಸಿದ ಫಿನ್ ಆಲೆನ್ 35 ಬಾಲ್ ಮಾತ್ರದಲ್ಲಿ 93 ಚಚ್ಚಿದರು. ಇತ್ತ ಅಂಗ್ರಿಶ್ ಅಬ್ಬರವೇನು ಕಡಿಮೆ ಇರಲಿಲ್ಲ. 7 ಸಿಕ್ಸರ್ ನಾಲ್ಕು ಬೌಂಡರಿ ಬಾರಿಸಿದ ಅವರು 44 ಬಾಲ್‌ಗಳಲ್ಲಿ ಔಟಾಗದೆ 82 ರನ್ ಬಾರಿಸಿದರು. ಕೊನೆಯ ಓವರ್‌ಗಳಲ್ಲಿ ಗ್ರೀನ್ ಕೂಡ ಸ್ಫೋಟಕ ಬ್ಯಾಟಿಂಗ್ ಮಾಡಿದರು. 28 ಬಾಲ್ ಎದುರಿಸಿದ ಅವರು, 3 ಸಿಕ್ಸರ್, 4 ಬೌಂಡರಿಗಳೊಂದಿಗೆ ಔಟಾಗದೆ 52 ರನ್ ಬಾರಿಸಿದರು. ಮೂವರ ಬ್ಯಾಟಿಂಗ್‌ನೊಂದಿಗೆ ಕೆಕೆಆರ್ 247 ರನ್ ಬಾರಿಸಿದೆ.

ಸೆಂಥಿಲ್‌ಕುಮಾರ್-ಜೋಶ್ನಾ ಚಾಂಪಿಯನ್ಸ್

ಚೆನ್ನೈ: ಇಲ್ಲಿನ ಇಂಡಿಯನ್ ಸ್ಕ್ವ್ಯಾಷ್ ಅಕಾಡೆಮಿಯಲ್ಲಿ ನಡೆದ ಮೂರನೇ ಎಚ್‌ಸಿಎಲ್ ರಾಷ್ಟ್ರೀಯ ಡಬಲ್ಸ್ ಸ್ಕ್ವ್ಯಾಷ್ ಚಾಂಪಿಯನ್‌ಶಿಪ್‌ನಲ್ಲಿ ವೆಲವನ್ ಸೆಂಥಿಲ್ಕುಮಾರ್ ಮತ್ತು ಜೋಶ್ನಾ ಚಿನಪ್ಪ ಡಬಲ್ ಕಿರೀಟ ಗೆದ್ದು ಮಿಂಚಿದರು. ಪುರುಷರ ಹಾಗೂ ಮಹಿಳೆಯರ ವಿಭಾಗಗಳಲ್ಲಿ ಪ್ರಶಸ್ತಿ ಗೆದ್ದ ಬಳಿಕ, ಇಬ್ಬರೂ ಮಿಶ್ರ ಡಬಲ್ಸ್ ವಿಭಾಗದಲ್ಲೂ ಚಾಂಪಿಯನ್ ಆಗಿದರು.

ಮೊದಲು ಮಹಿಳೆಯರ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕಿತ ಜೋಶ್ನಾ ಚಿನಪ್ಪ ಮತ್ತು ರಥಿಕಾ ಸೀಲನ್ ಜೋಡಿ, ಶ್ರೇಯಾಂಕವಿಲ್ಲದ ಜಾನೆಟ್ ವಿಧಿ ಮತ್ತು ಪೂಜಾ ಆರ್ತಿ ವಿರುದ್ಧ 11-8, 11-4 ಅಂತರದಲ್ಲಿ ಸುಲಭ ಜಯ ಸಾಧಿಸಿ ಪ್ರಶಸ್ತಿ ಗೆದ್ದಿತು.

ವೆವಲನ್-ಅಭಯ್ ಚಾಂಪಿಯನ್: ಪುರುಷರ ವಿಭಾಗದಲ್ಲಿ ವೆಲವನ್ ಮತ್ತು ಅಭಯ್ ಸಿಂಗ್ ಜೋಡಿ ಸತತ ಮೂರನೇ ಬಾರಿ ಚಾಂಪಿಯನ್ ಪಟ್ಟಕ್ಕೇರಿತು. ಫೈನಲ್‌ನಲ್ಲಿ ಸುರಜ್ ಕುಮಾರ್ ಚಂದ್ ಮತ್ತು ರಾಹುಲ್ ಬೈಠಾ ವಿರುದ್ಧ ಮೊದಲ ಗೇಮ್‌ನ್ನು 11-8 ಅಂತರದಲ್ಲಿ ಗೆದ್ದ ಭಾರತೀಯ ಜೋಡಿ ಆರಂಭದಲ್ಲೇ ಹಿಡಿತ ಸಾಧಿಸಿತು. ಎರಡನೇ ಗೇಮ್‌ನಲ್ಲಿ ಅಭಯ್‌ನ ನಿಖರ ಡ್ರಾಪ್ ಶಾಟ್‌ಗಳು ಮತ್ತು ವೆಲವನ್‌ನ ಬಲಿಷ್ಠ ಬ್ಯಾಕ್‌ಹ್ಯಾಂಡ್ ಹೊಡೆತಗಳು ಜೋಡಿಗೆ 5-2 ಮುನ್ನಡೆ ತಂದವು. ಸುರಜ್ ಮತ್ತು ರಾಹುಲ್ ಕೆಲಕಾಲ ಹೋರಾಟ ನೀಡಿದರೂ, ಅಭಯ್ ಹಾಗೂ ವೆಲವನ್ ಪಂದ್ಯವನ್ನು 11-5 ಅಂತರದಲ್ಲಿ ಮುಗಿಸಿ ಪ್ರಶಸ್ತಿ ತಮ್ಮದಾಗಿಸಿಕೊಂಡರು.




ಜೋಶ್ನಾ-ವೆಲವನ್ ಜೋಡಿಗೆ ಪದಕ: ಮಿಶ್ರ ಡಬಲ್ಸ್ ಫೈನಲ್‌ನಲ್ಲಿ ಜೋಶ್ನಾ ಮತ್ತು ವೆಲವನ್ ಜೋಡಿ, ಅಭಯ್ ಸಿಂಗ್ ಮತ್ತು ರಥಿಕಾ ಸೀಲನ್ ವಿರುದ್ಧ 11-7, 11-9 ಅಂತರದಲ್ಲಿ ಗೆದ್ದು ಚಾಂಪಿಯನ್ ಆಯಿತು. ಮೊದಲ ಗೇಮ್‌ನಲ್ಲಿ ಆರಂಭದಿಂದಲೇ ಮುನ್ನಡೆ ಸಾಧಿಸಿದ ಜೋಶ್ನಾ-ವೆಲವನ್ ಜೋಡಿ 11-7 ಅಂತರದಲ್ಲಿ ಜಯ ಸಾಧಿಸಿತು. ಎರಡನೇ ಗೇಮ್‌ನಲ್ಲಿ ಅಭಯ್ ಮತ್ತು ರಥಿಕಾ 7-4 ಮುನ್ನಡೆ ಪಡೆದು ಪಂದ್ಯವನ್ನು ನಿರ್ಣಾಯಕ ಗೇಮ್‌ಗೆ ಕೊಂಡೊಯ್ಯುವ ಲಕ್ಷಣ ತೋರಿದರು. ಆದರೆ ಜೋಶ್ನಾ ಮತ್ತು ವೆಲವನ್ ಅದ್ಭುತ ಮರಳಾಟ ನೀಡಿ 9-9 ಸಮಬಲ ಸಾಧಿಸಿದರು. ಅಂತಿಮ ಎರಡು ಅಂಕಗಳನ್ನು ಗೆದ್ದು 11-9 ಅಂತರದಲ್ಲಿ ಪಂದ್ಯ ಮತ್ತು ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಪದಬಂಧ

5986

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ

1.ತಾನೇ ಬರೆದ ಆತ್ಮಕಥೆ (5)
4.ದಾರದ ನಡುವಿನ ನೀರಡಿಕೆ ತಲೆಕೆಳಗಾಗಿದೆ (3)
5.ಕಡಲೆ ಹಿಟ್ಟು- ಈರುಳ್ಳಿ ಕಲಸಿ ಮಾಡಿದ ಕರಿದ ತಿಂಡಿ (3)
6.ಕುದುರೆಯಿಲ್ಲಿ ತಿರುಗಿ ಕಾಣುತ್ತಿದೆ (2)
8.ಪಲಾಯನ ಮಾಡುವಿಕೆ ಎಂಬರ್ಥದ ಶಬ್ದ (4)
10.ಲಿಂಗ ಇಟ್ಟುಕೊಳ್ಳುವ ಸಣ್ಣ ಪೆಟ್ಟಿಗೆ (4)
12.ರೀತಿ-ಬಗೆಗಳಲ್ಲಿ ತಿರುಗಿ ಕಾಣುತ್ತಿವೆ (2)
14. ಕೊಳಲಿಗೆ ಬಳಸಿದ ಬೊಂಬಿನ ಗಿಡ (3)
15. ದೀಪಾವಳಿಯ ಸಿಡಿಮದ್ದು (3)
16.ಮುಚ್ಚುಮರೆಯಿಲ್ಲದ ಹೃದಯ (5)

ಮೇಲಿನಿಂದ ಕೆಳಕ್ಕೆ

1.ವರಮಾನ-ಸಂಪಾದನೆ (3)
2.ಶಿವನಿಗೆ ಪ್ರಿಯವಾದ ಎಲೆ ತಲೆಕೆಳಗಾಗಿದೆ (4)
3.ಅಸಮ್ಮತಿ ಸೂಚಿಸಿದ ಬೇಟೆಗಾರ (2)
4.ಯುದ್ಧ ಮಾಡಬೇಕೆಂಬ ಬಯಕೆ (5)
7.ಹಗೆಯ ನಡುವೆ ಅನೇಕ ತರಹದವುಗಳಿವೆ (4)
8.ಅಫಘಾನಿಸ್ತಾನದ ಐತಿಹಾಸಿಕ ನಗರ (4)
9.ಹಸ್ತದ ಕೊನೆಯ ಅಂಗುಲಿ ತಲೆಕೆಳಗಾಗಿದೆ (5)
11.ಉಲ್ಟಾ ಆಡಿದ ಸಿಟ್ಟಿನ ಮಾತುಗಳು (4)
13.ದೇವರ ಕುರಿತ ಕಠಿಣ ಧ್ಯಾನ (3)
14.ಶೂನ್ಯತೆ ಸೂಚಿಸುವ ಅನುಕರಣ ಶಬ್ದ (2)

5985 ಉತ್ತರ

ಎಡದಿಂದ ಬಲಕ್ಕೆ:
2.ತಾಡಪತ್ರಿ 4.ದಯೆ
5.ಕೇಸರು 6.ಶಂಕುಸ್ಥಾಪನೆ
8.ತುಂತುರು 10.ಬಿಡಿಸು
11.ಸುರಸಂತಾನ
13.ಅತನು 15.ದಾನಿ
16.ನಗೆಗೇಡಿ

ಎಡದಿಂದ ಬಲಕ್ಕೆ:
1.ಅಂಕೆ 2.ತಾರುಮಾರು
3.ತ್ರಿಶಂಕುಸ್ವರ್ಗ 4.ಪದರ
7.ನೆನಪಿಸು 8.ತುಂಡರಸು
9.ಕರತಾಡನ
10.ಬಿಡುನುಡಿ 12.ರಜನಿ
14.ಅಜ್ಜಿ

ಕಿರುಸುದ್ದಿ

ಮಂಗಳೂರಿನಲ್ಲಿ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಕಾರ್ಯಕ್ರಮ

ಮಂಗಳೂರು: ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಅವರು ಇಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಮೇ 17ರಂದು ಬೆಳಿಗ್ಗೆ 9 ಗಂಟೆಗೆ ಮೂಳೂರು ಗ್ರಾಮದ ಶ್ರೀ ಜಂಗಮ ಸಂಸ್ಥಾನ ಮಠ ಗುರುಪುರಕ್ಕೆ ಭೇಟಿ, 11 ಗಂಟೆಗೆ ನಗರದ ಕದ್ರಿ ಉದ್ಯಾನವನದಲ್ಲಿ ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತ ಮತ್ತು ಕರ್ನಾಟಕ ಅರಣ್ಯ ಇಲಾಖೆಯ ವತಿಯಿಂದ ಆಯೋಜಿಸಿರುವ ಕರ್ನಾಟಕ ಗೇರು ಮೇಳ ಹಾಗೂ ಕಾರ್ಯಾಗಾರ ಕಾರ್ಯಕ್ರಮ, ಮಧ್ಯಾಹ್ನ 3 ರಿಂದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿಯಲ್ಲಿ ಮಂಗಳೂರು ಜಿಲ್ಲೆಯ ಅರಣ್ಯ ಮತ್ತು ಪರಿಸರ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಪರಾಮರ್ಶನಾ ಸಭೆ, ರಾತ್ರಿ 9.20 ಕ್ಕೆ ಸಚಿವರು ಕಲಬುರ್ಗಿ ತೆರಳಲಿದ್ದಾರೆ.

ಮೊಬೈಲ್ ಹ್ಯಾಕ್ ಮಾಡಿ, ಆನ್‌ಲೈನ್ ಮೂಲಕ ಲಕ್ಷಾಂತರ ರೂ. ವಂಚನೆ

ಮಂಗಳೂರು: ಮೊಬೈಲ್ ಹ್ಯಾಕ್ ಮಾಡಿ, ಆನ್‌ಲೈನ್ ಮೂಲಕ 6.91 ಲಕ್ಷ ರೂ. ಬೇರೆ ಬೇರೆ ಖಾತೆಗಳಿಗೆ ವರ್ಗಾಯಿಸಿಕೊಂಡು ವಂಚನೆ ಮಾಡಿರುವ ಬಗ್ಗೆ ಕಾವೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸುಮಾರು 54 ವರ್ಷದ ದೂರುದಾರರು ಮೇ 4ರಂದು ಮೊಬೈಲ್ ಪರಿಶೀಲಿಸುತ್ತಿದ್ದ ವೇಳೆ ಹಣ ವರ್ಗಾವಣೆಯಾಗಿರುವ ಎಸ್ಸೆಮ್ಮೆಸ್ ಕಂಡು ಬಂದಿದೆ. ಈ ಬಗ್ಗೆ ಬ್ಯಾಂಕ್ ಆ್ಯಪ್ ಪರಿಶೀಲಿಸಿದಾಗ ಹಣ ವರ್ಗಾವಣೆಯಾಗಿರುವುದು ದೃಢಪಟ್ಟಿದೆ. ಈ ಬಗ್ಗೆ ಸೈಬರ್ ಸಹಾಯವಾಣಿಗೆ ದೂರು ನೀಡಿದ್ದಾರೆ. ಬಳಿಕ ಕಾವೂರಿನ ಬ್ಯಾಂಕ್ ಗೆ ತೆರಳಿ ಸ್ಟೇಟ್ ಮೆಂಟ್ ತೆಗೆಸಿ ನೋಡಿದಾಗ ಮೇ 3ರಂದು ಹಂತ ಹಂತವಾಗಿ ಸುಮಾರು 3,76,620 ರೂ.ವರ್ಗಾವಣೆ ಆಗಿರುವುದು ಕಂಡು ಬಂದಿದೆ. ಕೂಳೂರಿನ ಇನ್ನೊಂದು ಬ್ಯಾಂಕ್ ಗೆ ತೆರಳಿ ಪರಿಶೀಲಿಸಿದಾಗ ಮೇ 3ರಂದೇ 3,14,914 ರೂ. ವಿವಿಧ ಖಾತೆಗೆಗಳಿಗೆ ವರ್ಗಾವಣೆ ಆಗಿರುವುದು ಕಂಡು ಬಂದಿದೆ. ಒಟ್ಟು 6,91,534 ರೂ. ವನ್ನು ಯಾರೋ ವಂಚಕರು ಮೊಬೈಲ್ ಹ್ಯಾಕ್ ಮಾಡಿ, ಆನ್‌ಲೈನ್ ಮೂಲಕ ಹಣವನ್ನು ಬೇರೆ ಬೇರೆ ಖಾತೆಗಳಿಗೆ ವರ್ಗಾಹಿಸಿಕೊಂಡು ಮೋಸ ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಕೌಟುಂಬಿಕ ಕಿರುಕುಳ: ನದಿಗೆ ಹಾರಿ ಆತ್ಮಹತ್ಯೆ

ಕೊಲ್ಲೂರು: ಕೌಟುಂಬಿಕ ಕಿರುಕುಳದಿಂದ ಬೇಸತ್ತ ವ್ಯಕ್ತಿಯೊಬ್ಬರು ಸೇತುವೆಯಿಂದ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಮೇ 14ರಂದು ಸಂಜೆ ವೇಳೆ ವಂಡ್ಸೆ ಎಂಬಲ್ಲಿ ನಡೆದಿದೆ. ಮೃತರನ್ನು ನಾಡ ಗ್ರಾಮದ ಸೂಲ್ಯಣ್ಣ ಶೆಟ್ಟಿ ಎಂಬವರ ಮಗ ಸುಧಾಕರ ಶೆಟ್ಟಿ ಎಂದು ಗುರುತಿಸಲಾಗಿದೆ. ಇವರು ತನ್ನ ಹೆಂಡತಿ ಗುಣರತ್ನ ಹಾಗೂ ಬಾವ ನಾಗರಾಜ ಶೆಟ್ಟಿ ಎಂಬವರ ಮಾನಸಿಕ ಹಾಗೂ ದೈಹಿಕ ಕಿರುಕುಳದಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ದೂರಲಾಗಿದೆ.

ಇವರು ತನ್ನ ವಾಟ್ಸಾಪ್ ಸ್ಟೇಟಸ್‌ನಲ್ಲಿ ತನ್ನ ಬಾವ ಹಾಗೂ ಹೆಂಡತಿ ತೊಂದರೆ ನೀಡುತ್ತಿದ್ದು ನನ್ನ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳಿ ಎಂಬುದಾಗಿ ಬರೆದುಕೊಂಡಿದ್ದು, ನಂತರ ಬೈಕಿನಲ್ಲಿ ತೆರಳಿದ ಅವರು, ಬೈಕನ್ನು ವಂಡ್ಸೆ ಸೇತುವೆ ಬಳಿ ನಿಲ್ಲಿಸಿ ಸೇತುವೆ ಮೇಲಿನಿಂದ ಹೊಳೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ದೂರಲಾಗಿದೆ. ಈ ಬಗ್ಗೆ ಕೊಲ್ಲೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಉಪ್ಪೂರು ಬಳಿ ಹಿಟ್ ಎಂಡ್ ರನ್: ಅಪರಿಚಿತ ವ್ಯಕ್ತಿ ಸಾವು

ಉಡುಪಿ: ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ರಸ್ತೆ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಅಪರಿಚಿತ ವ್ಯಕ್ತಿಯೊಬ್ಬರು ಮೃತಪಟ್ಟ ಘಟನೆ ಉಪ್ಪೂರು ಗ್ರಾಮದ ಕುದ್ರುಬೆಟ್ಟು ಸಮೀಪದ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಮೇ 15ರಂದು ರಾತ್ರಿ ಸಂಭವಿಸಿದೆ. ಉಡುಪಿ ಕಡೆಯಿಂದ ಬ್ರಹ್ಮಾವರ ಕಡೆಗೆ ಸಾಗುತ್ತಿದ್ದ ಬಿಳಿ ಬಣ್ಣದ ಕಾರೊಂದು ರಸ್ತೆ ದಾಟಲು ನಿಂತಿದ್ದ ಸುಮಾರು 30ರಿಂದ 35 ವರ್ಷ ಪ್ರಾಯದ ವ್ಯಕ್ತಿಗೆ ಢಿಕ್ಕಿ ಹೊಡೆದಿದೆ ಎಂದು ತಿಳಿದುಬಂದಿದೆ. ಅಪಘಾತದ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದ ವ್ಯಕ್ತಿಯನ್ನು ಉಡುಪಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೆ ಅವರು ಮೃತಪಟ್ಟಿದ್ದಾರೆ.

ಅಪಘಾತ ಸಂಭವಿಸಿದ ಬಳಿಕ ಕಾರು ಚಾಲಕ ವಾಹನವನ್ನು ನಿಲ್ಲಿಸದೆ ಪರಾರಿಯಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಕುರಿತು ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ. ಮೃತರ ಗುರುತು ಅಥವಾ ಸಂಬಂಧಿಕರ ಮಾಹಿತಿ ಇರುವವರು ಬ್ರಹ್ಮಾವರ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ 0820-2561044 ಅಥವಾ ಮೊಬೈಲ್ ಸಂಖ್ಯೆ 9480805453 ಅನ್ನು ಸಂಪರ್ಕಿಸುವಂತೆ ಪೊಲೀಸರು ಮನವಿ ಮಾಡಿದ್ದಾರೆ.

ಹೆಚ್ಚುವರಿ ಚಿನ್ನಾಭರಣಕ್ಕೆ ಕಿರುಕುಳ: ಪತಿ ಸಹಿತ 5 ಮಂದಿ ವಿರುದ್ಧ ಕೇಸು

ಮಂಜೇಶ್ವರ: ಹೆಚ್ಚುವರಿ ಚಿನ್ನಾಭರಣಕ್ಕಾಗಿ ಒತ್ತಾಯಿಸಿ ಕಿರುಕುಳ ನೀಡಿದ ಪ್ರಕರಣಕ್ಕೆ ಸಂಬಂಧಿಸಿ ಪತಿ ಸಹಿತ 5 ಮಂದಿ ವಿರುದ್ಧ ಮಂಜೇಶ್ವರ ಪೊಲೀಸರು ಕೇಸು ದಾಖಲಿಸಿದ್ದಾರೆ. ಕರ್ನಾಟಕ ಭಟ್ಕಳ ನಿವಾಸಿ ರಾಜಿಯಾ ಮೊಹಮ್ಮದ್ (25) ನೀಡಿದ ದೂರಿನಂತೆ ಉಪ್ಪಳ ಬಳಿಯ ಬಪ್ಪಾಯಿತೊಟ್ಟಿ ಕಿಜಾರ್‌ನಗರದ ನಜ್ಮಿನ್ ಮಂಜಿಲ್‌ನ ನಿವಾಸಿಯಾದ ಪತಿ ಮೊಹಮ್ಮದ್ ಸಾಜಿದ್, ಆತನ ತಂದೆ ಅಬ್ದುಲ್ ಅಜೀಜ್, ತಾಯಿ ಬಿಬಿಜಾನ್, ಸಹೋದರಿಯರಾದ ಶಬ್ರೀನ್, ನಜ್ಮಿನ್ ಎಂಬವರ ವಿರುದ್ಧ ಕೇಸು ದಾಖಲಿಸಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

2023ನೇ ಸೆಪ್ಟೆಂಬರ್ 17ರಂದು ವಿವಾಹದ ಬಳಿಕ ಪತಿಯ ಜೊತೆ ವಾಸವಾಗಿದ್ದು, ಮೂರು ತಿಂಗಳ ನಂತರ ಪತಿ, ತಂದೆ, ತಾಯಿ, ಸಹೋದರಿಯರು ಸೇರಿ ಹೆಚ್ಚಿನ ಚಿನ್ನಕ್ಕಾಗಿ ಕಿರುಕುಳ ನೀಡಿರುವುದಾಗಿ ಆರೋಪಿಸಲಾಗಿದೆ. ಅಲ್ಲದೆ ಹೆಣ್ಣು ಮಗು ಜನಿಸಿದ ಹಿನ್ನೆಲೆಯಲ್ಲಿ ಅಸಮಾಧಾನವಿತ್ತೆಂದು ದೂರಿನಲ್ಲಿ ತಿಳಿಸಲಾಗಿದೆ. ಈ ಬಗ್ಗೆ ಭಟ್ಕಳ ಠಾಣೆಯಲ್ಲಿ ದಾಖಲಾದ ಕೇಸನ್ನು ಕಾಸರಗೋಡು ಎಸ್‌ಪಿಯವರಿಗೆ ಹಸ್ತಾಂತರಿಸಲಾಗಿದ್ದು, ಕಾಸರಗೋಡಿನಿಂದ ಮಂಜೇಶ್ವರ ಠಾಣೆಗೆ ವರ್ಗಾಯಿಸಲಾಗಿದೆ.

ವಿಶೇಷ ಮಕ್ಕಳಿಗಾಗಿ ಸಾಮರ್ಥ್ಯ ವನ ಪಾರ್ಕ್ | ಕಾಮಗಾರಿಗೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಶಿಲಾನ್ಯಾಸ

ಸ್ವತಂತ್ರ ಬದುಕಿಗೆ ಸಾಮರ್ಥ್ಯ ವೃದ್ಧಿಗೆ ಚಿತ್ತ

ಉಡುಪಿ: ವಿಕಲಚೇತನ ಮಕ್ಕಳ ಬೆಳವಣಿಗೆ, ಮನರಂಜನೆ ಹಾಗೂ ಅವರ ಸಾಮರ್ಥ್ಯವೃದ್ಧಿಸುವ ನಿಟ್ಟಿನಲ್ಲಿ ದೇಶದಲ್ಲೇ ಮೊದಲ ಬಾರಿಗೆ ಉಡುಪಿ ನಗರದ ಬ್ರಹ್ಮಗಿರಿಯ ಬಾಲಭವನದಲ್ಲಿ 'ವಿಶೇಷ ಮಕ್ಕಳಿಗಾಗಿ ಸಾಮರ್ಥ್ಯ ವನ ಪಾರ್ಕ್' ನಿರ್ಮಾಣ ಮಾಡಲಾಗುತ್ತಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಸಬಲೀಕರಣ ಇಲಾಖೆ ಹಾಗೂ ಉಡುಪಿ ಜಿಪಂ ವತಿಯಿಂದ ಪಾರ್ಕ್ ನಿರ್ಮಿಸಲಾಗುತ್ತಿದ್ದು ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಶನಿವಾರ ಪಾರ್ಕ್ ಕಾಮಗಾರಿಗೆ ಶಿಲಾನ್ಯಾಸ ನೆರವೇರಿಸಿದರು.

ವಿಕಲಚೇತನರಿಗೆ ಸಮಗ್ರ ಪುನರ್ವಸತಿ, ಚಿಕಿತ್ಸಕ ಸೇವೆಗಳು, ಉದ್ಯೋಗವಕಾಶ ಮತ್ತು ಸ್ವತಂತ್ರ ಜೀವನಕ್ಕೆ ಸಾಮರ್ಥ್ಯ ವೃದ್ಧಿಸುವ ನಿಟ್ಟಿನಲ್ಲಿ ವಿಶಿಷ್ಟ ರೀತಿಯ ಪಾರ್ಕ್ ನಿರ್ಮಾಣಕ್ಕೆ ಉದ್ದೇಶಿಸಲಾಗಿದೆ. ಇದಕ್ಕಾಗಿ ಜಿಪಂ ಸಿಇಒ ಅಧ್ಯಕ್ಷತೆಯಲ್ಲಿ ಇತರ ಅಧಿಕಾರಿಗಳನ್ನು ಒಳಗೊಂಡ ಪ್ರತ್ಯೇಕ ಸಾಮರ್ಥ್ಯ ಟ್ರಸ್ಟ್ ರಚಿಸಲಾಗಿದೆ. ಒಂದೂವರೆ ಕೋಟಿ ಸರ್ಕಾರಿ ಅನುದಾನ ಮತ್ತು ಇತರ ಸಂಘ- ಸಂಸ್ಥೆಗಳ ನೆರವಿನಲ್ಲಿ ಒಟ್ಟು 4.90 ಕೋಟಿ ವೆಚ್ಚದಲ್ಲಿ ವಿಶಿಷ್ಟ ರೀತಿಯ ಪಾರ್ಕ್ ನಿರ್ಮಾಣವಾಗಲಿದೆ.

ಉಡುಪಿ ಜಿಲ್ಲೆಯಲ್ಲಿ 15 ವರ್ಷ ಒಳಗಿನ 1228 ವಿಕಲ ಚೇತನ ಮಕ್ಕಳಿದ್ದು ಇವರು ತಮ್ಮ ಕುಟುಂಬ ಸದಸ್ಯರೊಂದಿಗೆ ಕಾಲ ಕಳೆಯಲು ಪಾರ್ಕ್ ಅನುಕೂಲವಾಗಲಿದೆ. ಇದಲ್ಲದೆ, ಇದರಲ್ಲಿ ಥೆರಪಿ ಸ್ವಿಂಗ್ಸ್‌ಗಳು, ಬ್ಯಾಲನ್ಸ್ ಬೀಮ್ಸ್‌ಗಳು, ಸಂಗೀತ ವಾದ್ಯಗಳು, ಸ್ಪರ್ಶ ಸಂವೇದನಾ ಮಾರ್ಗಗಳು, ಮರಳು ಮತ್ತು ನೀರಿನ ಆಟದ ವಲಯಗಳು ಇರಲಿದೆ. ಹೂಗಳ ಸುವಾಸನೆ ವೈವಿಧ್ಯ ಅರಿಯಲು ಸೆನ್ಸೇಶನ್ ಸೆನ್ಸರಿ ಪಾರ್ಕ್ ಕೂಡ ಬರಲಿದೆ.

ಪಾರ್ಕ್ ಕಾಮಗಾರಿಗೆ ಶಿಲಾನ್ಯಾಸ ನೆರವೇರಿಸಿ ಮಾತನಾಡಿದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಇದೊಂದು ಇಡೀ ರಾಜ್ಯ, ದೇಶಕ್ಕೆ ಮಾದರಿ ಆಗಬಲ್ಲ ಪಾರ್ಕ್ ಆಗಲಿದೆ. ಇದನ್ನು ನಾಲ್ಕು ವರ್ಷದಲ್ಲಿ ಪೂರ್ಣಗೊಳಿಸಲು ಯೋಜನೆ ಹಾಕಿದ್ದಾರೆ. ಆದರೆ ಎರಡೇ ವರ್ಷದಲ್ಲಿ ಕಾಮಗಾರಿ ಪೂರ್ತಿಗೊಳಿಸಿ ನಮ್ಮ ಅವಧಿಯಲ್ಲೇ ಉದ್ಘಾಟನೆ ಮಾಡುವಂತಾಗಬೇಕು. ನಮ್ಮ ಇಲಾಖೆಯಿಂದಲೂ ಶೀಘ್ರ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ಹೇಳಿದರು.

ಉಡುಪಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ, ಜಿಲ್ಲಾ ಪಂಚಾಯತ್ ಸಿಇಒ ಪ್ರತೀಕ್ ಬಯಾಲ್, ಪೊಲೀಸ್ ವರಿಷ್ಠಾಧಿಕಾರಿ ಹರಿರಾಮ್ ಶಂಕರ್, ರುದ್ರಣ್ಣ ರತ್ನ, ಖ್ಯಾತ ಮನೋವೈದ್ಯ ಡಾ. ಪಿ.ವಿ. ಭಂಡಾರಿ, ಜೈ ವಿಠ್ಠಲ್, ಹರಿಪ್ರಸಾದ ರಾಯ್ ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.



ಅಭಿನಂದನಾ ಪತ್ರ

ಕಂದಾಯ ಇಲಾಖೆಯ ಯೋಜನೆಗಳಾದ ಹಕ್ಕುಪತ್ರ, ದರಖಾಸ್ತು ಪೋಡಿ ಹಾಗೂ ಇ-ಖಾತೆಗಳನ್ನು ಸಾರ್ವಜನಿಕರಿಗೆ ತಲುಪಿಸುವಲ್ಲಿ ರಾಜ್ಯ ಮಟ್ಟದಲ್ಲಿ ಅತ್ಯುತ್ತಮ ಪ್ರಗತಿ ಸಾಧಿಸಿದ ಜಿಲ್ಲೆಯ ತಹಶೀಲ್ದಾರರು ಹಾಗೂ ಭೂ ದಾಖಲೆಗಳ ಇಲಾಖೆಯ ಅಧಿಕಾರಿಗಳಿಗೆ ಉಡುಪಿ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅಭಿನಂದನಾ ಪತ್ರ ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ., ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರತೀಕ್ ಬಾಯಲ್, ವಿಧಾನಪರಿಷತ್ ಶಾಸಕರುಗಳಾದ ಎಸ್.ಎಲ್. ಭೋಜೇಗೌಡ, ಡಾ.ಮಂಜುನಾಥ್ ಭಂಡಾರಿ ಹಾಗೂ ಮತ್ತಿತರರಿದ್ದರು.

ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರಿಂದ ಕಪ್ಪು ಬಾವುಟ

'ಲಕ್ಷ್ಮೀ ಹೆಬ್ಬಾಳ್ಕರ್ ಗೋ ಬ್ಯಾಕ್'

ಉಡುಪಿ: ಜಿಲ್ಲಾಧಿಕಾರಿ ಕಚೇರಿಯಲ್ಲಿ ಶನಿವಾರ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಳ್ಳಲು ಆಗಮಿಸಿದ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರಿಗೆ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಕಪ್ಪು ಬಾವುಟ ಪ್ರದರ್ಶಿಸಿ, ತೀವ್ರ ಪ್ರತಿಭಟನೆಯ ಬಿಸಿ ಮುಟ್ಟಿಸಿದ್ದಾರೆ.

ಉಸ್ತುವಾರಿ ಸಚಿವೆಗೆ 'ಗೋ ಬ್ಯಾಕ್' ಮುಖಭಂಗ

ರಾಜ್ಯ ಕಾಂಗ್ರೆಸ್ ಸರ್ಕಾರವು ಉಡುಪಿ ಜಿಲ್ಲೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತಿದೆ ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿ ಮಲತಾಯಿ ಧೋರಣೆ ತಳೆಯುತ್ತಿದೆ ಎಂದು ಆರೋಪಿಸಿ ಜಿಲ್ಲಾ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಎದುರು ಶನಿವಾರ ಬಿಜೆಪಿ ಯುವ ಮೋರ್ಚಾ ವತಿಯಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಕಾರು ಜಿಲ್ಲಾಧಿಕಾರಿ ಕಚೇರಿ ಆವರಣಕ್ಕೆ ಪ್ರವೇಶಿಸುತ್ತಿದ್ದಂತೆ ಆಕ್ರೋಶಿತ ಪ್ರತಿಭಟನಾಕಾರರು 'ಲಕ್ಷ್ಮೀ ಹೆಬ್ಬಾಳ್ಕರ್ ಗೋ ಬ್ಯಾಕ್' ಎಂದು ಜೋರಾಗಿ ಘೋಷಣೆಗಳನ್ನು ಕೂಗಿದರು. ಈ ಸಂದರ್ಭದಲ್ಲಿ ಕಾರ್ಯಕರ್ತರು ರಸ್ತೆಗೆ ನುಗ್ಗಿ ಸಚಿವರ ಕಾರಿಗೆ ಮುತ್ತಿಗೆ ಹಾಕಲು ಯತ್ನಿಸಿದಾಗ ಪೊಲೀಸರು ಅವರನ್ನು ತಡೆದರು. ಪ್ರತಿಭಟನೆಯ ತೀವ್ರತೆಯ ಹಿನ್ನೆಲೆಯಲ್ಲಿ ಡಿಸಿ ಕಚೇರಿ ಪರಿಸರದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.



ಸರ್ಕಾರದ ವಿರುದ್ಧ ಆಕ್ರೋಶ


ಪ್ರತಿಭಟನೆಯ ನೇತೃತ್ವ ವಹಿಸಿದ್ದ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಪೃಥ್ವಿರಾಜ್ ಶೆಟ್ಟಿ ಮಾತನಾಡಿ, ಉಡುಪಿ ನಗರ ಭಾಗದ ಜನಸಾಮಾನ್ಯರಿಗೆ ಅನುಕೂಲವಾಗಲೆಂದು 2013ರಲ್ಲಿ ಆರಂಭಗೊಂಡಿದ್ದ 'ನರ್ಮ್' ಯೋಜನೆಯ 40ಕ್ಕೂ ಹೆಚ್ಚು ಬಸ್ಸುಗಳ ಪೈಕಿ, ಪ್ರಸ್ತುತ ಸರ್ಕಾರದ ಉಚಿತ ಶಕ್ತಿ ಯೋಜನೆಯ ನಂತರ ಶೇ.50ರಷ್ಟು ಬಸ್ಸುಗಳನ್ನು ಕಡಿತಗೊಳಿಸಿ ಸಾರ್ವಜನಿಕರಿಗೆ ಅನ್ಯಾಯ ಮಾಡಲಾಗಿದೆ ಎಂದು ದೂರಿದರು. ಉಡುಪಿ ಜಿಲ್ಲಾ ಆಸ್ಪತ್ರೆಯ ನೂತನ ಕಟ್ಟಡದ ಕಾಮಗಾರಿಯನ್ನು ಪೂರ್ಣಗೊಳಿಸದೆ ಬಡ ರೋಗಿಗಳ ಜೀವದೊಂದಿಗೆ ಸರ್ಕಾರ ಆಟವಾಡುತ್ತಿದೆ. ಉಡುಪಿ ಶ್ರೀಕೃಷ್ಣ ಮಠದ ಪರ್ಯಾಯ ಮಹೋತ್ಸವಕ್ಕೆ ದೊಡ್ಡ ಮೊತ್ತದ ಅನುದಾನ ನೀಡುವುದಾಗಿ ಭರವಸೆ ನೀಡಿ, ಕೊನೆಗೆ ಬಿಡಿಗಾಸನ್ನೂ ನೀಡದೆ ಕರಾವಳಿ ಜನತೆಗೆ ದ್ರೋಹ ಬಗೆದಿದೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಪ್ರಮುಖ ಮುಖಂಡರಾದ ಸಂಧ್ಯಾ ರಮೇಶ್, ಅಭಿರಾಜ್ ಸುವರ್ಣ, ಶಿವಕುಮಾರ್ ಅಂಬಲಪಾಡಿ, ಸಚಿನ್ ಸುವರ್ಣ ಸೇರಿದಂತೆ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

ಸರಕಾರಿ ಬಸ್ಸು, ಆಟೋರಿಕ್ಷಾದಲ್ಲಿ ಪ್ರಯಾಣಿಸಿದ ಸುಳ್ಯ ಶಾಸಕರು

ಸುಳ್ಯ: ಸುಳ್ಯ ವಿಧಾನಸಭಾ ಕ್ಷೇತ್ರದ ಶಾಸಕಿ ಭಾಗೀರಥಿ ಮುರುಳ್ಯ ಅವರು ಪ್ರಧಾನಿ ನರೇಂದ್ರ ಮೋದಿಯವರು ದೇಶಕ್ಕೆ ನೀಡಿದ ಕರೆಯಂತೆ ತಮ್ಮ ಕ್ಷೇತ್ರ ಸಂಚಾರವನ್ನು ಸರಕಾರಿ ಬಸ್ಸು ಹಾಗೂ ಆಟೋ ರಿಕ್ಷಾದ ಮೂಲಕ ಶನಿವಾರ ತೆರಳಿ ಗಮನ ಸೆಳೆದಿದ್ದಾರೆ.

ಶಾಸಕಿ ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಶನಿವಾರ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಲು ತೆರಳುವ ಸಂದರ್ಭದಲ್ಲಿ ಜನಸಾಮಾನ್ಯರಂತೆ ಸರಕಾರಿ ಬಸ್ಸಿನಲ್ಲಿ ಪ್ರಯಾಣಿಸಿ ಇಂಧನ ಉಳಿತಾಯ ದುಂದುವೆಚ್ಚಗಳಿಗೆ ಕಡಿವಾಣ ಹಾಕಿ ದೇಶದ ಪ್ರಗತಿಗಾಗಿ ಆಟೋರಿಕ್ಷಾ ಸೇರಿದಂತೆ ಸಾರ್ವಜನಿಕ ಸಂಪರ್ಕ ವ್ಯವಸ್ಥೆಯಲ್ಲಿ ತೆರಳಿ ಮಾದರಿಯಾದರು.



ಉಡುಪಿ: ಸಂಜೀವಿನಿ ಒಕ್ಕೂಟಗಳಿಗೆ ಸಚಿವರಿಂದ ಸೌಲಭ್ಯಗಳ ಹಸ್ತಾಂತರ

ಉಡುಪಿ: ಕೌಶಲ್ಯಾಭಿವೃದ್ಧಿ, ಉದ್ಯಮ ಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಇಲಾಖೆ ಹಾಗೂ ಉಡುಪಿ ಜಿಲ್ಲಾ ಪಂಚಾಯತ್ ಸಂಯುಕ್ತ ಆಶ್ರಯದಲ್ಲಿ, ಸಮಗ್ರ ಕೃಷಿ ಸಮೂಹಗಳಡಿ ಜೀವನೋಪಾಯ ಕೇಂದ್ರವನ್ನು ಸ್ಥಾಪಿಸಲಾಗಿದ್ದು ಇದರ ಅಡಿಯಲ್ಲಿ ಟ್ರ್ಯಾಕ್ಟರ್, ರೋಟವೇಟರ್, ಕಲ್ಟಿವೇಟರ್, ಹುಲ್ಲು ಕತ್ತರಿಸುವ ಯಂತ್ರ, ತೆಂಗು ಹಾಗೂ ಅಡಿಕೆ ಮರ ಹತ್ತುವ ಯಂತ್ರ ಮತ್ತು ಟಾಟಾ ಏಸ್ ಗಾಡಿಗಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಲಕ್ಷ್ಮೀ ಆರ್. ಹೆಬ್ಬಾಳಕರ್ ಅವರು ಶನಿವಾರ ಮಣಿಪಾಲ ರಜತಾದ್ರಿಯ ಜಿಲ್ಲಾ ಪಂಚಾಯತ್ ಆವರಣದಲ್ಲಿ ಉಡುಪಿ ತಾಲೂಕಿನ ಸಂಜೀವಿನಿ ಒಕ್ಕೂಟಗಳಿಗೆ ಹಸ್ತಾಂತರಿಸಿದರು.



ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ., ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರತೀಕ್ ಭಾಯಲ್, ಉಡುಪಿ ತಾಲೂಕು ಪಂಚಾಯತ್ ಇ.ಓ. ವಿಜಯ ಅಲೆವೂರು, ಪಿ.ಡಿ.ಓ. ಪ್ರವೀಣ್ ಡಿ'ಸೋಜಾ, ಜಿಲ್ಲಾ ಪಂಚಾಯತ್ ಅಧೀಕ್ಷಕರಾದ ವಸಂತಿ, ಜಿಲ್ಲಾ ಹಾಗೂ ತಾಲೂಕು ಅಭಿಯಾನ ನಿರ್ವಹಣಾ ಘಟಕದ ಸಿಬ್ಬಂದಿ, ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟದ ಅಧ್ಯಕ್ಷರು, ಪದಾಧಿಕಾರಿಗಳು, ಸಂಜೀವಿನಿ ಸಂಘದ ಮಹಿಳೆಯರು, ಮುಖ್ಯ ಪುಸ್ತಕ ಬರಹಗಾರರು, ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳು, ಕೃಷಿ ಸಖಿಯರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ದಿಡುಪೆ ಪರಿಸರದಲ್ಲಿ ಕಳೆದ ಕೆಲವು ದಿನಗಳಿಂದ ಉತ್ತಮ ಮಳೆ

ಹರಿವು ಆರಂಭಿಸಿದ ನೇತ್ರಾವತಿ

ಬೆಳ್ತಂಗಡಿ: ಜಿಲ್ಲೆಯ ಜೀವನದಿ ನೇತ್ರಾವತಿ ತನ್ನ ಉಗಮ ಸ್ಥಳ ದಿಡುಪೆ ಕಡೆಯಿಂದ ಹರಿವು ಆರಂಭಿಸಿದೆ. ಕಳೆದ ಸುಮಾರು ಒಂದೂವರೆ ತಿಂಗಳ ಹಿಂದೆ ಹರಿವು ನಿಲ್ಲಿಸಿದ್ದ ನೇತ್ರಾವತಿಯ ಹೊಂಡ ಪ್ರದೇಶಗಳಲ್ಲಿ ಮಾತ್ರ ನೀರಿತ್ತು. ಈ ಬಾರಿ ಬೇಸಿಗೆ ಮಳೆ ಆಗಾಗ ಸುರಿದ ಕಾರಣ ನದಿ ಪರಿಸರದ ಜನತೆಗೆ ನೀರಿನ ಸಮಸ್ಯೆ ಉಂಟಾಗಿರಲಿಲ್ಲ. ಇದರಿಂದ ಹರಿವು ಇಲ್ಲದಿದ್ದರೂ ಹೊಂಡ ಪ್ರದೇಶಗಳಲ್ಲಿ ನೀರು ಸಂಪೂರ್ಣ ಬತ್ತಿರಲಿಲ್ಲ.

ಸುಮಾರು 20 ಕಿ.ಮೀ. ವ್ಯಾಪ್ತಿಯಲ್ಲಿ ನೀರಿನ ಹರಿವು ನಿಲ್ಲಿಸಿದ್ದ ನದಿಯ ದಿಡುಪೆ ಪರಿಸರದಲ್ಲಿ ಕಳೆದ ಕೆಲವು ದಿನಗಳಿಂದ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಇದೀಗ ಮಲವಂತಿಗೆ-ದಿಡುಪೆ- ಮಿತ್ತಬಾಗಿಲು ಮೂಲಕ ಹರಿವು ಆರಂಭಿಸಿರುವ ನದಿ ಮುಂಡಾಜೆ ಗ್ರಾಮದ ಅರಸಮಜಲು ವರೆಗಿನ 12 ಕಿ.ಮೀ. ಪರಿಸರದವರೆಗೂ ಮುಂದುವರಿದಿದೆ. ನೇತ್ರಾವತಿ ನದಿಯೊಂದಿಗೆ ಕಲ್ಮಂಜದ ವಜಿರಡ್ಕದಲ್ಲಿ ನೇತ್ರಾವತಿಯೊಂದಿಗೆ ಮೃತ್ಯುಂಜಯ ನದಿಯು ಸೇರುತ್ತದೆ.

ನದಿ ಈ ಪ್ರದೇಶದವರೆಗೂ ಹರಿದು ಬರಲು ಇನ್ನೂ 8ಕಿ.ಮೀ. ದೂರವಿದ್ದು ಮುಂದಿನ ಮೂರು ನಾಲ್ಕು ದಿನಗಳಲ್ಲಿ ಇಲ್ಲಿಗೆ ತಲುಪುವ ನಿರೀಕ್ಷೆ ಇದೆ.ನೇತ್ರಾವತಿಯು ಮೃತ್ಯುಂಜಯ ನದಿಯನ್ನು ಕೂಡಿದ ಬಳಿಕ ನದಿಯ ತಗ್ಗುಗಳಲ್ಲಿ ನೀರ ಹರಿವು ಹೆಚ್ಚಲಿದೆ.



ಕಿಂಡಿ ಅಣೆಕಟ್ಟು ಹಲಗೆ ತೆರವಿಗೆ ಸಕಾಲ

ಇದೀಗ ನದಿ ಹರಿವು ಆರಂಭಿಸಿದ್ದು ಮುಂದಿನ ಕೆಲವೇ ದಿನಗಳಲ್ಲಿ ಮಳೆಗಾಲವು ಕಾಲಿಡುವ ನಿರೀಕ್ಷೆ ಇದೆ.ನದಿ ಹರಿವು ಆರಂಭಿಸಿರುವ ಕಾರಣ ಮುಂದೆ ನೀರಿನ ಸಮಸ್ಯೆಯೂ ಕಂಡು ಬರದು.ಪ್ರಸ್ತುತ ಕೃಷಿಗೆ ನೀರಿನ ಅಗತ್ಯವೂ ಇರುವುದಿಲ್ಲ. ಇದರಿಂದ ನೇತ್ರಾವತಿ ನದಿ ಪ್ರದೇಶದಲ್ಲಿರುವ ಹಲವಾರು ಕಿಂಡಿ ಅಣೆಕಟ್ಟುಗಳ ಹಲಗೆ ತೆರವಿಗೆ ಇದು ಸರಿಯಾದ ಸಮಯವಾಗಿದೆ.

ಕಳೆದ ವಾರ ನದಿಯಲ್ಲಿ ಹರಿವು ನಿರಂತರ ಇದ್ದ ಕಾರಣ ಕಿಂಡಿ ಅಣೆಕಟ್ಟುಗಳ ಹಲಗೆಗಳನ್ನು ತೆರವುಗೊಳಿಸುವ ವೇಳೆ ತಡವಾಗಿತ್ತು. ಹಲಗೆ ತೆರವುಗೊಳ್ಳದ ಕಾರಣ ಮೇ ತಿಂಗಳ ಕೊನೆಯ ವಾರದಲ್ಲಿ ನದಿಯಲ್ಲಿ ಹೆಚ್ಚಿನ ನೀರು ಹರಿದು ಅಲ್ಲಲ್ಲಿ ಕೃತಕ ನೆರೆ ಸೃಷ್ಟಿಯಾಗಿತ್ತು. ನದಿಯ ನೀರು ಜೂನ್ ಮೊದಲ ವಾರದಲ್ಲಿ ಕೊಂಚ ಇಳಿಕೆಯಾದ ಬಳಿಕವೇ ಸಾಕಷ್ಟು ಸವಾಲುಗಳೊಂದಿಗೆ ಕಿಂಡಿ ಅಣೆಕಟ್ಟುಗಳ ಹಲಗೆ ತೆರವು ಕಾರ್ಯ ನಡೆಸಲಾಗಿತ್ತು.

ಕಳೆದ ವಾರದ ನಿರಂತರ ಬೇಸಿಗೆ ಮಳೆ ಸುರಿದ ಕಾರಣ ನೇತ್ರಾವತಿ ನದಿಯ ಹರಿವು ನಿಂತಿರಲಿಲ್ಲ. 2024ರ ಬೇಸಿಗೆಯಲ್ಲಿ ಮಳೆ ಬಹಳ ತಡವಾಗಿ ಸುರಿದ ಕಾರಣದಿಂದ ನೇತ್ರಾವತಿ ನದಿ ಪರಿಸರದಲ್ಲಿ ನೀರಿನ ಸಮಸ್ಯೆ ಕಂಡು ಬಂದಿತ್ತು ಬಳಿಕ ಜೂನ್ 15ರ ನಂತರವೇ ನದಿಯ ಹರಿವು ಆರಂಭವಾಗಿತ್ತು.

ಸ್ಕೂಟರ್ ಡಿಕ್ಕಿ: ಸವಾರ ಸಾವು

ಬಂಟ್ವಾಳ: ರಾಷ್ಟ್ರೀಯ ಹೆದ್ದಾರಿಯ ಬ್ರಹ್ಮರಕೊಟ್ಲು ಟೋಲ್ ಗೇಟ್ ಸಮೀಪ ನಿಯಂತ್ರಣ ತಪ್ಪಿ ದ್ವಿಚಕ್ರ ವಾಹನವೊಂದು ರಸ್ತೆಗೆ ಮಗುಚಿ ಬಿದ್ದು ಸವಾರೋರ್ವರು ಮೃತಪಟ್ಟ ಘಟನೆ ನಡೆದಿದೆ. ಪಿ.ಸೋಮನಾಥಪ್ರಭು (65) ಎಂಬವರು ಮೃತಪಟ್ಟವರೆಂದು ಗುರುತಿಸಲಾಗಿದೆ.

ಮಂಗಳೂರು ಕಡೆಯಿಂದ ಬಿ.ಸಿ.ರೋಡಿನತ್ತ ತಮ್ಮ ದ್ವಿಚಕ್ರ ವಾಹನ ಚಲಾಯಿಸಿಕೊಂಡು ಬರುತ್ತಿದ್ದ ವೇಳೆ ತುಂಬೆ ರಾಮಲ್ ಕಟ್ಟೆ ಟೋಲ್ ಗೇಟ್ ಸಮೀಪ ನಿಯಂತ್ರಣ ತಪ್ಪಿ ಸ್ಕೂಟರ್ ಸ್ಕಿಡ್ ಆಗಿ ರಸ್ತೆಗೆ ಬಿದ್ದು ತಲೆ ಭಾಗಕ್ಕೆ ಗಂಭೀರವಾಗಿಗಾಯಗೊಂಡಿದ್ದಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಅವರು ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆಂದು ತಿಳಿದು ಬಂದಿದೆ ಹಿರಿಯ ಛಾಯಾಗ್ರಾಹಕರಾಗಿದ್ದ ಮೃತರು ಜ್ಯೋತಿಷ್ಯದಲ್ಲಿಯು ಪರಿಣತಿ ಹೊಂದಿದ್ದರು ಎಂದು ಹೇಳಲಾಗಿದೆ. ಈಬಗ್ಗೆ ಬಂಟ್ವಾಳ ಟ್ರಾಫಿಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಷ್ಟ್ರೀಯ ಹೆದ್ದಾರಿಯ ಚೆರುವತ್ತೂರು ಮಟ್ಟಲಾಯಿಯಲ್ಲಿ ಹೈವೇ ಬಿರುಕು | ತನಿಖಾ ತಂಡದಿಂದ ಜಿಲ್ಲಾಧಿಕಾರಿಗೆ ವರದಿ

ಕಠಿಣ ಕ್ರಮ ಕೈಗೊಳ್ಳುವಂತೆ ರಾ. ಹೆದ್ದಾರಿ ಪ್ರಾಧಿಕಾರಕ್ಕೆ ಸೂಚನೆ

ಕಾಸರಗೋಡು: ಚೆರುವತ್ತೂರು ಮಟ್ಟಲಾಯಿ ಎಂಬಲ್ಲಿ ರಾಷ್ಟ್ರೀಯ ಹೆದ್ದಾರಿ 66ರ ನಿರ್ಮಾಣ ಕಾಮಗಾರಿ ನಡೆಯುವ ಸಂದರ್ಭದಲ್ಲಿ ರಸ್ತೆಯಲ್ಲಿ ಬಿರುಕು ಬಿಟ್ಟ ಘಟನೆಯ ಬಗ್ಗೆ ಕಾಸರಗೋಡು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ನೇಮಿಸಿದ ಆರ್‌ಡಿಒ ನೇತೃತ್ವದ ತನಿಖಾ ತಂಡವು ಜಿಲ್ಲಾಧಿಕಾರಿಗೆ ಸಮಗ್ರ ವರದಿಯನ್ನು ಸಲ್ಲಿಸಿದೆ. ಇದೇ ವೇಳೆ ಈ ಭಾಗದಲ್ಲಿ ಮಳೆಗಾಲದಲ್ಲಿ ಯಾವುದೇ ರೀತಿಯ ಸಂಭವನೀಯ ಅನಾಹುತಗಳನ್ನು ತಪ್ಪಿಸಲು ಜಿಲ್ಲಾಧಿಕಾರಿಗಳು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಅಲ್ಲದೆ ಮುಂದಿನ ಕ್ರಮಕ್ಕಾಗಿ ರಾಜ್ಯ ಸರಕಾರಕ್ಕೆ ಮಾಹಿತಿ ಸಮರ್ಪಿಸಲು ಸಿದ್ಧತೆ ನಡೆಸುತ್ತಿದ್ದಾರೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸಮನ್ವಯದೊಂದಿಗೆ ನಡೆಯುತ್ತಿರುವ ನಿರ್ಮಾಣ ಕಾರ್ಯಗಳನ್ನು ಮೇಲ್ವಿಚಾರಣೆ ಮಾಡಲು ಜಿಲ್ಲಾಧಿಕಾರಿಗಳು ಕಾಞಂಗಾಡು ಆರ್‌ಡಿಒ ಅವರಿಗೆ ಹೊಣೆಗಾರಿಕೆ ವಹಿಸಿದ್ದಾರೆ. ಸಮೀಕ್ಷೆ ವೇಳೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಿರುಕು ಸಂಭವಿಸಿದೆ ಎಂದು ತನಿಖಾ ತಂಡಕ್ಕೆ ಮನವರಿಕೆಯಾಗಿದೆ.



ಹೈವೇ ಮತ್ತು ಸುರಕ್ಷತಾ ಗೋಡೆಯ ಬಿರುಕುಗಳನ್ನು ಸರಿಪಡಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ತಜ್ಞರ ನೇರ ಮೇಲ್ವಿಚಾರಣೆಯಲ್ಲಿ ಎಲ್ಲಾ ಸುರಕ್ಷತಾ ಮಾನದಂಡಗಳನ್ನು ಅನುಸರಿಸಿ ಅಗತ್ಯದ ಕೆಲಸಗಳನ್ನು ಕೈಗೊಳ್ಳಬೇಕು. ನೀರಿನ ಹರಿವು ಬಲವಾಗಿದ್ದರೆ ಮಳೆನೀರನ್ನು ಹೊರಹಾಕಲು ಪ್ರಸ್ತುತ ಯಾವುದೇ ವ್ಯವಸ್ಥೆಯಿಲ್ಲ. ಬಿರುಕುಗಳು ಸಂಭವಿಸಿದ ನಿರ್ಮಾಣ ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ತಕ್ಷಣವೇ ಪೂರ್ಣಗೊಳಿಸಬೇಕೆಂದು ತನಿಖಾ ತಂಡ ಶಿಫಾರಸು ಮಾಡಿದೆ.

ಕ್ರಮ ಕೈಗೊಳ್ಳಬೇಕು

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ತಾಂತ್ರಿಕ ತಜ್ಞರು ನಿರ್ಮಾಣದಲ್ಲಿನ ಲೋಪದೋಷಗಳನ್ನು ಪರಿಶೀಲಿಸಿ ಮಳೆಗಾಲಕ್ಕೆ ಮೊದಲು ಮುಂದಿನ ಕ್ರಮ ಕೈಗೊಳ್ಳಬೇಕು. ನಿರ್ಮಾಣದಲ್ಲಿ ಯಾವುದೇ ಲೋಪಗಳು ಸಂಭವಿಸದಂತೆ ಎಚ್ಚರ ವಹಿಸುವಂತೆಯೂ ಸೂಚಿಸಲಾಗಿದೆ.

ಮಟ್ಟಲಾಯಿ ರಾಷ್ಟ್ರೀಯ ಹೆದ್ದಾರಿ ನಿರ್ಮಾಣದ ಸಂದರ್ಭ ರಸ್ತೆಯಲ್ಲಿ ಬಿರುಕು ಕಂಡುಬಂದ ಘಟನೆಯ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ತಕ್ಷಣ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ತನಿಖಾ ತಂಡಕ್ಕೆ ಆದೇಶಿಸಿದ್ದರು. ಈ ಹಿನ್ನೆಲೆಯಲ್ಲಿ ಕಾಞಂಗಾಡು ಆರ್‌ಡಿಒ ಆರ್. ಆರ್.ಮನೋಜ್ ನೇತೃತ್ವದ ತಂಡವು ಸಮಗ್ರ ಪರಿಶೀಲನೆ ನಡೆಸಿ ವರದಿ ತಯಾರಿಸಿದೆ.

ಕಂದಾಯ ವಿಭಾಗೀಯ ಅಧಿಕಾರಿ, ತಹಶೀಲ್ದಾರ್, ಲೋಕೋಪಯೋಗಿ ರಸ್ತೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್, ಆರ್‌ಟಿಒ, ಚೆರುವತ್ತೂರು ಗ್ರಾಮ ಪಂಚಾಯತ್ ಕಾರ್ಯದರ್ಶಿ, ಮಣ್ಣು ಸಂರಕ್ಷಣಾ ಅಧಿಕಾರಿ, ಭೂವಿಜ್ಞಾನಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕರು ಮತ್ತು ಜಿಲ್ಲಾ ಪೊಲೀಸ್ ಮುಖ್ಯಸ್ಥರ ಪ್ರತಿನಿಧಿಗಳನ್ನು ಒಳಗೊಂಡ ಸಮಿತಿಯು ತನಿಖಾ ಕಾರ್ಯದಲ್ಲಿ ಭಾಗಿಯಾಗಿತ್ತು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು
ಭಾನುವಾರ 17, ಮೇ 2026 | e-mail diganthamlr@gmail.com | Website www.hosadigantha.com

ಇಂದಿನ ಹವಾಮಾನ
ದಕ್ಷಿಣ ಕನ್ನಡ 33° 26° | ಉಡುಪಿ 34° 27°

ದಕ್ಷಿಣ ಕನ್ನಡ 33° | ಉಡುಪಿ 34°
ಮಳೆ ಸುರಿದರೂ ತಂಪಾಗದ ಇಳೆ!
ಎಲ್ಲೆಡೆ ಮಳೆಗಾಲದ ಚಿತ್ರಣ

ಕರಾವಳಿಯ ಬಹುತೇಕ ಕಡೆ ಶನಿವಾರ ಅಕ್ಷರಶಃ ಮಳೆಗಾಲದ ವಾತಾವರಣ ಸೃಷ್ಟಿಯಾಗಿತ್ತು. ಬಂಗಾಳಕೊಲ್ಲಿಯಲ್ಲಿ ಕಾಣಿಸಿಕೊಂಡ ನಿಮ್ನ ಒತ್ತಡದ ಪರಿಣಾಮ ಎಲ್ಲೆಡೆ ಮಳೆ ವಾತಾವರಣ ಕಂಡುಬರುತ್ತಿದ್ದು ಸುಡು ಬಿಸಿಲಿನಿಂದ ಕಂಗೆಟ್ಟಿದ್ದ ಇಳೆ ಒಂದಿಷ್ಟು ತಂಪಾಗಬಹುದು ಎಂಬ ಜನತೆಯ ನಿರೀಕ್ಷೆ ಹುಸಿಯಾಗಿದೆ. ತಾಪಮಾನ ಯಥಾಸ್ಥಿತಿಯಿದೆ.

ಮಂಗಳೂರು: ನಗರ ಸಹಿತ ಕರಾವಳಿ ಭಾಗದ ವಿವಿಧ ಕಡೆಗಳಲ್ಲಿ ಶನಿವಾರ ಮಳೆಯಾಗಿದ್ದು, ಸಿಡಿಲೇಟಿಗೆ ಹಲವೆಡೆ ಹಾನಿ ಉಂಟಾಗಿದೆ.

ಬೆಳಗ್ಗಿನಿಂದಲೇ ದಟ್ಟ ಮೋಡ ಆವರಿಸಿ ಭಾರೀ ಮಳೆಯಾಗುವ ಸಾಧ್ಯತೆ ಕಂಡುಬಂದಿತ್ತಾದರೂ ಕೆಲಕಾಲ ಸುರಿದ ಮಳೆ ಮತ್ತೆ ಮರೆಯಾಯಿತು. ಗಾಳಿಯ ಆರ್ಭಟ ಎಲ್ಲೆಡೆ ಹೆಚ್ಚಾಗಿತ್ತು.



ಪುತ್ತೂರು ಭಾಗದಲ್ಲೂ ಮಳೆ

ಶನಿವಾರ ಪುತ್ತೂರು ನಗರ, ಗ್ರಾಮಾಂತರ ಭಾಗಗಳಲ್ಲಿ ಮಳೆಗಾಲ ನೆನಪಿಸುವ ವಾತಾವರಣ ಕಂಡಿತ್ತು. ಬೆಳಗ್ಗಿನಿಂದಲೇ ಮೋಡದ ವಾತಾವರಣ, ಹನಿ ಹನಿ ಮಳೆ, ಅಪರಾಹ್ನದ ಬಳಿಕ ಸಾಧಾರಣ ಸಿಡಿಲು ಸಹಿತ ಕೆಲವು ತಾಸು ಉತ್ತಮ ಮಳೆ ಸುರಿಯಿತು.

ಕುಕ್ಕೆ ಪರಿಸರಕ್ಕೆ ತಂಪೆರೆದ ಮಳೆ

ಕುಕ್ಕೆ ಸುಬ್ರಹ್ಮಣ್ಯ ಪರಿಸರದಲ್ಲಿ ಬೆಳಗ್ಗಿನಿಂದ ಮೋಡ ಆವರಿಸಿ ಮಧ್ಯಾಹ್ನದ ಬಳಿಕ ಆಗಾಗ್ಗೆ ತುಂತುರು ಮಳೆಯಾಗಿದೆ. ಈ ಭಾಗದಲ್ಲಿ ಕಳೆದ ನಾಲ್ಕೈದು ದಿನಗಳಿಂದ ಮಳೆ ಇಲ್ಲದೆ ಕಾವೆದಿದ್ದ ಇಳೆಗೆ ಮಳೆ ತಂಪೆರೆಯಿತು. ಸುಬ್ರಹ್ಮಣ್ಯ ಪರಿಸರದ ಗ್ರಾಮೀಣ ಭಾಗದಲ್ಲಿ ಭಾರೀ ಮಳೆಯಾಗಿದೆ. ಇಲ್ಲಿನ ಯೇನೆಕಲ್ಲು, ಬಳ್ಪ, ಪಂಜ, ನಿಡ್ವಾಳ, ಕರಿಕ್ಕಳ, ಎಣ್ಮೂರು, ಅಲೆಕ್ಕಾಡಿ, ನಿಂತಿಕಲ್ಲು, ಮುರುಳ್ಯ, ಹರಿಹರ, ಬಾಳುಗೋಡು, ಕೊಲ್ಲಮೊಗ್ರು, ಮರಕತ, ನಡುಗಲ್ಲು, ಗುತ್ತಿಗಾರು, ಕೈಕಂಬ, ಬಿಳಿನೆಲೆ, ನೆಟ್ಟಣ, ಮರ್ಧಾಳ, ಕಡಬ ಪ್ರದೇಶದಲ್ಲಿ ಶನಿವಾರ ಧಾರಾಕಾರ ಮಳೆಯಾಗಿದೆ.

ಹಲವೆಡೆ ಸಂಕಷ್ಟಗಳ ಸುರಿ'ಮಳೆ'

ಮಳೆಯಿಂದಾಗಿ ಕೆಲವು ಕಡೆ ರಸ್ತೆಯಲ್ಲಿ ನೀರು ಹರಿದು ವಾಹನ ಸವಾರರಿಗೆ ಮತ್ತು ಪದಾಚಾರಿಗಳಿಗೆ ಸಮಸ್ಯೆಯಾಯಿತು.

ಬಂಟ್ವಾಳ ಹಾಗೂ ಬೆಳ್ತಂಗಡಿ ತಾಲೂಕಿನ ಕೆಲವು ಭಾಗಗಳಲ್ಲಿಯೂ ಅಲ್ಪ ಪ್ರಮಾಣದಲ್ಲಿ ಮಳೆಯಾಗಿದೆ. ಬಂಟ್ವಾಳ ತಾಲೂಕಿನ ಕಾರಿಂಜ ಪರಿಸರದಲ್ಲಿ ಸಿಡಿಲಿನೇಟಿಗೆ ಒಂದಿಷ್ಟು ಹಾನಿಯಾಗಿದೆ. ಇಂದೂ ಕೂಡಾ ಕೆಲವೆಡೆ ಮಳೆ ಮುಂದುವರಿಯುವ ಸಾಧ್ಯತೆ ಇದೆ.

ಕಾಸರಗೋಡು ಜಿಲ್ಲೆಯಲ್ಲಿ ಸಿಡಿಲು ಸಹಿತ ಗಾಳಿ ಮಳೆ

ಬಂಗಾಳಕೊಲ್ಲಿ ಆಳಸಮುದ್ರದಲ್ಲಿ ಸಂಭವಿಸಿದ ವಾಯುಭಾರ ಕುಸಿತದ ಪರಿಣಾಮವಾಗಿ ಕಾಸರಗೋಡು ಜಿಲ್ಲೆಯಲ್ಲಿ ಶುಕ್ರವಾರ ರಾತ್ರಿಯಿಂದ ಸಾಮಾನ್ಯ ಮಳೆ ಸುರಿದಿದ್ದರೆ, ಶನಿವಾರ ಹಗಲು ಮಳೆ ವೇಗ ಪಡೆದುಕೊಂಡು ಕೆಲವೆಡೆಗಳಲ್ಲಿ ಧಾರಾಕಾರ ಸುರಿದಿದೆ. ಹಠಾತ್ ಮಳೆ ಜನಜೀವನದ ಮೇಲೂ ವ್ಯತಿರಿಕ್ತ ಪರಿಣಾಮ ಬೀರಿದೆ.

ಮೂರು ದಿನ ಭಾರೀ ಮಳೆಯ ಸಾಧ್ಯತೆ?

ಈ ಮಧ್ಯೆ ಮುಂದಿನ ಎರಡು ಮೂರು ದಿನಗಳ ಕಾಲ ಕಾಸರಗೋಡು ಜಿಲ್ಲೆಯಲ್ಲಿ ಉತ್ತಮ ಮಳೆ ಸುರಿಯಲಿದೆ ಎಂದು ತಿರುವನಂತಪುರದ ಕೇಂದ್ರ ಹವಾಮಾನ ಇಲಾಖೆಯು ಮಾಹಿತಿ ನೀಡಿದೆ.

ಇದೇ ವೇಳೆ ಮಳೆಯ ಜೊತೆ ಮಿಂಚು, ಗುಡುಗು, ಪ್ರಬಲವಾದ ಗಾಳಿ ಬೀಸುವ ಸಾಧ್ಯತೆಯಿದ್ದು, ಸಾರ್ವಜನಿಕರು ಗರಿಷ್ಠ ಮುನ್ನೆಚ್ಚರಿಕೆ ವಹಿಸಬೇಕೆಂದು ತಿಳಿಸಲಾಗಿದೆ. ಇನ್ನೊಂದೆಡೆ ಕೇರಳದ ಎಲ್ಲಾ ಜಿಲ್ಲೆಗಳಲ್ಲೂ ಮಳೆ ಸುರಿಯುತ್ತಿರುವ ಬಗ್ಗೆ ವರದಿ ಲಭಿಸಿದೆ.

ಅಲಾ ಪಿಲಿ ಪತ್ತುಂಡೂ ಪಿಲಿ... ಜಾಗ್ರತೆ.. ಬಲಾ.. ಬಲಾ.. ಬಲಿಪ್ಪೊ...



ದೇಶ, ವಿದೇಶಗಳಲ್ಲಿ ಪ್ರಸಿದ್ಧಿ ಪಡೆದ ದ್ವೈವಾರ್ಷಿಕವಾಗಿ ನಡೆಯುವ ಉಡುಪಿ ಜಿಲ್ಲೆಯ ಕಾಪುವಿನ ಶ್ರೀ ಬ್ರಹ್ಮಮುಗ್ಗೇರ್ಕಳ ಹುಲಿಚಂಡಿ ದೈವಸ್ಥಾನದ ಪಿಲಿಕೋಲ ಶನಿವಾರ ಸಂಪ್ರದಾಯ ಬದ್ಧವಾಗಿ ನಡೆಯಿತು, ಭಾರೀ ಸಂಖ್ಯೆಯ ಭಕ್ತಾದಿಗಳು ಭಾಗವಹಿಸಿದ್ದರು.

60 ಕಿಮೀ ವೇಗದ ಗಾಳಿ | ಗುಡುಗು, ಮಿಂಚು
ಎಲ್ಲೆಡೆ ಮಳೆ ಅಲರ್ಟ್
ಕಡಲತೀರ ಅಪಾಯಕರ ಎಂದ ಇಲಾಖೆ

ಮಂಗಳೂರು/ಉಡುಪಿ: ಈಗ ಬಂಗಾಳಕೊಲ್ಲಿಯಲ್ಲಿ ಕಾಣಿಸಿ ಕೊಂಡಿರುವ ವಾಯುಭಾರ ಕುಸಿತ ಪರಿಣಾಮ ದಕ್ಷಿಣ ಕನ್ನಡ, ಉಡುಪಿ ಹಾಗೂ ಕಾಸರಗೋಡು ಭಾಗದಲ್ಲಿ ಭಾನುವಾರದ ತನಕ ಗುಡುಗು, ಮಿಂಚು ಸಹಿತ ಮಳೆ ಕಾಣಿಸಿಕೊಳ್ಳುವ ಸಾಧ್ಯತೆ ಇದೆ ಎಂದು ಕೇಂದ್ರ ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

60 ಕಿಲೋಮೀಟರ್ ವೇಗದಲ್ಲಿ ಬಿರುಗಾಳಿ

ಈ ಅವಧಿಯಲ್ಲಿ ಗಂಟೆಗೆ 50 ರಿಂದ 60 ಕಿಲೋಮೀಟರ್ ವೇಗದಲ್ಲಿ ಬಲವಾದ ಬಿರುಗಾಳಿ ಬೀಸುವ ಸಂಭವ ಇರುವುದರಿಂದ ಸಾರ್ವಜನಿಕರು ಹಾಗೂ ಮೀನುಗಾರರು ಹೆಚ್ಚು ಜಾಗರೂಕರಾಗಿ ಇರಬೇಕು ಎಂದು ಇಲಾಖೆ ಕಟ್ಟುನಿಟ್ಟಿನ ಸೂಚನೆಯನ್ನು ನೀಡಿದೆ.



ಉಡುಪಿಗೆ ತಂಪೆರೆದ ಮಳೆ

ಉಡುಪಿ ನಗರ ಸೇರಿದಂತೆ ಕಟಪಾಡಿ, ಶಂಕರಪುರ, ಅಲೆವೂರು, ಮಣಿಪಾಲ, ಕುರ್ಕಾಲು ಹಾಗೂ ಮೂಡಬೆಳ್ಳೆ ಭಾಗದಲ್ಲಿ ಸಾಧಾರಣ ಮಳೆಯಾಗಿದೆ. ಮಳೆಯು ವಾಹನ ಸವಾರರು ಹಾಗೂ ಹಠಾತ್ ಪಾದಚಾರಿಗಳಿಗೆ ತುಸು ಅಡಚಣೆ ಉಂಟುಮಾಡಿದರೂ, ಕರಾವಳಿಯ ಪ್ರಖರ ಉಷ್ಣಾಂಶಕ್ಕೆ ತಾತ್ಕಾಲಿಕ ತಂಪು ನೀಡಿದೆ.

ಸುತ್ತಮುತ್ತ

ಮಳೆ ಸಿಡಿಲಿಗೆ ಮಣಕಡವು ಪಂಪ್‌ಹೌಸ್‌ಗೆ ಹಾನಿ: ನೀರು ಸರಬರಾಜು ಸ್ಥಗಿತ

ಕಾಸರಗೋಡು: ಜಿಲ್ಲೆಯ ವಿವಿಧೆಡೆ ಮಿಂಚು ಗುಡುಗು ಸಹಿತ ಮಳೆಯಾಗುತ್ತಿದ್ದು, ಸಿಡಿಲಿನ ಹೊಡೆತಕ್ಕೆ ಮಣಕಡವು ಪಂಪ್ ಹೌಸ್‌ನಲ್ಲಿ ವಿದ್ಯುತ್ ಉಪಕರಣಗಳಿಗೆ ಹಾನಿಯಾಗಿದೆ.

ನೀರು ಸರಬರಾಜು ಭಾಗಶಃ ವ್ಯತ್ಯಯ

ಈ ಹಿನ್ನೆಲೆಯಲ್ಲಿ ಇಂದು (ಮೇ 17) ಮಡಿಕೈ ಕುಡಿಯುವ ನೀರು ಯೋಜನೆಗೆ ಸಂಬಂಧಿಸಿದಂತೆ ನೀರು ಸರಬರಾಜು ಭಾಗಶಃ ವ್ಯತ್ಯಯಗೊಳ್ಳಲಿದೆ ಎಂದು ಸಹಾಯಕ ಇಂಜಿನಿಯರ್ ಮಾಹಿತಿ ನೀಡಿದ್ದಾರೆ. ಶನಿವಾರ ಸುರಿದ ಭಾರೀ ಮಳೆ ಜಿಲ್ಲೆಯ ಹಲವೆಡೆಗಳಲ್ಲಿ ಹಾನಿ ಉಂಟುಮಾಡಿದೆಯಾದರೂ ಇಳೆ ತಂಪಾಗಿಸಿ ಅಂತರ್ಜಲ ಮಟ್ಟ ಕಾಯ್ದುಕೊಳ್ಳಲು ಕೂಡಾ ನೆರವಾಗಿದೆ.

ಸುತ್ತಮುತ್ತ

ಹೈಕೋರ್ಟ್ ಸಂಚಾರಿ ಪೀಠಕ್ಕೆ ಗ್ರೀನ್ ಸಿಗ್ನಲ್: ಐವನ್ ಡಿಸೋಜಾ

ಮಂಗಳೂರು: ಹೈಕೋರ್ಟ್‌ನ ಸಂಚಾರಿ ಪೀಠವನ್ನು ಮಂಗಳೂರಿನಲ್ಲಿ ಸ್ಥಾಪಿಸಬೇಕೆಂಬ ಸುಮಾರು 2 ವರ್ಷಗಳ ನಿರಂತರ ಬೇಡಿಕೆಗೆ ರಾಜ್ಯ ಸರಕಾರ ಗ್ರೀನ್ ಸಿಗ್ನಲ್ ನೀಡಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಪೀಠಕ್ಕೆ ಅಗತ್ಯ ಮೂಲ ಸೌಕರ್ಯ ಒದಗಿಸಲು ಸಿದ್ಧ ಇರುವುದಾಗಿ ಮುಖ್ಯ ನ್ಯಾಯಾಧೀಶರಿಗೆ ಪತ್ರದ ಮೂಲ ತಿಳಿಸಿದ್ದಾರೆ. ಈ ಮೂಲಕ ಪೀಠ ಸ್ಥಾಪನೆಯ ಶೇ. 80ರಷ್ಟು ಕಾರ್ಯ ಪೂರ್ಣಗೊಂಡಂತಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜಾ ಹೇಳಿದ್ದಾರೆ. ಮಂಗಳೂರು ಮಹಾನಗರ ಪಾಲಿಕೆ ಕಚೇರಿಯಲ್ಲಿರುವ ತಮ್ಮ ಕೊಠಡಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರಿಗೆ ಈ ಬಗ್ಗೆ ಸಲ್ಲಿಸಿರುವ ಪತ್ರದ ಪ್ರತಿಯೊಂದಿಗೆ ಮಾಹಿತಿ ನೀಡಿದರು. ಹೈಕೋಟ್‌ನ ಮುಖ್ಯ ನ್ಯಾಯಾಧೀಶರ ನಿಯೋಗ ಮೇ ತಿಂಗಳ ಅಂತ್ಯದಲ್ಲಿ ಅಥವಾ ಜೂನ್ ತಿಂಗಳ ಮೊದಲ ವಾರದಲ್ಲಿ ಮಂಗಳೂರಿಗೆ ಭೇಟಿ ನೀಡಿ ಮುಖ್ಯಮಂತ್ರಿ ತಮ್ಮ ಪತ್ರದಲ್ಲಿ ತಿಳಿಸಿರುವಂತೆ ಇಲ್ಲಿ ಲಭ್ಯ ಇರುವ ಮೂಲ ಸೌಕರ್ಯ ಪರಿಶೀಲಿಸಲಿದೆ. ಸಂಚಾರಿ ಪೀಠ ಸ್ಥಾಪಿಸಲು ಅಗತ್ಯವಾದ ಎಲ್ಲಾ ಇತರ ಸೌಲಭ್ಯಗಳನ್ನು ಕೂಡಾ ಒದಗಿಸಲು ಸಿದ್ಧ ಇರುವುದಾಗಿ ಸಿಎಂ ಪತ್ರದಲ್ಲಿ ತಿಳಿಸಿರುವ ಕಾರಣ ಅಕ್ಟೋಬರ್ ಒಳಗೆ ಸಂಚಾರಿ ಪೀಠ ಕಾರ್ಯಾರಂಭ ಆಗಬೇಕು ಎಂಬುದು ನಮ್ಮ ಆಶಯವಾಗಿದೆ ಎಂದು ಅವರು ಹೇಳಿದರು. ಸರಕಾರಿ ವಕೀಲ ಎಂ.ಪಿ. ನೊರೊನ್ಹಾ, ಮಂಗಳೂರು ಬಾರ್ ಅಸೋಸಿಯೇಶನ್ ಅಧ್ಯಕ್ಷ ರಾಘವೇಂದ್ರ, ಕಾರ್ಯದರ್ಶಿ ಶ್ರೀಧರ್, ಕೋಶಾಧಿಕಾರಿ ಗಿರೀಶ್ ಶೆಟ್ಟಿ, ಸುಜಿತ್ ಉಪಸ್ಥಿತರಿದ್ದರು.

ಅಧ್ಯಕ್ಷರಾಗಿ ಉದ್ಯಮಿ ತಾರಾನಾಥ ಕೊಟ್ಟಾರಿ

ಬಂಟ್ವಾಳ: ಉದ್ಯಮಿ ಸಾಮಾಜಿಕ ಕಾರ್ಯಕರ್ತ ತಾರಾನಾಥ ಕೊಟ್ಟಾರಿ ಅವರು ಸೀನಿಯರ್ ಛೇಂಬರ್ ಇಂಟರ್ ನ್ಯಾಶನಲ್ ಬಂಟ್ವಾಳ ನೇತ್ರಾವತಿ ಸಂಗಮದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಮೇ 18ರಂದು ಬಿ.ಸಿ.ರೋಡು ಕೈಕಂಬ ದ್ವಾರದಲ್ಲಿರುವ ಅಕ್ಷಯ ಸೌಧ ಅಕ್ಷಯ ಸಭಾಂಗಣದಲ್ಲಿ ಪದವಿ ಪ್ರಧಾನ ಸಮಾರಂಭವು ನಡೆಯಲಿದೆ.



ಬಿ.ಸಿ.ರೋಡಿನ ಉದ್ಯಮಿ ಐತ್ತಪ್ಪ ಆಳ್ವ ಸುಜೀರುಗುತ್ತು, ರಾಷ್ಟ್ರೀಯ ಉಪಾಧ್ಯಕ್ಷೆ ಅಕ್ಷತಾ ಆರ್. ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ನೇತ್ರಾವತಿ ಸಂಗಮದ ನಿಕಟಪೂರ್ವ ಅಧ್ಯಕ್ಷ ಆದಿರಾಜ ಜೈನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕಾರ್ಯದರ್ಶಿಯಾಗಿ ರೇಖಾ ರಾವ್, ಜೊತೆ ಕಾರ್ಯದರ್ಶಿಯಾಗಿ ಸನ್ಮತಿ ಜೈನ್ ಇಂದ್ರ, ಕೋಶಾಧಿಕಾರಿಯಾಗಿ ಪಿ. ಮೊಹಮ್ಮದ್, ಉಪಾಧ್ಯಕ್ಷರಾಗಿ ಪುರುಷೋತ್ತಮ ಕೊಟ್ಟಾರಿ, ಜಯಗಣೇಶ ದಾಸಕೋಡಿ, ನಿರ್ದೇಶಕರಾಗಿ ಜಯಾನಂದ ಪೆರಾಜೆ, ಡಾ. ಆನಂದ ಬಂಜನ್ ಪದಾಧಿಕಾರಿಗಳಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ನೂತನ ಸದಸ್ಯರಾಗಿ ರಾಜಾರಾಮ ಐತಾಳ್, ಗ್ರೇಸಿ ಮೇಬಲ್ ಲಸ್ರಾದೊ, ಅಶೋಕ್ ಕುಮಾರ್ ಬರಿಮಾರು, ಗಿರಿಧರ ಗೌಡ, ಶೋಭಾ ಶೆಟ್ಟಿ ಪ್ರಮೀಳ ಮಾಣೂರು ಸೇರ್ಪಡೆಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕುಟ್ರುಪ್ಪಾಡಿ, ಪೆರಾಬೆ: ಸ್ವಚ್ಛತಾ ಶನಿವಾರ

ಕಡಬ: ತಿಂಗಳ ಮೊದಲನೇ ಹಾಗೂ ಮೂರನೇ ಶನಿವಾರ ಪಂಚಾಯತ್ ವ್ಯಾಪ್ತಿಯಲ್ಲಿ ನಡೆಯುವ ಸ್ವಚ್ಛತಾ ಕಾರ್ಯಕ್ರಮದ ಅಂಗವಾಗಿ ಕುಟ್ರುಪ್ಪಾಡಿ ಹಾಗೂ ಪೆರಾಬೆ ಗ್ರಾ.ಪಂ. ನೇತೃತ್ವದಲ್ಲಿ ಸಂಜೀವಿನಿ ಒಕ್ಕೂಟಗಳ ಸಹಕಾರದೊಂದಿಗೆ ಉಪ್ಪಿನಂಗಡಿ-ಕಡಬ-ಸುಬ್ರಹ್ಮಣ್ಯ ರಾಜ್ಯ ಹೆದ್ದಾರಿಯ ಬಲ್ಯದಿಂದ ಪದವು ತನಕ ರಸ್ತೆ ಬದಿಯಲ್ಲಿ ಸ್ವಚ್ಛತಾ ಕಾರ್ಯ ಶನಿವಾರ ನಡೆಯಿತು. ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷೆ ಆಶಾ ತಿಮ್ಮಪ್ಪ ಗೌಡ ಕುಂಡಡ್ಕ, ಕುಂತೂರು ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷ ಸೋಮಪ್ಪ ಗೌಡ, ಪೆರಾಬೆ ಗ್ರಾ.ಪಂ. ಮಾಜಿ ಅಧ್ಯಕ್ಷೆ ಸಂಧ್ಯಾ, ಶಿಕ್ಷಕ ಸುಬ್ರಹ್ಮಣ್ಯ ಗೌಡ, ಪ್ರಮುಖರಾದ ಸುಜಿತ್ ಕುಂಡಡ್ಕ, ಚಂದ್ರಶೇಖರ ಗೌಡ, ಕಮಲಾಕ್ಷ ಅಂಬರಾಜೆ, ಕುಟ್ರಪ್ಪಾಡಿ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಆನಂದ ಗೌಡ ಪಿಜಕಳ, ಪೆರಾಬೆ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಅಮ್ಮಿ ಬಿ.ಪಿ., ಕುಟ್ರುಪ್ಪಾಡಿ ಗ್ರಂಥಪಾಲಕಿ ಚಂದ್ರಾವತಿ, ಸಂಜೀವಿನಿ ಒಕ್ಕೂಟದ ಪಶುಸಖಿ ಅನುರಾಧ, ಎಂ.ಬಿ.ಕೆ. ವಿನುತಾ, ಎಲ್‌ಸಿಆರ್‌ಪಿಗಳಾದ ಭವ್ಯ, ಮಲ್ಲಿಕಾ, ಪೆರಾಬೆ ಗ್ರಾ.ಪಂ. ಸಿಬ್ಬಂದಿ ಪ್ರಜ್ವಲ್ ಪಟ್ಟೆ, ಉತ್ತೇಶ್ ರಾಜ್, ಉಮೇಶ್, ಸಂಜೀವಿನಿ ಒಕ್ಕೂಟದ ಎಂ.ಬಿ.ಕೆ. ಮಾಲತಿ, ಎಲ್‌ಸಿಆರ್‌ಪಿಗಳಾದ ಲಿಖಿತಾ, ಪ್ರವೀಣಾ ಡಿ. ಸ್ವಚ್ಛತಾ ಸಿಬ್ಬಂದಿ ಮತ್ತಿತರರಿದ್ದರು.

ಕಡಬ-ಪಂಜ ರಸ್ತೆಯ ಅಭಿವೃದ್ಧಿಗೆ ಗ್ರಹಣ | ಹದಗೆಟ್ಟ ಮಾರ್ಗದಲ್ಲಿ ವಾಹನ ಸವಾರರ ಪರದಾಟ

ಡಾಮರು ಕೊರತೆಯಿಂದ ಅಪೂರ್ಣಗೊಂಡ ರಸ್ತೆ ಕಾಮಗಾರಿ

■ ತುಳಸಿ ಕಡಬ



ಸಂಗಮ ವಿಶೇಷ

ಕಡಬ: ಸುಳ್ಯ ವಿಧಾನಸಭಾ ಕ್ಷೇತ್ರದ ಪ್ರಮುಖ ರಸ್ತೆಗಳಲ್ಲೊಂದಾದ ಕಡಬ-ಪಂಜ ಮುಖ್ಯ ರಸ್ತೆಯನ್ನು ಅಭಿವೃದ್ಧಿಪಡಿಸುವ ಕಾಮಗಾರಿಗೆ ಎದುರಾಗುತ್ತಿರುವ ಅಡೆತಡೆಗಳು ಒಂದೆರಡಲ್ಲ. ಆರಂಭದಲ್ಲಿ ಮಳೆಯಿಂದಾಗಿ ತಡವಾಗಿ ಆರಂಭಗೊಂಡು ಹಲವು ಎಡರುತೊಡರುಗಳ ನಡುವೆ ನಡೆಯುತ್ತಿದ್ದ ಕಾಮಗಾರಿ ಇದೀಗ ಡಾಮರು ಕೊರತೆಯ ಕಾರಣದಿಂದಾಗಿ ಮತ್ತೆ ಸ್ಥಗಿತಗೊಂಡಿದೆ.

2 ಕೋ.ರೂ. ಅನುದಾನದ ಕಾಮಗಾರಿ

ಕಡಬದಿಂದ ಕೋಡಿಂಬಾಳದವರೆಗೆ ರಸ್ತೆ ಅಭಿವೃದ್ಧಿಪಡಿಸುವುದಕ್ಕೋಸ್ಕರ ರಾಜ್ಯ ಸರಕಾರದಿಂದ ಬಿಡುಗಡೆಯಾಗಿರುವ ಒಟ್ಟು 2 ಕೋ. ರೂ ಅನುದಾನದಲ್ಲಿ ಒಂದು ಕೋಟಿ ರೂ. ನ ಮೊದಲ ಹಂತದ ಕಾಮಗಾರಿ ಪೂರ್ಣಗೊಂಡಿದ್ದು, ಎರಡನೇ ಹಂತದ ಇನ್ನೊಂದು ಕೋಟಿ ರೂ. ನ ಕಾಮಗಾರಿ ಕೇವಲ ತೇಪೆ ಕಾರ್ಯಕ್ಕೆ ಮಾತ್ರ ಸೀಮಿತವಾಗಿ ಸ್ಥಗಿತವಾಗಿದೆ. ಡಾಮರು ಸಿಗದಿರುವುದರಿಂದ ರಸ್ತೆ ಕಾಮಗಾರಿ ಸ್ಥಗಿತಗೊಳಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡುತ್ತಿದ್ದಾರೆ. ಇತ್ತ ಸಾರ್ವಜನಿಕರು ಮಳೆಗಾಲ ಹತ್ತಿರವಾದರೂ ರಸ್ತೆ ಕಾಮಗಾರಿ ಮುಗಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಮೊದಲ ಹಂತದಲ್ಲಿ 1 ಕೋ. ರೂ. ಅನುದಾನನಲ್ಲಿ ಕಡಬದಿಂದ ಕಲ್ಲಂತಡ್ಕದವರೆಗೆ ಹೆಚ್ಚು ಹದಗೆಟ್ಟಿದ್ದ ಮೂರು ಕಡೆ ರಸ್ತೆಯನ್ನು ಎತ್ತರಿಸಿ ಕಾಂಕ್ರೀಟ್ ಮಾಡಲಾಗಿದೆ. ಆ ಕಾಮಗಾರಿ ಮುಗಿದ ಬಳಿಕ ಇನ್ನೊಂದು ಕೋಟಿ ರೂ. ಅನುದಾನದ ಕಾಮಗಾರಿಯನ್ನು ಆರಂಭಿಸಲಾಗಿತ್ತು. ಓಂತ್ರಡ್ಕದ ತನಕ ಕಾಮಗಾರಿ ನಡೆಯಬೇಕಿತ್ತು. ಆದರೆ ಡಾಮರು ಸಿಗದಿರುವ ಕಾರಣದಿಂದಾಗಿ ಸ್ಥಗಿತಗೊಂಡಿರುವ ಕಾಮಗಾರಿ ಇನ್ನೂ ಆರಂಭಗೊಂಡಿಲ್ಲ.

ಸಂಪೂರ್ಣ ಹದಗೆಟ್ಟಿದ್ದ ರಸ್ತೆ

ಕಡಬದಿಂದ ಪಂಜವನ್ನು ಸಂಪರ್ಕಿಸುವ ಸುಮಾರು 10 ಕಿ.ಮೀ. ಉದ್ದದ ರಸ್ತೆಯಲ್ಲಿ ಕಡಬದಿಂದ ಕೋಡಿಂಬಾಳದ ತನಕ ಡಾಮರು ಕಿತ್ತುಹೋಗಿ ರಸ್ತೆ ಸಂಪೂರ್ಣ ಹದಗೆಟ್ಟಿದ್ದು ವಾಹನ ಸಂಚಾರಕ್ಕೆ ಹರಸಾಹಸಪಡುವಂತಾಗಿತ್ತು. ರಸ್ತೆಯಲ್ಲಿ ವಾಹನ ಸಂಚಾರ ದುಸ್ತರವೆನಿಸಿದಾಗ ಶಾಸಕರ ಸೂಚನೆಯಂತೆ ಲೋಕೋಪಯೋಗಿ ಇಲಾಖೆಯಿಂದ ಜಲ್ಲಿ ಹಾಗೂ ಜಲ್ಲಿ ಹುಡಿ ಮಿಶ್ರಣ ಮಾಡಿ ರಸ್ತೆಯ ಗುಂಡಿ ಮುಚ್ಚುವ ಕೆಲಸ ನಡೆಸಿದರೂ ಅದು ಪ್ರಯೋಜನಕ್ಕೆ ಬಂದಿರಲಿಲ್ಲ. ಕೋಡಿಂಬಾಳದಿಂದ ಪಂಜದ ತನಕ ನಿರ್ವಹಣಾ ಅನುದಾನದಡಿ ಗುಂಡಿಬಿದ್ದಲ್ಲಿ ರಸ್ತೆಯನ್ನು ದುರಸ್ತಿಪಡಿಸಲಾಗಿದೆ. ಬಾಕಿ ಉಳಿದಿರುವ 1 ಕೋಟಿ ರೂ. ಅನುದಾನದ ಕಾಮಗಾರಿ ಪೂರ್ಣಗೊಂಡರೆ ವಾಹನ ಸವಾರರಿಗೆ ಅನುಕೂಲವಾಗಲಿದೆ. ರಸ್ತೆ ಅಭಿವೃದ್ಧಿ ಕಾಮಗಾರಿ ನಡೆಸುವಾಗ ಕಡಬ ಸರಕಾರಿ ಆಸ್ಪತ್ರೆಯ ಎದುರು ಸಂಪರ್ಕ ರಸ್ತೆಯನ್ನು ಕಿತ್ತು ಹಾಕಿ ಅಲ್ಲಿ ಮೋರಿ ಹಾಕಿ ರಸ್ತೆ ದುರಸ್ತಿ ಮಾಡುವ ಭರವಸೆ ನೀಡಲಾಗಿತ್ತು. ಆದರೆ ಈವರೆಗೆ ಅದನ್ನು ನಡೆಸಿಲ್ಲ. ಆದರಿಂದ ಆಸ್ಪತ್ರೆಗೆ ಬರುವ ಜನರಿಗೆ ತೀರಾ ತೊಂದರೆ ಯಾಗುತ್ತಿದೆ. ಮಳೆಗಾಲ ಪ್ರಾರಂಭವಾದರೆ ಸಮಸ್ಯೆ ಇನ್ನಷ್ಟು ಬಿಗಡಾಯಿಸಲಿದೆ ಎಂಬುದು ಜನರ ಆತಂಕ.

ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ



ಹದಗೆಟ್ಟ ಕಡಬ-ಪಂಜ ರಸ್ತೆಯನ್ನು ಅಭಿವೃದ್ಧಿ ಪಡಿಸಬೇಕೆಂಬ ಈ ಭಾಗದ ಜನರ ಬೇಡಿಕೆಯ ಮೇರೆಗೆ 2 ಕೋಟಿ ರೂ. ಅನುದಾನ ನೀಡಲಾಗಿದೆ. ಈಗಾಗಲೇ 1 ಕೋಟಿ ರೂ. ನ ಕಾಮಗಾರಿ ಮುಗಿದಿದೆ. ಉಳಿದ 1 ಕೋಟಿ ರೂ. ನ ಕಾಮಗಾರಿ ಡಾಮರು ಕೊರತೆಯ ಕಾರಣದಿಂದಾಗಿ ಸ್ಥಗಿತಗೊಂಡಿರುವ ಮಾಹಿತಿ ಇದೆ. ಶೀಘ್ರ ಕಾಮಗಾರಿ ಮುಗಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿದೆ.

● ಭಾಗೀರಥಿ ಮುರುಳ್ಯ, ಸುಳ್ಯ ಶಾಸಕಿ

ರಸ್ತೆ ಕಾಮಗಾರಿ, ಟ್ರಾಫಿಕ್ ಸಮಸ್ಯೆ ಬಗ್ಗೆ ಶಾಸಕ ಕೋಟ್ಯಾನ್‌ಗೆ ನಾಗರಿಕರ ದೂರು



ಮುಲ್ಕಿ: ಮುಲ್ಕಿ-ಮೂಡುಬಿದಿರೆ ಶಾಸಕ ಉಮಾನಾಥ ಕೋಟ್ಯಾನ್ ಅವರ ನೇತೃತ್ವದಲ್ಲಿ ಕಾರ್ನಾಡ್ ಪ್ರಜಾಸೌಧ ಆಡಳಿತದ ಸೇವಕ ಕಚೇರಿಯಲ್ಲಿ ಶನಿವಾರ ಸಾರ್ವಜನಿಕರ ಸಮಸ್ಯೆ ಹಾಗೂ ಅಹವಾಲುಗಳನ್ನು ಸ್ವೀಕರಿಸಿದರು.

ಸಾಮಾಜಿಕ ಕಾರ್ಯಕರ್ತ ನವೀನ್ ಪುತ್ರನ್, ಕೆಎಸ್‌ರಾವ್ ನಗರ ರೈಲ್ವೆ ನಿಲ್ದಾಣದಿಂದ ಮುಲ್ಕಿ ಮೂಡುಬಿದರೆ ರಾಜ್ಯ ಹೆದ್ದಾರಿ ಕೆಂಚನಕೆರೆ ಸಂಪರ್ಕಿಸುವ ರಸ್ತೆ ಶೀಘ್ರ ದುರಸ್ತಿಗೊಳಿಸಬೇಕು ಎಂದು ಶಾಸಕರಿಗೆ ಮನವಿ ಸಲ್ಲಿಸಿದರು.

ಟ್ರಾಫಿಕ್ ಸಮಸ್ಯೆ ಬಗ್ಗೆ ಪಟ್ಟಣ ಪಂಚಾಯತ್ ಅಧ್ಯಕ್ಷ ಗುರುರಾಜ್ ಮಲ್ಲಿಗೆಯಂಗಡಿ ಶಾಸಕರ ಗಮನಕ್ಕೆ ತಂದರು. ಅಮೃತ್ 2.0 ಕುಡಿಯುವ ನೀರಿನ ಯೋಜನೆಯಿಂದ ಅಲ್ಲಲ್ಲಿ ಪೈಪ್ ಅಳವಡಿಕೆ ಸಂದರ್ಭ ರಸ್ತೆ ತುಂಡರಿಸಲಾಗಿದೆ ಹಾಗೂ ಚರಂಡಿ ಮುಚ್ಚಲಾಗಿದೆ. ಗುತ್ತಿಗೆದಾರರು ಸಮರ್ಪಕ ಕಾಮಗಾರಿ ನಡೆಸುತ್ತಿಲ್ಲ ಎಂದು ಶಾಸಕರಿಗೆ ನಾಗರಿಕರೊಬ್ಬರು ದೂರು ನೀಡಿದರು. ಈ ಬಗ್ಗೆ ಶಾಸಕರು ಪರಿಶೀಲಿಸುವ ಭರವಸೆ ನೀಡಿದರು ಕಲ್ಲಾಪು ಶ್ರೀ ವೀರಭದ್ರ ದೇವಸ್ಥಾನ ಜೀರ್ಣೋದ್ಧಾರಗೊಳ್ಳುತ್ತಿದ್ದು, ದೇವಸ್ಥಾನದ ಇನ್ನೊಂದು ಪಾರ್ಶ್ವದಲ್ಲಿರುವ ಅಂಗನವಾಡಿ ಸ್ಥಳಾಂತರಗೊಳಿಸಬೇಕು ಎಂದು ದೇವಸ್ಥಾನದ ಆಡಳಿತ ಮಂಡಳಿಯ ಸದಸ್ಯರು ಶಾಸಕರಿಗೆ ಮನವಿ ಸಲ್ಲಿಸಿದರು

ಮುಲ್ಕಿ ತಹಶೀಲ್ದಾರ್ ಶ್ರೀಧರ ಮುಂದಲಮನಿ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಸುನಿಲ್ ಆಳ್ವ, ಬಿಜೆಪಿ ನಾಯಕರಾದ ಸತೀಶ್ ಅಂಚನ್ , ರಂಗನಾಥ ಶೆಟ್ಟಿ ಸುಭಾಷ್ ಶೆಟ್ಟಿ, ಶೈಲೇಶ್ ಕುಮಾರ್, ಪೂರ್ಣಿಮಾ, ನವೀನ್ ರಾಜ್, ಅಶೋಕ್ ಜನನಿ, ಜೀವನ್ ಪ್ರಕಾಶ್, ಅಶೋಕ್ ಬಂಗೇರ ಹಳೆಯಂಗಡಿ, ಶಾಸಕರ ಆಪ್ತ ಸಹಾಯಕ ಸೇವಕ ಕಚೇರಿಯ ರಮೇಶ್ ಹಂಗರಗಿ ಮತ್ತಿತರರು ಉಪಸ್ಥಿತರಿದ್ದರು.

ಪೈಲೆಟ್ ಚರಣ್‌ರಾಜ್ ಕೆ. ಶೆಟ್ಟಿ ದಂಪತಿಗೆ ಅಬ್ಬಕ್ಕ ಸಾಧನಾ ಪ್ರಶಸ್ತಿ ಪ್ರದಾನ



ಉಳ್ಳಾಲ: ಉಳ್ಳಾಲ ತಾಲೂಕಿನ ಪ್ರಥಮ ಪೈಲಟ್ ಎಂಬ ಹೆಗ್ಗಳಿಕೆಗೆ ಪಾತ್ರರಾದ ಚರಣ್ ರಾಜ್ ಕೆ. ಶೆಟ್ಟಿ ಹಾಗೂ ಪ್ರಕೃತಿ ಸಿ. ಶೆಟ್ಟಿ ದಂಪತಿಗೆ ಗುರುವಾರ ನಡೆದ ಸಮಾರಂಭದಲ್ಲಿ 'ಅಬ್ಬಕ್ಕ ಸಾಧನಾ ಪ್ರಶಸ್ತಿ' ಪ್ರದಾನಿಸಲಾಯಿತು.

ಈ ವೇಳೆ ಮಾತನಾಡಿದ ಪದ್ಮಶ್ರೀ ಪುರಸ್ಕೃತ ಹರೇಕಳ ಹಾಜಬ್ಬ, ನಾನು ಒಂದು ಸಲ ವಿಮಾನ ಪ್ರಯಾಣಿಸುವ ಸಂದರ್ಭ ಅಲ್ಲಿನ ಸಿಬ್ಬಂದಿಗಳು ನನ್ನನ್ನು ಗುರುತಿಸಿ ಎಲ್ಲರಿಗೂ ಪರಿಚಯಿಸಿದ ಕ್ಷಣ ಮತ್ತು ದೊರೆತ ಚಪ್ಪಾಳೆಗಳು ನನ್ನ ಜೀವನದ ಅತ್ಯಂತ ಸಂತಸದ ಕ್ಷಣಗಳಾಗಿವೆ. ಜೀವನದಲ್ಲಿ ಸಾಧನೆ ಮಾಡಿದ ಇಬ್ಬರು ಪೈಲಟ್‌ಗಳನ್ನು ಸನ್ಮಾನಿಸಲ್ಪಟ್ಟಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ ಎಂದು ಸಂತಸ ವ್ಯಕ್ತಪಡಿಸಿದರು.

ಪ್ರಕೃತಿ ಸಿ. ಶೆಟ್ಟಿ ಮಾತನಾಡಿ, ಆರಂಭದಲ್ಲಿ ವಿಮಾನ ಹಾರಾಟದ ವೇಳೆ ನನಗೆ ಯಾವುದೇ ಭಯ ಅನ್ನಿಸಲಿಲ್ಲ, ಜೀವನದಲ್ಲಿ ಶ್ರದ್ಧೆ ಇದ್ದರೆ ಏನನ್ನೂ ಸಾಧಿಸಬಹುದು. ಯುಎಇಯಲ್ಲಿ ನನ್ನ ಎಲ್ಲಾ ಶಿಕ್ಷಣವನ್ನು ಮುಗಿಸಿದ್ದೇನೆ. 6000 ಗಂಟೆಗಳ ಹಾರಾಟದ ಅನುಭವ ನನ್ನ ಜೀವನದ ದೊಡ್ಡ ಸಾಧನೆ. ನನ್ನ ತಂದೆ-ತಾಯಿಯ ಪ್ರೇರಣೆಯೇ ಇಂದು ನನ್ನನ್ನು ಈ ಮಟ್ಟಕ್ಕೆ ತಲುಪಿಸಿದೆ ಎಂದು ಹೇಳಿದರು. ನಮೋ ಮೋಯರ್ ಗ್ಲೋಬಲ್ ಫೌಂಡೇಶನ್ ಅಧ್ಯಕ್ಷ ರವಿ ಉಚ್ಚಿಲ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪ ರಾಜ್ ಬಿ.ಎನ್., ನಿವೃತ್ತ ಶಿಕ್ಷಕಿ ಪಾವನ , ಉದ್ಯಮಿ ಹರಿದಾಸ್ ಮಾಡೂರು, ಭುವನಾ ಶಶಿಧರ್, ಭರತ್ ರಾಜ್ ಸನಿಲ್, ಶಶಿಧರ್ ಪೊಯ್ಯತ್ತಬೈಲ್, ವಜ್ರ ಗುಜರನ್ ಹಾಗೂ ಗಣೇಶ್ ತಲಪಾಡಿ ಮೊದಲಾದವರು ಉಪಸ್ಥಿತರಿದ್ದರು.

ಸುಳ್ಯದ ಸ್ವರ್ಣಂ ಜ್ಯುವೆಲ್ಸ್‌ನಲ್ಲಿ 'ಬೆಳ್ಳಿ ಖರೀದಿ ಹಬ್ಬ'ಕ್ಕೆ ಚಾಲನೆ



ಸುಳ್ಯ: ಇಲ್ಲಿನ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದ ಎದುರಿನ ಸೂಂತೋಡು ಎಂಪೋರಿಯಂನಲ್ಲಿ ಕಾರ್ಯ ಚರಿಸುತ್ತಿರುವ ಸ್ವರ್ಣಂ ಜ್ಯುವೆಲ್ಸ್‌ನಲ್ಲಿ ಬೆಳ್ಳಿ ಖರೀದಿ ಹಬ್ಬಕ್ಕೆ ಮೇ 15 ರಂದು ಸಂಜೆ ಚಾಲನೆ ನೀಡಲಾಯಿತು.

ಜೇಸಿಐ ಸುಳ್ಯ ಸಿಟಿ ಅಧ್ಯಕ್ಷೆ ನಾಗವೇಣಿ ಮತ್ತು ಭರತನಾಟ್ಯ ಶಿಕ್ಷಕಿ ಇಂದುಮತಿ ನಾಗೇಶ್ ಅವರು ದೀಪ ಬೆಳಗಿಸಿ, ಬೆಳ್ಳಿ ಹಬ್ಬಕ್ಕೆ ಶುಭ ಹಾರೈಸಿದರು.

ಪತ್ರಕರ್ತ ಯಶ್ವಿತ್ ಕಾಳಮ್ಮನೆ, ಸ್ವರ್ಣಂ ಸಂಸ್ಥೆಯ ಪಾಲುದಾರಾದ ಭವಿತ್, ಲೋಕೇಶ್, ಸಿಬ್ಬಂದಿ ಅಶ್ವಿನಿ ಪ್ರವೀಣ್, ಶೋಧನ್, ಬೇಬಿ ವಾಮಿಕ ಉಪಸ್ಥಿತರಿದ್ದರು.

ಸಂಸ್ಥೆಯ ಪಾಲುದಾರ ಪ್ರವೀಣ್ ಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಇನ್ನೋರ್ವ ಪಾಲುದಾರ ಸಂಜೀವ ವಂದಿಸಿದರು.

ವಿಶೇಷ ಆಕರ್ಷಣೆಯಾಗಿ ಆಂಟಿಕ್ ಗೋಲ್ಡ್ ಕೋಟೆಡ್ ಸಿಲ್ವರ್ ಆಭರಣಗಳು ಸಂಸ್ಥೆಯಲ್ಲಿದ್ದು, ಬೆಳ್ಳಿ ಆಭರಣ ಖರೀದಿಗಳಲ್ಲಿ 10 ಶೇ. ವರೆಗೆ ರಿಯಾಯಿತಿ, ಹಳೆಯ ಬೆಳ್ಳಿ ಆಭರಣಗಳನ್ನು ಎಂಕ್ಸ್‌ಚೇಂಜ್ ಮಾಡಿ ಹೊಸ ಬೆಳ್ಳಿ ಆಭರಣಗಳನ್ನು ಕೂಡ ಖರೀದಿಸಬಹುದು ಎಂದು ಪಾಲುದಾರರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ನಿಟ್ಟೆ ಸಂಸ್ಥೆಯಲ್ಲಿ ಅಂತರಾಷ್ಟ್ರೀಯ ಶುಶ್ರೂಷಕಿಯರ ದಿನಾಚರಣೆ, ಸನ್ಮಾನ



ಮಂಗಳೂರು: ನಿಟ್ಟೆ ಉಷಾ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್ ಇದರ ವಿದ್ಯಾರ್ಥಿ ಶುಶ್ರೂಷಕಿಯರ ಸಂಘ (ಎಸ್ ಎನ್‌ಎ) ಮಂಡಳಿಯಿಂದ ಇತ್ತೀಚೆಗೆ ಸಂಸ್ಥೆಯ ಕ್ಷೇಮ ಆಡಿಯಟೋರಿಯಂನಲ್ಲಿ ಎಸ್‌ಎನ್‌ಎ ಸಲಹೆಗಾರ್ತಿ ಶೆರಿಲ್ ಫರ್ನಾಂಡಿಸ್ ಅವರ ಮಾರ್ಗದರ್ಶನದಲ್ಲಿ ಅಂತರಾಷ್ಟ್ರೀಯ ಶುಶ್ರೂಷಕಿಯರ ದಿನಾಚರಣೆ ಆಚರಿಸಲಾಯಿತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಕೊರಿನ್ ರಸ್ಕಿನ್ಹಾ, ಸಂಸ್ಥಾಪಕಿ ವೈಟ್ ಡವ್ಸ್ ಆಗಮಿಸಿ, ಅವರ ಅವಿಸ್ಮರಣೀಯ ಸೇವೆ ಮತ್ತು ನಿಸ್ವಾರ್ಥ ಕೊಡುಗೆಗಾಗಿ ಅವರನ್ನು ಅಭಿನಂದಿಸಲಾಯಿತು. ಬಳಿಕ ಮಾತನಾಡಿದ ಅವರು, ಶುಶ್ರೂಷಕಿಯರ ನಿಜವಾದ ಅರ್ಥವು ಕರುಣೆ, ಕಾಳಜಿ ಮತ್ತು ಮಾನವೀಯತೆಯಲ್ಲಿದೆ ಎಂದರು.

ಪ್ರಾಂಶುಪಾಲರಾದ ಡಾ. ಪ್ರೊ. ಫಾಟಿಮಾ ಡಿ'ಸಿಲ್ವಾ ಅಧ್ಯಕ್ಷತೆ ವಹಿಸಿ, ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಶುಶ್ರೂಷಕಿಯರ ಮಹತ್ವದ ಪಾತ್ರ ಮತ್ತು ಶುಶ್ರೂಷಕಿ ವಿದ್ಯಾರ್ಥಿಗಳ ಜವಾಬ್ದಾರಿಯನ್ನು ಒತ್ತಿಹೇಳಿದರು.

ಅಂತರರಾಷ್ಟ್ರೀಯ ಶುಶ್ರೂಷಕಿಯರ ದಿನಾಚರಣೆಯ ಅಂಗವಾಗಿ ನಡೆಸಲಾದ ಅಂತರ್ ಕಾಲೇಜು ರೀಲ್ ಸ್ಪರ್ಧೆಯ ಬಹುಮಾನಗಳನ್ನು ಎಸ್‌ಎನ್‌ಎ ಸಲಹೆಗಾರ್ತಿ ಶೆರಿಲ್ ಫರ್ನಾಂಡಿಸ್ ಘೋಷಿಸಿದರು. ಪ್ರಥಮ ಬಹುಮಾನವನ್ನು ಸೇಂಟ್ ಇಗ್ನೇಷಿಯಸ್ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್ ಸೈನ್ಸಸ್, ಹೊನ್ನಾವರ ಪಡೆದಿದ್ದು, ದ್ವಿತೀಯ ಬಹುಮಾನವನ್ನು ಕೆ. ಪಾಂಡ್ಯರಾಜ್ ಬಳ್ಳಾಲ್ ನರ್ಸಿಂಗ್ ಕಾಲೇಜ್, ಮಂಗಳೂರು ಪಡೆದಿದೆ. ವೇದಿಕೆಯಲ್ಲಿ ಕ್ಲೀಟಾ ಅನ್ಸೆಲ್ಮ್ ಪಿಂಟೋ, ಪ್ರಾಂಶುಪಾಲರು, ಸ್ಕೂಲ್ ಆಫ್ ನರ್ಸಿಂಗ್, ಹಾಗೂ ಪರ್ಲ್ ರಿಯಾ ಡಿಸೋಜಾ, ಎಸ್‌ಎನ್‌ಎ ಉಪಾಧ್ಯಕ್ಷೆ ಉಪಸ್ಥಿತರಿದ್ದರು.

ಸರಾಗ ವಿದ್ಯುತ್ ಸಂಪರ್ಕ ಕಲ್ಪಿಸಿ: ಅಧಿಕಾರಿಗಳಿಗೆ ನಾಗರಿಂದ ಮನವಿ



ಸುಳ್ಯ: ಸುಳ್ಯ ಮೆಸ್ಕಾಂ ವತಿಯಿಂದ ಗ್ರಾಹಕರ ಸಭೆಯು ಸುಳ್ಯ ಎಇಇ ಹರೀಶ್ ನಾಯ್ಕ್ ಅಧ್ಯಕ್ಷತೆಯಲ್ಲಿ ಮೆಸ್ಕಾಂ ಕಚೇರಿಯಲ್ಲಿ ಶನಿವಾರ ನಡೆಯಿತು.

ಈ ಸಂದರ್ಭ ಅಜ್ಜಾವರ ಗ್ರಾಮದ ಅಡ್ಪಂಗಾಯ ಎಂಬ ಪ್ರದೇಶಕ್ಕೆ ಮಂಡೆಕೋಲು ಫೀಡರ್ ಇದ್ದು, ಸುಳ್ಯಕ್ಕೂ ಫೀಡರ್ ನೀಡ ಬೇಕು. ಇಡೀ ಗ್ರಾಮವೇ ಸುಳ್ಯಕ್ಕೆ ಸೇರ್ಪಡೆ ಯಾಗಿದ್ದರೆ ಅಡ್ಪಂಗಾಯ ಮಾತ್ರ ಮಂಡೆಕೋಲಿನಲ್ಲಿ ಉಳಿದಿದೆ ಎಂದು ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಅಬ್ಬಾಸ್ ಎ.ಬಿ. ವಿವರಿಸಿದರು.

ಎಇ ಸುಪ್ರಿತ್, ಅಜ್ಜಾವರ ಗ್ರಾಮದಲ್ಲಿ 118 ಪರಿವರ್ತಕ ಹಾಗೂ ಮಂಡೆಕೋಲು ಗ್ರಾಮದಲ್ಲಿ 148 ಪರಿವರ್ತಕಗಳು ಇವೆ ಎಂದು ತಿಳಿಸಿದರು. ಕೆಆರ್‌ಎಸ್ ಪಕ್ಷದ ಕಾರ್ಯಕರ್ತರು ಆಗಮಿಸಿ ಮಾತನಾಡಿ, ವಿದ್ಯುತ್ ತಂತಿಗಳ ಬಳಿಯಲ್ಲಿನ ಮರದ ರೆಂಬೆ ಕೊಂಬೆಗಳನ್ನು ಕಡಿದು ಸುಗಮವಾಗಿ ವಿದ್ಯುತ್ ಪೂರೈಕೆಯಾಗುವಂತೆ ಮಾಡಬೇಕು ಹಾಗೂ ಮಾಹಿತಿ ಹಕ್ಕಿನಲ್ಲಿ ಸಿಕ್ಕಿರುವ ಮಾಹಿತಿಯಂತೆ 15 ತಿಂಗಳಿನಲ್ಲಿ ಸರಿ ಸುಮಾರು 1510 ಕಂಬಗಳಿಗೆ ಹಾನಿಯಾಗಿ 3 ಕೋಟಿ 18 ಲಕ್ಷ ನಷ್ಟವಾಗಿದೆ ಎಂದರು. ಮೆಸ್ಕಾಂ ಅಧಿಕಾರಿಗಳು ಮಾತನಾಡಿ, ವಿದ್ಯುತ್ ತಂತಿಗಳ ಅಡಿಯಲ್ಲಿ ಅರಣ್ಯ ಇಲಾಖೆ ಗಿಡಗಳನ್ನು ನೆಡುವುದರಿಂದ ಈ ರೀತಿಯ ಸಮಸ್ಯೆ ಆಗುತ್ತಿದೆ. ಮುಂದೆ ಲೈನ್‌ಗಳಿಗೆ ತಾಕಿಕೊಂಡಿರುವ ಕೊಂಬೆಗಳನ್ನು ಕಡಿಯಲಾಗುವುದು ಎಂದು ಹೇಳಿದರು.

ಜನರಿಗೆ ಬೇಕಾಗುವ ರೀತಿಯಲ್ಲಿ ಸರಕಾರಗಳು ಕಾನೂನು ತರಬೇಕು. ವಿದ್ಯುತ್ ತಂತಿಗಳ ಗೆಲ್ಲುಗಳನ್ನು ಕಡಿಯಲು ನಿಮಗೆ ಸಮಸ್ಯೆ ಇದ್ದಲ್ಲಿ ನಾವು ಕಡಿಯುತ್ತೇವೆ. ನಮ್ಮ ಜೊತೆಗೆ ಬಂದು ನಿಂತುಕೊಳ್ಳಿ ಎಂದು ಅಶ್ರಫ್ ಎ.ಬಿ. ಸಹಿತ ಮೆಸ್ಕಾಂ ಸಲಹ ಸಮಿತಿ ಸದಸ್ಯರು ಹಾಗೂ ಗ್ರಾಹಕರು ಸಭೆಯಲ್ಲಿ ಹೇಳಿದರು. ಸಭೆಯಲ್ಲಿ ಜೆಇಗಳಾದ ಪ್ರಸಾದ್ ಕತ್ಲಡ್ಕ, ಪರಶುರಾಮ್, ಉಪಸ್ಥಿತರಿದ್ದರು.

ಬೆನಕ ಹೆಲ್ತ್ ಸೆಂಟರ್‌ನ ಬಂಜೆತನ ನಿವಾರಣೆ ವಿಭಾಗಕ್ಕೆ ಸರಕಾರ ಮಾನ್ಯತೆ



ಬೆಳ್ತಂಗಡಿ: ಉಜಿರೆಯ NABH ಪುರಸ್ಕೃತ ಬೆನಕ ಹೆಲ್ತ್ ಸೆಂಟರ್‌ಗೆ ಕರ್ನಾಟಕ ಸರಕಾರದ ಆರೋಗ್ಯ ಇಲಾಖೆಯಲ್ಲಿ ART and SURROGACY & PCPNDT(ಕೃತಕ ಸಂತಾನೋತ್ಪತ್ತಿ ತಂತ್ರಜ್ಞಾನ ಮತ್ತು ಬಾಡಿಗೆ ತಾಯ್ತನ) ವಿಭಾಗದ ಉಪ ನಿರ್ದೇಶಕರಾದ ಡಾ.ವಿವೇಕ್ ದೊರೈ ಅವರು ಭೇಟಿ ನೀಡಿದರು.

ಬಳಿಕ ಬೆನಕ ಆಸ್ಪತ್ರೆಯಲ್ಲಿ ನೂತನವಾಗಿ ಪ್ರಾರಂಭಗೊಂಡ IUI clinic (Level – I ART Clinic) Intrauterine Insemination ವಿಭಾಗವನ್ನು ಪರಿಶೀಲಿಸಿ ವಿಭಾಗದ ವೈದ್ಯ ಡಾ.ನವ್ಯ ಭಟ್ (MBBS, MS, OBG FRM) ಅವರಿಂದ ಕ್ಲಿನಿಕ್ ಕುರಿತು ಚರ್ಚಿಸಿ ಕ್ಲಿನಿಕ್ ಅನ್ನು ತೆರೆಯಲು ಕರ್ನಾಟಕ ಸರ್ಕಾರದ ಪರವಾಗಿ ಅನುಮತಿ ನೀಡಿದರು. ಡಾ. ವಿವೇಕ್ ದೊರೈ ಅವರನ್ನು ಡಾ.ಗೋಪಾಲಕೃಷ್ಣ ಮತ್ತು ಡಾ.ಭಾರತಿ ದಂಪತಿಗಳು ಬರಮಾಡಿಕೊಂಡು ಆಸ್ಪತ್ರೆಯ ಎಲ್ಲ ವಿಭಾಗಳನ್ನು ಪರಿಚಯಿಸಿದರು.

ಕಾರ್ಯವೈಖರಿಗೆ ಮೆಚ್ಚುಗೆ

ಡಾ. ವಿವೇಕ್ ದೊರೈ ಅವರು ಉಜಿರೆಯಂಥ ಗ್ರಾಮೀಣ ಪ್ರದೇಶದಲ್ಲಿ ಇಷ್ಟೊಂದು ಸೌಲಭ್ಯ ನೀಡುತ್ತಿರುವ ಬೆನಕ ಆಸ್ಪತ್ರೆಯ ಕಾರ್ಯವೈಖರಿಗೆ ಮೆಚ್ಚುಗೆ ಸೂಚಿಸಿ IUI ಸೆಂಟರ್ / level & 2 ಕ್ಲಿನಿಕ್ ಆದಷ್ಟು ಬೇಗ ಬರಲಿ ಮತ್ತು ಪರಿಸರದ ಸಾರ್ವಜನಿಕರಿಗೆ ಪ್ರಯೋಜನವಾಗಲಿ ಎಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಆಸ್ಪತ್ರೆಯ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞೆ ಹಾಗೂ ಪೆಲ್ವಿಕ್ ಸರ್ಜನ್ ಡಾ.ಅಂಕಿತಾ ಜಿ ಭಟ್ ಉಪಸ್ಥಿತರಿದ್ದರು.

ಅಪಾಯಕಾರಿಯಾಗಿ ಪಾದಚಾರಿ ಮಾರ್ಗ | ರಾತ್ರಿ ಬೀದಿ ದೀಪದ ವ್ಯವಸ್ಥೆಯೂ ಇಲ್ಲಿಲ್ಲ

ನಿಡಿಗಲ್ ಸೇತುವೆಯ ಫುಟ್‌ಪಾತ್ ನಂಬಿದರೆ ನದಿ ಪಾಲು?

ಬೆಳ್ತಂಗಡಿ: ನೇತ್ರಾವತಿ ನದಿಯ ನಿಡಿಗಲ್ ಸೇತುವೆಯ ಫುಟ್‌ಪಾತ್ ನಂಬಿ ಇದರ ಮೂಲಕ ನಡೆದುಕೊಂಡು ಹೋದರೆ ಪಾದಚಾರಿಗಳು ನೇರ ನದಿಗೆ ಬೀಳುವ ಸಾಧ್ಯತೆ ಹೆಚ್ಚಾಗಿದೆ.



ಪುಂಜಾಲಕಟ್ಟೆಯಿಂದ ಚಾರ್ಮಾಡಿ ತನಕದ ಸುಮಾರು 35 ಕಿ.ಮೀ. ವ್ಯಾಪ್ತಿಯಲ್ಲಿ ಮಂಗಳೂರು-ವಿಲ್ಲುಪುರಂ ರಾಷ್ಟ್ರೀಯ ಹೆದ್ದಾರಿಯ ಅಭಿವೃದ್ಧಿ ಕಾಮಗಾರಿ ಕಳೆದ 3 ವರ್ಷಗಳಿಂದ ನಡೆಯುತ್ತಿದ್ದು ಅವೈಜ್ಞಾನಿಕವಾಗಿ ಕೂಡಿದೆ. ಇದೀಗ ನಿಡಿಗಲ್ ಸೇತುವೆ ಸಮೀಪ ನಡೆದಿರುವ ಫುಟ್ ಪಾತ್ ಕಾಮಗಾರಿ ಪಾದಚಾರಿಗಳಿಗೆ ಸಿಂಹಸ್ವಪ್ನವಾಗಿದೆ. ಸೇತುವೆಯ ಫುಟ್‌ಪಾತ್‌ನಿಂದ ಹೊಸ ರಸ್ತೆಗೆ ಸಂಪರ್ಕ ನೀಡುವ ಸ್ಥಳದಲ್ಲಿ ಸೇತುವೆಯ ಫುಟ್ ಪಾತ್ ನಿಂದ, ಹೊಸದಾಗಿ ನಿರ್ಮಾಣವಾದ ರಸ್ತೆಯ ಫುಟ್ ಪಾತ್‌ಗೆ ನೇರ ಸಂಪರ್ಕ ನೀಡಲಾಗಿಲ್ಲ. ಒಂದು ಫುಟ್ ಪಾತ್‌ನಿಂದ ಇನ್ನೊಂದು ಫುಟ್‌ಪಾತ್‌ಗೆ ಬರಲು ಜಾಗವೇ ಇಲ್ಲ. ಒಂದು ವೇಳೆ ಸೇತುವೆ ಸೇತುವೆಯ ಫುಟ್ ಪಾತ್ ನಿಂದ ರಸ್ತೆಯ ಫುಟ್‌ಪಾತ್‌ಗೆ ಹೋಗಬೇಕಾದರೆ ಭಾರಿ ಸಾಹಸವನ್ನೇ ಮಾಡಬೇಕಿದೆ. ಸೇತುವೆಯ ಫುಟ್‌ಪಾತ್‌ನಿಂದ ರಸ್ತೆಯ ಫುಟ್ ಪಾತ್‌ಗೆ ಹೋಗಬೇಕಾದರೆ ಕೆಳಭಾಗದಲ್ಲಿ ಆಳವಾದ ಕಣಿವೆ ಪ್ರದೇಶ ಇರುವಲ್ಲಿ ಹಲವು ಅಡಿ ದೂರವನ್ನು ಹಾರಿಯೆ ಹೋಗಬೇಕಾಗಿದೆ. ಈ ವೇಳೆ ಸ್ವಲ್ಪ ಎಚ್ಚರ ತಪ್ಪಿದರೂ ಪಾದಚಾರಿಗಳು ನದಿ ಪ್ರದೇಶದ ಕಣಿವೆಗೆ ಬೀಳುವುದು ಖಚಿತ. ಒಟ್ಟಾರೆಯಲ್ಲಿ ಆಡಳಿತ ವರ್ಗ ಕೂಡಲೇ ಎಚ್ಚೆತ್ತು ಕ್ರಮ ವಹಿಸಬೇಕಿದೆ.

ರಾತ್ರಿ ಮತ್ತಷ್ಟು ಅಪಾಯ

ಹಗಲಲ್ಲೇ ಅಪಾಯಕಾರಿಯಾಗಿರುವ ಇದು ರಾತ್ರಿ ಹೊತ್ತು ಇನ್ನಷ್ಟು ಅಪಾಯ ಸೃಷ್ಟಿಸುತ್ತದೆ. ಸೇತುವೆ ಪ್ರದೇಶದಲ್ಲಿ ಬೀದಿ ದೀಪಗಳು ಕೂಡ ಇಲ್ಲ, ವಿಚಿತ್ರವೆಂದರೆ ಪಾದಾಚಾರಿಗಳು ಫುಟ್‌ಪಾತ್ ವಿರದಂತೆ ಕಬ್ಬಿಣದ ಗ್ರಿಲ್ಸ್‌ಗಳನ್ನು ಅಳವಡಿಸಲಾಗಿತ್ತು. ಅದು ವೈರಲಾಗಿತ್ತು. ಇದೀಗ ಗ್ರಿಲ್ಸ್‌ಗಳನ್ನು ತೆಗೆದುಹಾಕಲಾಗಿದೆ.

ಪುತ್ತೂರು-ಉಪ್ಪಿನಂಗಡಿ ರಾಜ್ಯ ಹೆದ್ದಾರಿಯ ಅಭಿವೃದ್ಧಿ

ಆರು ತಿಂಗಳಲ್ಲಿ ಪೂರ್ಣ: ಅಶೋಕ್

ಪುತ್ತೂರು: ಪುತ್ತೂರು-ಉಪ್ಪಿನಂಗಡಿ ರಾಜ್ಯ ಹೆದ್ದಾರಿಯ ಅಭಿವೃದ್ಧಿಯ ಭಾಗವಾಗಿ ಪುತ್ತೂರು ನಗರದ ಬೊಳುವಾರಿನಲ್ಲಿ ನಡೆಯುತ್ತಿರುವ ಕಾಂಕ್ರೀಟ್ ಕಾಮಗಾರಿ ಹಾಗೂ ಕಟ್ಟಡಗಳ ತೆರವು ಕಾರ್ಯವನ್ನು ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಅವರು ಶನಿವಾರ ಪರಿಶೀಲನೆ ನಡೆಸಿದರು.



ಈ ವೇಳೆ ಕಾಮಗಾರಿಯ ಪ್ರಗತಿಯ ವಿವರ ಪಡೆದುಕೊಂಡ ಅವರು, ಇರುವ ಸರಕಾರಿ ಜಾಗವನ್ನು ಬಳಕೆ ಮಾಡಿಕೊಂಡು 25-30 ವರ್ಷಗಳ ಯೋಚನೆಯಲ್ಲಿ ಕಾಮಗಾರಿ ನಡೆಸುವಂತೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಸೂಚಿಸಿದರು. ಈ ವೇಳೆ ಪತ್ರಕರ್ತರ ಜತೆಗೆ ಮಾತನಾಡಿದ ಶಾಸಕರು, ನಡೆಸಲಾಗುತ್ತಿದ್ದು, ಬೊಳುವಾರಿನಲ್ಲಿ ಎರಡು ಸರ್ಕಲ್‌ಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ಈ ಕಾಮಗಾರಿ ಮೂರು ತಿಂಗಳಲ್ಲಿ ಪೂರ್ಣಗೊಳ್ಳಲಿದೆ. ನೆಕ್ಕಿಲಾಡಿಯಿಂದ ಉಪ್ಪಿನಂಗಡಿವರೆಗಿನ ಕಾಮಗಾರಿಗೆ ಹೆಚ್ಚುವರಿಯಾಗಿ 13 ಕೋಟಿ ಅನುದಾನ ಮಂಜೂರಾಗಿದ್ದು, ಒಟ್ಟು ರೂ. 49 ಕೋಟಿಗಳಲ್ಲಿ ಪುತ್ತೂರು-ಉಪ್ಪಿನಂಗಡಿ ರಸ್ತೆ ಅಭಿವೃದ್ಧಿಗೊಂಡಂತಾಗುತ್ತದೆ. ಮುಂದಿನ 6 ತಿಂಗಳಲ್ಲಿ ಎಲ್ಲಾ ಕಾಮಗಾರಿಗಳು ಪೂರ್ಣಗೊಳ್ಳಲಿದೆ ಎಂದರು. ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ರಾಜೇಶ್ ರೈ ಅವರು ಶಾಸಕರಿಗೆ ಕಾಮಗಾರಿಗಳ ಕುರಿತು ವಿವರ ನೀಡಿದರು.

ಸುತ್ತಮುತ್ತ

ನಾಳೆ ವಿದ್ಯುತ್ ವ್ಯತ್ಯಯ

ಮಂಗಳೂರು: ಮೇ 18ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ 110/33/11ಕೆವಿ ಕುಲಶೇಖರ ಉಪಕೇಂದ್ರದಿಂದ ಹೊರಡುವ 11ಕೆವಿ ತಾರೆತೋಟ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ, ಬಿಕರ್ನಕಟ್ಟೆ, ತಾತವು, ಜಯಶ್ರೀ ಗೇಟ್, ತಾರೆತೋಟ, ಬಜ್ಜೋಡಿ, ಸಂದೇಶ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿವಿದ್ಯುತ್ ವ್ಯತ್ಯಯ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಶ್ರೀ ಗಣೇಶ ಕ್ರೆಡಿಟ್ ಸಹಕಾರ ಸಂಘ: ರೂ.9.39 ಲಕ್ಷ ಲಾಭ

ಬೈಂದೂರು: ಕುಂದಾಪುರ ತಾಲೂಕಿನ ಹೊಸಾಡು ಮುಳ್ಳಿಕಟ್ಟೆ ಶ್ರೀ ಗಣೇಶ ಕ್ರೆಡಿಟ್ ಸಹಕಾರ ಸಂಘವು 2025-26ನೇ ಸಾಲಿನಲ್ಲಿ ರೂ.9.39 ಲಕ್ಷ ಲಾಭಗಳಿಸಿದೆ. ಸಂಘದಲ್ಲಿ ಎ ತರಗತಿಯ 1009 ಸದಸ್ಯರಿದ್ದು, ರೂ.13,80,400 ಪಾಲು ಬಂಡವಾಳವಿದೆ. ಎಲ್ಲಾ ವಿಧದ ಠೇವಣಾತಿಗಳು ರೂ.7,72,31,000 ಹೊಂದಿದ್ದು, ಸದಸ್ಯರ ಹೊರಬಾಕಿ ಸಾಲ ರೂ.6,24,58,000 ಇರುತ್ತದೆ. ಈ ಪೈಕಿ 65 ಸದಸ್ಯರಿಂದ ರೂ.31,01,000 ಸುಸ್ತಿ ಬಾಕಿ ಇರುತ್ತದೆ. ಸಂಘವು ವಿವಿಧ ಬ್ಯಾಂಕುಗಳಲ್ಲಿ ರೂ.32,62,43,000 ಅನ್ನು ಠೇವಣಿಯಾಗಿ ಇರಿಸಿದೆ. ಸಂಘವು ತನ್ನ ಲಾಭದ, ವಿವಿಧ ನಿಧಿಗಳಿಗೆ ರೂ.24,76,000 ವಿನಿಯೋಗಿಸಿದೆ ಎಂದು ಸಂಘದ ಅಧ್ಯಕ್ಷ ಮುರಳಿಧರ ಐತಾಳ್ ತಿಳಿಸಿದ್ದಾರೆ.

ಮಾನ್ಯತೆ ಪಡೆದ ಮೇಲ್ವಿಚಾರಕರ ನೇಮಕಾತಿ

ಮಂಜೇಶ್ವರ: ಮಂಗಲ್ಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಮಾನ್ಯತೆ ಪಡೆದ ಮೇಲ್ವಿಚಾರಕರ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುವುದು.
ಅರ್ಜಿದಾರರು ತಮ್ಮ ಬಯೋಡೇಟಾ, ಹಿಂದಿನ ಅನುಭವವನ್ನು ಸಾಬೀತುಪಡಿಸುವ ದಾಖಲೆಗಳು ಮತ್ತು ಶೈಕ್ಷಣಿಕ ಅರ್ಹತೆಗಳನ್ನು ಸಾಬೀತುಪಡಿಸುವ ಪ್ರಮಾಣಪತ್ರಗಳೊಂದಿಗೆ ಮೇ 26 ರಂದು ಬೆಳಿಗ್ಗೆ 11 ಗಂಟೆಗೆ ಗ್ರಾಮ ಪಂಚಾಯತ್ ಕಚೇರಿಗೆ ವರದಿ ಮಾಡಬೇಕು. ಹೆಚ್ಚಿನ ವಿವರಗಳಿಗೆ 04998 240221 ಸಂಪರ್ಕಿಸಬಹುದು.

ವಾಹನ ಸಂಚಾರ ನಿಷೇಧ

ಕಾಸರಗೋಡು: ಜಿಲ್ಲೆಯ ಕಣ್ಣೆಪರ - ನೂಂಜಿ ರಸ್ತೆಯಲ್ಲಿ ಕಾಂಕ್ರೀಟ್ ಮತ್ತು ಡಾಮರೀಕರಣ ಕಾಮಗಾರಿ ನಡೆಯುತ್ತಿರುವುದರಿಂದ ಮೇ 16 ರಿಂದ 30ರ ವರೆಗೆ ವಾಹನ ಸಂಚಾರ ನಿಷೇಧಿಸಲಾಗಿದೆ ಎಂದು ಮಡಿಕೈ ಗ್ರಾಮ ಪಂಚಾಯತ್ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇ-ಟೆಂಡರ್ ಆಹ್ವಾನ

ಕಾಸರಗೋಡು: ಉದುಮ ಗ್ರಾಮ ಪಂಚಾಯತ್‌ನ 2026-27ನೇ ವಾರ್ಷಿಕ ಯೋಜನೆಯಡಿ ಸಹಾಯಕ ಇಂಜಿನಿಯರ್‌ಗಳು ಜಾರಿಗೊಳಿಸಿದ ವಿವಿಧ ಯೋಜನೆಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಇ-ಟೆಂಡರ್ ಅರ್ಜಿಯನ್ನು ಮೇ 30ರಂದು ಸಂಜೆ 6 ಗಂಟೆಯೊಳಗೆ ಆನ್‌ಲೈನ್‌ನಲ್ಲಿ ಸಲ್ಲಿಸಬೇಕು. ಜೂನ್ 2 ರಂದು ಬೆಳಿಗ್ಗೆ 11 ಗಂಟೆಗೆ ಇ-ಟೆಂಡರ್ ತೆರೆಯಲಾಗುತ್ತದೆ ಮತ್ತು ಪರಿಶೀಲಿಸಲಾಗುತ್ತದೆ. ಮಾಹಿತಿಗೆ 04672236242 ಅಥವಾ 9496049743 ಸಂಪರ್ಕಿಸಬಹುದು.

ಪಿ.ಗಂಗಾಧರನ್ ನಾಯರ್ ಸಂಸ್ಮರಣೆ

ಮಂಜೇಶ್ವರ: ಕಾಸರಗೋಡು ಜಿಲ್ಲೆಯ ಹಿರಿಯ ಕಾಂಗ್ರೆಸ್ ಮುಖಂಡ, ಮಾಜಿ ಜಿಲ್ಲಾಧ್ಯಕ್ಷ ಪಿ.ಗಂಗಾಧರನ್ ನಾಯರ್ ಅವರ ಸಂಸ್ಮರಣಾ ಕಾರ್ಯಕ್ರಮವು ಪೈವಳಿಕೆ ಮಂಡಲ ಕಾಂಗ್ರೆಸ್ ಸಮಿತಿ ವತಿಯಿಂದ ಜರಗಿತು.
ಗಂಗಾಧರನ್ ನಾಯರ್‌ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನಡೆಸಲಾಯಿತು.
ಮಂಡಲ ಕಾಂಗ್ರೆಸ್ ಸಮಿತಿ ಅಧ್ಯಕ್ಷ ವಸಂತ ಮಾಸ್ತರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯಿಂದ ಕಾಂಗ್ರೆಸ್ ಪಕ್ಷದ ಇಬ್ಬರು ಶಾಸಕರು ಆಯ್ಕೆಯಾಗಿದ್ದಾರೆ. ಗಂಗಾಧರನ್ ನಾಯರ್ ಅವರು ಪಕ್ಷವನ್ನು ಕಟ್ಟಿ ಬೆಳೆಸುವಲ್ಲಿ ಹಾಕಿದ ಭದ್ರ ಅಡಿಪಾಯವೇ ಈ ನಿಟ್ಟಿನಲ್ಲಿ ಪ್ರಧಾನ ಪಾತ್ರ ವಹಿಸಿದೆ ಎಂದು ತಿಳಿಸಿದರು.
ಪಕ್ಷದ ಹಿರಿಯ ಕಾರ್ಯಕರ್ತರಾದ ಅಬ್ದುಲ್ಲ ಶಾ, ಅಸೀಸ್ ಕಟ್ಟೆ, ಎಡ್ವರ್ಡ್ ಡಿಸೋಜ ಮುಂತಾದವರು ಭಾಗವಹಿಸಿದ್ದರು. ಅಬ್ದುಲ್ ರಜಾಕ್ ಸ್ವಾಗತಿಸಿ, ಗಂಗಾಧರ ನಾಯಕ್ ಧನ್ಯವಾದವಿತ್ತರು.

ಸುಳ್ಯ ತಾಲೂಕು ಗ್ಯಾರೆಂಟಿ ಅನುಷ್ಠಾನ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ | ಮುಂಡೋಡಿ ಭರವಸೆ

ಲೈನ್‌ಮೆನ್‌ಗಳ ಕೊರತೆ ನೀಗಿಸಲು ಶೀಘ್ರವೇ ಸೂಕ್ತ ಕ್ರಮ

ಸುಳ್ಯ: ವಿದ್ಯುತ್ ಲೈನ್‌ಗಳ ನಿರ್ವಹಣಾ ಕೆಲಸವನ್ನು ಮೆಸ್ಕಾಂ ಸಿಬ್ಬಂದಿ ಹಾಗೂ ಆಯಾ ಭಾಗದ ಸ್ಥಳೀಯ ಸಂಘಸಂಸ್ಥೆಗಳ ಸದಸ್ಯರ ಜತೆಗೂಡಿ ಮಾಡಲು ಯುವಜನ ಸಂಯುಕ್ತ ಮಂಡಳಿ ಜತೆ ಜಂಟಿ ಸಭೆ ನಡೆಸಿ ನಿರ್ಣಯಿಸಲಾಗುವುದು ಎಂದು ಜಿಲ್ಲಾ ಗ್ಯಾರೆಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಭರತ್ ಮುಂಡೋಡಿ ಹೇಳಿದ್ದಾರೆ.
ಸುಳ್ಯ ತಾಲೂಕು ಗ್ಯಾರೆಂಟಿ ಅನುಷ್ಠಾನ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.



ಮೆಸ್ಕಾಂ ಇಲಾಖೆಯ ಜಂಟಿ ಸಭೆ
ಮೆಸ್ಕಾಂ ಇಲಾಖೆಯಲ್ಲಿ ವಿದ್ಯುತ್‌ಲೈನ್‌ಗಳ ನಿರ್ವಹಣಾ ಕೆಲಸಕ್ಕಾಗಿ ಗ್ಯಾಂಗ್‌ಮೆನ್‌ಗಳ ಕೊರತೆ ಇದೆ. ಈ ಕೊರತೆ ನೀಗಿಸಲು ಮತ್ತು ಕೆಲಸಕ್ಕೆ ವೇಗ ನೀಡುವ ಉದ್ದೇಶದಿಂದ ತುರ್ತು ಕೆಲಸಕ್ಕಾಗಿ ವಾರದ ನಡುವೆ ಉಂಟಾಗುವ ವಿದ್ಯುತ್ ವ್ಯತ್ಯಯಕ್ಕೆ ಬದಲಾಗಿ ಭಾನುವಾರ ವಿದ್ಯುತ್ ಸಂಪರ್ಕ ಕಟ್ ಮಾಡಿ ಆಯಾ ಭಾಗದ ಸಂಘ ಸಂಸ್ಥೆಗಳ ಸದಸ್ಯರ ಸಹಕಾರ ಪಡೆದು ವಿದ್ಯುತ್ ಲೈನ್‌ಗಳ ಬಳಿ ಇರುವ ಮರದ ಗೆಲ್ಲುಗಳ ಕಡಿದು ನಿರ್ವಹಣಾ ಕೆಲಸ ಮಾಡಿದರೆ ಹೆಚ್ಚು ಉತ್ತಮ. ಇದಕ್ಕಾಗಿ ಮೆಸ್ಕಾಂ ಇಲಾಖೆಯ ಜಂಟಿ ಸಭೆ ನಡೆಸಿ ತೀರ್ಮಾಣ ಮಾಡಲಾಗುವುದು ಎಂದು ಭರತ್ ಹೇಳಿದರು.

ಮಳೆ ಬಂದರೆ ಸುಳ್ಯದಲ್ಲಿ ವಿದ್ಯುತ್ತೇ ಇಲ್ಲ
ಸುಳ್ಯದ ವಿದ್ಯುತ್ ಸಮಸ್ಯೆ ನೀಗಿಸುವ ಉದ್ದೇಶದಿಂದ ಬೆಳ್ಳಾರೆಯಿಂದ ಸುಳ್ಯಕ್ಕೆ ವಿದ್ಯುತ್ ಅಂಡರ್ ಗ್ರೌಂಡ್ ಕೇಬಲ್ ಮೂಲಕ ವಿದ್ಯುತ್ ಸಂಪರ್ಕ ಮಾಡಲಾಗಿದೆ. ಆದರೆ ಮಳೆ ಬಂದಾಗ ಸುಳ್ಯದಲ್ಲಿ ಎರಡು ದಿನ ವಿದ್ಯುತ್ ಇರುವುದಿಲ್ಲ, ನಗರ ಸೇರಿ ಗ್ರಾಮೀಣ ಪ್ರದೇಶಗಳು ಕತ್ತಲೆಯಲ್ಲಿರುತ್ತದೆ ಎಂದು ಗ್ಯಾರೆಂಟಿ ಯೋಜನೆ ಸಮಿತಿ ಸದಸ್ಯರು ಹೇಳಿದರು.
ಇದಕ್ಕೆ ಉತ್ತರಿಸಿದ ಮೆಸ್ಕಾಂ ಎ.ಇ. ಸುಪ್ರೀತ್ ಕುಮಾರ್, ಬೆಳ್ಳಾರೆಯಿಂದ ಸುಳ್ಯಕ್ಕೆ ಬಂದ ಅಂಡರ್ ಗ್ರೌಂಡ್ ಕೇಬಲ್ ವಿದ್ಯುತ್ ಸಂಪರ್ಕದಿಂದ ಕಾವುನಲ್ಲಿರುವ ಫೀಡರ್‌ಗೂ ಚಾರ್ಜ್ ಮಾಡಬೇಕಿದೆ. ಇದರಿಂದ ಸುಳ್ಯದ ನಗರಕ್ಕೆ ಮಾತ್ರ ವಿದ್ಯುತ್ ಸಂಪರ್ಕ ನೀಡಿ, ಗ್ರಾಮೀಣ ಭಾಗಗಳಿಗೆ ಸಂಪರ್ಕ ನೀಡಲು ಸಾಧ್ಯವಾಗುತ್ತಿಲ್ಲ ಎಂದರು.

> **ಶಿಸ್ತು ಕ್ರಮವನ್ನು ಕೈಗೊಳ್ಳಲಾಗುವುದು**
> ಮೆಸ್ಕಾಂ ಅಧಿಕಾರಿಗಳ ಮೇಲೆ ಹಲವಾರು ಮಂದಿ ದೂರು ಸಲ್ಲಿಸುತ್ತಿದ್ದಾರೆ. ಕರೆ ಮಾಡಿದರೆ ಕರೆ ಸ್ವೀಕಾರ ಮಾಡುವುದಿಲ್ಲ, ಪ್ರತಿ ಇಲಾಖೆಗೆ ಸರಕಾರಿ ಸಿಮ್ ವಿತರಣೆ ಮಾಡಲಾಗಿದೆ. ಕರೆ ಸ್ವೀಕಾರ ಮಾಡದಿದ್ದರೆ ಮೊಬೈಲ್‌ನಲ್ಲಿ ಫೋನ್ ಮಾಡಿದರೆ ಸ್ಕ್ರೀನ್ ಶಾಟ್ ತೆಗೆದು ಜಿಲ್ಲಾಧಿಕಾರಿಗೆ ದೂರು ನೀಡುತ್ತೇವೆ. ದುರ್ನಡತೆ ತೋರಿದ ಅಧಿಕಾರಿಗಳಿಗೆ ನೋಟಿಸ್ ನೀಡಿ ನೇರವಾಗಿ ಶಿಸ್ತು ಕ್ರಮ ಕೈಗೊಳ್ಳಲು ಸೂಚನೆ ನೀಡಲಾಗುವುದು.
> ● ಭರತ್ ಮುಂಡೋಡಿ

ಅಂಡರ್ ಗ್ರೌಂಡ್ ಕೇಬಲ್ ಅಳವಡಿಸಲಾಗಿದೆ
ಮಳೆಗಾಲದಲ್ಲಿ ಸುಳ್ಯಕ್ಕೆ ವಿದ್ಯುತ್ ಸಮಸ್ಯೆ ಆಗಬಾರದು ಎಂದು ಅಂಡರ್ ಗ್ರೌಂಡ್ ಕೇಬಲ್ ಅಳವಡಿಸಿಕೊಳ್ಳಲಾಗಿದೆ. ಸುಳ್ಯಕ್ಕೆ ಸಂಪರ್ಕ ಕಲ್ಪಿಸುವ ಬದಲು ಪುತ್ತೂರಿನ ಕಾವು ಭಾಗಕ್ಕೆ ಸಂಪರ್ಕ ನೀಡುವುದು ಯಾಕೆ ಎಂದು ಭರತ್ ಮುಂಡೋಡಿ ಪ್ರಶ್ನಿಸಿದರು. .
ತಾಲೂಕು ಗ್ಯಾರೆಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಶಾಹುಲ್ ಹಮೀದ್ ಕುತ್ತಮೊಟ್ಟೆ, ತಾ.ಪಂ.ಇಒ ರಾಜಣ್ಣ, ಸಮಿತಿ ಸದಸ್ಯರಾದ ಭವಾನಿಶಂಕರ ಕಲ್ಮಡ್ಕ, ಅಬ್ಬಾಸ್ ಅಜ್ಜಾವರ, ಈಶ್ವರ ಆಳ್ವ, ಧನುಶ್ ಕುಕ್ಕೆಟ್ಟಿ, ರವಿ ಗುಂಡಡ್ಕ, ವಿಜೇಶ್ ಹಿರಿಯಡ್ಕ, ಸೋಮಶೇಖರ ಕೇವಳ, ಇಬ್ರಾಹಿಂ ಶಿಲ್ಪ, ಜ್ಞಾನಶೀಲನ್, ಲತೀಫ್ ಅಡ್ಕಾರ್, ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.


ಪೈಪ್‌ಲೈನ್ ಕಾಮಗಾರಿಗೆ ಕಾಂಕ್ರೀಟ್ ರಸ್ತೆಗೆ ಕತ್ತರಿ: ಸ್ಥಳೀಯರಿಂದ ತರಾಟೆ



ಮುಲ್ಕಿ: ಕಿನ್ನಿಗೋಳಿ ಮುಲ್ಕಿ ರಾಜ್ಯ ಹೆದ್ದಾರಿಯಲ್ಲಿ ಅವೈಜ್ಞಾನಿಕ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ ಎರ್ರಾಬಿರ್ರಿಯಾಗಿ ನಡೆಯುತ್ತಿದ್ದು ಹೇಳುವವರು ಕೇಳುವವರು ಯಾರು ಇಲ್ಲದಂತಾಗಿದೆ.
ಮುಲ್ಕಿ ನಗರ ಪಂಚಾಯತ್ ವ್ಯಾಪ್ತಿಯ ಕಾರ್ನಾಡ್ ಗಾಂಧಿ ಮೈದಾನದ ಬಳಿಯಲ್ಲಿ ಅಮೃತ್ 2.0 ಕುಡಿಯುವ ನೀರಿನ ಪೈಪ್ ಲೈನ್ ಕಾಮಗಾರಿ ನಡೆಯುತ್ತಿದ್ದು, ಪೈಪ್‌ಲೈನ್ ಹಾಕಲು ಕಾರ್ನಾಡ್ ಸರಕಾರಿ ಪ.ಪೂ. ಕಾಲೇಜು ಸಂಪರ್ಕಿಸುವ ಸುಸಜ್ಜಿತ ಕಾಂಕ್ರೀಟ್ ರಸ್ತೆಯನ್ನು ತುಂಡರಿಸುತ್ತಿದ್ದಾಗ ಸ್ಥಳೀಯರು ಆಕ್ಷೇಪ ಮಾಡಿದ್ದಾರೆ.
ತಾಲೂಕು ಭೂ ನ್ಯಾಯ ಮಂಡಳಿಯ ಸದಸ್ಯರಾದ ಶಂಕರ್ ಪಡಂಗ ಕಾಮಗಾರಿಯನ್ನುನಿಲ್ಲಿಸುವಂತೆತಾಕೀತುಮಾಡಿದ್ದಾರೆ.. ಹಾಗೂ ಮುಲ್ಕಿ ನಗರ ಪಂಚಾಯತ್ ಮುಖ್ಯಾಧಿಕಾರಿಗೆ ದೂರು ನೀಡಿದ್ದಾರೆ ಬಳಿಕ ನಗರ ಪಂಚಾಯತ್ ಮುಖ್ಯಾಧಿಕಾರಿ ಮಧುಕರ್ ಮಧ್ಯ ಪ್ರವೇಶಿಸಿ ತುಂಡರಿಸಿದ ಕಾಂಕ್ರೀಟ್ ರಸ್ತೆಯನ್ನ ಪೈಪ್ ಲೈನ್ ಅಳವಡಿಸಿದ ಮೇಲೆ ಸರಿಯಾಗಿ ದುರಸ್ತಿ ಪಡಿಸಬೇಕು ಎಂಬ ಸೂಚನೆ ಮೇರೆಗೆ ಕಾಮಗಾರಿಗೆ ಅನುಮತಿ ನೀಡಲಾಗಿದೆ.

ಪ್ರತಿಭಟನೆ ನಡೆಸಲಾಗುವುದು
ಈ ಸಂದರ್ಭ ಶಂಕರ್ ಪಡಂಗ ಮಾಧ್ಯಮದೊಂದಿಗೆ ಮಾತನಾಡಿ, ಕಿನ್ನಿಗೋಳಿ ಮೂಡಬಿದ್ರೆ ರಾಜ್ಯ ಹೆದ್ದಾರಿ ಬದಿಯಲ್ಲಿ ಅಮೃತ್ ಕುಡಿಯುವ ನೀರಿನ ಪೈಪ್‌ಲೈನ್ ಗುತ್ತಿಗೆದಾರರು ಅವೈಜ್ಞಾನಿಕ ರೀತಿಯಲ್ಲಿ ಕಾಮಗಾರಿ ನಡೆಸುತ್ತಿದ್ದು, ಎಲ್ಲೆಂದರಲ್ಲಿ ಕಚ್ಚಾ ರಸ್ತೆ ಹಾಗೂ ಸುಸಜ್ಜಿತ ಕಾಂಕ್ರೀಟ್ ರಸ್ತೆ ಯನ್ನು ಅಗೆದು ಹಾಕಿ ಅರ್ಧಂಬರ್ಧ ಕಾಮಗಾರಿ ನಡೆಸಿದ್ದಾರೆ. ಅವರ ನಿರ್ಲಕ್ಷ ಕಾಮಗಾರಿ ಸರಿಪಡಿಸದಿದ್ದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದ್ದಾರೆ.

ನಿಡಿಗಲ್-ಸೋಮಂತಡ್ಕದಲ್ಲಿ ಸಿಸಿ ಕ್ಯಾಮರಾ ಅಳವಡಿಕೆ: ತ್ಯಾಜ್ಯ ಎಸೆತಕ್ಕೆ ಬೀಳಲಿದೆ ಕಡಿವಾಣ!



ಬೆಳ್ತಂಗಡಿ: ಮಂಗಳೂರು-ವಿಲ್ಲುಪುರಂ ರಾಷ್ಟ್ರೀಯ ಹೆದ್ದಾರಿಯ ಮುಂಡಾಜೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಿಡಿಗಲ್-ಸೋಮಂತಡ್ಕ ರಸ್ತೆಯಲ್ಲಿ ಸಿಸಿ ಕ್ಯಾಮೆರಾ ಅಳವಡಿಸಿರುವುದು ಸುಲಭ ಕಾರ್ಯಾಚರಣೆಯೊಂದಕ್ಕೆ ಸಾಕ್ಷಿಯಾಯಿತು.
ಶನಿವಾರ ಬೆಳಿಗ್ಗೆ ಈ ರಾಷ್ಟ್ರೀಯ ಹೆದ್ದಾರಿ ಬದಿ ತಾತ್ಕಾಲಿಕ ಅಂಗಡಿಯೊಂದು ತಲೆ ಎತ್ತುತ್ತಿದ್ದಂತೆ ಸಿಸಿ ಕ್ಯಾಮೆರಾ ಮೂಲಕ ಈ ದೃಶ್ಯಗಳು ಸೆರೆಯಾದವು. ತಮ್ಮ ಮೊಬೈಲ್‌ನಲ್ಲಿ ಇದನ್ನು ಗಮನಿಸಿದ ಪಿಡಿಒ ತಕ್ಷಣ ಅಂಗಡಿಯನ್ನು ತೆರವುಗೊಳಿಸುವ ಕಾರ್ಯಾಚರಣೆ ನಡೆಸಿದರು. ಜನ ವಾಹನ ದಟ್ಟಣೆ ಹೆಚ್ಚುವ ಮೊದಲೇ ಪಂಚಾಯತ್ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಅಂಗಡಿಯನ್ನು ತೆರವುಗೊಳಿಸುವ ಕ್ರಮ ಕೈಗೊಂಡರು.
ನಿಡಿಗಲ್-ಸೋಮಂತಡ್ಕ ಪ್ರದೇಶದ 4 ಕಿ.ಮೀ. ರಸ್ತೆ ವ್ಯಾಪ್ತಿಯಲ್ಲಿ 5 ಸಿಸಿ ಕ್ಯಾಮರಾಗಳು ಕಾರ್ಯನಿರ್ವಹಿಸುತ್ತಿದ್ದು ಇದು ಅನಗತ್ಯ ಚಟುವಟಿಕೆಗಳಿಗೆ ಕಡಿವಾಣ ಹಾಕಲು ತ್ಯಾಜ್ಯ ತಂದು ಹಾಕುವವರನ್ನು ಗಮನಿಸಲು ಸುಲಭವಾಗಿದೆ ಕಳೆದ 3 ದಿನಗಳ ಹಿಂದೆ ಅರಣ್ಯ ಪ್ರದೇಶದ ಮೂಲಕ ಹಾದು ಹೋಗುವ ಈ ರಸ್ತೆಯ 3 ಕಡೆಗಳಲ್ಲಿ ಹೊಸದಾಗಿ ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ.

> **ಮಾಹಿತಿ ನೀಡಬೇಕು**
> ಹೆದ್ದಾರಿ ಬದಿ ತಾತ್ಕಾಲಿಕ ಅಂಗಡಿಗಳನ್ನು ನಿರ್ಮಿಸಲು ಪಂಚಾಯಿತಿ ಯಾವುದೇ ಅವಕಾಶ ನೀಡುವುದಿಲ್ಲ, ಇಂತಹ ಅಂಗಡಿಗಳು ಗ್ರಾ.ಪಂ. ವ್ಯಾಪ್ತಿಯ ರಸ್ತೆ ಬದಿ ಕಂಡು ಬಂದರೆ ತಕ್ಷಣ ಮಾಹಿತಿ ನೀಡಬೇಕು.
> ● ಗಾಯತ್ರಿ , ಪಿಡಿಒ

35 ಲ.ರೂ. ವೆಚ್ಚದ 2ನೇ ಮೊಣ್ಣಂಗೇರಿ ರಸ್ತೆ ಅಭಿವೃದ್ಧಿಗೆ ಶಾಸಕರಿಂದ ಭೂಮಿಪೂಜೆ



ಮಡಿಕೇರಿ: ಮಡಿಕೇರಿ ವಿಧಾನಸಭಾ ಕ್ಷೇತ್ರದ ಅತ್ಯಂತ ಕುಗ್ರಾಮ ಎಂದೇ ಬಿಂಬಿತರಾಗಿರುವ ಗಾಳಿಬೀಡು ಪಂ. ವ್ಯಾಪ್ತಿಯ 2 ನೇ ಮೊಣ್ಣಂಗೇರಿ ಗ್ರಾಮದಲ್ಲಿ ರಸ್ತೆ ಅಭಿವೃದ್ಧಿಗೆ ಕ್ಷೇತ್ರದ ಶಾಸಕ ಡಾ. ಮಂಥರ್ ಗೌಡ 35 ಲಕ್ಷ ರೂಗಳ ಅನುದಾನ ನೀಡಿದ್ದಾರೆ.
ಅತ್ಯಂತ ದುರ್ಗಮವಾದ ಹಾದಿಗಳನ್ನು ಹೊಂದಿರುವ 2 ನೇ ಮೊಣ್ಣಂಗೇರಿ ಗ್ರಾಮ 2018 ರ ಪ್ರಕೃತಿ ವಿಕೋಪದಲ್ಲಿ ಬಹು ಸಂಕಷ್ಟಕ್ಕೆ ಒಳಗಾದ ಪ್ರದೇಶವಾಗಿದ್ದು, ಅಲ್ಲಿನ ಜನರ ಕೋರಿಕೆ ಮೇರೆಗೆಶಾಸಕರು 35 ಲ. ರೂ ವೆಚ್ಚದ ರಸ್ತೆ ಕಾಮಗಾರಿಗೆ ಶುಕ್ರವಾರ ಭೂಮಿಪೂಜೆ ನೆರವೇರಿಸಿದರು.
ಸದ್ಯ ಜಿಲ್ಲಾಧಿಕಾರಿಗಳು ಸೇರಿದಂತೆ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು ಗ್ರಾಮಕ್ಕೆ ಕರೆಸಿ ಜನಸ್ಪಂದನ ಸಭೆ ನಡೆಸುವುದಾಗಿ ಮಾಹಿತಿ ನೀಡಿದರು.
ಗ್ರಾಮದ ಜನರು ಜಮೀನಿನ ಹಕ್ಕು ಪತ್ರ, ವಿದ್ಯುತ್, ಸುಸಜ್ಜಿತ ರಸ್ತೆ ಮುಂತಾದ ಮೂಲಭೂತ ಸೌಕರ್ಯದಿಂದ ವಂಚಿತರಾಗಿರುವ ಬಗ್ಗೆ ಪ್ರಮುಖರಾದ ಹೆಚ್.ಎ.ಹಂಸ ಮಾಹಿತಿ ನೀಡಿದರು.
ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆಯ ಜಿಲ್ಲಾಧ್ಯಕ್ಷ ತೆನ್ನಿರ ಮೈನಾ ಅವರು ಮಾತನಾಡಿದರು.
ಸ್ಥಳೀಯರಾದ ಮುದಿಯಾರ್ ಗಣೇಶ್ ಡಾ. ಮಂಥರ್ ಗೌಡ ಸಮಸ್ಯೆಗಳಿಗೆ ಸ್ಪಂದಿಸುವ ವಾಗ್ದಾನ ಮಾಡಿದ್ದು ಅದನ್ನು ಪ್ರಾಮಾಣಿಕ ವಾಗಿ ಪೂರ್ಣಗೊಳಿಸಲು ಮುಂದಾಗಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು.
ಮುಖ್ಯಸ್ಥರಾದ ಬಷೀರ್ ಅವರು ಶಾಸಕರು ತಮ್ಮ ಸಮಸ್ಯೆಗಳಿಗೆ ಸೂಕ್ತ ಸ್ಪಂದನೆ ನೀಡಿದ್ದು ಅದಕ್ಕಾಗಿ ಗ್ರಾಮದ ಜನತೆ ಆಭಾರಿಯಾಗಿದ್ದೇವೆ ಎಂದರು.
ಗ್ರಾಮಸ್ಥರು ಹತ್ತಾರು ಬೇಡಿಕೆಗಳನ್ನು ಶಾಸಕರಿಗೆ ಸಲ್ಲಿಸಿದರು. ಸುಭಾಷ್ ಆಳ್ವ, ಪಂ. ಮಾಜಿ ಅಧ್ಯಕ್ಷರಾದ ಪುಷ್ಪಾ, ಪ್ರಮುಖರಾದಕೋಚನಹರಿಪ್ರಸಾದ್, ಆರ್. ಪಿ. ಚಂದ್ರಶೇಖರ್, ಬಾಳಾಡಿ ಪ್ರತಾಪ್, ವಿ.ಜಿ.ಮೋಹನ್, ಕವನ್ ಕೊತ್ತೋಳಿ, ದಿನೇಶ್ ಶೆಟ್ಟಿ, ಅರ್ಜುನ್, ಸ್ಥಳೀಯರಾದ ಕುಡಿಯರ ಚೌರ, ದಮಯಂತಿ, ಭವಾನಿ, ಚೈತ್ರ, ಅಶ್ವಥ್, ಜನಾರ್ದನ, ಜಾನಕಿ ಸೇರಿದಂತೆ ಗ್ರಾಮಸ್ಥರು ಭಾಗವಹಿಸಿದ್ದರು.

> **ಗುಣಮಟ್ಟದಲ್ಲಿ ಕಾಮಗಾರಿ ನಿರ್ವಹಿಸಿ**
> ಕ್ಷೇತ್ರದ ಪ್ರತಿಯೊಬ್ಬ ಪ್ರಜೆಯೂ ಸರ್ಕಾರದ ಸೌಲಭ್ಯ ಪಡೆಯಲು ಅರ್ಹನಾಗಿದ್ದು ಅದನ್ನು ಒದಗಿಸುವ ಕರ್ತವ್ಯ ಜನಪ್ರತಿನಿಧಿಯದ್ದು ಎಂದ ಕುಗ್ರಾಮ ಎಂದು ಅಪಖ್ಯಾತಿ ಹೊಂದಿರುವ 2 ನೇ ಮೊಣ್ಣಂಗೇರಿ ಗ್ರಾಮವನ್ನು ಸುಗ್ರಾಮವಾಗಿಸಲು ಬದ್ಧನಾಗಿದ್ದೇನೆ. ಶೀಘ್ರ ಕಾಮಗಾರಿಯನ್ನು ಉತ್ತಮ ಗುಣಮಟ್ಟದಲ್ಲಿ ನಿರ್ವಹಿಸಬೇಕು.
> ● ಡಾ. ಮಂಥರ್ ಗೌಡ

ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಪಾಂಡುರಂಗ ಶಾಖೆಯ ವಾರ್ಷಿಕೋತ್ಸವ



ಬೆಳ್ತಂಗಡಿ: ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಪಾಂಡುರಂಗ ಶಾಖೆಯ ವಾರ್ಷಿಕೋತ್ಸವವು ಪಣೆಜಾಲ್ ನ ಸಂಭ್ರಮ ಸಭಾ ಭವನದಲ್ಲಿ ನೆರವೇರಿತು. ಯೋಗದ ಮಹತ್ವವನ್ನುಸಾರುವಈಕಾರ್ಯಕ್ರಮದಲ್ಲಿ ಅನೇಕ ಯೋಗಬಂಧುಗಳು, ಯೋಗೇತರ ಬಂಧುಗಳು , ಗಣ್ಯರು ಭಾಗವಹಿಸಿದರು.
ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಂಗಳೂರಿನ ಹಿರಿಯ ಯೋಗ ಶಿಕ್ಷಕರಾದ ರವೀಶ್ ಭಾಗವಹಿಸಿದ್ದರು.
ಸಭಾ ಅಧ್ಯಕ್ಷತೆಯನ್ನು ಪಾಂಡುರಂಗ ಶಾಖೆಯ ಸಂಚಾಲಕ ದಿನೇಶ್ ವಹಿಸಿ, ಶಾಖೆಯ ಬೆಳವಣಿಗೆ ಮತ್ತು ಮುಂದಿನ ಯೋಜನೆಗಳ ಬಗ್ಗೆ ವಿವರಿಸಿದರು. ವೇದಿಕೆಯಲ್ಲಿ ನಮ್ಮ ಮನೆ ಶಾಖೆಯ ಸಂಚಾಲಕಿ ಸುಮಲತಾ ಮತ್ತಿತರರಿದ್ದರು.
ಪಾಂಡುರಂಗ ಶಾಖೆಯ ಆನಂದ ಸ್ವಾಗತಿಸಿದರು. ವಾರ್ಷಿಕ ವರದಿಯನ್ನು ಪಾಂಡುರಂಗ ಶಾಖೆಯ ಶಿಕ್ಷಕ ದಯಾನಂದ ವಾಚಿಸಿದರು ಪಾಂಡುರಂಗ ಶಾಖೆಯ ಜಯಂತಿ ವಂದಿಸಿದರು. ಬಳಿಕ ನಮ್ಮ ಮನೆ ಶಾಖೆ, ಶ್ರೀ ಪಾಂಡುರಂಗ ಶಾಖೆ ಹಾಗೂ ಮದ್ದಡ್ಕ ಶಾಖೆಯ ಯೋಗ ಬಂಧುಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

> **ಆರೋಗ್ಯ ಜೀವನಕ್ಕೆ ಯೋಗ ಮುಖ್ಯ**
> ಯೋಗವು ಆರೋಗ್ಯಕರ ಜೀವನಕ್ಕೆ ಅವಿಭಾಜ್ಯ ಅಂಗವಾಗಿದ್ದು, ಪ್ರತಿಯೊಬ್ಬರೂ ದಿನನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.
> ● ರವೀಶ್, ಹಿರಿಯ ಯೋಗ ಶಿಕ್ಷಕ

ಮಹಿಳೆಯರು ತರಬೇತಿಯನ್ನು ಕಲಿತು ಸ್ವದ್ಯೋಗಕ್ಕೆ ಹೆಚ್ಚು ಒತ್ತು ನೀಡಬೇಕು



■ ವಿಶ್ವ ಬ್ರಾಹ್ಮಣ ಸಮಾಜ ಸಭಾದ ಸಭಾಂಗಣದಲ್ಲಿ ನಡೆಯಿತು ತರಬೇತಿ
■ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ

ಮುಲ್ಕಿ: ಮಂಗಳೂರು ವಿಜಯ ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನ ಮತ್ತು ಮಣಿಪಾಲ ಭಾರತೀಯ ವಿಕಾಸ ಟ್ರಸ್ಟ್ ಆಶ್ರಯದಲ್ಲಿ ಮುಲ್ಕಿ ವಿಶ್ವಬ್ರಾಹ್ಮಣ ಮಹಿಳಾ ಬಳಗ ಸಹಯೋಗದೊಂದಿಗೆ ಉಚಿತ ಸ್ವಉದ್ಯೋಗ ತರಬೇತಿ ಫಲಾನುಭವಿಗಳಿಗೆ ಪ್ರಮಾಣ ಪತ್ರ , ಸಮಾರೋಪ ಸಮಾರಂಭ ವಿಶ್ವಬ್ರಾಹ್ಮಣ ಸಮಾಜ ಸಭಾದ ಸಭಾಂಗಣದಲ್ಲಿ ಇತ್ತೀಚೆಗೆ ನಡೆಯಿತು.
ಸಭೆಯಲ್ಲಿ ಮಣಿಪಾಲ ಭಾರತೀಯ ವಿಕಾಸ ಟ್ರಸ್ಟ್ ನ ವ್ಯವಸ್ಥಾಪಕ ಜೀವನ ಮಾತನಾಡಿ, ಮಹಿಳೆಯರು ತರಬೇತಿಯನ್ನು ಕಾರ್ಯಗತಗೊಳಿಸಿ ಸ್ವ-ಉದ್ಯೋಗಕ್ಕೆ ಒತ್ತು ನೀಡಬೇಕು ಎಂದು ಹೇಳಿದರು.
ಮುಖ್ಯ ಅತಿಥಿಗಳಾಗಿ ಮಂಗಳೂರು ವಿಜಯ ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನದ ಸಿಇಒ ಜ್ಯೋತಿರಾಜ್ , ಫೈನಾಷಿಯಲ್ ಲಿಟರಸಿ ಕೌನ್ಸಿಲರ್ ಲತೀಶ್ ಬಿ. , ಮುಲ್ಕಿ ವಿಶ್ವ ಬ್ರಾಹ್ಮಣ ಸಮಾಜ ಸಭಾ ಉಪಾಧ್ಯಕ್ಷ ಯೋಗೀಶ್ ಬಿ. ಆಚಾರ್ಯ, ಸಂಪನ್ಮೂಲ ವ್ಯಕ್ತಿಗಳಾದ ಸುಧಾ ಮತ್ತು ಆಶಾ ಶಂಕರ್ ಮತ್ತು ವಿಶ್ವಬ್ರಾಹ್ಮಣ ಮಹಿಳಾ ಬಳಗದ ಗೌರವಾಧ್ಯಕ್ಷೆ ವೀಣಾ ಎಚ್., ಅಧ್ಯಕ್ಷೆ ಪೂರ್ಣಿಮಾ ಎಚ್. ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.
ತೇಜಸ್ವಿನಿ ಕಾರ್ಯಕ್ರಮ ನಿರೂಪಿಸಿದರು ಪ್ರೇಮ ಸುಧಾಕರ್ ಸ್ವಾಗತಿಸಿದರು. ಸುಜಾತ ವಂದಿಸಿದರು ಬಳಿಕ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು



ಗುರುಪುರ ಶ್ರೀ ಜಂಗಮ ಸಂಸ್ಥಾನ ಮಠದ ಶ್ರೀ ನೀಲಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇತ್ತೀಚೆಗೆ ನಡೆದ ತಾಂಬೂಲ ಪ್ರಶ್ನೆಯಲ್ಲಿ ಬಂದ ಸೂಚನೆಯ ಮೇರೆಗೆ ಕ್ಷೇತ್ರದ ಕಲ್ಲುರ್ಟಿ ಮತ್ತು ಪರಿವಾರ ದೈವಗಳಿಗೆ ಮಠದ ಶ್ರೀ ರುದ್ರಮುನಿ ಮಹಾಸ್ವಾಮಿ ಮುಂದಾಳತ್ವದಲ್ಲಿ ಅಗೆಲು ಸೇವೆ ಶುಕ್ರವಾರ ನಡೆಯಿತು. ಶ್ರೀ ಜಂಗಮ ಸಂಸ್ಥಾನ ಮಠದ ಗುರುಪುರ ಇದರ ಶ್ರೀ ನೀಲಕಂಠೇಶ್ವರ ದೇವಸ್ಥಾನ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಸಚಿನ್ ಅಡಪ ಬಡಕರೆ ಮತ್ತಿತರರಿದ್ದರು.

'ಸಾಮಾಜಿಕ ಭದ್ರತೆ ಸುಸ್ಥಿರ ಜೀವನೋಪಾಯ' ಮಾಹಿತಿ ಕಾರ್ಯಾಗಾರ

ಕೊಣಾಜೆ: ಸಾಮಾಜಿಕ ಭದ್ರತೆ ಸುಸ್ಥಿರ ಜೀವನೋಪಾಯ ಸುಸ್ಥಿರ ಅಭಿವೃದ್ಧಿ ಮಾಹಿತಿ ಕಾರ್ಯಾಗಾರ ಬಾಳೆಪುಣಿ ಗ್ರಾ.ಪಂ.ಸಭಾಂಗಣದಲ್ಲಿ ನಡೆಯಿತು. ಜನ ಶಿಕ್ಷಣ ಟ್ರಸ್ಟ್, ಗ್ರಾ.ಪಂ. ಬಾಳೆಪುಣಿ, ಎನ್‌ಆರ್‌ಎಲ್‌ಎಂ, ಮಂದಾರ ಸಂಜೀವಿನಿ ಒಕ್ಕೂಟ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ , ಎಪಿಪಿಐ ಸಹಯೋಗದಲ್ಲಿ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.
ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ ಕೆನರಾ ಬ್ಯಾಂಕ್ ಆರ್ಥಿಕ ಸಮಾಲೋಚಕರಾದ ಲತೇಶ್ ಆರ್ಥಿಕ ಸಾಕ್ಷರತೆ ಮತ್ತು ಸ್ವ ಉದ್ಯೋಗ ಹಾಗೂ ಜೀವನ್ ಜ್ಯೋತಿ ಸುರಕ್ಷಾ ವಿಮಾ, ಪ್ರಧಾನ ಮಂತ್ರಿ ಜೀವನ್ ಜ್ಯೋತಿ ವಿಮಾ ಯೋಜನೆ ಬಗ್ಗೆ ಮಾಹಿತಿ ನೀಡಿದರು. ಭಾರತ್ ಕಟ್ಟಡ ಕಾರ್ಮಿಕ ಸಂಘದ ಜಿಲ್ಲಾ ಅಧ್ಯಕ್ಷ ಮಹಮ್ಮದ್ ಅಶ್ರಫ್



ಕಟ್ಟಡ ಕಾರ್ಮಿಕ ಮಂಡಳಿಯಿಂದ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು.

ಅರ್ಹ ಫಲಾನುಭವಿಗಳಿಗೆ ಕಿಟ್‌ವಿತರಣೆ
ಬಾಳೆಪುಣಿ ವಲಯ ಕಟ್ಟಡ ಕಾರ್ಮಿಕ ಸಂಘದ ಅಧ್ಯಕ್ಷರಾದ ಅಬ್ದುಲ್ ರೆಹಮಾನ್ ಕಟ್ಟಡ ಕಾರ್ಮಿಕ ಮಂಡಳಿಯ ಲಭ್ಯ ಇರುವ 2500 ಕಿಟ್‌ಗಳನ್ನು ಅರ್ಹ ಫಲಾನುಭವಿಗಳಿಗೆ ವಿತರಣೆ ಮಾಡಲಾಗುವುದು ಎಂದರು.

ಜಂಟಿ ಕಾರ್ಯಾಚರಣೆ
ಕೇಂದ್ರ ಹಾಗೂ ರಾಜ್ಯ ಸರಕಾರ ದಲ್ಲಿ ಲಭ್ಯ ಇರುವ ಸಾಮಾಜಿಕ ಭದ್ರತೆ ಮತ್ತು ಸುಸ್ಥಿರ ಜೀವನೋಪಾಯ ಯೋಜನೆ ಅರಿವು ಮತ್ತು ಅನುಷ್ಠಾನಕ್ಕೆ ಜಂಟಿ ಕಾರ್ಯಾಚರಣೆ ನಡೆಸಲಾಗುವುದೆಂದು ನರೇಗಾ ಮಾಜಿ ಒಂಬುಡ್ಸ್‌ಮೆನ್ ಶೀನ ಶೆಟ್ಟಿ ತಿಳಿಸಿದರು.
ಪಂಚಾಯತ್ ಅಭಿವೃದ್ಧಿ ಅಧಿಕಾರಿ ವೆಂಕಟೇಶ್, ಸರ್ಕಾರಿ ಯೋಜನೆಗಳ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವಲ್ಲಿ ಗ್ರಾ.ಪಂನಿಂದ ನಿರಂತರ ಸಹಕರಿಸುವ ಬಗ್ಗೆ ತಿಳಿಸಿದರು.
ಈ ಸಂದರ್ಭ ಜನ ಶಿಕ್ಷಣ ಟ್ರಸ್ಟ್ ನಿರ್ದೇಶಕರು, ಗ್ರಾಮ ಪಂಚಾಯತ್ ಕಾರ್ಯದರ್ಶಿಯವರಾದ ಆಯಿಷಾ ಬಾನು, ಗ್ರಾ.ಪಂ.ಮಾಜಿ ಸದಸ್ಯರು ಶಮಿಮ ಆರೋಗ್ಯ ಇಲಾಖೆಯ ಆಶಾ ಕಾರ್ಯಕರ್ತೆ ಯರು, ಸಂಜೀವಿನಿ ಎಂ.ಬಿ. ಕೆಎನ್‌ಸಿಆರ್‌ಪಿ ಗಳು, ಪ್ರೇರಕರು, ಭಾಗವಹಿಸಿದ್ದರು. ಸಂಯೋಜಕರುಗಳಾದ ಕಾರ್ತಿಕ ಲತಾ ಶ್ವೇತ ಎಸ್‌ಐಪಿ ಶಿಕ್ಷಕರಾದ ವಿದ್ಯಾ , ಶಶಿಕಾಂತ್ ಸಹಕರಿಸಿ. ಕಾರ್ಯಕ್ರಮ ಸಂಯೋಜಕರಾದ ಚೇತನ್ ಕಾರ್ಯಕ್ರಮದ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ನಿಡ್ಪಳ್ಳಿ: ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರ ಉದ್ಘಾಟನೆ

ನಿಡ್ಪಳ್ಳಿ: ನಿಡ್ಪಳ್ಳಿ ಗ್ರಾಮ ಪಂಚಾಯತ್ ಗ್ರಂಥಾಲಯದ 2026-27 ನೇ ಸಾಲಿನ ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರವು ಉದ್ಘಾಟನೆ ಗೊಂಡಿತು.
ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ವೆಂಕಟ್ರಮಣ ಬೋರ್ಕರ್ ದೀಪ ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸಿ ಬೇಸಿಗೆ ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳುವಂತೆ ತಿಳಿಸಿದರು. ಪಂಚಾಯತ್ ಅಭಿವೃದ್ಧಿ ಅಧಿಕಾರಿ ಜಯಪ್ರಕಾಶ್ ಯಂ. ಮಾತನಾಡಿ ಮಕ್ಕಳು ಮೊಬೈಲ್‌ನಿಂದ ದೂರವಿದ್ದು ಪುಸ್ತಕಗಳ ಬಳಕೆಗಳನ್ನು ಹೆಚ್ಚು ಮಾಡಿ ತಮ್ಮ ಜ್ಞಾನವನ್ನು ವೃದ್ಧಿಸಿಕೊಳ್ಳಬೇಕು ಎಂದು ತಿಳಿಸಿದರು. ಪಂಚಾಯತ್ ಕಾರ್ಯದರ್ಶಿ ಶಿವರಾಮ ಮೂಲ್ಯ ಹಿತ ನುಡಿಗಳನ್ನಾಡಿ ಮಕ್ಕಳಿಗೆ ಶುಭ ಹಾರೈಸಿದರು.



ಸ್ವಚ್ಛತೆ, ಆಚಾರ-ವಿಚಾರ, ಮಾಹಿತಿ
ಸಂಪನ್ಮೂಲ ವ್ಯಕ್ತಿ ನಿವೃತ್ತ ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ ಕುಸುಮಾವತಿ ಎ.ವಿ. ಅವರು ಮಕ್ಕಳಿಗೆ ವೈಯಕ್ತಿಕ ಸ್ವಚ್ಛತೆ, ಆಚಾರ, ವಿಚಾರ, ಪುಸ್ತಕದ ಬಳಕೆ ಕುರಿತು ಮಾಹಿತಿ ನೀಡಿ ಕೆಲವು ಚಟುವಟಿಕೆಗಳನ್ನು ನಡೆಸಿದರು. ಮೋಕ್ಷಿತ ಹಾಗೂ ಕೃಪಾಕ್ಷಿ ಪ್ರಾರ್ಥಿಸಿದರು. ಗ್ರಂಥಾಲಯ ಮೇಲ್ವಿಚಾರಕಿ ಪವಿತ್ರ ಜಿ. ಕಾರ್ಯಕ್ರಮ ನಿರ್ವಹಿಸಿದರು. ಪಂಚಾಯತ್ ಸಿಬ್ಬಂದಿ ರೇವತಿ, ಸಂಶೀನಾ, ವಿನೀತ್ ಕುಮಾರ್, ಜಯ ಕುಮಾರಿ ಹಾಗೂ ಗ್ರಾಮೀಣ ಪುನರ್ವಸತಿ ಕಾರ್ಯಕರ್ತ ರಾಮಣ್ಣ ಸಹಕರಿಸಿದರು. ಸುಮಾರು 30 ಶಿಬಿರಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಪೊನ್ನಂಪೇಟೆಯ ಚೆಪ್ಪುಡಿಕೊಲ್ಲಿಯಲ್ಲಿ 2.50 ಕೋ. ರೂ. ವೆಚ್ಚದ ನೂತನ ಸೇತುವೆ ನಿರ್ಮಾಣಕ್ಕೆ ಭೂಮಿಪೂಜೆ

ಚೆಕ್‌ಡ್ಯಾಮ್ ನಿರ್ಮಾಣದಿಂದ ಕೃಷಿಗೆ ಅನುಕೂಲ: ಪೊನ್ನಣ್ಣ

ಪೊನ್ನಂಪೇಟೆ: ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ ಗ್ರಾಮ ಪಂಚಾಯತಿ ವ್ಯಾಪ್ತಿಯ ಬೀರುಗ ಗ್ರಾಮದ ಚೆಪ್ಪುಡಿ ಕೊಲ್ಲಿಯಲ್ಲಿ ಬೊಮ್ಮುಂಜಿ ನದಿಗೆ ಕಟ್ಟಲಾಗಿದ್ದ ಹಲವು ವರ್ಷದಿಂದ ಕುಸಿದ ಸೇತುವೆಗೆ ಬದಲಾಗಿ ನೂತನ ಸೇತುವೆ ಮತ್ತು ಚೆಕ್ ಡ್ಯಾಮ್ ನಿರ್ಮಾಣ ಯೋಜನೆಯನ್ನು ರೂ.2.50 ಲಕ್ಷ ಕೋಟಿ ಅನುದಾನದ ಕಾಮಗಾರಿಗೆ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ಕ್ಷೇತ್ರ ಶಾಸಕರಾದ ಅಜ್ಜಿಕುಟ್ಟಿರ ಎಸ್. ಪೊನ್ನಣ್ಣ ಅವರು ಭೂಮಿ ಪೂಜೆ ಸಲ್ಲಿಸಿದರು.



ಈ ಸಂದರ್ಭ ಅವರು ಮಾತನಾಡಿ, ಬಹಳಷ್ಟು ವರ್ಷಗಳಿಂದ ದುರಸ್ತಿಯಾಗಬೇಕಾಗಿದ್ದ ಸೇತುವೆಯನ್ನು ಸಣ್ಣ ನೀರಾವರಿ ಇಲಾಖೆಯಿಂದ ಉಸ್ತುವಾರಿ ಸಚಿವ ಬೋಸರಾಜು ಅವರು ತಮ್ಮ ಮನವಿಗೆ ಸ್ಪಂದಿಸಿ 2.50 ಕೋಟಿ ಅನುದಾನವನ್ನು ಒದಗಿಸಿದ್ದು ಇದರಲ್ಲಿ ಸೇತುವೆ ಮತ್ತು ಚೆಕ್ ಡ್ಯಾಮ್ ನಿರ್ಮಾಣವಾಗಲಿದೆ. ಇದರಿಂದ ಇಲ್ಲಿನ ಮುಖ್ಯ ದೇವಸ್ಥಾನದ ಭಕ್ತಾದಿಗಳಿಗೆ ಮತ್ತು ಗ್ರಾಮಸ್ಥರಿಗೆ ತೆರಳಲು ಮಾರ್ಗ ಸುಗಮವಾಗಲಿದೆ ಹಾಗೂ ಚೆಕ್ ಡ್ಯಾಮ್ ನಿರ್ಮಾಣದಿಂದ ಈ ಭಾಗದ ರೈತರಿಗೆ ಬೇಸಿಗೆಯಲ್ಲಿ ನೀರಿನ ಸಂಗ್ರಹದಿಂದ ಕೃಷಿಗೆ ಉಪಯೋಗಿಸಿಕೊಳ್ಳಲು ಅವಕಾಶವಾಗಲಿದೆ ಎಂದರು.

ಈ ಭಾಗಕ್ಕೆ ಒಳ್ಳೆಯ ಯೋಜನೆಯನ್ನು ಸರ್ಕಾರ ಕೊಟ್ಟಿದೆ. ಈ ಹಿನ್ನಲೆ ಮಾನ್ಯ ಸಚಿವರು ಮತ್ತು ರಾಜ್ಯ ಸರ್ಕಾರಕ್ಕೆ ಧನ್ಯವಾದ ಸಲ್ಲಿಸುತ್ತೇನೆ ಎಂದರು.

ಈ ಸಂದರ್ಭ ಇಲ್ಲಿನ ಚೆಪ್ಪುಡಿಕೊಲ್ಲಿ ಈಶ್ವರ,ಚಾಮುಂಡಿ ದೇವಸ್ಥಾನದ ಪ್ರಮುಖರಾದ ಚೆಪ್ಪುಡಿರ ಪೊನ್ನಪ್ಪ ಮಾತನಾಡಿ, ಗ್ರಾಮಸ್ಥರ ಮನವಿಗೆ ಸ್ಪಂದಿಸಿದ ಶಾಸಕರು ರೂ.2.50 ಕೋಟಿ ಅನುದಾನದಲ್ಲಿ ಸೇತುವೆ ನಿರ್ಮಾಣಕ್ಕೆ ಭೂಮಿ ಪೂಜೆ ಸಲ್ಲಿಸುವ ಮೂಲಕ ಈ ಭಾಗದ ಜನರಿಗೆ ನದಿ ದಾಟಲು ಉಂಟಾಗಿದ್ದ ಸಮಸ್ಯೆ ಬಗೆಹರಿಸಿದ್ದಾರೆ. ಆದಷ್ಟು ಬೇಗ ಸೇತುವೆ ನಿರ್ಮಾಣ ವಾಗುವಂತೆ ಆಗಲಿ ತಮ್ಮ ಬೇಡಿಕೆಗೆ ಸ್ಪಂದಿಸಿದ ಶಾಸಕರಾಗಿ ಅಭಿನಂದನೆ ಸಲ್ಲಿಸಿದರು.

> **ಈ ಯೋಜನೆ ಆದಷ್ಟು ಬೇಗ ಪೂರ್ಣವಾಗಲಿ ಪೂರ್ಣ ಗೊಳಿಸಲು ಗುತ್ತಿಗೆದಾರರು ಹಾಗೂ ಇಂಜಿನಿಯರ್ ಅವರಿಗೆ ಸೂಚನೆ ನೀಡಲಾಗಿದೆ. ಕಾಮಗಾರಿಯನ್ನು ಒಂದು ತಿಂಗಳಲ್ಲಿ ಮುಗಿಸುತ್ತೇವೆ ಎಂದು ಗುತ್ತಿಗೆದಾರರು ತಿಳಿಸಿದ್ದಾರೆ. ಈ ಬಾರಿಯೂ ಮಳೆ ಕಳೆದ ವರ್ಷದಷ್ಟೇ ಬರುತ್ತದೆ ಎಂದು ಹವಾಮಾನ ಇಲಾಖೆ ವರದಿ ನೀಡಿದೆ. ಎಲ್ ನಿನೋ ಪರಿಣಾಮದಿಂದ ಮೇ ತಿಂಗಳ ಕೊನೆಯ ವಾರದಿಂದಲೇ ಹೆಚ್ಚಿನ ಮಳೆಯಾಗಬಹುದು .**
> ● ಎ.ಎಸ್. ಪೊನ್ನಣ್ಣ, ಶಾಸಕ

ದೇವಸ್ಥಾನ ಸಮಿತಿಯ ಪ್ರಮುಖರಾದ ಬಾದುಮಂಡ ವಿಷ್ಣು ಕಾರ್ಯಪ್ಪ ಶಾಸಕರಿಗೆ ಕೃತಜ್ಞತೆ ಸಲ್ಲಿಸಿದರು. ಈ ಸಂದರ್ಭ ಚೆಪ್ಪುಡಿಕೊಲ್ಲಿಯ ಚಾಮುಂಡಿ ಹಾಗೂ ಈಶ್ವರ ದೇವಸ್ಥಾನಕ್ಕೆ ಶಾಸಕರು ಭೇಟಿ ನೀಡಿದರು. ಈ ಸಂದರ್ಭ ದೇವಸ್ಥಾನ ಸಮಿತಿಯಿಂದ ಶಾಸಕರನ್ನು ಸನ್ಮಾನಿಸಲಾಯಿತು.

ಪೊನ್ನಂಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೀದೇರಿರ ನವೀನ್, ಬ್ಲಾಕ್ ಕಾಂಗ್ರೆಸ್ ಕಾರ್ಯದರ್ಶಿ ಎ. ಜೆ. ಬಾಬು, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕಾಳಿಮಾಡ ಪ್ರಶಾಂತ್, ಹಿರಿಯರಾದ ಚೆಪ್ಪುಡೀರ ಪೊನ್ನಪ್ಪ, ಚೆಕ್ಕೇರ ಕಾಳಯ್ಯ, ತೀತಿರ ಪ್ರಭು ಸುಬ್ಬಯ್ಯ, ಪೆಮ್ಮಂಡ ರಾಜಾ ಕುಶಾಲಪ್ಪ, ಮಚ್ಚಮಾಡ ಉದಯ, ಬಾದುಮಂಡ ವಿಷ್ಣು ಕಾರ್ಯಪ್ಪ, ಅಪ್ಪಚ್ಚಂಗಡ ಮೋಟಯ್ಯ, ಚೊಟ್ಟೆಯಂಡಮಾಡ ಉದಯ, ಬೊಳ್ಳೇರ ದೀಪಕ್ ,ಅಜ್ಜಿಕುಟ್ಟಿರ ಗಿರೀಶ್, ಪಮ್ಮು ಪೊನ್ನು, ಚೆಪ್ಪುಡೀರ ಬೋಪಣ್ಣ, ಸಣ್ಣ ನೀರಾವರಿ ಇಲಾಖೆಯ ಇಂಜಿನಿಯರ್ ಕುಮಾರಸ್ವಾಮಿ ಮತ್ತಿತರರಿದ್ದರು.

ಸುತ್ತಮುತ್ತ

ಬೈಕಂಪಾಡಿ ಉಪವಿಭಾಗ ಕಚೇರಿಯಲ್ಲಿ ಮೇ 19ಕ್ಕೆ ಜನ ಸಂಪರ್ಕ ಸಭೆ

ಮಂಗಳೂರು: ಮೆಸ್ಕಾಂ ಕಾವೂರು ಮತ್ತು ಬೈಕಂಪಾಡಿ ಉಪವಿಭಾಗಗಳಿಗೆ ಸಂಬಂಧಿಸಿದ ಜನ ಸಂಪರ್ಕ ಸಭೆಯು ಬೈಕಂಪಾಡಿ ಉಪವಿಭಾಗ ಕಚೇರಿಯಲ್ಲಿ ಮೇ 19ರಂದು ಸಮಯ ಬೆಳಿಗ್ಗೆ 11ರಿಂದ 12ರವರೆಗೆ ನಡೆಯಲಿದ್ದು, ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸುವುದರಿಂದ, ಈ ಅವಕಾಶವನ್ನು ಗ್ರಾಹಕರು ಸದುಪಯೋಗಿಸಿಕೊಳ್ಳಲು ಕೋರಲಾಗಿದೆ, ದೂರವಾಣಿ ಕರೆಯ ಮುಖಾಂತರವೂ ಸಂಪರ್ಕಿಸಿ, ಅಹವಾಲುಗಳನ್ನು ಸಲ್ಲಿಸಬಹುದಾಗಿದೆ. ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ: 0824–2408756.

ಕುಂದಾಪುರ: ಮೇ 19ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಕುಂದಾಪುರ: ತುರ್ತು ನಿರ್ವಹಣಾ ಕಾಮಗಾರಿ ಹಿನ್ನಲೆಯಲ್ಲಿ ಕುಂದಾಪುರ ಪುರಸಭೆ ವ್ಯಾಪ್ತಿಯಲ್ಲಿ ಮೇ 19ರಂದು ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ. ಕುಂದಾಪುರ ಪುರಸಭೆ ವ್ಯಾಪ್ತಿಯ ಟಿ.ಟಿ ರೋಡ್, ಬಿ.ಸಿ ರೋಡ್, ಹಂಗಳೂರು, ಕುಂದಾಪುರ, ಕೋಟೇಶ್ವರ, ಜಪ್ತಿ, ಹೊಂಬಾಡಿ–ಮಂಡಾಡಿ, ಕಾಳಾವರ, ಮೊಳಹಳ್ಳಿ, ಜಪ್ತಿ ವಾಟರ್‌ಸಪ್ಲೈ ಅಂಪಾರು ಹಳ್ನಾಡು, ಕಾವ್ರಾಡಿ, ಶಂಕರನಾರಾಯಣ, ಅಸೋಡು, ಯಡಾಡಿ–ಮತ್ಯಾಡಿ, ಬೀಜಾಡಿ, ಗೋಪಾಡಿ, ಕುಂಭಾಶಿ, ತೆಕ್ಕಟ್ಟೆ ಕೋಣಿ, ಕಂದಾವರ, ಬಸ್ರೂರು, ಬಳ್ಕೂರು, ಆನಗಳ್ಳಿ ಕೋಡಿ, ಎಂ.ಕೋಡಿ ಮತ್ತು ಅಂಕದಕಟ್ಟೆ ಶಿರೂರು, ತೂದಳ್ಳಿ, ಹೇರಂಜಾಲು, ಬವಳಾಡಿ, ಕಂಬದಕೋಣೆ, ಹೇರೂರು, ಕಾಲ್ತೋಡು, ಉಳ್ಳೂರು–11, ವರ್ಸೆ, ಆಲೂರು, ಹಕ್ಲಾಡಿ, ನಾಡ, ಹರ್ಕೂರು, ನೂಜಾಡಿ, ನಾವುಂದ, ಸೇನಾಪುರ, ಬಡಾಕೆರೆ, ಕುಂದಬಾರಂದಾಡಿ, ಹಡವು, ತ್ರಾಸಿ, ಹೊಸಾಡು, ಕೊಯಾನಗರ, ಮರವಂತೆ, ಕಿರಿಮಂಜೇಶ್ವರ, ಜಡ್ಕಲ್, ಆರೆಶಿರೂರು, ಎಲ್ಲೂರು, ಬಾಳ್‌ಕೊಡ್ಲು, ಹಾಲ್ಕಲ್, ದೋಣಿಗದ್ದೆ ದಳಿ, ಮಾವಿನಕಾರು, ಬಾವಡಿ, ಮೇಘನಿ, ಹಳ್ಳಿಬೇರು, ಜನ್ನಾಲ್ ಬೀಸಿನಪಾರೆ, ಸೆಳ್ ಕೊಡು, ಕಾನ್ಕಿ, ಮೆಕ್ಕೆ, ಗೋಳಿಹೊಳೆ, ಮುದೂರು, ಅರೆಹೊಳೆ,ನಾಗೂರು, ಬೈಂದೂರು, ಯಡ್ತರೆ, ತಗ್ಗರ್ಸೆ, ಕರ್ಕುಂಜೆ, ಬಿಜೂರು, ಕೊಲ್ಲೂರು, ಉಪ್ಪುಂದ, ಪಡುವರಿ, ನಂದನವನ, ಕೆರ್ಗಾಲ್, ಯಳಜಿತ್, ನಾಯ್ಕನಕಟ್ಟೆ, ಹೊಸೂರು, ಗಂಗನಾಡು, ಗೋಳಿಹೊಳೆ, ವಂಡ್ಸೆ, ಚಿತ್ತೂರು, ಬೆಳ್ಳಾಲ, ಜಡ್ಕಲ್, ಆನಗಳ್ಳಿ, ಉಪ್ಪಿನಕುದ್ರು, ಇಡೂರು–ಕುಂಜ್ಞಾಡಿ, ಮುದೂರು, ಹೊಸೂರು, ಕರ್ಕುಂಜೆ, ಕಾವ್ರಾಡಿ, ಅಂಪಾರು, ಕೆರಾಡಿ, ಆಜ್ರಿ, ಕೊಡ್ಲಾಡಿ, ಹೇರಿಕುದ್ರು, ಗುಲ್ವಾಡಿ, ಬಾಂಡ್ಯ, ತಲ್ಲೂರು, ಉಪ್ಪಿನಕುದ್ರು, ಹಟ್ಟಿಯಂಗಡಿ, ಕನ್ಯಾನ, ಕೆಂಚನೂರು, ನೇರಳಕಟ್ಟೆ ಹೆಮ್ಮಾಡಿ, ಕಟ್‌ಬೆಲ್ತೂರು, ದೇವಲ್ಕುಂದ, ಮುಳ್ಳಿಕಟ್ಟೆ, ಗಂಗೊಳ್ಳಿ, ಗುಜ್ಜಾಡಿ, ಉಳ್ತೂರು, ಕೆದೂರು, ಬೇಳೂರು, ವಡ್ಡರ್ಸೆ, ಗಿಳಿಯಾರು, ಬನ್ನಾಡಿ, ಮಣೂರು, ಕೋಟತಟ್ಟು, ಸಾಲಿಗ್ರಾಮ ಟಿ.ಎಮ್.ಸಿ, ಕಾರ್ಕಡ, ಚಿತ್ರಪಾಡಿ, ಪಾರಂಪಳ್ಳಿ, ಪಾಂಡೇಶ್ವರ, ಮೂಡಹಡು, ಐರೋಡಿ, ಗುಂಡ್ಮಿ, ಕಾವಡಿ, ಯಡ್ತಾಡಿ, ಹೆಗ್ಗುಂಜೆ, ಶಿರಿಯಾರ, ಶಿರೂರು, ಬಿಲ್ಲಾಡಿ, ವಂಡಾರು, ಆವರ್ಸೆ, ಕಕ್ಕುಂಜೆ, ಅಚ್ಲಾಡಿ, ಹಳ್ಳಾಡಿ–ಹರ್ಕಾಡಿ, ಹೆಸ್ಕತ್ತೂರು ಕೊರ್ಗಿ, ಮಂದಾರ್ತಿ,ಬಾರ್ಕೂರು–ಮಧುವನ್ ಮಾರ್ಗದಲ್ಲಿ ಹೊಸಾಳ,ಕಚ್ಚೂರು, ಹೇರಾಡಿ, ನಡೂರು, ಪಡುನೀಲಾವರ, ಬೆಣ್ಣೆಕುದ್ರು, ಶೀರೂರು, ನಂಚಾರು, ಹಿಲಿಯಾಣ, ಮಂದಾರ್ತಿ ಮತ್ತು ಹೆಬ್ಬಾಡಿ, ಸೇನಾಪುರ , ಬಾರ್ಕೂರು ರೈಲ್ವೆ ಟ್ರಾಕ್ಷನ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜನಲ್ಲಿ ವ್ಯತ್ಯಯವಾಗಲಿದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಮೇ 19: ವಿದ್ಯುತ್ ವ್ಯತ್ಯಯ

ಉಡುಪಿ: ಇದ್ರಾಳಿ, ವಿ.ಆರ್.ನಗರ, ಮೂಡುಬೆಳ್ಳೆ ಫೀಡರ್ ಮಾರ್ಗದಲ್ಲಿ ಹಾಗೂ ಹಿರಿಯಡ್ಕ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಹಿರೇಬೆಟ್ಟು ಫೀಡರ್ ಮಾರ್ಗದಲ್ಲಿ ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಹಯಗ್ರೀವನಗರ, ಲಕ್ಷ್ಮೀಂದ್ರನಗರ, ಇಂದ್ರಾಳಿ ರೈಲ್ವೆ ನಿಲ್ದಾಣ, ಡಿ.ಸಿ ಆಫೀಸ್, ಆರ್.ಟಿ ಓ ಆಫೀಸ್, ಪೆರಂಪಳ್ಳಿ, ಸಗ್ರಿ ನೋಳೆ, ಮಣಿಪುರ, ಮೂಡುಬೆಳ್ಳೆ, ಮರ್ಣೆ, ಕಟ್ಟಿಂಗೇರಿ, ಕೆಮ್ತೂರು, ಗುಡ್ಡೆಯಂಗಡಿ, ಕೋಡಿಬೆಟ್ಟು, ಪಟ್ಲ, ಪೆರ್ಣಂಕಿಲ, ಕುದಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 19ರಂದು ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ನೀಟ್ ಪರೀಕ್ಷೆ ರದ್ದು ಯುವ ಜನತೆಗೆ ದ್ರೋಹ: ಪದ್ಮಪ್ರಸಾದ್ ಜೈನ್ ಆರೋಪ

ಮೂಡುಬಿದಿರೆ: ದೇಶಾದ್ಯಂತ 22 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಬರೆದಿದ್ದ 'ನೀಟ್–ಯುಜಿ 2026' ಪರೀಕ್ಷೆಯನ್ನು ರದ್ದುಗೊಳಿಸಿರುವ ಕೇಂದ್ರ ಸರ್ಕಾರದ ನಿರ್ಧಾರವು ಆಡಳಿತಾತ್ಮಕ ವೈಫಲ್ಯ ಮಾತ್ರವಲ್ಲ, ದೇಶದ ಯುವಜನತೆಗೆ ಬಗೆದ ಕ್ರೂರ ದ್ರೋಹವಾಗಿದೆ. ಕರ್ನಾಟಕದ ಒಂದು ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಸೇರಿದಂತೆ ದೇಶದ 22 ಲಕ್ಷಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ತಿಂಗಳುಗಟ್ಟಲೆ ಶ್ರಮಪಟ್ಟು ಈ ಪರೀಕ್ಷೆ ಬರೆದಿದ್ದರು. ಪೋಷಕರು ತಮ್ಮ ಮಕ್ಕಳ ಭವಿಷ್ಯಕ್ಕಾಗಿ ತರಬೇತಿ, ಪ್ರಯಾಣ ಸೇರಿದಂತೆ ಸಾಕಷ್ಟು ಖರ್ಚುಗಳನ್ನು ಮಾಡಿದ್ದರು. ಆದರೆ ಕೇಂದ್ರದ ಒಂದು ನಿರ್ಧಾರ ಇಡೀ ವಿದ್ಯಾರ್ಥಿ ಸಮುದಾಯ ಅನಿಶ್ಚಿತತೆ ಮತ್ತು ಸಂಕಷ್ಟಕ್ಕೆ ತಳ್ಳಿದೆ ಎಂದು ಕೆಪಿಸಿಸಿ ವಕ್ತಾರ ಪದ್ಮಪ್ರಸಾದ್ ಜೈನ್ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

2024ರಲ್ಲೇ ನಮ್ಮ ಸರ್ಕಾರವು ನೀಟ್ ಪರೀಕ್ಷೆಯು ಗ್ರಾಮೀಣ ಮತ್ತು ಬಡ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುತ್ತದೆ, ಶಾಲಾ ಶಿಕ್ಷಣ ವ್ಯವಸ್ಥೆ ದುರ್ಬಲಗೊಳಿಸುತ್ತದೆ ಮತ್ತು ದಾಖಲಾತಿ ವಿಚಾರದಲ್ಲಿ ರಾಜ್ಯಗಳ ಅಧಿಕಾರವನ್ನು ಕಸಿದುಕೊಳ್ಳುತ್ತದೆ ಎಂದು ಆಕ್ಷೇಪ ವ್ಯಕ್ತಪಡಿಸಿ, ಸದನ ನಿರ್ಣಯ ಕೈಗೊಂಡಿತ್ತು. ಅಂದಿನ ನಮ್ಮ ಕಾಳಜಿ ಎಷ್ಟು ಸತ್ಯ ಮತ್ತು ಅನಿವಾರ್ಯವಾಗಿತ್ತು ಎನ್ನುವುದನ್ನು ಇಂದಿನ ಪರೀಕ್ಷಾ ರದ್ದತಿಯು ಸಾಬೀತುಪಡಿಸಿದೆ. ಸಿಇಟಿ ಅತ್ಯುತ್ತಮವಾಗಿದ್ದು ನೀಟ್ ಬೇಕಾಗಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ನೇಮಕಾತಿ ಪರೀಕ್ಷೆಗಳಿಂದ ಹಿಡಿದು ರಾಷ್ಟ್ರೀಯ ಪ್ರವೇಶ ಪರೀಕ್ಷೆಗಳವರೆಗೆ ಪೇಪರ್ ಲೀಕ್ ಪ್ರಕರಣಗಳು ಪ್ರತಿಭಾವಂತ ವಿದ್ಯಾರ್ಥಿಗಳ ಹಿತ ರಕ್ಷಣೆಯಲ್ಲಿ ನರೇಂದ್ರ ಮೋದಿ ಸರ್ಕಾರದ ವೈಫಲ್ಯಕ್ಕೆ ಸಾಕ್ಷಿಯಾಗಿದೆ. ಹೊಣೆ ಹೊರಬೇಕಾದ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಮಾಧ್ಯಮಗಳಿಂದ ದೂರ ಉಳಿದಿದ್ದಾರೆ. ಯುವಜನತೆಯ ಬಗ್ಗೆ ಕಿಂಚಿತ್ತೂ ಕಾಳಜಿಯಿಲ್ಲದ ಧರ್ಮೇಂದ್ರ ಪ್ರಧಾನ್ ಕೂಡಲೇ ರಾಜೀನಾಮೆ ನೀಡಬೇಕು. ಈ ಬಗ್ಗೆ ಪಾರದರ್ಶಕ, ಕಾಲಮಿತಿಯ ತನಿಖೆ ನಡೆಸಬೇಕು. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡಬೇಕು. ಸಿಇಟಿ ಮಾದರಿಯಲ್ಲೇ ಪರೀಕ್ಷೆಗಳು ನಡೆಯಬೇಕು ಮತ್ತು ಅಂತಹ ಪ್ರವೇಶ ಪರೀಕ್ಷೆಗಳನ್ನು ನಡೆಸುವ ರಾಜ್ಯಗಳ ಅಧಿಕಾರವನ್ನು ಪುನಃಸ್ಥಾಪಿಸಬೇಕು. ಪೇಪರ್ ಲೀಕ್‌ನಿಂದ ತೊಂದರೆಗೊಳಗಾಗಿರುವ ಪ್ರತಿಯೊಬ್ಬ ವಿದ್ಯಾರ್ಥಿ ಮತ್ತು ಪೋಷಕರ ಜೊತೆ ನಾವಿದ್ದೇವೆ. ಅವರ ಪರಿಶ್ರಮಕ್ಕೆ ತಕ್ಕ ಫಲ ಸಿಗುವಂತೆ ಮಾಡುವುದು ಮತ್ತು ವಿದ್ಯಾರ್ಥಿಗಳ ಭವಿಷ್ಯ ರಕ್ಷಿಸುವುದು ನಮ್ಮ ಕರ್ತವ್ಯ ಎಂದು ಪದ್ಮಪ್ರಸಾದ್ ಜೈನ್ ಮಾಹಿತಿ ನೀಡಿದರು. ಚುನಾವಣೆ ಮುಗಿದ ಬಳಿಕ ತೈಲ ಬೆಲೆ ಏರಿಕೆಯಾಗಿರುವ ಹಿಂದಿನ ಉದ್ದೇಶವೇನು.ವಿದೇಶಾಂಗ ನೀತಿಯ ವೈಫಲ್ಯವಲ್ಲವೇ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಕಾನೂನು ವಿಭಾಗದ ಅಧ್ಯಕ್ಷ ಮರ್ವಿನ್ ಲೋಬೋ, ಕೆಡಿಪಿ ಸದಸ್ಯ ತುಕ್ರಪ್ಪ ಕೆಂಬಾರೆ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಹಂಪನಕಟ್ಟೆ ಆತ್ಮಶಕ್ತಿ ಶಾಖೆಯ ದಶಮಾನೋತ್ಸವ, ಗ್ರಾಹಕರ ಸಭೆ



ಮಂಗಳೂರು: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ ಹಂಪನಕಟ್ಟೆ ಶಾಖೆಯ ದಶಮಾನೋತ್ಸವ ಹಾಗೂ ಗ್ರಾಹಕರ ಸಭೆಯು ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಅಧ್ಯಕ್ಷತೆಯಲ್ಲಿ ಹಂಪನಕಟ್ಟೆ ದ.ಕ. ಜಿಲ್ಲಾ ನಿವೃತ್ತ ಸರಕಾರಿ ನೌಕರರ ಸಂಘದ ಎನ್.ಜಿ.ಓ ಕಟ್ಟಡದಲ್ಲಿ ಜರುಗಿತು.

ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ ದ.ಕ ಜಿಲ್ಲೆಯ ಅಧ್ಯಕ್ಷ ನವೀನ್ ಕುಮಾರ್ ಎಂ.ಎಸ್, ಸಂಘದ ಗ್ರಾಹಕರಾದ ರಾಜಗೋಪಾಲ್ ಬಿ.ಎಂ., ಚೂಡಮಣಿ, ಮೋಹನ್ ದಾಸ್ ಎಂ., ಹಾಗೂ ಬೋಳಾರ್ ರಮಣಿ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಮಾತನಾಡಿ, ಗ್ರಾಹಕರ ಪ್ರೋತ್ಸಾಹ ದಿಂದ ಸಂಘವು ಉತ್ತಮ ಪ್ರಗತಿ ಹೊಂದಲು ಸಾಧ್ಯ. ಸಂಘದ ಸದಸ್ಯರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಚಿನ್ನಾಭರಣ ಸಾಲದ ಸೇವೆಯನ್ನು ಹೆಚ್ಚಾಗಿ ನೀಡುತ್ತಿದೆ. ಸಂಘವು ಕೇವಲ ಬ್ಯಾಂಕಿಂಗ್ ಮಾತ್ರವಲ್ಲದೆ, ವಿವಿಧ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ. ಹಂಪನಕಟ್ಟೆ ಶಾಖೆಯ ದಶಮಾನೋತ್ಸವದ ಪ್ರಯುಕ್ತ 500 ದಿನಗಳ ಠೇವಣಿಗಳಿಗೆ ವಿಶೇಷ ಬಡ್ಡಿ ದರ ಶೇ. 10 ಹಾಗೂ 1000 ದಿನಗಳ ಠೇವಣಿಗಳಿಗೆ ವಿಶೇಷ ಬಡ್ಡಿ ದರ ಶೇ. 10.50ವನ್ನು ನೀಡಲಾಗುತ್ತಿದ್ದು ಚಿನ್ನಾಭರಣ ಸಾಲಗಳಿಗೆ ಪ್ರತಿ ಗ್ರಾಂ ಗೆ ಗರಿಷ್ಠ ಮೌಲ್ಯ ರೂ. 12,000 ರವರೆಗೆ ಯಾವುದೇ ಸೇವಾ ಶುಲ್ಕವಿಲ್ಲದೆ ಸಾಲವನ್ನು ಸದಸ್ಯರಿಗೆ ನೀಡಲಾಗುವುದು ಎಂದರು.

ಸದಸ್ಯ ಮಾಧವ ಎಂ. ಅಮೀನ್, ಸದಸ್ಯ ರಾಜಗೋಪಾಲ್ ಬಿ. ಎಂ. ಹಾಗೂ ರಾಮಚಂದ್ರ ರಾವ್ ಶುಭ ಹಾರೈಸಿದರು. ಸಂಘದ ಉಪಾಧ್ಯಕ್ಷ ನೇಮಿರಾಜ್ ಪಿ. ನಿರ್ದೇಶಕ ಜಿ. ಪರಮೇಶ್ವರ ಪೂಜಾರಿ, ಸೀತಾರಾಮ ಎನ್, ದಿವಾಕರ್ ಬಿ.ಪಿ., ಗೋಪಾಲ್ ಎಮ್, ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸೌಮ್ಯ ವಿಜಯ್ ಮತ್ತಿತರರು ಉಪಸ್ಥಿತರಿದ್ದರು. ಶಾಖೆಯ ಸಿಬ್ಬಂದಿ ಸುಮಲತಾ ಸ್ವಾಗತಿಸಿ, ಅಕ್ಷತ ವಂದಿಸಿದರು. ಶಾಖೆಯ ಶಾಖಾಧಿಕಾರಿ ಪ್ರಣೀತಾ ನಿರೂಪಿಸಿದರು.

ಅಳದಂಗಡಿ: ಸಿವಿಲ್ ನ್ಯಾಯಾಧೀಶ ಮಂಜುನಾಥ ಶಿವಲಿಂಗಪ್ಪಗೆ ಸನ್ಮಾನ



ಬೆಳ್ತಂಗಡಿ: ಅಳದಂಗಡಿ ಶ್ರೀ ಸತ್ಯದೇವತಾ ದೈವಸ್ಥಾನದಲ್ಲಿ ಪ್ರತೀ ವರ್ಷ ನೀಡುವ ಪುಸ್ತಕ ವಿತರಣ ಸಮಾರಂಭದ ಪೂರ್ವಭಾವಿಯಾಗಿ ವಿದ್ಯಾರ್ಥಿಗಳಿಗೆ ಅರ್ಜಿ ಫಾರಂ ಮೇ 15ರಂದು ಅಳದಂಗಡಿ ಶ್ರೀ ಸೋಮನಾಥೇಶ್ವರೀ ದೇವಸ್ಥಾನದಲ್ಲಿ ನಡೆಯಿತು.

ಈ ಸಂದರ್ಭ ಸಿವಿಲ್ ನ್ಯಾಯಾಧೀಶ ಮಂಜುನಾಥ ಶಿವಲಿಂಗಪ್ಪ ಅವರಿಗೆ ಸನ್ಮಾನ ಸಮಾರಂಭ ನಡೆಯಿತು. ಅಳದಂಗಡಿ ಅರಮನೆ ಡಾ.ಪದ್ಮಪ್ರಸಾದ ಅಜಿಲ ಅವರು ಅಳದಂಗಡಿ ಅರಮನೆ ಸನ್ಮಾನಿತರಿಗೆ ಹರಸಿದರು. ಉದ್ಯಮಿ ಸುರೇಶ್ ಪೂಜಾರಿ ಮುಂಬಯಿ, ಎಂ. ಗಂಗಾಧರ ಮಿತ್ತಮಾರು, ಆಮಣಿ ಮಂಜುದೇವಾಡಿಗ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ರಾಜಶೇಖರ ಶೆಟ್ಟಿ, ವಿಜಯ ಕುಮಾರ್, ಮೋಹನ್ ಎ.ದಾಸ್, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ, ಮೆಲ್ವಿಚಾರಕರು, ಧರ್ಣಪ್ಪ ಪೂಜಾರಿ ದೋರಿಂಜೆ ಇದ್ದರು. ಶ್ರೇಯಾ ಪ್ರಾರ್ಥಿಸಿದರು. ಅಳದಂಗಡಿ ಅರಮನೆಯ ಶಿವಪ್ರಸಾದ್ ಅಜಿಲರು ಸ್ವಾಗತಿಸಿ, ದೇವದಾಸ್ ಆಲಡ್ಕ ಸನ್ಮಾನ ಪತ್ರ ವಾಚಿಸಿದರು. ಪಿ.ಎಚ್. ನಿತ್ಯಾನಂದ ಶೆಟ್ಟಿ ನಿರೂಪಿಸಿ, ಸುಭಾಶ್ಚಂದ್ರ ರೈ ಪಡ್ಯೋಡಿಗುತ್ತು ವಂದಿಸಿದರು.

ಪೆರುವಾಯಿ ಫಾತಿಮಾ ಮಾತೆಯ ದೇವಾಲಯದಲ್ಲಿ ದಿವ್ಯ ಬಲಿಪೂಜೆ



ಬಂಟ್ವಾಳ: ತಾಲೂಕಿನ ವಿಟ್ಲದ ಪೆರುವಾಯಿ ಫಾತಿಮಾ ಮಾತೆಯ ದೇವಾಲಯದಲ್ಲಿ ಬುಧವಾರ ಫಾತಿಮಾ ಮಾತೆಯ ವಾರ್ಷಿಕ ಹಬ್ಬ ನಡೆಯಿತು. ಹಬ್ಬದ ದಿವ್ಯಬಲಿಪೂಜೆಯನ್ನು ನೂತನ ಧರ್ಮಗುರು ಹಾಗೂ ಮಂಗಳೂರಿನ ಬಿಜೈ ಚರ್ಚ್‌ನ ಸಹಾಯಕ ಧರ್ಮಗುರುಗಳಾದ ವಂದನೀಯ ಜೀವನ್ ಡಿಸೋಜಾ ಇವರು ನೆರವೇರಿಸಿದರು.

ಈ ವೇಳೆ ನಡೆದ ಧಾರ್ಮಿಕ ಪ್ರವಚನದಲ್ಲಿ, ಕನ್ಯಾ ಮೇರಿ ಮಾತೆಯು 1917 ರ ಮೇ 13ರಂದು ಪೋರ್ಚುಗಲ್‌ನ ಫಾತಿಮಾ ಎಂಬಲ್ಲಿ ಲೂಸಿಯಾ, ಫ್ರಾನ್ಸಿಸ್ಕೋ ಮತ್ತು ಜೆಸಿಂತಾ ಎಂಬ ಮೂವರು ಮಕ್ಕಳಿಗೆ ಕುರಿಗಳನ್ನು ಮೇಯಿಸುತ್ತಿದ್ದಾಗ ಕನ್ಯಾ ಮೇರಿ ಕಾಣಿಸಿಕೊಂಡರು. ಅದಾದ ನಂತರ ಮೇರಿ ಮಾತೆ ಅಕ್ಟೋಬರ್ 13, 1917 ರವರೆಗೆ, ಪ್ರತಿ ತಿಂಗಳ 13 ರಂದು ಆ ಮಕ್ಕಳಿಗೆ ಕಾಣಿಸಿಕೊಂಡರು. ಈ ವೇಳೆ ಅವರು ಪ್ರಾರ್ಥನೆ, ಜಪಮಾಲೆ ಪಠಣ ಮಾಡುವಂತೆ ಕರೆ ನೀಡಿದರು ಎಂದು ಫಾತಿಮಾ ಮಾತೆಯ ಪವಾಡಗಳ ಬಗ್ಗೆ ತಿಳಿಸಿದರು. ಬಲಿಪೂಜೆಯ ನಂತರ ಚರ್ಚ್ ಆವರಣದಲ್ಲಿರುವ ಫಾತಿಮಾ ಮಾತೆಯ ಪ್ರತಿಮೆಯ ಮುಂದೆ ಪ್ರಾರ್ಥನೆ ನಡೆಯಿತು. ಇದೇ ವೇಳೆ ಹಲವು ಭಕ್ತರು ಮೇಣದ ಬತ್ತಿ ಹೊತ್ತಿಸುವ ಮೂಲಕ ಹರೆಯನ್ನು ಸಲ್ಲಿಸಿದರು. ದಿವ್ಯ ಬಲಿಪೂಜೆಯಲ್ಲಿ ಶಿವಮೊಗ್ಗ ಧರ್ಮಪ್ರಾಂತ್ಯದ ವಂದನೀಯ ಲಾರೆನ್ಸ್ ಡಿಸೋಜ, ಗೋವಾದ ಧರ್ಮಗುರು ವಂದನೀಯ ಜೊಸ್ಸಿ ಮಸ್ಕರೇನಸ್ ಹಾಗೂ ಪೆರುವಾಯಿ ಚರ್ಚ್‌ನ ಧರ್ಮಗುರು ವಂದನೀಯ ಸೈಮನ್ ಡಿಸೋಜಾ ಅವರು ಭಾಗವಹಿಸಿದ್ದರು. ಬಲಿಪೂಜೆಯ ನಂತರ ಭಕ್ತರಿಗೆ ಉಪಹಾರ ವಿತರಿಸಿದರು.

ಪಲ್ಲಿಪಾಡಿ ದೈವಗಳ ಚರಿತ್ರೆ, ಆಚರಣೆ, ಕ್ಷೇತ್ರ ಮಹಿಮೆ ಪುಸ್ತಕದ ಲೋಕಾರ್ಪಣೆ



ಬಂಟ್ವಾಳ: ಕರಿಯಂಗಳ ಗ್ರಾಮದ ಪಲ್ಲಿಪಾಡಿ ಶ್ರೀ ಕೊಡಮಣಿತ್ತಾಯ, ಅಣ್ಣಪ್ಪ ಪಂಜುರ್ಲಿ ಹಾಗೂ ಕಲ್ಲುರ್ಟಿ ದೈವಗಳ ಚರಿತ್ರೆ, ಆಚರಣೆ ಮತ್ತು ಕ್ಷೇತ್ರ ಮಹಿಮೆಯನ್ನೊಳಗೊಂಡ ಪುಸ್ತಕವನ್ನು ಲೋಕಾರ್ಪಣೆಗೊಳಿಸಲಾಯಿತು

ಪಲ್ಲಿಪಾಡಿ ಕೊಡಮಣಿತ್ತಾಯ–ಅಣ್ಣಪ್ಪ ಪಂಜುರ್ಲಿ ದೈವಸ್ಥಾನದಲ್ಲಿ ಈಚೆಗೆ ನಡೆದ ಸರಳ ಸಮಾರಂಭದಲ್ಲಿ ಗುತ್ತಿನವರಾದ ನರೇಶ್ ಪೂಂಜ ಅವರು ಪುಸ್ತಕ ಬಿಡುಗಡೆಗೊಳಿಸಿದರು.

ಬಳಿಕ ಮಾತನಾಡಿದ ಅವರು, ದೈವಗಳ ಇತಿಹಾಸ ಮತ್ತು ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಕಾರ್ಯ ಶ್ಲಾಘನೀಯ ಎಂದು ಅಭಿಪ್ರಾಯಪಟ್ಟರು.

ಪ್ರಧಾನ ಅರ್ಚಕ ವೆಂಕಟೇಶ್ ತುಂಗ ಆಶೀರ್ವಚನಗೈದರು. ಚಂದ್ರಹಾಸ ಪಲ್ಲಿಪಾಡಿ ಪ್ರಸ್ತಾವಿಕ ಮಾತನಾಡಿದರು. ಪುಸ್ತಕದ ಸಂಪಾದಕ ರಾಜಮಣಿ ರಾಮಕುಂಜ ಪುಸ್ತಕದ ಕುರಿತು ಮಾಹಿತಿ ನೀಡಿದರು.

ಸ್ಥಳೀಯ ಹಿರಿಯರಾದ ಶ್ರೀಧರ ಮೂಲ್ಯ, ಸುಂದರ ಮೂಲ್ಯ, ಶೇಖರ ಟಿ. ಅಂಚನ್, ಶ್ರೀಧರ ಆಚಾರ್ಯ ಉಪಸ್ಥಿತರಿದ್ದರು. ಕಿಶೋರ್ ಪಲ್ಲಿಪಾಡಿ ಕಾರ್ಯಕ್ರಮ ನಿರೂಪಿಸಿದರು. ರಾಜ್ ಕೋಟ್ಯಾನ್ ಸ್ವಾಗತಿಸಿದರು.



ಶ್ರೀ ಶಕ್ತಿ ಗಣಪತಿ ಷಣ್ಮುಖ ಸುಬ್ರಹ್ಮಣ್ಯ ಭಜನಾ ಮಂಡಳಿಯ 23ನೇ ವರ್ಷದ ಏಕಾಹಃ ಭಜನಾ ಮಹೋತ್ಸವ ಬಂಟ್ವಾಳದ ಸಜೀಪನಡು ಶ್ರೀ ಷಣ್ಮುಖ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಶನಿವಾರ ಸಜೀಪ ಮಾಗಣೆ ತಂತ್ರಿ ಎಂ ಸುಬ್ರಹ್ಮಣ್ಯ ಭಟ್ ಚಾಲನೆ ನೀಡಿದರು. ದೇವಳದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಮುಳ್ಳುಂಜ ವೆಂಕಟೇಶ್ವರ ಭಟ್,ಅರ್ಚಕ ಗಣಪತಿ ಮಹಾಬಲೇಶ್ವರ ಭಟ್, ಕೋಚ ಪೂಜಾರಿ ಯಾನೆ ಶಂಕರ ಪೂಜಾರಿ, ಸುರೇಶ್ ಬಂಗೇರ, ಗಂಗಾಧರ, ಸುಧಾಕರ ಕೆ.ಟಿ., ರಾಮ ಬರೆ ಮತ್ತಿತರರಿದ್ದರು.



ಗುರುಪುರ ಶ್ರೀ ಜಂಗಮ ಸಂಸ್ಥಾನ ಮಠದ ಶ್ರೀ ನೀಲಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇತ್ತೀಚೆಗೆ ನಡೆದ ತಾಂಬೂಲ ಪ್ರಶ್ನೆಯಲ್ಲಿ ಬಂದ ಸೂಚನೆಯ ಮೇರೆಗೆ ಕ್ಷೇತ್ರದ ಕಲ್ಲುರ್ಟಿ ಮತ್ತು ಪರಿವಾರ ದೈವಗಳಿಗೆ ಮಠದ ಶ್ರೀ ರುದ್ರಮುನಿ ಮಹಾಸ್ವಾಮಿಯವರ ಮುಂದಾಳತ್ವದಲ್ಲಿ ಅಗೆಲು ಸೇವೆ ಶುಕ್ರವಾರ ನಡೆಯಿತು. ಶ್ರೀ ಜಂಗಮ ಸಂಸ್ಥಾನ ಮಠದ ಗುರುಪುರ ಇದರ ಶ್ರೀ ನೀಲಕಂಠೇಶ್ವರ ದೇವಸ್ಥಾನ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಸಚಿನ್ ಅಡಪ ಬಡೆಕರೆ, ಸಮಿತಿಯ ಪದಾಧಿಕಾರಿಗಳು, ಸದಸ್ಯರು ಹಾಗೂ ಊರ ಭಕ್ತರು ಇದ್ದರು.

ಕರ್ನಾಟಕ ಸರಕಾರದ ಸುತ್ತೋಲೆ ವಾಪಸ್ ಪಡೆಯಲಿ | ಪುತ್ತೂರು ಮಾಜಿ ಶಾಸಕ ಸಂಜೀವ ಮಠಂದೂರು ಒತ್ತಾಯ

ಪೆಟ್ರೋಲ್ ಪಂಪ್‌ನಲ್ಲಿ ಕ್ಯಾನ್, ಬಾಟಲ್‌ಗೆ ಪೆಟ್ರೋಲ್ ಸಿಗದೇ ಕೃಷಿ ಚಟುವಟಿಕೆಗೆ ಅಡಚಣೆ

ಪುತ್ತೂರು: ಕರ್ನಾಟಕ ಸರಕಾರದ ಸುತ್ತೋಲೆಯಂತೆ ಪೆಟ್ರೋಲ್ ಪಂಪ್‌ನಲ್ಲಿ ಕೃಷಿಕರಿಗೆ ಬಾಟಲ್ ಹಾಗೂ ಕ್ಯಾನ್‌ಗಳಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಕೊಡಲು ನಿರಾಕರಿಸುತ್ತಿದ್ದು ಇದರ ಪರಿಣಾಮ ರೈತರನ್ನು ಹೈರಾಣಾಗಿಸಲಿದೆ.



ಸರಕಾರ ತಕ್ಷಣ ಈ ಸುತ್ತೋಲೆಯನ್ನು ಹಿಂಪಡೆಯದಿದ್ದರೆ ರೈತರು ಬೀದಿ ಗಿಳಿದು ಹೋರಾಟ ನಡೆಸುವುದು ಅನಿವಾರ್ಯವಾಗಲಿದೆ ಎಂದು ಪುತ್ತೂರು ಮಾಜಿ ಶಾಸಕ ಹಾಗೂ ಕೃಷಿಕ ಸಂಜೀವ ಮಠಂದೂರು ಎಚ್ಚರಿಸಿದ್ದಾರೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ಸರಕಾರದ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಆಯುಕ್ತರು ಹೊರಡಿಸಿರುವ ಆದೇಶದಂತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪೆಟ್ರೋಲ್ ಹಾಗೂ ಡೀಸೆಲ್ ಬಾಟಲ್, ಕ್ಯಾನ್‌ಗಳಲ್ಲಿ ನೀಡದಂತೆ ನಿರ್ಬಂಧಿಸಲಾಗಿದೆ. ಸರಕಾರದ ಈ ತುಘಲಕ್ ಆದೇಶವನ್ನು ಖಂಡಿಸುವುದಾಗಿ ಹೇಳಿದರು. ಗ್ರಾಮೀಣ ಪ್ರದೇಶದಲ್ಲಿ ರೈತರು ಇಂದು ಯಾಂತ್ರಿಕೃತ ಕೃಷಿ ಮಾಡುತ್ತಿದ್ದು ಯಂತ್ರಗಳನ್ನು ಅವಲಂಬಿಸಿಕೊಂಡು ಕೃಷಿಕಾರ್ಯ ಮಾಡುತ್ತಿರುವಾಗ ಅವರಿಗೆ ಇಂಧನದ ಬಳಕೆ ಅನಿವಾರ್ಯ. ಹೊಲ ಉಳುವ ಟ್ರ್ಯಾಕ್ಟರ್, ಪವರ್ ಟಿಲ್ಲರ್, ನೀರೆತ್ತುವ ಪಂಪ್ ಸೆಟ್ ಹಾಗೂ ಹುಲ್ಲು ಸವರುವ, ಕಟ್ಟಿಗೆ ತುಂಡುಮಾಡುವ ಯಂತ್ರ ಹೀಗೆ ರೈತ ಬೇರೆ ಬೇರೆ ಸಂದರ್ಭ ಯಂತ್ರವನ್ನು ಉಪಯೋಗಿಸುತ್ತಿದ್ದಾನೆ. ಕೃಷಿಕ ಯಂತ್ರಗಳನ್ನು ಬಳಕೆ ಮಾಡುವ ಸಂದರ್ಭದಲ್ಲಿ ಅದಕ್ಕೆ ಬೇಕಾಗುವ ಇಂಧನವನ್ನು ಬಾಟಲ್ ಹಾಗೂ ಕ್ಯಾನ್‌ಗಳಲ್ಲಿ, ಮನೆಗೆ ಕೊಂಡು ಹೋಗುವುದು ಸಹಜ ಹಾಗೂ ಅನಿವಾರ್ಯವಾದದ್ದು. ಆದರೆ ಈಗ ಕರ್ನಾಟಕ ಸರಕಾರದ ಸುತ್ತೋಲೆಯಂತೆ ಪೆಟ್ರೋಲ್ ಪಂಪ್‌ನಲ್ಲಿ ಕೃಷಿಕರಿಗೆ ಬಾಟಲ್ ಹಾಗೂ ಕ್ಯಾನ್‌ಗಳಲ್ಲಿ ಪೆಟ್ರೋಲ್ ಡೀಸೆಲ್ ಕೊಡಲು ನಿರಾಕರಿಸುತ್ತಾರೆ. ಕಾರಣ ಕೇಳುವಾಗ ಇಲಾಖೆಯವರು ನಮ್ಮ ಮೇಲೆ ಕೇಸು ಹಾಕುತ್ತಾರೆ ಎನ್ನುವ ಉತ್ತರ ಬರುತ್ತಿದೆ.ಇಲಾಖೆ ಆದೇಶದಲ್ಲಿ ಕೃಷಿ ಮತ್ತು ಜಲಚರ ಸಾರಿಗೆಗೆ ಅಗತ್ಯ ಬೇಡಿಕೆಗೆ ತೊಂದರೆ ಯಾಗದಂತೆ ಡೀಸೆಲ್ ಸರಬರಾಜು ಆಗುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು ಎಂದು ಉಲ್ಲೇಖಿಸಲಾಗಿದೆ. ಇಲ್ಲಿಯೂ ಡೀಸೆಲ್ ಅನ್ನು ಮಾತ್ರ ಉಲ್ಲೇಖಿಸಲಾಗಿದೆ. ರೈತರು ಅನುಮತಿಗಾಗಿ ವಿವಿಧ ಇಲಾಖೆಗಳಿಗೆ ಅಲೆದಾಡಬೇಕೆ? ಎಂದು ಮಠಂದೂರು ಪ್ರಶ್ನಿಸಿದರು. ಕೃಷಿಕರು ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಹಾಗೂ ಇತರ ಇಲಾಖೆಗಳಿಂದ ಡೀಸೆಲ್ ಬೇಡಿಕೆಯ ಪರವಾನಿಗೆ ಪಡೆದುಕೊಂಡು ಡೀಸೆಲ್ ತಂದುಕೊಳ್ಳಬೇಕು. ಆದರೆ ಪೆಟ್ರೋಲಿಗೆ ಅನುಮತಿ ಇಲ್ಲ, ಸರಕಾರದ ಈ ಆದೇಶದಿಂದ ರೈತರು ತನ್ನ ಕೃಷಿ ಯಂತ್ರೋಪಕರಣಗಳನ್ನು ಪೆಟ್ರೋಲ್ ಪಂಪ್‌ಗೆ ಕೊಂಡ್ಯೊಯ್ದು ಇಂಧನ ಹಾಕಬೇಕಾದ ಅನಿವಾರ್ಯತೆ ಒದಗಿದೆ ಎಂದು ಹೇಳಿದರು.

> **24 ವರ್ಷಗಳ ಬಳಿಕ ಯಾಕೆ ನೆನಪಾಯಿತು?**
> **ಪೆಟ್ರೋಲಿಯಂ ರೂಲ್ಸ್ 2002 ರ ಅನ್ವಯ ಗ್ರಾಹಕರಿಗೆ ಇಂಧನ ಕೊಡುವ ಕುರಿತು ರಾಜ್ಯಾದ್ಯಂತ ಆದೇಶ ಹೊರಡಿಸಲಾಗಿದೆ ಎಂದು ಸರಕಾರ ಹೇಳುತ್ತದೆ. ಕೇಂದ್ರ ಸರಕಾರ ಕಾನೂನು 24 ವರ್ಷಗಳ ಬಳಿಕ ಯಾಕೆ ನೆನಪಾಗಿದೆ ಮತ್ತು ಕರ್ನಾಟಕದಲ್ಲಿ ಮಾತ್ರ ಯಾಕೆ ಜಾರಗೊಳಿಸಲಾಗಿದೆ. ಇದು ಪೆಟ್ರೋಲ್ ಪಂಪ್ ನವರಿಗೂ ಕಿರುಕುಳ ನೀಡುವ ಮತ್ತು ಅಧಿಕಾರಿಗಳಿಗೆ ಭ್ರಷ್ಟಾಚಾರಕ್ಕೂ ಅವಕಾಶ ಮಾಡಿಕೊಡಲಿದೆ ಎಂದು ಮಠಂದೂರು ಆರೋಪಿಸಿದರು.**

ಸರಕಾರದ ಬೇಜವಾಬ್ದಾರಿಯ ಈ ಆದೇಶ ಕೃಷಿಕರಿಗೆ ಕೃಷಿ ಯಂತ್ರೋಪಕರಣ ಬಳಕೆ ಮಾಡದಂತಹ ಸ್ಥಿತಿಗೆ ಬಂದಿದೆ. ಕೃಷಿಕ ಯಾವತ್ತೂ ಇಂಧನ ದುರುಪಯೋಗ ಮಾಡಿದ ಉದಾಹರಣೆ ಇಲ್ಲ, ಇವತ್ತು ಕೃಷಿಕರಿಗೆ ಕೃಷಿ ಚಟುವಟಿಕೆಗೆ ಯಂತ್ರೋಪಕರಣಗಳ ಮೂಲಕ ಕೃಷಿ ಮಾಡದಂತಹ ಪರಿಸ್ಥಿತಿಯನ್ನು ರಾಜ್ಯ ಸರಕಾರ ತಂದಿದೆ. ಸರಕಾರ ತಕ್ಷಣ ಈ ಸುತ್ತೋಲೆ ವಾಪಸು ಪಡೆದುಕೊಂಡು ಕೃಷಿಕರಿಗೆ ಈ ಮೊದಲಿನಂತೆ ಕ್ಯಾನ್ ಹಾಗೂ ಬಾಟಲಿಯಲ್ಲಿ ಇಂಧನ ಪಡೆದುಕೊಳ್ಳುವ ವ್ಯವಸ್ಥೆ ಮಾಡಬೇಕು. ಇಲ್ಲದೆ ಹೋದಲ್ಲಿ, ಕೃಷಿಕರು ಬೀದಿಗೆ ಇಳಿದು ಹೋರಾಟ ಮಾಡುವುದು ಅನಿವಾರ್ಯ ಎಂದು ಹೇಳಿದರು.

ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ವಿಜಯ ಕುಮಾರ್ ರೈ ಕೋರಂಗ, ಭಾರತೀಯ ಕಿಸಾನ್ ಸಂಘದ ಪ್ರಾಂತ ಕಾರ್ಯದರ್ಶಿ ರಾಮ್ ಪ್ರಸಾದ್, ಸೇವಾ ಭಾರತಿಯ ಧನಂಜಯ ಬೆದ್ರೋಡಿ, ಉಪ್ಪಿನಂಗಡಿ ಸಿಎ ಬ್ಯಾಂಕ್ ಅಧ್ಯಕ್ಷ ಸುನೀಲ್ ದಡ್ಡು, ವಿಹಿಂಪ ಪುತ್ತೂರು ಅಧ್ಯಕ್ಷ ಸುದರ್ಶನ್ ಉಪಸ್ಥಿತರಿದ್ದರು.

ಸುತ್ತ ಮುತ್ತ

ಇಂದು ಉದ್ಯೋಗ ಮಾಹಿತಿ ಶಿಬಿರ

ಕಾಸರಗೋಡು: ಎಸ್ಸೆಸೆಲ್ಸಿ ಮತ್ತು ಪ್ಲಸ್‌ಟು ತೇರ್ಗಡೆಯಾದ, ತೇರ್ಗಡೆಯಾಗಲಿರುವ ವಿದ್ಯಾರ್ಥಿಗಳಿಗೆ ಶಿಕ್ಷಣ ಮತ್ತು ಉದ್ಯೋಗದ ಬಗ್ಗೆ, ಮುಂದಿನ ಶೈಕ್ಷಣಿಕ ವ್ಯವಸ್ಥೆಯ ಕುರಿತು ಸಮಗ್ರ ಮಾಹಿತಿ ಶಿಬಿರವು ಮೇ 17ರಂದು ಬೆಳಗ್ಗೆ 10 ಗಂಟೆಗೆ ಕರಂದಕ್ಕಾಡು ಮಾಸ್ಟರ್ ಕೋಚಿಂಗ್ ಸೆಂಟರ್‌ನಲ್ಲಿ ಜರಗಲಿದೆ. ಆಸಕ್ತರು ತಮ್ಮ ಹೆಸರನ್ನು ಗಣೇಶ್‌ಪ್ರಸಾದ್ ಪಾಣೂರು ಅವರ 9496237601 ಮೊಬೈಲ್ ನಂಬರ್‌ಗೆ ಕರೆ ಮಾಡಿ ನೋಂದಾಯಿಸಿಕೊಳ್ಳಬಹುದು ಎಂದು ಕೇಂದ್ರದ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 20ರಂದು ಅತಿಥಿ ಉಪನ್ಯಾಸಕರ ನೇಮಕಾತಿ

ಕಾಸರಗೋಡು: ಚೆರುವತ್ತೂರು ಸರಕಾರಿ ಐಟಿಐ ವಿದ್ಯಾಸಂಸ್ಥೆಯಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿಗೆ ಸಂದರ್ಶನ ಮೇ 20 ರಂದು ಬೆಳಿಗ್ಗೆ 11ಕ್ಕೆ ಕೋಝಿಕ್ಕೋಡು ಸಿವಿಲ್ ಸ್ಟೇಷನ್‌ನಲ್ಲಿರುವ ಉತ್ತರ ವಲಯ ತರಬೇತಿ ನಿರೀಕ್ಷಕರ ಕಚೇರಿಯಲ್ಲಿ ನಡೆಯಲಿದೆ.

ನಾಗರಿಕ ಸೇವಾ ಪರೀಕ್ಷಾ ತರಬೇತಿ: ಅರ್ಜಿ ಆಹ್ವಾನ

ಕಾಸರಗೋಡು: ಕೈಲೆ ಐಎಎಸ್ ಅಕಾಡೆಮಿಯಲ್ಲಿ ನಾಗರಿಕ ಸೇವಾ ಪೂರ್ವಭಾವಿ / ಮುಖ್ಯ ಪರೀಕ್ಷಾ ತರಬೇತಿಗಾಗಿ ಕೇರಳ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಾಯಿಸಲಾದ ಕಾರ್ಮಿಕರ ಪದವಿ ಅವಲಂಬಿತರಿಂದ ಅರ್ಜಿಗ ಳನ್ನು ಆಹ್ವಾನಿಸಲಾಗಿದೆ. ಕಾಸರಗೋಡು ಜಿಲ್ಲೆಯವರಿಗೆ ಮಾಹಿತಿಗೆ 0467 2206737 ಕರೆ ಮಾಡಬಹುದು.

ಬೀಂಬುಂಗಾಲ್ ಧ್ವನಿ ಸರ್ಗಾ ವೇದಿಕೆ ಮಧುರ ಬೇಸಿಗೆ ಶಿಬಿರ ಮುಕ್ತಾಯ

ಕಾಸರಗೋಡು: ಬೇಡಡ್ಕ ಬೀಂಬುಂಗಾಲ್ ಧ್ವನಿ ಸರ್ಗಾ ವೇದಿಕೆ ಇದರ ನೇತೃತ್ವದಲ್ಲಿ ಮಕ್ಕಳಿಗಾಗಿ ಆಯೋಜಿಸಲಾಗಿದ್ದ ಮೂರು ದಿನಗಳ ಮಧುರ ಬೇಸಿಗೆ ಶಿಬಿರ ಮುಕ್ತಾಯಗೊಂಡಿತು. ಹೊಸ ಯುಗದಲ್ಲಿ ಜೀವನ ಕೌಶಲ್ಯಗಳ ಬೆಳವಣಿಗೆಗೆ ಅಗತ್ಯವಾದ ಮೂಲ ಅಂಶಗಳ ಕುರಿತು ತಜ್ಞರು ತರಬೇತಿ ನೀಡಿದರು. ಸಮಾರೋಪವನ್ನು ಹೊಸದುರ್ಗ ತಾಲೂಕು ತಹಶೀಲ್ದಾರ್ ಜಿ.ಸುರೇಶ್‌ಬಾಬು ಉದ್ಘಾಟಿಸಿದರು. ಆಯೋಜನಾ ಸಮಿತಿ ಅಧ್ಯಕ್ಷ ಕೆ.ಬಾಲಕೃಷ್ಣನ್ ಅಧ್ಯಕ್ಷತೆ ವಹಿಸಿದ್ದರು. ಕಣ್ಣೂರು ನಗರ ಪೊಲೀಸ್ ಆಯುಕ್ತ ಪಿ.ನಿತಿನ್‌ರಾಜ್, ನಟ ಪಿ.ಪಿ.ಕುಂಞಿಕೃಷ್ಣನ್ ಅತಿಥಿಯಾಗಿದ್ದರು. ಬೇಡಡ್ಕ ಪಂ. ಸದಸ್ಯೆ ಟಿ.ಮಾಧವಿ, ಟಿ.ವರದರಾಜ್, ಶ್ರೀಜಿತ್ ವಿ., ಅಭಿಲಾಷ್ ವಿ., ವಿನೋದ್, ಗೋಪಾಲ ಕೃಷ್ಣ, ಉಮಾ ತಾರಾನಾಥ್ ಉಪಸ್ಥಿತರಿದ್ದರು. ಶಿಬಿರದ ನಿರ್ದೇಶಕ ಉದಯನ್ ಕುಂಡಂಗುಳಿ ಶಿಬಿರ ನಡೆಸಿದರು. ಲಾಂಛನ ವಿನ್ಯಾಸಗೊಳಿಸಿದ ನಿವೃತ್ತ ಪೋಸ್ಟ್ ಮಾಸ್ಟರ್ ಬಿ.ಗಂಗಾಧರನ್ ಮತ್ತು ರಚನಾ ಅಬ್ಬಾಸ್, ಎನ್‌ಎಂಎಂಎಸ್ ವಿದ್ಯಾರ್ಥಿ ವೇತನ ವಿಜೇತೆ, ಶಲಿರ್ ಬಾಲವೇದಿಕೆ ಕಾರ್ಯದರ್ಶಿ ಲಯಾ ರಾಘವನ್ ಅವರನ್ನು ಅಭಿನಂದಿಸಲಾಯಿತು. ಟಿ.ತಾರಾನಾಥ್ ಸ್ವಾಗತಿಸಿ, ರತೀಶ್ ಮದಕ ವಂದಿಸಿದರು.

ಕೃಷಿ ಯೋಜನೆಗಳಿಗೆ ಅರ್ಜಿ ಆಹ್ವಾನ

ಪೆರ್ಲ: ಎಣ್ಮಕಜೆ ಗ್ರಾ.ಪಂ.ನಿಂದ 2026–27ನೇ ಜನಪರ ಯೋಜನೆ ಪ್ರಕಾರ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಎಣ್ಮಕಜೆ ಕೃಷಿ ಭವನದ ಮುಖಾಂತರ ಅನುಷ್ಠಾನಗೊಳ್ಳಲಿರುವ ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಅಡಿಕೆ ಕೃಷಿಗೆ ಮೈಲುತ್ತುತ್ತು ಹಾಗೂ ಸುಣ್ಣ ವಿತರಣೆ, ಭತ್ತ ಕೃಷಿಗೆ ಕೂಲಿ ವೆಚ್ಚದ ಧನಸಹಾಯ, ತೆಂಗಿನ ಮರಗಳಿಗೆ ಪೊಟ್ಯಾಷ್ ವಿತರಣೆ, ಅಡಿಕೆ ಕೃಷಿಗೆ ಪೊಟ್ಯಾಷ್ ವಿತರಣೆ, ಹಣ್ಣಿನ ಗಿಡಗಳ ವಿತರಣೆ, ಅಡಿಕೆ ಮರದ ಎಲೆ ಚುಕ್ಕಿ ರೋಗ ನಿಯಂತ್ರಣಕ್ಕಾಗಿ ಕೀಟನಾಶಕ ಖರೀದಿಸಲು ಸಬ್ಸಿಡಿ, ಅಡಿಕೆ ಕೃಷಿಗೆ ಜೈವಿಕ ಗೊಬ್ಬರ ವಿತರಣೆ, ಗೋಡಂಬಿ ಸಸಿಗಳ ವಿತರಣೆ ಇತ್ಯಾದಿಗಳಿಗೆ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಫಾರಂ ಎಣ್ಮಕಜೆ ಕೃಷಿ ಭವನ, ಎಣ್ಮಕಜೆ ಗ್ರಾ.ಪಂ.ಕಚೇರಿಯಲ್ಲಿ ಲಭಿಸುವುದು. ಫಲಾನುಭವಿಗಳು 2026–27ನೇ ಸಾಲಿನ ಭೂ ತೆರಿಗೆ ಪಾವತಿಸಿದ ರಶೀದಿ, ಬ್ಯಾಂಕ್ ಪಾಸ್ ಬುಕ್ ಪ್ರತಿ, ಆಧಾರ್ ಕಾರ್ಡ್ ಪ್ರತಿ ದಾಖಲೆಗಳೊಂದಿಗೆ ಮೇ 22ರ ಒಳಗಡೆ ಕೃಷಿ ಭವನದಲ್ಲಿ ಅರ್ಜಿ ಸಲ್ಲಿಸಲು ಕೋರಲಾಗಿದೆ.

ಅರ್ಜಿಗಳ ಆಹ್ವಾನ

ಕಾಸರಗೋಡು: ಕಾಞಂಗಾಡು ನಗರಸಭಾ ವ್ಯಾಪ್ತಿಯ ಮಹಿಳಾ – ಮಕ್ಕಳ ಆಸ್ಪತ್ರೆಯಲ್ಲಿ ತಾತ್ಕಾಲಿಕ ಭದ್ರತಾ ಸಿಬ್ಬಂದಿ ನೇಮಕಾತಿಗೆ ನಿವೃತ್ತ ಸೈನಿಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿದಾರರು ಮೇ 23 ರಂದು ಬೆಳಿಗ್ಗೆ 11 ಗಂಟೆಗೆ ಕಾಞಂಗಾಡು ನಗರಸಭಾ ಕಚೇರಿಯಲ್ಲಿ ನಡೆಯುವ ಸಂದರ್ಶನದಲ್ಲಿ ಮೂಲ ದಾಖಲೆಗಳೊಂದಿಗೆ ಹಾಜರಾಗಬೇಕು. ಮಾಹಿತಿಗೆ 0467 2204530 ಕರೆ ಮಾಡಬಹುದು.

ಮೇ 25ರಿಂದ ಪ್ಲಸ್‌ವನ್ ಪ್ರವೇಶ

ಕಾಸರಗೋಡು: ಕೇರಳದಲ್ಲಿ ಪ್ಲಸ್‌ವನ್ ತರಗತಿಗಿರುವ ಪ್ರವೇಶಾತಿ ಪ್ರಕ್ರಿಯೆ ಮೇ 25ರಂದು ಆರಂಭಗೊಳ್ಳಲಿದೆ. ಏಕಕಿಂಡಿ ವ್ಯವಸ್ಥೆಯ ಮೂಲಕ ಆನ್‌ಲೈನ್‌ನಲ್ಲಿ ಪ್ಲಸ್‌ವನ್ ಪ್ರವೇಶಕ್ಕೆ ಅರ್ಜಿ ಸಲ್ಲಿಸಬೇಕಾಗಿದೆ. ಅಗತ್ಯವೆನಿಸಿದಲ್ಲಿ ಪ್ಲಸ್‌ವನ್ ಸೀಟುಗಳ ಸಂಖ್ಯೆ ಹೆಚ್ಚಿಸಲಾಗುವುದೆಂದು ರಾಜ್ಯ ಶಿಕ್ಷಣ ಇಲಾಖೆ ತಿಳಿಸಿದೆ.

ಟೆಂಡರ್ ಆಹ್ವಾನ

ಮುಳ್ಳೇರಿಯ: ಕುಂಬ್ಡಾಜೆ ಗ್ರಾ.ಪಂ.ನ 2026–27ನೇ ವಾರ್ಷಿಕ ಯೋಜನೆಯಲ್ಲಿ ಸೇರಿಸಲಾದ ವಿವಿಧ ಲೋಕೋಪಯೋಗಿ ಕಾಮಗಾರಿಗಳ ಕೈಗೊಳ್ಳಲು, ಅನುಷ್ಠಾನಗೊಳಿಸಲು ಅನುಮೋದಿತ ಗುತ್ತಿಗೆದಾರರಿಂದ ಸ್ಪರ್ಧಾತ್ಮಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರ್ಮ್ ಸ್ವೀಕರಿಸಲು ಕೊನೆ ದಿನಾಂಕ ಮೇ 22 ರಂದು ಸಂಜೆ 6 ಗಂಟೆ ಆಗಿದೆ. ಟೆಂಡರ್‌ಗಳನ್ನು ಮೇ 23 ರಂದು ಸಂಜೆ 6 ಕ್ಕೆ ತೆರೆಯಲಾಗುತ್ತದೆ. ಮಾಹಿತಿಗೆ 04998 260237 ಕರೆ ಮಾಡಬಹುದು.

ದತ್ತಿನಿಧಿ ಪ್ರಶಸ್ತಿ ಪ್ರದಾನ, ಕನ್ನಡ ಸಂಸ್ಕೃತಿ ಉತ್ಸವ ಉದ್ಘಾಟಿಸಿ ಸೋಮಣ್ಣ ಬೇವಿನಮರದ ಅಭಿಮತ

ವ್ಯಕ್ತಿಯನ್ನು ಶಕ್ತಿಯಾಗಿ ಬೆಳೆಸುವಲ್ಲಿ ಶಿಕ್ಷಣದ ಪಾತ್ರ ಮಹತ್ತರ

ಮಂಜೇಶ್ವರ: ಮಾತೃಭಾಷೆಯಲ್ಲಿ ಶಿಕ್ಷಣ ನೀಡುವ ವಿದ್ಯಾಸಂಸ್ಥೆಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಸರಕಾರವು ಕಾಲಕಾಲಕ್ಕೆ ಅಗತ್ಯದ ಅನುದಾನಗಳನ್ನು ರಾಜ್ಯದೊಳಗಷ್ಟೇ ಅಲ್ಲದೆ ಹೊರ ರಾಜ್ಯಗಳಲ್ಲೂ ನೀಡಿ ಬೆಂಬಲಿಸುತ್ತಿದೆ ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಅಭಿಪ್ರಾಯ ವ್ಯಕ್ತಪಡಿಸಿದರು.

ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಬೆಂಗಳೂರು ಇವುಗಳ ಜಂಟಿ ಆಶ್ರಯದಲ್ಲಿ ಪೈವಳಿಕೆ ಚೇವಾರು ಸಮೀಪದ ಕುಡಾಲುಮೇರ್ಕಳ ಅನುದಾನಿತ ಕಿ.ಪ್ರಾ. ಶಾಲಾ ವಠಾರದಲ್ಲಿ ಶನಿವಾರ ನಡೆದ ಕನ್ನಡ ಸಂಸ್ಕೃತಿ ಉತ್ಸವ ಉದ್ಘಾಟಿಸಿ, ದತ್ತಿನಿಧಿ ಪ್ರಶಸ್ತಿ ಪ್ರದಾನಗೈದು ಅವರು ಮಾತನಾಡಿದರು.

ಕಾಸರಗೋಡು ಜಿ.ಪಂ. ಸದಸ್ಯ ಸೋಮಶೇಖರ ಜೆ.ಎಸ್. ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಕನಿಷ್ಠ ವೇತನ ಆಯೋಗ ಅಧ್ಯಕ್ಷ ಟಿ.ಎಂ.ಶಹೀದ್ ತೆಕ್ಕಿಲ್, ಮಂಜೇಶ್ವರ ಬ್ಲಾಕ್ ಪಂ. ಅಧ್ಯಕ್ಷ ಸೈಫುಲ್ಲ ತಂಙಳ್,



ಕಲ್ಲೂರ ಪ್ರತಿಷ್ಠಾನ ಎಸ್.ಪ್ರದೀಪ್ ಕುಮಾರ್ ಕಲ್ಲೂರ, ಪೈವಳಿಕೆ ಗ್ರಾ.ಪಂ ಸ್ಥಾಯೀ ಸಮಿತಿ ಅಧ್ಯಕ್ಷ ಶ್ರೀನಿವಾಸ ಮಾಸ್ತರ್ ಕೆ.ಎಚ್., ಪಂ. ಸದಸ್ಯೆ ಶಶಿಕಲಾ ರೈ, ಕಸಾಪ ಕೇರಳ ಗಡಿನಾಡ ಘಟಕದ ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ ಅತಿಥಿಯಾಗಿದ್ದರು. ವಿವಿಧ ವಲಯಗಳ ಪ್ರಮುಖರಾದ ಗೋಪಾಲ ಶೆಟ್ಟಿ ಅರಿಬೈಲು, ಪುಷ್ಪರಾಜ್ ಬಿ.ಎಸ್., ಶ್ರೀನಿವಾಸ ನಾಯಕ್ ಇಂದಾಜೆ, ರಾಧಾಕೃಷ್ಣ ಕೆ. ಉಳಿಯತ್ತಡ್ಕ, ಶಿವಾನಂದ ಕೋಟ್ಯಾನ್, ಶಿವ ರೆಡ್ಡಿ ಖ್ಯಾಡೆದ್,

ಸನ್ಮಾನಿತರು

ಪ್ರಮುಖ ಸಾಧಕರಾದ ಗೋನಾಸ್ವಾಮಿ ಬೆಂಗಳೂರು, ಸಂದೀಪ್ ಪುರಂದರ ಶೆಟ್ಟಿ, ಬಿ.ಎ. ಖಾದರ್ ಹಾಜಿ, ಡಾ.ಶಶಿಧರ ಎಚ್. ದೊಡ್ಡಮನಿ, ಝುಹೀಂ ಕುಬಣೂರು, ಮೊಹಮ್ಮದ್ ಝುಯಾನ್ ಇಸ್ಮಾಯಿಲ್ ಪಿ. ಅವರನ್ನು ದೀಪಕ್ ವಿ.ಕೆ. ಸನ್ಮಾನಿಸಿದರು.

ಮಾದರಿಯಾಗಿದೆ

ಸುಶಿಕ್ಷಿತ ಸಮಾಜ ನಿರ್ಮಾಣದಲ್ಲಿ ಶಿಕ್ಷಣ ಪ್ರಮುಖ ಅಂಗವಾಗಿದ್ದು, ಜನರು– ಸಾಮಾಜಿಕ ವ್ಯವಸ್ಥೆ ಜೋಡಿಸುವ ಕೈಂಕರ್ಯದಲ್ಲಿ ನಿರತರಾಗಿರುವ ಪತ್ರಕರ್ತರ ಬಹುಮುಖದ ಪ್ರಯತ್ನಗಳು ಗಡಿನಾಡು ಕಾಸರಗೋಡಲ್ಲಿ ಶ್ಲಾಘನೀಯ. ಸವಾಲುಗಳ ನಡುವೆ ಗಡಿನಾಡಿನ ಕನ್ನಡ ಪತ್ರಕರ್ತರು ಸಂಘಟಿತರಾಗಿ ನಡೆಸುತ್ತಿರುವ ಚಟುವಟಿಕೆಗಳು ಇತರೆಡೆಗಳಿಗೆ ಮಾದರಿಯಾದುದು.

● **ಸೋಮಣ್ಣ ಬೇವಿನಮರದ**

ಎನ್.ಚನಿಯಪ್ಪ ನಾಯ್ಕ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ, ಸಂಘಟಕ ಎ.ಆರ್. ಸುಬ್ಬಯ್ಯಕಟ್ಟೆ ಪಾಲ್ಗೊಂಡಿದ್ದರು.

ಮಾಧ್ಯಮ ಕ್ಷೇತ್ರದ ಸಾಧಕ ಬಿ.ಎಂ.ಹನೀಫ್, ಕುರಿಯ ವಾಸುದೇವ ಎಂ.ಹೊಳ್ಳ ಡಾ. ಯು. ಎಂ.ರವಿ, ಪುಂಡಲೀಕ ಭೀಮಪ್ಪ ಬಾಲೋಜಿ, ವಿಜಯಲಕ್ಷ್ಮೀ ಶಿಬರೂರು, ಎಚ್.ಇ.ರವಿ ಸೋಮವಾರಪೇಟೆ, ವಿಶ್ವನಾಥ್ ಬೆಳಗಲ್ ಮಠ ಕೊಪ್ಪಳ, ಪ್ರಕಾಶ್ ಸುವರ್ಣ ಕಟಪಾಡಿ, ದೇವೇಂದ್ರಪ್ಪ ಆವಂಟಿ ಗುಲ್ಬರ್ಗ, ಸತೀಶ್ ಇರಾ, ಸುಭಾಷ್ ಶಿರಿಯ, ಹರೀಶ್ ಮಾಂಬಾಡಿ, ನವೀನ್ ಡಿಸೋಜ ಕೊಡಗು, ಶಂಸುದ್ದೀನ್ ಎಣ್ಣೂರು, ಎ.ಆರ್.ಚಿದಂಬರ ಕೊರಟಗೆರೆ ತುಮಕೂರು, ಕೆ.ಆರ್.ಮಂಜುನಾಥ ಹಾಸನ, ತೆಕ್ಕೇಕರ ಶಂಕರನಾರಾಯಣ ಭಟ್, ಸುಬ್ಬಣ್ಣ ಶೆಟ್ಟಿ ಕುಚ್ಚಿಕ್ಕಾಡು ಅವರಿಗೆ ದತ್ತಿನಿಧಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರವಿ ನಾಯ್ಕಾಪು ಸ್ವಾಗತಿಸಿದರು. ಗಂಗಾಧರ ತೆಕ್ಕೆಮೂಲೆ ವಂದಿಸಿದರು. ಸೌಮ್ಯಾ ಗೌಡ ಬೆಂಗಳೂರು ನಿರೂಪಿಸಿದರು. ಕಾರ್ಯಕ್ರಮದ ಅಂಗವಾಗಿ ಆಯೋಜಿಸಲಾಗಿದ್ದ ಶೋಭಾಯಾತ್ರೆಗೆ ಜಿಟಿಗುಟ್ಟುವ ಮಳೆಯ ನಡುವೆ ಪೈವಳಿಕೆ ಗ್ರಾ.ಪಂ.ಅಧ್ಯಕ್ಷೆ ಬದರುನ್ನೀಸ ಸಲೀಂ, ಸೀತಾರಾಮ ಶೆಟ್ಟಿ ಭಂಡಾರಗುತ್ತು ಚಾಲನೆ ನೀಡಿದರು.


ಪೆರಿಯ ಗೋಕುಲಂ ಗೋಶಾಲೆಯಲ್ಲಿ ಮನಸೆಳೆದ ರಮ್ಯಾ ವರ್ಣ ಭರತನಾಟ್ಯ

ಕಾಸರಗೋಡು: ಪೆರಿಯ ಬೇಕಲ ಗೋಕುಲಂ ಗೋಶಾಲೆಯಲ್ಲಿ ಪರಂಪರಾ ವಿದ್ಯಾಪೀಠದಿಂದ ಧೇನು ಮಂಟಪದಲ್ಲಿ ಆಯೋಜಿಸಲಾದ ವೈಶಾಖ ನಟನಂ – 2026 ಭಕ್ತಿಮಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಾಟ್ಯ ಕಲಾರತ್ನ ಗುರು ಡಾ.ಗಾಯತ್ರಿ ಚಂದ್ರಶೇಖರ್ ಅವರ ಶಿಷ್ಯೆ ರಮ್ಯಾ ವರ್ಣ ಅವರ ಭರತನಾಟ್ಯ ಪ್ರದರ್ಶನವು ಮನಮೋಹಕವಾಗಿ ಮೂಡಿಬಂತು.

ಅಸೈಂತಾಡುಂ ಮಯಿಲ್ ಎಂಬ ಕೃತಿ ಯಲ್ಲಿ ಅವರು ನವಿಲಿನ ಸೌಂದರ್ಯ ಮತ್ತು ಲಾಸ್ಯವನ್ನು ಅಪೂರ್ವವಾಗಿ ಅಭಿವ್ಯಕ್ತಪಡಿಸಿದರು. ಮಳೆಯ ಹನಿಗಳ ನಡುವೆ ತನ್ನ ರೆಕ್ಕೆಗಳನ್ನು ಬಿಚ್ಚಿ ನೃತ್ಯ ಮಾಡುವ ನವಿಲಿನ ನಾಜೂಕಾದ ಚಲನೆಗಳು, ಅದರ ಸೊಗಸಾದ ನಡೆ ಹಾಗೂ ಲಯಬದ್ಧ ಹೆಜ್ಜೆಗಳು ಅವರ ನೃತ್ಯದಲ್ಲಿ ಜೀವಂತವಾಗಿ ಪ್ರತಿಫಲಿಸಿದವು.

ಮಾಡು ಮೆಕ್ಕುಂ ಕಣ್ಣೇ ಅಭಿನಯದಲ್ಲಿ ಬಾಲಕೃಷ್ಣನ ತುಂಟತನ, ಕುಚೋದ್ಯ, ಮುದ್ದಾದ ಬಾಲಲೀಲೆಗಳನ್ನು ಭರತನಾಟ್ಯದಲ್ಲಿ ನಿರೂಪಿಸಿದರು.

ಯಶೋಧೆಯ ಮುಂದೆ ನಿರಪರಾಧಿಯಾಗಿ ನಿಂತ ಕೃಷ್ಣನ ಭಾವಭಂಗಿಗಳು ಅವರ ಮುಖಾಭಿನಯದಲ್ಲಿ ಸಹಜವಾಗಿ ಮೂಡಿಬಂದವು. ಬಾಗಿಲನು ತೆರೆದು ಎಂಬ ಕೃತಿಯಲ್ಲಿ ಗಜೇಂದ್ರ ಮೋಕ್ಷ, ನರಸಿಂಹ – ಪ್ರಹ್ಲಾದ ಮತ್ತು ದ್ರೌಪದಿ ರಕ್ಷಣೆಯ ಮೂರು





ಪೌರಾಣಿಕ ಪ್ರಸಂಗಗಳನ್ನು ಅವರು ಅದ್ಭುತ ಭಾವನೆಗಳ ಮೂಲಕ ಪ್ರದರ್ಶಿಸಿದರು.

ಸಂಕಟದಲ್ಲಿ ಸಿಲುಕಿದ ಗಜೇಂದ್ರನ ಆರ್ತನಾದ, ಪ್ರಹ್ಲಾದನ ಅಚಲ ಭಕ್ತಿ, ನರಸಿಂಹನ ಉಗ್ರ ಅವತಾರ ಹಾಗೂ ದ್ರೌಪದಿಯ ಸಂಪೂರ್ಣ ಶರಣಾಗತಿ ಈ ಎಲ್ಲಾ ಭಾವಗಳನ್ನು ರಮ್ಯಾ ವರ್ಣ ಅವರು ಅತ್ಯಂತ ನಯವಾಗಿ ಮತ್ತು ಮನೋಜ್ಞವಾಗಿ ವ್ಯಕ್ತಪಡಿಸಿದರು.

ಮುಂದುವರಿದ ರೈಲ್ವೆಗೇಟ್ ಸಮಸ್ಯೆ: ಶೀಘ್ರ ಪರಿಹಾರಕ್ಕೆ ನಾಗರಿಕರ ಆಗ್ರಹ



ಮಂಜೇಶ್ವರ: ಬಹುತೇಕ ಬಾರಿ ಹೊಸಂಗಡಿ ರೈಲ್ವೆ ಗೇಟ್ ಮುಚ್ಚಿ ನಂತರ ರೈಲುಗಾಡಿ ಹಾದುಹೋದ ಬಳಿಕ ಗೇಟ್ ತೆರೆಯಲು ಕಾಲವಿಳಂಬವಾಗುತ್ತಿರುವುದು ಕಂಡುಬರುತ್ತಿದೆ. ಇದರಿಂದ ಬಂಗ್ರಮಂಜೇಶ್ವರ ಒಳ ರೂಟ್‌ಗೆ ಪ್ರವೇಶಿಸಬೇಕಾದ ವಾಹನಗಳ ಸರದಿ ಸಾಲು ರಾಷ್ಟ್ರೀಯ ಹೆದ್ದಾರಿ ತನಕ ತಲುಪುತ್ತಿರುವುದರಿಂದ ಇತರ ವಾಹನಗಳ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿದೆ.

ಈ ಹಿನ್ನೆಲೆ ಹೊಸಂಗಡಿ ಪೇಟೆ ಕೇಂದ್ರೀಕರಿಸಿ ಮೇಲ್ಸೇತುವೆ ನಿರ್ಮಿಸಿ ಸುಗಮ ವಾಹನ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ. ರೈಲ್ವೆ ಗೇಟ್ ಮುಚ್ಚಿದ ನಂತರ ಮತ್ತೆ ತೆರೆಯಲು ಸುಮಾರು 20 ನಿಮಿಷಗಳ ಕಾಲ ಬೇಕಾಗುತ್ತದೆ. ಈ ನಿಟ್ಟಿನಲ್ಲಿ ಹೊಸಂಗಡಿ ಪೇಟೆಯಿಂದ ಬಂಗ್ರಮಂಜೇಶ್ವರ ಭಾಗಗಳಿಗೆ ತೆರಳಬೇಕಾದ ಭಾರೀ ಪ್ರಮಾಣದ ವಾಹನಗಳು ಸಾಲು ಸಾಲಾಗಿ ರಾಷ್ಟ್ರೀಯ ಹೆದ್ದಾರಿ ತನಕ ತಲುಪುತ್ತವೆ.

ಈ ಸಮಸ್ಯೆಯಿಂದ ರಾಷ್ಟ್ರೀಯ ಹೆದ್ದಾರಿಯ ಸರ್ವೀಸ್ ರಸ್ತೆಯಲ್ಲಿ ಅತ್ತಿತ್ತ ಓಡಾಡುವ ಇತರ ವಾಹನಗಳ ಸಂಚಾರಕ್ಕೆ ತೊಂದರೆ ಎದುರಾಗುತ್ತಿದೆ. ಈ ಮಧ್ಯೆ ಹೆದ್ದಾರಿ ಅಭಿವೃದ್ಧಿಯಿಂದ ರೈಲ್ವೆ ಗೇಟ್ ಬಳಿಯಲ್ಲಿ ವಾಹನನಿಲುಗಡೆಸ್ಥಳದಲ್ಲೂಸಮಸ್ಯೆತಲೆದೋರಿರುವುದಾಗಿ ಸಾರ್ವಜನಿಕರು ದೂರಿದ್ದಾರೆ.

ಸಮಸ್ಯೆಯಾಗುತ್ತಿದೆ

ಕೆಲವೇ ನಿಮಿಷದಲ್ಲಿ ರೈಲುಗಾಡಿ ಹಾದು ಹೋದಲ್ಲಿ ಸಾರ್ವಜನಿಕರಿಗೆ ಅನುಕೂಲವಾಗ ಬಹುದಿತ್ತು. ದಿನದಲ್ಲಿ ಹಲವಾರು ಬಾರಿ ರೈಲ್ವೆ ಗೇಟ್ ಮುಚ್ಚಲಾಗುತ್ತದೆ. ಕೆಲವೊಮ್ಮೆ ಗೇಟ್ ಬಂದ್ ಮಾಡಿದ ನಂತರ ರೈಲುಗಳ ಸಂಚಾರ ಭಾರೀ ವಿಳಂಬವಾಗುತ್ತಿರುವುದಾಗಿ ತಿಳಿಸಲಾಗಿದೆ. ಹೊಸಂಗಡಿ ರೈಲ್ವೆ ಗೇಟ್ ಪ್ರದೇಶದಲ್ಲಿ ಮೇಲ್ಸೇತುವೆ ನಿರ್ಮಿಸಬೇಕೆಂಬುದು ಸಾರ್ವಜನಿಕರ ಹಲವಾರು ವರ್ಷಗಳ ಕನಸಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಇನ್ನಾದರೂ ಮೇಲ್ಸೇತುವೆ ನಿರ್ಮಾಣಕ್ಕೆ ಅಗತ್ಯ ಯೋಜನೆ ರೂಪಿಸಿ ಕಾರ್ಯಗತಗೊಳಿಸಬೇಕೆಂದು ನಾಗರಿಕರು ಆಗ್ರಹಿಸಿದ್ದಾರೆ.

ಎಸ್ಸೆಸೆಲ್ಸಿ ಪರೀಕ್ಷೆ: ಸೂರಂಬೈಲು ಶಾಲೆಯ ವಿದ್ಯಾರ್ಥಿಗಳ ಸಾಧನೆ



ಕುಂಬಳೆ: ಈ ಬಾರಿಯ ಕೇರಳ ಎಸ್ಸೆಸೆಲ್ಸಿ ಪರೀಕ್ಷೆಯಲ್ಲಿ ಸೂರಂಬೈಲು ಸರಕಾರಿ ಪ್ರೌಢಶಾಲೆಯ 8 ಮಂದಿ ವಿದ್ಯಾರ್ಥಿಗಳು ಎಲ್ಲಾ ವಿಷಯಗಳಲ್ಲಿ 'ಎ' ಪ್ಲಸ್ ಗಳಿಸಿದ್ದಾರೆ. ವಿದ್ಯಾರ್ಥಿಗಳಾದ ಆಯಿಷತ್ ಜಸ್ನ, ಚಹನ ಕೆ., ನಿರೀಕ್ಷ ಸಿ.ಎಚ್., ಶಿನಿಶ್ ಎಸ್.ಪಿ., ಶ್ರದ್ಧಾ ಎ.ಎಸ್., ಉಜ್ವಲ್, ವರ್ಷ ಬಿ., ವಿಸ್ಮಯ ಬಿ. ಎಲ್ಲಾ ವಿಷಯಗಳಲ್ಲಿ 'ಎ' ಪ್ಲಸ್ ಗ್ರೇಡ್ ಪಡೆ ದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಶಾಲಾ ರಕ್ಷಕ ಶಿಕ್ಷಕ ಸಂಘ ಅಭಿನಂದನೆ ಸಲ್ಲಿಸಿದೆ.

ಕಾಯರ್‌ಕಟ್ಟೆ ಶಾಲೆ: ಎಸ್ಸೆಸೆಲ್ಸಿ ಸಾಧಕರು



ಮಂಜೇಶ್ವರ: ಈ ಬಾರಿಯ ಕೇರಳ ಎಸ್ಸೆಸೆಲ್ಸಿ ಪರೀಕ್ಷೆಯಲ್ಲಿ ಪೈವಳಿಕೆ ಕಾಯರ್‌ಕಟ್ಟೆ ಸರಕಾರಿ ಹೈಯರ್ ಸೆಕೆಂಡರಿ ಶಾಲೆಗೆ ಶೇಕಡಾ 100 ಫಲಿತಾಂಶ ದಾಖಲಾಗಿದೆ. ಶಾಲೆಯ ವಿದ್ಯಾರ್ಥಿನಿ ಜಯಶ್ರೀ ಎಲ್ಲಾ ವಿಷಯಗಳಲ್ಲಿ 'ಎ' ಪ್ಲಸ್ ಪಡೆದಿದ್ದಾರೆ. ಅಲ್ಲದೆ ಸಮನ್ವಿ ಮತ್ತು ಧನುಷ್ ಡಿ.ಆರ್. 9 ವಿಷಯಗಳಲ್ಲಿ 'ಎ' ಪ್ಲಸ್, ಯಶ್ವಿತಾ, ರೋಹಿತ್ 8 ವಿಷಯ ಗಳಲ್ಲಿ 'ಎ' ಪ್ಲಸ್ ಗಳಿಸಿ ಕೀರ್ತಿ ಪಡೆದಿದ್ದಾರೆ. ಇವರಿಗೆ ಶಾಲಾ ಮುಖ್ಯೋಪಾಧ್ಯಾಯರು, ಶಿಕ್ಷಕರು ಹಾಗೂ ಆಡಳಿತ ಮಂಡಳಿ ಅಭಿನಂದನೆ ಸಲ್ಲಿಸಿದೆ.

ಕೇಂದ್ರೀಯ ವಿವಿ: ಖಾಲಿಯಿರುವ ಸೀಟುಗಳು

ಕಾಸರಗೋಡು: ಕಾಸರಗೋಡಿನ ಕೇಂದ್ರೀಯ ವಿದ್ಯಾಲಯದಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದ ವಿವಿಧ ತರಗತಿಗಳಿಗೆ ಆಫ್‌ಲೈನ್ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮೇ 18 ರಿಂದ ಮೇ 21ರ ಸಂಜೆ 4 ಗಂಟೆಯವರೆಗೆ ಆಫ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ 9605789843 ಅಥವಾ 9447003356 ಅಥವಾ 04994 256788 ಕರೆ ಮಾಡಬಹುದು.



ಕಾಸರಗೋಡು ಸಮೀಪದ ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದ್ದ ಬ್ರಹ್ಮಕಲಶೋತ್ಸವದ ಸಂದರ್ಭದಲ್ಲಿ ಹರಿದಾಸ ಜಯಾನಂದ ಕುಮಾರ್ ಹೊಸದುರ್ಗ ಅವರಿಂದ ಶ್ರೀ ಸ್ವಾಮಿ ಕೊರಗಜ್ಜ ಎಂಬ ಕಥಾಭಾಗದ ಹರಿಕಥೆ ಜರಗಿತು.

ಮುಳಿಂಜ ಸರಕಾರಿ ಎಲ್‌ಪಿ ಶಾಲೆಯಲ್ಲಿ ವೇನಲ್ ವೈಬ್ ಬೇಸಿಗೆ ಶಿಬಿರ ಉದ್ಘಾಟನೆ



ಮಂಜೇಶ್ವರ: ಮಹಿಳಾ ಮತ್ತು ಶಿಶು ಕ್ಷೇಮ ಅಭಿವೃದ್ಧಿ ಇಲಾಖೆಯ ಆಶ್ರಯದಲ್ಲಿ ಮಂಜೇಶ್ವರದ ಐಸಿಡಿಎಸ್‌ನ ನೇತೃತ್ವದಲ್ಲಿ ಮಂಗಲ್ಪಾಡಿ ಗ್ರಾಮ ಪಂಚಾಯತ್ ವತಿಯಿಂದ ಮಕ್ಕಳಿಗಾಗಿ ಆಯೋಜಿಸಲಾಗಿದ್ದ ವೇನಲ್ ವೈಬ್ ಬೇಸಿಗೆ ಶಿಬಿರವು ಮುಳಿಂಜ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ಹಾಗೂ ಆಕರ್ಷಕವಾಗಿ ನಡೆಯಿತು.

ಮಂಗಲ್ಪಾಡಿ ಗ್ರಾಮ ಪಂಚಾಯತ್ ಅಧ್ಯಕ್ಷ ಗೋಲ್ಡನ್ ಅಬ್ದುಲ್ ರಹಮಾನ್ ಸಮಾರಂಭವನ್ನು ಉದ್ಘಾಟಿಸಿದರು.

ಚೈಲ್ಡ್ ಡೆವಲಪ್‌ಮೆಂಟ್ ಪ್ರಾಜೆಕ್ಟ್ ಆಫೀಸರ್ ಪ್ರೀತಾ ಅಧ್ಯಕ್ಷತೆಯಲ್ಲಿ ವಹಿಸಿದ್ದರು. ಕಾರ್ಯಕ್ರಮದಲ್ಲಿ ಮುಳಿಂಜ ಶಾಲಾ ಮುಖ್ಯ ಶಿಕ್ಷಕಿ ಚಿತ್ರಾವತಿ ರಾವ್ ಚಿಗುರುಪಾದೆ ಉಪಸ್ಥಿತರಿದ್ದರು. ಮಂಗಲ್ಪಾಡಿ ಗ್ರಾ.ಪಂ. ವ್ಯಾಪ್ತಿಯ ಅಂಗನವಾಡಿ ಶಿಕ್ಷಕಿಯರು, ಕೌನ್ಸಿಲರ್‌ಗಳು ಭಾಗವಹಿಸಿದ್ದರು. ಐಸಿಡಿಎಸ್ ಸೂಪರ್‌ವೈಸರ್ ಜ್ಯೋತಿ ಅವರ ಉಸ್ತುವಾರಿಯಲ್ಲಿ ಬೇಸಿಗೆ ಶಿಬಿರವು ಯಶಸ್ವಿಯಾಗಿ ಜರಗಿತು.

ಸಾಧನೆ ಮಾಡಲು ಶಿಬಿರ ಸಹಕಾರಿ

ಮಕ್ಕಳಿಗೆ ಎಳವೆಯಲ್ಲಿಯೇ ವಿವಿಧ ಚಟುವಟಿಕೆಗಳನ್ನು ನೀಡಿದಾಗ ಭವಿಷ್ಯದಲ್ಲಿ ಉತ್ತಮ ಸಾಧನೆ ಮಾಡಲು ಸಹಕಾರಿಯಾಗುತ್ತದೆ. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ರಕ್ಷಕರ ಮತ್ತು ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ.

● **ಗೋಲ್ಡನ್ ಅಬ್ದುಲ್ ರಹಮಾನ್**

ಕೃಷಿ ಸಹಾಯಕರ ಸಂಘದ ಕಾಸರಗೋಡು ಜಿಲ್ಲಾ ಸಮ್ಮೇಳನ, ನೂತನ ಸಮಿತಿ ರಚನೆ



ಕಾಸರಗೋಡು: ಕೃಷಿ ಸಹಾಯಕರ ಸಂಘ (ಎಎಕೆ)ದ ಕಾಸರಗೋಡು ಜಿಲ್ಲಾ ಸಮ್ಮೇಳನವನ್ನು ಕಾಸರಗೋಡಿನಲ್ಲಿ ಶನಿವಾರ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಕೆ.ಜಾಫರ್ ಉದ್ಘಾಟಿಸಿ ಮಾತನಾಡಿದರು. ಅಲ್ಲದೆ ಸಂಘಟನೆಯನ್ನು ಇನ್ನಷ್ಟು ಬಲಪಡಿಸುವ ಕುರಿತು ಸಮಗ್ರ ಮಾಹಿತಿ ನೀಡಿದರು.

ಪಾಕೃತಿಕ ವಿಕೋಪ ಪರಿಹಾರ ವಿತರಿಸಿ

ರೈತರಿಗೆ ಪ್ರಕೃತಿ ವಿಕೋಪ ಪರಿಹಾರಗಳನ್ನು ಸಮಯಕ್ಕೆ ಸರಿಯಾಗಿ ವಿತರಿಸಬೇಕೆಂದು ಕೃಷಿ ಸಹಾಯಕರ ಸಂಘದ ಜಿಲ್ಲಾ ಸಮಾವೇಶದಲ್ಲಿ ಒತ್ತಾಯಿಸಲಾಯಿತು. ಸಂಘಟನೆ ಜಿಲ್ಲಾಧ್ಯಕ್ಷ ಮಣಿಕಂಠನ್ ಕೆ. ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಸಮಿತಿ ಸದಸ್ಯ ರಾಜೇಶ್ ಕುಪ್ಲೇರಿ ಸ್ವಾಗತಿಸಿದರು. ಜಿಲ್ಲಾ ಕೋಶಾಧಿಕಾರಿ ಸುರೇಶ್ ಕುಮಾರ್ ಬಿ. ವಂದಿಸಿದರು. ನಂತರ ಪ್ರತಿನಿಧಿ ಸಮ್ಮೇಳನವನ್ನು ವಲಯ ಕಾರ್ಯದರ್ಶಿ ದಿನು ಮಣಿಕಂಠನ್ ಉದ್ಘಾಟಿಸಿ ವಿವಧ ವಿಷಯಗಳ ಬಗ್ಗೆ ಮಾತನಾಡಿದರು.

ನೂತನ ಪದಾಧಿಕಾರಿಗಳ ವಿವರ


ನೂತನ ಸಮಿತಿಯನ್ನು ರೂಪಿಸಲಾಯಿತು. ಅಧ್ಯಕ್ಷರಾಗಿ ಮಣಿಕಂಠನ್ ಕೆ., ಕಾರ್ಯದರ್ಶಿಯಾಗಿ ಜಯರಾಮನ್, ಕೋಶಾಧಿಕಾರಿಯಾಗಿ ಮುರಳೀಧರನ್ ನಾಯರ್ ಅವರನ್ನು ಆರಿಸಲಾಯಿತು.

ಮುಳಿಯಾರಿನಲ್ಲಿ ರಾಷ್ಟ್ರೀಯ ಡೆಂಗ್ಯೂ ದಿನಾಚರಣೆ | ಕಾಸರಗೋಡು ಜಿಲ್ಲಾ ಮಟ್ಟದ ಉದ್ಘಾಟನೆ

ಸೊಳ್ಳೆ ನಿರ್ಮೂಲನೆ –ಪರಿಸರ ನೈರ್ಮಲ್ಯದಿಂದ ಡೆಂಗ್ಯೂ ನಿಯಂತ್ರಣ ಸಾಧ್ಯ

ಕಾಸರಗೋಡು: ರಾಷ್ಟ್ರೀಯ ಡೆಂಗ್ಯೂ ದಿನದ ಕಾಸರಗೋಡು ಜಿಲ್ಲಾ ಮಟ್ಟದ ಉದ್ಘಾಟನೆಯನ್ನು ಕಾರಡ್ಕ ಬ್ಲಾಕ್ ಪಂಚಾಯತ್ ಅಧ್ಯಕ್ಷ ಸಿ.ಬಾಲನ್ ಶನಿವಾರ ನೆರವೇರಿಸಿ ಮಾತನಾಡಿದರು. ಕಾಸರಗೋಡು ಜಿಲ್ಲಾ ವೈದ್ಯಕೀಯ ಕಚೇರಿ (ಆರೋಗ್ಯ), ರಾಷ್ಟ್ರೀಯ ಆರೋಗ್ಯ ಮಿಷನ್ ಮತ್ತು ಜಿಲ್ಲಾ ವೆಕ್ಟರ್ ನಿಯಂತ್ರಣ ಘಟಕ ಇವುಗಳ ಸಂಯುಕ್ತ ಆಶ್ರಯದಲ್ಲಿ ಬ್ಲಾಕ್ ಕುಟುಂಬ ಆರೋಗ್ಯ ಕೇಂದ್ರದ ಸಮ್ಮೇಳನ ಸಭಾಂಗಣದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಮುಳಿಯಾರು ಗ್ರಾ.ಪಂ.ಅಧ್ಯಕ್ಷ ಕೆ.ಬಿ.ಮುಹಮ್ಮದ್ ಕುಂಞಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಉಪ ಜಿಲ್ಲಾ ವೈದ್ಯಾಧಿಕಾರಿ ಡಾ.ಅಜಯ್ ರಾಜ್ ಅವರು ಡೆಂಗ್ಯೂ ದಿನದ ಸಂದೇಶ ನೀಡಿದರು. ಸಾರ್ವಜನಿಕ



ಭಾಗವಹಿಸುವಿಕೆಯ ಮೂಲಕ ಡೆಂಗ್ಯೂ ಜ್ವರ ನಿಯಂತ್ರಣ: ಪರಿಶೀಲಿಸೋಣ, ಸ್ವಚ್ಛಗೊಳಿಸೋಣ ಮತ್ತು ಸೀಲ್ ಮಾಡೋಣ ಎಂಬುದು ಈ ವರ್ಷದ ಡೆಂಗ್ಯೂ ದಿನದ ಸಂದೇಶವಾಗಿದೆ.

ಡೆಂಗ್ಯೂ ಜ್ವರ ದಿನಾಚರಣೆಯು ಮಳೆಗಾಲ ರೋಗ ಸನ್ನದ್ಧತಾ ಚಟುವಟಿಕೆಗಳಿಗೆ ಉತ್ತಮ ಆರಂಭವಾಗಿದೆ ಮತ್ತು ದಿನದ ಸಂದೇಶವು ಸೂಚಿಸುವಂತೆ ವಿವಿಧ ಇಲಾಖೆಗಳು, ಆರೋಗ್ಯ ಕಾರ್ಯಕರ್ತರು, ಸ್ವಯಂಸೇವಾ ಸಂಸ್ಥೆಗಳು ಮತ್ತು ಜನಪ್ರತಿನಿಧಿಗಳ ಪಾಲ್ಗೊಳ್ಳುವಿಕೆಯಲ್ಲಿ ಸಾಮೂಹಿಕ ಸೊಳ್ಳೆ ನಿರ್ಮೂಲನೆ ಮತ್ತು ಪರಿಸರ ನೈರ್ಮಲ್ಯ ಚಟುವಟಿಕೆಗಳ ಮೂಲಕ ಮಾತ್ರ ಡೆಂಗ್ಯೂ ಜ್ವರ ಮತ್ತು ಮಳೆಗಾಲದ ರೋಗಗಳನ್ನು ನಿಯಂತ್ರಿಸಬಹುದು ಎಂದು ಜಿಲ್ಲಾ ವೈದ್ಯಕೀಯ ಅಧಿಕಾರಿ (ಆರೋಗ್ಯ) ಡಾ.ಬಿ.ಸಂತೋಷ್ ಹೇಳಿದ್ದಾರೆ.

ಜಾಗೃತಿ ಪ್ರದರ್ಶನ

ಜಾಗೃತಿ ವಿಚಾರ ಸಂಕಿರಣದಲ್ಲಿ ಜಿಲ್ಲಾ ಸಾಂಕ್ರಾಮಿಕ ರೋಗತಜ್ಞೆ ಫ್ಲೋರಿ ಜೋಸೆಫ್ ಅವರು ಡೆಂಗ್ಯೂ ಜ್ವರ ಮತ್ತು ತಡೆಗಟ್ಟುವ ಕ್ರಮಗಳು ಎಂಬ ವಿಷಯದ ಕುರಿತು ತರಗತಿ ನಡೆಸಿದರು. ಜಿಲ್ಲಾ ವಾಹಕ ನಿಯಂತ್ರಣ ಘಟಕದ ನೇತೃತ್ವದಲ್ಲಿ ಸೊಳ್ಳೆಗಳಿಂದ ಹರಡುವ ರೋಗಗಳ ಕುರಿತು ಜಾಗೃತಿ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರಡ್ಕ ಬ್ಲಾಕ್ ಪಂಚಾಯತ್ ಆರೋಗ್ಯ ಸ್ಥಾಯೀ ಸಮಿತಿ ಅಧ್ಯಕ್ಷೆ ಕೆ.ಸುಗಂಧಿನಿ, ಸದಸ್ಯೆ ಶಾಂತಿದೇವಿ, ಮುಳಿಯಾರು ಗ್ರಾಮ ಪಂಚಾಯತ್ ಆರೋಗ್ಯ ಸ್ಥಾಯೀ ಸಮಿತಿ ಅಧ್ಯಕ್ಷೆ ಅನೀಸ ಮನ್ಸೂರ್, ಜಿಲ್ಲಾ ಶಿಕ್ಷಣ ಮಾಧ್ಯಮ ಅಧಿಕಾರಿ ಅಬ್ದುಲ್ ಲತೀಫ್ ಮಡತ್ತಿಲ್, ತಾಂತ್ರಿಕ ಸಹಾಯಕ ಎಂ.ಚಂದ್ರನ್, ಜಿಲ್ಲಾ ರೋಗವಾಹಕ ನಿಯಂತ್ರಣ ಘಟಕದ ಜೀವಶಾಸ್ತ್ರಜ್ಞ ಎಸ್. ಪ್ರಸನ್ನಲಾಲ್ ಮಾತನಾಡಿದರು. ಮುಳಿಯಾರು ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಶಮೀಮಾ ತನ್ವೀರ್ ಸ್ವಾಗತಿಸಿ, ಆರೋಗ್ಯ ಮೇಲ್ವಿಚಾರಕ ಸುನೀಲ್‌ಕುಮಾರ್ ವಂದಿಸಿದರು. ವಿವಿಧ ಆರೋಗ್ಯ ಸಂಸ್ಥೆಗಳ ಪ್ರತಿನಿಧಿಗಳು, ಸಿಡಿಎಸ್ ಮತ್ತು ಎಡಿಎಸ್ ಅಧ್ಯಕ್ಷರು, ಆರೋಗ್ಯ ಕಾರ್ಯಕರ್ತರು, ಆಶಾ ಕಾರ್ಯಕರ್ತರು, ಹಸಿರು ಕ್ರಿಯಾ ಸೇನೆ ಕಾರ್ಯಕರ್ತರು ಮತ್ತು ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಕಾರ್ಯಕರ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸುತ್ತ ಮುತ್ತ

ಜ್ಞಾನಸುಧಾ ಶಿಕ್ಷಣ ಸಂಸ್ಥೆಯಲ್ಲಿ ವಿಶೇಷ ಉಪನ್ಯಾಸ

ಕಾರ್ಕಳ: ನಮ್ಮೆಲ್ಲರ ಬದುಕಿನ ಹೊರತಾಗಿ ಜನಪದ ಪ್ರತ್ಯೇಕಿಸಲು ಸಾಧ್ಯವಿಲ್ಲ. ಜನಪದರು ನಮ್ಮ ಬದುಕನ್ನು ತಿದ್ದಿ ತೀಡಿದರು. ಹಾಡಿನ ಮೂಲಕ ನಮ್ಮ ಬದುಕನ್ನು ತಿದ್ದಿದವರು ಜನಪದರು. ನಾವೆಲ್ಲರೂ ಒಂದು ಎನ್ನುವ ಭಾವವೇ ಜನಪದ. ಜನಪದರು ಓದದೆ ಬರೆಯದೆ ಕಾವ್ಯವನ್ನು ಕಟ್ಟುವ ಸಾಮರ್ಥ್ಯವನ್ನು ಹೊಂದಿದ್ದರು.



ಜನಪದ ಉಳಿದರೆ ನಮ್ಮ ಕನ್ನಡ ಗಟ್ಟಿಯಾಗಿ ಉಳಿಯುತ್ತದೆ. ನಮ್ಮ ಸಂಸ್ಕೃತಿ ಉಳಿಯುತ್ತದೆ. ಎಂದು ಕರ್ನಾಟಕ ಜಾನಪದ ಅಕಾಡೆಮಿ ಬೆಂಗಳೂರಿನ ಸದಸ್ಯ ಡಾ.ಜೀವನ್ ಸಾಬ್ ವಾಲಿಕರ್ ಬಿನ್ನಾಳ್ ನುಡಿದರು.

ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಶ್ರೀ ಮಹಾಗಣಪತಿದೇವಸ್ಥಾನ ಹಾಗೂ ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ಸಹಯೋಗದಲ್ಲಿ ನಡೆಯುತ್ತಿರುವ ಮೌಲ್ಯಸುಧಾ ಮಾಲಿಕೆ-48ರಲ್ಲಿ 'ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು' ಎಂಬ ವಿಷಯದಕುರಿತು ವಿಶೇಷ ಉಪನ್ಯಾಸದಲ್ಲಿ ಮಾತನಾಡಿದರು. ಕಾರ್ಯಕ್ರಮದಲ್ಲಿಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟಿನ ಟ್ರಸ್ಟಿ ಅನಿಲ್ ಕುಮಾರ್ ಜೈನ್, ಸಿಇಒ ಹಾಗೂ ಪ್ರಾಂಶುಪಾಲ ದಿನೇಶ್ ಎಂ ಕೊಡವೂರು, ಉಪಪ್ರಾಂಶುಪಾಲ ಸಾಹಿತ್ಯಉಪಸ್ಥಿತರಿದ್ದರು. ಪ್ರಥಮ ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಗಾನ್ವಿತಾ ಪ್ರಾರ್ಥಿಸಿ, ಆಂಗ್ಲಭಾಷಾ ವಿಭಾಗದ ಉಪನ್ಯಾಸಕಿ ದರ್ಶಿನಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಮೇ 19ರಂದು ವಿದ್ಯುತ್ ವ್ಯತ್ಯಯ

ಉಡುಪಿ: ತುರ್ತು ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಸಂತೆಕಟ್ಟೆ, ನೇಜಾರು, ಮೂಡುತೋನ್ಸೆ, ಕೋಡಿಬೆಂಗ್ರೆ, ಬಡಾನಿಡಿಯೂರು, ಗೋಪಾಲಪುರ, ಶಾಂತಿವನ, ಗರಡಿಮಜಲು, ಮಟಪಾಡಿ, ಹೇರೂರು ಚಾಂತಾರು, ಕುಂಜಾಲು, ಆರೂರು, ಚೇರ್ಕಾಡಿ, ಹಲುವಳ್ಳಿ, ಹೊಸಾಳ, ಕಚ್ಚೂರು, ರಂಗನಕೆರೆ, ಹೇರಾಡಿ, ಹನೆಹಳ್ಳಿ, ಕೂರಾಡಿ, ನಡೂರು, ಪಡುನೀಲಾವರ, ಬೆಣ್ಣೆ ಕುದ್ರು, ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 19ರಂದು ಬೆಳಿಗ್ಗೆ 9.30 ರಿಂದ ಸಂಜೆ 5.30ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಮೇ 20ರಂದು ಮೆಸ್ಕಾಂ ಜನ ಸಂಪರ್ಕ ಸಭೆ

ಕುಂದಾಪುರ: ಮೆಸ್ಕಾಂ ಕುಂದಾಪುರ ಉಪವಿಭಾಗ ಕಚೇರಿಯಲ್ಲಿ ಮೇ 20ರಂದು ಬೆಳಿಗ್ಗೆ 10.30ರಿಂದ 12ರ ವರೆಗೆ ಜನ ಸಂಪರ್ಕ ಸಭೆಯು ನಡೆಯಲಿದ್ದು, ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲು ಸ್ವೀಕರಿಸುವುದರಿಂದ, ಈ ಅವಕಾಶವನ್ನು ಗ್ರಾಹಕರು ಸದುಪಯೋಗಿಸಿಕೊಳ್ಳಲು ಅಧಿಕಾರಿಗಳು ತಿಳಿಸಿದ್ದಾರೆ. ಅಲ್ಲದೇ ದೂ.ಸಂ.: 08254-230490 ಮೂಲಕವೂ ಅಹವಾಲು ಸಲ್ಲಿಸಲು ಅವಕಾಶವಿದೆ ಎಂದು ಪ್ರಕಟಣೆ ಮೂಲಕ ತಿಳಿಸಲಾಗಿದೆ.

ರೈತರೆಡೆಗೆ ನಮ್ಮ ನಡಿಗೆ: ಯುವ ಕೃಷಿಕ ಚಂದ್ರಕಾಂತ್ ಆಯ್ಕೆ

ಕೋಟ: ಪಂಚವರ್ಣ ಯುವಕ ಮಂಡಲ ಕೋಟ ಇದರ ಪ್ರವರ್ತಿತ ಸಂಸ್ಥೆ ಪಂಚವರ್ಣ ಮಹಿಳಾ ಮಂಡಲ ನೇತೃತ್ವದಲ್ಲಿ ಗೀತಾನಂದ ಫೌಂಡೇಶನ್ ಮಣೂರು, ರೈತ ಧ್ವನಿ ಸಂಘ ಕೋಟ, ಗೆಳೆಯರ ಬಳಗ ಕಾರ್ಕಡ, ರೋಟರಿ ಕ್ಲಬ್ ಕೋಟ ಸಾಲಿಗ್ರಾಮ, ಸ್ನೇಹಕೂಟ ಮಣೂರು ಇವರುಗಳ ಸಂಯುಕ್ತ ಸಹಯೋಗದೊಂದಿಗೆ ಪ್ರತಿ ತಿಂಗಳು ಸಾಧಕ ಕೃಷಿಕನನ್ನು ಗುರುತಿಸುವ ಸರಣಿ ಕಾರ್ಯಕ್ರಮ ರೈತರೆಡೆಗೆ ನಮ್ಮ ನಡಿಗೆ ಮಾಲಿಕೆಗೆ ಇದೀಗ 54ರ ಸರಣಿಯ ಕಾರ್ಯಕ್ರಮದ ಅಂಗವಾಗಿ ಸಾಧಕ ಕೃಷಿಕರ ಮನೆಯಂಗಳಕ್ಕೆ ತೆರಳಿ ಕೃಷಿ ಪರಿಕರವನ್ನು ನೀಡಿ ಗೌರವಿಸುವ ಕಾರ್ಯ ಮೇ 23ರಂದು ಸಂಜೆ 4.45ಕ್ಕೆ ನಡೆಯಲಿದೆ. ಮಣೂರು ಯುವ ಕೃಷಿಕ ಚಂದ್ರಕಾಂತ್ ಮಧ್ಯಸ್ಥ ಅವರಿಗೆ ಕೃಷಿ ಯುವ ಪುರಸ್ಕಾರ ನೀಡಿ ಗೌರವಿಸಲಿದೆ. ಆ ಬಳಿಕ ಯುವ ಕೃಷಿಕರಿಂದ ಸಂವಾದ ಕಾರ್ಯಕ್ರಮ ನಡೆಯಲಿದೆ ಎಂದು ಸಂಘಟಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಉಡುಪಿ ತ್ರೈಮಾಸಿಕ ಕೆ.ಡಿ.ಪಿ ಸಭೆಯಲ್ಲಿ ಅಧಿಕಾರಿಗಳಿಗೆ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸೂಚನೆ

ಮಳೆಗಾಲಕ್ಕೂ ಮುನ್ನ ಶಾಲೆಗಳ ದುರಸ್ತಿ ಪೂರ್ಣಗೊಳಿಸಿ

ಉಡುಪಿ: ಮುಂಗಾರು ಮಳೆಗಾಲದಲ್ಲಿ ಅತಿವೃಷ್ಟಿಯಿಂದಾಗಿ ಜನಸಾಮಾನ್ಯರಿಗೆ ಯಾವುದೇ ರೀತಿಯ ತೊಂದರೆಗಳು ಉಂಟಾಗದಂತೆ ಅಗತ್ಯ ರೀತಿಯ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಆರ್. ಹೆಬ್ಬಾಳ್ಕರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ತ್ರೈ ಮಾಸಿಕ ಕೆ.ಡಿ.ಪಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಳೆಗಾಲದಲ್ಲಿ ಸರಾಗವಾಗಿ ವಿದ್ಯುತ್ ಪೂರೈಕೆಗೆ ಅಗತ್ಯ ಕ್ರಮವಹಿಸಬೇಕು. ಅಪಾಯಕಾರಿ ಮರಗಳ ತೆರವಿಗೆ ಕ್ರಮವಹಿಸಬೇಕು ಎಂದರು. ಜಿಲ್ಲೆಯಲ್ಲಿ ಯಾವುದೇ ರೀತಿಯ ಸರ್ಕಾರಿ ಸಭೆ, ಸಮಾರಂಭಗಳು ಆಯೋಜಿಸಿ, ಆಹ್ವಾನ ಪತ್ರಿಕೆ ಮುದ್ರಿಸುವಾಗ ಸರ್ಕಾರ ಸೂಚಿಸಿರುವ ಹಾಗೆ ಶಿಷ್ಟಾಚಾರದ ಪ್ರಕಾರ ಜನಪ್ರತಿನಿಧಿಗಳ ಹೆಸರನ್ನು ನಮೂದಿಸಬೇಕು. ಕಾರ್ಯಕ್ರಮ ಮಾಡುವಾಗ ಸ್ಥಳೀಯ ಶಾಸಕರುಗಳ ಗಮನಕ್ಕೆ ತರಬೇಕು. ಈ ಬಗ್ಗೆ ಕಳೆದ ಸಭೆಯಲ್ಲಿ ಸೂಚಿಸಿದ್ದರೂ ಸಹ ಪಾಲನೆ ಆಗುತ್ತಿಲ್ಲ ಎಂಬ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಅವರು, ಕಾರ್ಕಳ ತಹಶೀಲ್ದಾರ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳಿಗೆ ಶಿಷ್ಟಾಚಾರ ಉಲ್ಲಂಘಿಸಿದ ಬಗ್ಗೆ ಕಾರಣ ಕೇಳಿ ನೋಟೀಸ್ ನೀಡುವಂತೆ ಸೂಚಿಸಿದ ಅವರು, ಮುಂಬರುವ ದಿನಗಳಲ್ಲಿ ಇದು ಪುನರಾವರ್ತಿತ ಆದಲ್ಲಿ ಅಂತಹ ಅಧಿಕಾರಿಗಳನ್ನು ಅಮಾನತು ಮಾಡಲಾಗುವುದು ಎಂದರು.



ಆಮೆಗತಿಯಲ್ಲಿ ಕಾಮಗಾರಿಗೆ ಆಕ್ಷೇಪ

ಜಿಲ್ಲೆಯ ಶಾಲಾ-ಕಾಲೇಜುಗಳ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲು 430 ಕೋಟಿ ರೂ. ವೆಚ್ಚದಲ್ಲಿ 186 ವಿವಿಧ ರೀತಿಯ ಕಾಮಗಾರಿಗಳನ್ನು ಕೈಗೊಳ್ಳಲಾಗಿತ್ತು. ಆದರೆ ಈವರೆಗೂ ಸಹ 45 ಕಾಮಗಾರಿಗಳು ಪೂರ್ಣಪ್ರಮಾಣದಲ್ಲಿ ಆಗಿರುವುದಿಲ್ಲ ಎಂದು ಆಕ್ಷೇಪಿಸಿದ ಸಚಿವರು ಮಳೆಗಾಲ ಪ್ರಾರಂಭಕ್ಕೂ ಮುನ್ನ ಇವುಗಳನ್ನು ಪೂರ್ಣಗೊಳಿಸಬೇಕು ಎಂದರು.

ಕಾರ್ಕಳದಲ್ಲಿ ಹೆರಿಗೆ ಡಾಕ್ಟರ್ ನೇಮಿಸಿ

ಕಾರ್ಕಳದ ತಾಲೂಕು ಆಸ್ಪತ್ರೆಯಲ್ಲಿ ಹೆರಿಗೆ ತಜ್ಞ ವೈದ್ಯರ ಕೊರತೆ ಇದ್ದು, ಈ ಹಿಂದೆ 126ಕ್ಕೂ ಹೆಚ್ಚು ಹೆರಿಗೆ ಆಗುತ್ತಿದ್ದವು. ಆದರೆ ಈಗ 5-6ಕ್ಕೆ ಇಳಿದಿವೆ. ತಜ್ಞ ವೈದ್ಯರ ನೇಮಕಕ್ಕೆ ಮುಂದಾಗಬೇಕು. ಖಾಸಗಿ ಆಸ್ಪತ್ರೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಆರೋಗ್ಯ ಸೇವೆ ಒದಗಿಸಬೇಕು ಎಂದರು.

3652 ಕಡತ ಬಾಕಿ

ಕಂದಾಯ ಇಲಾಖೆಯಲ್ಲಿ ಜಾಗ ಮಂಜೂರು ಮಾಡಿದರೂ ದಾಖಲಾತಿ ನೀಡಲು ಅನುಕೂಲ ವಾಗುವಂತೆ 1-5 ಡಾಟಾ ಎಂಟ್ರಿ ಮಾಡಲು 3652 ಕಡತಗಳು ಬಾಕಿ ಇವೆ. ಇವುಗಳನ್ನು ಆದ್ಯತೆಯ ಮೇಲೆ ಮಾಡಬೇಕು. ಜಾಗ ಕೋರಿ 53-54 ಹಾಗೂ 94 ಸಿ ಗಳಲ್ಲಿ ಅತ್ಯಂತ ಬಡಜನರು ಅರ್ಜಿ ಸಲ್ಲಿಸಿದ್ದಾರೆ. ಆದರೆ ಈವರೆಗೂ ಅವುಗಳ ವಿಲೇವಾರಿ ಸರಿಯಾಗಿ ಆಗುತ್ತಿಲ್ಲ. ಜಿಲ್ಲಾಧಿಕಾರಿಗಳು ಪ್ರತೀ ವಾರ ತಹಶೀಲ್ದಾರರುಗಳ ಸಭೆ ಕರೆದು ಹಕ್ಕು ಪತ್ರಗಳನ್ನು ನೀಡಲು ಮುಂದಾಗಬೇಕು ಎಂದು ಸೂಚನೆ ನೀಡಿದರು. ಡೀಮ್ಡ್ ಫಾರೆಸ್ಟ್ ವ್ಯಾಪ್ತಿಯಲ್ಲಿ ಕೆಲವು ಸರಕಾರಿ ಕಟ್ಟಡಗಳು, ಶಾಲೆಗಳು, ಆಸ್ಪತ್ರೆಗಳು ಸೇರಿವೆ. ಈ ಸರ್ವೇ ಕಾರ್ಯವನ್ನು ಕೈಗೊಳ್ಳಲು ಇರುವ ಸಮಸ್ಯೆಗಳನ್ನು ಕೂಡಲೇ ಪರಿಹರಿಸಿ ಎಂದರು.

ಸಾಮಾಜಿಕ ಭದ್ರತೆಯನ್ನು ಒದಗಿಸುವ ಪಿಂಚಣಿ ಸರ್ವೇ ಕಾರ್ಯವನ್ನು ಆದ್ಯತೆಯ ಮೇಲೆ ಕೈಗೊಳ್ಳಬೇಕು ಎಂದರು. ಮಂಗಳೂರು ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಂ.ಎ ಗಫೂರ್, ವಿಧಾನಪರಿಷತ್ ಶಾಸಕರಾದ ಎಸ್. ಎಲ್. ಭೋಜೇಗೌಡ, ಡಾ.ಮಂಜುನಾಥ್ ಭಂಡಾರಿ, ಕಿಶೋರ್ ಕುಮಾರ್ ಪುತ್ತೂರು, ಶಾಸಕ ವಿ.ಸುನಿಲ್ ಕುಮಾರ್, ಯಶ್‌ಪಾಲ್ ಎ ಸುವರ್ಣ, ಗುರುರಾಜ್ ಶೆಟ್ಟಿ ಗಂಟಿಹೊಳೆ, ಎ.ಕಿರಣ್ ಕುಮಾರ್ ಕೊಡ್ಗಿ ಹಾಗೂ ಗುರ್ಮೆ ಸುರೇಶ್ ಶೆಟ್ಟಿ, ಜಿಲ್ಲಾಧಿಕಾರಿ ಸ್ವರೂಪ ಟಿ., ಜಿ.ಪಂ. ಸಿಇಒ ಪ್ರತೀಕ್ ಬಾಯಲ್, ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಮ್ ಶಂಕರ್, ಡಿ.ಎಫ್.ಓ ರುಥ್ರೇನ್ ಪಿ, ವೈಲ್ಡ್ ಲೈಫ್ ಡಿ.ಎಫ್.ಓ ಶಿವರಾಮ್ ಎಂ. ಬಾಬು, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಸಿಬ್ಬಂದಿ ಕೊರತೆ ನನ್ನ ಗಮನಕ್ಕೆ ಬಂದಿಲ್ಲ: ಹೆಬ್ಬಾಳ್ಕರ್

ಉಡುಪಿ ಜಿಲ್ಲೆಯಲ್ಲಿ 18 108 ಆ್ಯಂಬುಲೆನ್ಸ್ ಇದ್ದು, ಅವುಗಳಲ್ಲಿ 16 ಆ್ಯಂಬುಲೆನ್ಸ್‌ಗಳು ಕಾರ್ಯನಿರ್ವಹಿಸುತ್ತಿವೆ. ಆದರೆ ಅವು ಸಕಾಲದಲ್ಲಿ ಸೇವೆಗಳನ್ನು ಒದಗಿಸುತ್ತಿಲ್ಲ ಎಂಬ ದೂರುಗಳು ಕೇಳಿ ಬರುತ್ತಿವೆ. ಚಾಲಕರು, ಮತ್ತಿತರ ಸಿಬ್ಬಂದಿಗಳ ಕೊರತೆ ಇದೆ. ಆದರೆ ಈ ಬಗ್ಗೆ ನನ್ನ ಗಮನಕ್ಕೆ ತಂದಿಲ್ಲ, ಸರಕಾರದಿಂದ ಅನುಮತಿ ಪಡೆದು ಹೊರಗುತ್ತಿಗೆ ಮೇಲೆ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗೆ ಸಚಿವರು ಸೂಚನೆ ನೀಡಿದರು.

ಮಲ್ಪೆ ಕಡಲತೀರದಲ್ಲಿ 'ಅಕ್ಕ ಕೆಫೆ' ಲೋಕಾರ್ಪಣೆ | ಸಚಿವೆ ಹೆಬ್ಬಾಳ್ಕರ್ ಬಣ್ಣನೆ

ಮಹಿಳಾ ಸಬಲೀಕರಣಕ್ಕೆ ಹೊಸ ಆಯಾಮ

ಉಡುಪಿ: ಜಿಲ್ಲೆಯ ಪ್ರಸಿದ್ಧ ಪ್ರವಾಸಿ ತಾಣವಾದ ಮಲ್ಪೆ ಬೀಚ್‌ನಲ್ಲಿ ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಶಕ್ತಿ ತುಂಬುವ ನಿಟ್ಟಿನಲ್ಲಿ ಸಿದ್ಧಗೊಂಡಿರುವ 'ಅಕ್ಕ ಕೆಫೆ'ಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಆರ್. ಹೆಬ್ಬಾಳ್ಕರ್ ಅವರು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಸಚಿವರು, ಮಹಿಳೆಯರು ಆರ್ಥಿಕವಾಗಿ ಸದೃಢರಾದಾಗ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ. ಅಕ್ಕ ಕೆಫೆ ಕೇವಲ ಒಂದು ಉಪಹಾರ ಮಂದಿರವಲ್ಲ, ಇದು ಮಹಿಳೆಯರ ಶ್ರಮ ಮತ್ತು ಸ್ವಾಭಿಮಾನದ ಸಂಕೇತ ಎಂದು ಹರ್ಷ ವ್ಯಕ್ತಪಡಿಸಿದರು.

ಮಹಿಳೆಯರ ಸ್ವಾವಲಂಬನೆ

ಕಾಂಗ್ರೆಸ್ ಸರಕಾರ ಈ ಯೋಜನೆಯನ್ನು ಜಾರಿಗೊಳಿಸಿ ಮಹಿಳೆಯರ ಸ್ವಾವಲಂಬನೆ ಜೊತೆಗೆ ಪ್ರವಾಸೋದ್ಯಮಕ್ಕೂ ಉತ್ತೇಜನ ನೀಡುವ ನಿಟ್ಟಿನಲ್ಲಿ ಕ್ರಮ ವಹಿಸಿದೆ ಎಂದು ಸಚಿವರು ತಿಳಿಸಿದರು.

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ಸಂಜೀವಿನಿ ಯೋಜನೆಯಡಿ ಉಡುಪಿ ಜಿಲ್ಲಾ ಪಂಚಾಯತ್ ಸಹಯೋಗದೊಂದಿಗೆ ಈ ವಿನೂತನ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಸಂದರ್ಭ ವಿಧಾನ ಪರಿಷತ್ ಸದಸ್ಯರಾದ ಮಂಜುನಾಥ್ ಭಂಡಾರಿ ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ., ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರತೀಕ್ ಬಾಯಲ್, ಸಹಾಯಕ ಯೋಜನಾಧಿಕಾರಿ ಜೇಮ್ಸ್ ಡಿಸಿಲ್ವಾ, ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕಿ ನವ್ಯ, ಜಿಲ್ಲಾ ವ್ಯವಸ್ಥಾಪಕ ಅವಿನಾಶ್, ಕೃಷಿ ವ್ಯವಸ್ಥಾಪಕಿ ಸೌಮ್ಯ, ಜಿಲ್ಲಾ ಹಾಗೂ ತಾಲೂಕು ಅಭಿಯಾನ ನಿರ್ವಹಣಾ ಘಟಕದ ಸಿಬ್ಬಂದಿ, ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟದ ಅಧ್ಯಕ್ಷರು, ಪದಾಧಿಕಾರಿಗಳು, ಮುಖ್ಯ ಪುಸ್ತಕ ಬರಹಗಾರರು, ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳು, ಕೃಷಿ ಸಖಿ ಹಾಗೂ ಪಶು ಸಖಿ ಉಪಸ್ಥಿತರಿದ್ದರು.



ಮಲ್ಪೆ ಬೀಚ್‌ಗೆ ಬರುವ ಪ್ರವಾಸಿಗರಿಗೆ ಅನುಕೂಲ

ಈ ವಿಶೇಷ 'ಅಕ್ಕ ಕೆಫೆ'ಯನ್ನು ಕಲ್ಯಾಣಪುರದ 'ನಿಧಿ ಸಂಜೀವಿನಿ ಸ್ವಸಹಾಯ ಸಂಘ' ನಿರ್ವಹಿಸುತ್ತಿದೆ. ಮಹಿಳೆಯರೇ ಸ್ವತಃ ಈ ಕೆಫೆಯ ಸಂಪೂರ್ಣ ಉಸ್ತುವಾರಿ ಹೊತ್ತುಕೊಳ್ಳುವ ಮೂಲಕ ಆರ್ಥಿಕ ಸ್ವಾವಲಂಬನೆಯತ್ತ ಹೆಜ್ಜೆ ಇಟ್ಟಿದ್ದಾರೆ. ಆಕರ್ಷಕ ವಿನ್ಯಾಸದ ಈ ಮೊಬೈಲ್ ಕೆಫೆ ಮಲ್ಪೆ ಬೀಚ್‌ಗೆ ಬರುವ ಪ್ರವಾಸಿಗರಿಗೆ ಸ್ಥಳೀಯ ರುಚಿಕರ ಆಹಾರ ಪದಾರ್ಥಗಳನ್ನು ಒದಗಿಸಲಿದೆ. ಇಲ್ಲಿ ತಿಂಡಿ-ತಿನಿಸುಗಳು, ಬರ್ಗರ್ ಮತ್ತು ಸ್ಥಳೀಯ ಖಾದ್ಯಗಳು ಲಭ್ಯವಿರಲಿವೆ.

ಸಾಣೂರು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಿಂದ ಕಠಿಣ ಕ್ರಮ

ತ್ಯಾಜ್ಯ ಎಸೆದ ಪ್ರವಾಸಿಗರಿಗೆ 2000 ರೂ. ದಂಡ!

ಕಾರ್ಕಳ: ಸಾಣೂರು ಹೆದ್ದಾರಿ ಬದಿ ಅವಿನಾಶ ನಿವಾಸದ ಸಮೀಪ 2 ವಾಹನಗಳಲ್ಲಿ ಕೊಪ್ಪಳದಿಂದ ಬಂದ ಪ್ರವಾಸಿಗರು ಊಟ ಮಾಡಿ, ಪ್ಲಾಸ್ಟಿಕ್ ತ್ಯಾಜ್ಯ ರಸ್ತೆ ಬದಿಯಲ್ಲಿ ಬಿಸಾಡಿ ಗಲೀಜು ಮಾಡಿದ ಸ್ಥಳಕ್ಕೆ ಆಗಮಿಸಿದ ಸಾಣೂರು ಪಂಚಾಯತ್ ಅಭಿವೃದ್ಧಿ ಅಧಿಕಾರಿ ವಿಶ್ವನಾಥ್ ಎಚ್ಚರಿಕೆ ನೀಡಿ, ಆ ಬಳಿಕ ದಂಡ ವಿಧಿಸಿದ ಘಟನೆ ಶುಕ್ರವಾರ ನಡೆದಿದೆ.

ದಂಡ ಕೊಡಲು ನಿರಾಕರಣೆ

ನಮ್ಮ ಊರಿನಲ್ಲಿ ಈ ರೀತಿ ಯಾವುದೇ ಪದ್ಧತಿ ಇಲ್ಲ, ರಸ್ತೆ ಬದಿಯಲ್ಲಿ ಪಂಚಾಯತ್‌ನವರು ಬೋರ್ಡ್ ಹಾಕಿದ್ದೀರಾ.. ನಾವು ದಂಡ ಕೊಡುವುದಿಲ್ಲ, ನೀವು ಏನು ಬೇಕಾದರೂ ಮಾಡಿ ಎಂದು ದರ್ಪದಿಂದ ದಂಡ ಕೊಡಲು ಒಪ್ಪದ ಪ್ರವಾಸಿಗರನ್ನು ತೀವ್ರ ತರಾಟೆಗೆ ತೆಗೆದುಕೊಂಡ ಅಭಿವೃದ್ಧಿ ಅಧಿಕಾರಿ, ಪೊಲೀಸ್ ಸಹಾಯವಾಣಿ 112ಕ್ಕೆ ಫೋನ್ ಮಾಡಿ ಕಾರ್ಕಳ ನಗರ ಠಾಣೆಗೆ ಬರುವಂತೆ ಪ್ರವಾಸಿಗರನ್ನು ಒಪ್ಪಿಸಿದರು. ಈ ಸಂದರ್ಭ ಸ್ಥಳೀಯ ಮುಖಂಡ ಏರ್ನಡ್ಕ ವಿಶ್ವನಾಥ್ ಶೆಟ್ಟಿ ಸಹಿತ ಸಾರ್ವಜನಿಕರು ಪಂಚಾಯತ್ ಆಡಳಿತದ ಬೆಂಬಲಕ್ಕೆ ನಿಂತರು.

ದಂಡ ತಪ್ಪಿಸಲು ಪ್ರಯತ್ನ!

ಸಾಣೂರು ಗ್ರಾಮ ಪಂಚಾಯತ್ ಆಡಳಿತ ಅಧಿಕಾರಿಯವರು ಕೂಡ ಸ್ಥಳಕ್ಕೆ ಆಗಮಿಸಿ, ಪ್ರವಾಸಿಗರ ವಾಹನದ ಮುಂಭಾಗದಲ್ಲಿ ನಗರ ಠಾಣೆಗೆ ಹೋಗುವಾಗ, ಪುಲ್ಕೇರಿ ಬೈಪಾಸ್ ಸರ್ಕಲ್‌ನಿಂದ ಪಡುಬಿದ್ರೆ ಕಡೆಗೆ ಪ್ರವಾಸಿಗರು ವೇಗವಾಗಿ ಚಲಿಸಿ ದಂಡ ತಪ್ಪಿಸಲು ಪ್ರಯತ್ನ ಮಾಡಿದರು.

ಪ್ರವಾಸಿಗರು ಗಲೀಜು ಮಾಡಿದ ಸ್ಥಳದ ಫೋಟೋ ಮತ್ತು ವಿಡಿಯೋ ಚಿತ್ರೀಕರಣ ಮಾಡಿದ್ದ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ಕಾರ್ಕಳ ನಗರ ಠಾಣೆಗೆ ಈ ಬಗ್ಗೆ ದೂರು ಸಲ್ಲಿಸಿ, ಪ್ರವಾಸಿಗರ ಮೇಲೆ ಎಫ್‌ಐಆರ್ ದಾಖಲಿಸಲು ಒತ್ತಾಯಿಸಿದರು. ಪೊಲೀಸ್ ಠಾಣಾಧಿಕಾರಿ ಮುರಳಿಧರ ನಾಯಕ್, ಈ ಘಟನೆಗೆ ಗರಿಷ್ಠ 500 ರೂಪಾಯಿ ದಂಡ ವಿಧಿಸುವ ಅಧಿಕಾರ ಐಪಿಸಿ ಕಾಯ್ದೆಯಲ್ಲಿದೆ ಎಂದು ತಿಳಿಸಿ, ಪಂಚಾಯತ್ ಮೂಲಕ ದಂಡ ವಿಧಿಸಲು ಸೂಚಿಸಿದರು. ಪಟ್ಟು ಬಿಡದ ಪಂಚಾಯತ್ ಅಭಿವೃದ್ಧಿ ಅಧಿ ಕಾರಿ ಜಿ.ಪಂ. ಸಿಇಒ ಪ್ರತೀಕ್ ಬಾಯಲ್‌ಗೆ ಈ ವಿಚಾರ ತಿಳಿಸಿದಾಗ, ಸಾರ್ವಜನಿಕ ಸ್ಥಳದಲ್ಲಿ ಕಸ ಬಿಸಾಡಿದ ಪ್ರವಾಸಿಗರಿಗೆ ದಂಡ ವಿಧಿಸಿದಾಗ ಮಾತ್ರ ಸಾರ್ವಜನಿಕರಲ್ಲಿ ಜಾಗೃತಿ ಮೂಡಲು ಸಾಧ್ಯ ಎಂದು ಎಸ್‌ಪಿ ಅವರ ಮೂಲಕ ಠಾಣಾಧಿಕಾರಿಗೆ ತಿಳಿಸಿದ ಬಳಿಕ ಉಡುಪಿ ಕಡೆಗೆ ಹೋಗುತ್ತಿದ್ದ ಕೊಪ್ಪಳದ ಪ್ರವಾಸಿ ವಾಹನವನ್ನು ರಾತ್ರಿ 8ರ ಹೊತ್ತಿಗೆ ತಡೆದು ನಿಲ್ಲಿಸಿ, ಪಂಚಾಯತ್ ಸೂಚಿಸಿದ ದಂಡ ಪಾವತಿಸುವಂತೆ ಎಚ್ಚರಿಕೆ ನೀಡಿದರು.

ಕಾರ್ಕಳ ಪೊಲೀಸರ ಈ ತುರ್ತು ಕಾರ್ಯಾಚರಣೆಯ ಬಗ್ಗೆ ಸಾರ್ವಜನಿಕರಿಂದ ವ್ಯಾಪಕ ಪ್ರಶಂಸೆ ಲಭ್ಯವಾಗಿದೆ. ಪಂಚಾಯತ್ ಕಾಯ್ದೆಯ ಅಧಿನಿಯಮದಂತೆ ಪ್ರವಾಸಿಗರಿಗೆ ರೂ. 2000 ದಂಡ ವಿಧಿಸಿ, ಉಡುಪಿಯಿಂದಲೇ ಪ್ರವಾಸಿಗೆ ರಸೀದಿ ಕಳುಹಿಸಿಕೊಡಲಾಯಿತು.



ಎಐನಿಂದ ಆಗುವ ಪರಿಣಾಮದ ಅರಿವು ಮೂಡಿಸಿ: ಜಯಪ್ರಕಾಶ್ ಹೆಗ್ಡೆ



ಬ್ರಹ್ಮಾವರ: ಇಂದಿನ ತಂತ್ರಜ್ಞಾನ ಯುಗದಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯವಿರುವ ನವೀನ ಕೌಶಲ್ಯಗಳು, ಉನ್ನತ ಶಿಕ್ಷಣದ ಬದಲಾವಣೆಗಳು ಹಾಗೂ ಕೃತಕ ಬುದ್ದಿಮತ್ತೆಯ ಪರಿಣಾಮಗಳ ಬಗ್ಗೆ ಎಲ್ಲಾ ಕಾಲೇಜಿನಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ಮಾಜಿ ಸಚಿವ ಕೆ. ಜಯಪ್ರಕಾಶ್ ಹೆಗ್ಡೆ ನುಡಿದರು.

ಅವರು ಬ್ರಹ್ಮಾವರ ಕ್ರಾಸ್‌ಲ್ಯಾಂಡ್ ಕಾಲೇಜಿನಲ್ಲಿ ನಡೆದ ಕೃತಕ ಬುದ್ಧಿಮತ್ತೆಯ ಯುಗದಲ್ಲಿ ಭವಿಷ್ಯೋನ್ಮುಖಿ ಕೌಶಲ್ಯಗಳನ್ನು ಬೆಳೆಸುವ ಉನ್ನತ ಶಿಕ್ಷಣದ ಪುನರ್‌ಕಲ್ಪನೆ ಎಂಬ ವಿಷಯದ ಮೇಲಿನ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

ಸಮ್ಮೇಳನದ ಅಧ್ಯಕ್ಷತೆಯನ್ನು ಡಾ. ರಾಬರ್ಟ್ ಕ್ಲೇವ್ ಜಿ. ವಹಿಸಿದ್ದರು. ಬ್ರಹ್ಮಾವರ ಲಿಟ್ಲ್ ರ್‍ಯಾಂಕ್ ಇಂಡಿಯ ಸ್ಕೂಲಿನ ನಿರ್ದೇಶಕ ಮ್ಯಾಥ್ಯೂ ಸಿ. ನೈನಾನ್ ಮಾತನಾಡಿ, ವಿದ್ಯಾರ್ಥಿಗಳು ಕೇವಲ ಪಾಠ ಪುಸ್ತಕಗಳ ಜ್ಞಾನಕ್ಕೆ ಸೀಮಿತವಾಗದೆ ತಾಂತ್ರಿಕ ಹಾಗೂ ಸೃಜನಾತ್ಮಕ ಕೌಶಲ್ಯ ಬೆಳೆಸಿಕೊಳ್ಳಬೇಕು ಎಂದರು.

ಪ್ರಾಂಶುಪಾಲ ಬಿಜು ಜಾಕೊಬ್, ಕಾಲೇಜಿನ ಸಂಚಾಲಕ ಲಾಲಿ ಎ ಮ್ಯಾಥ್ಯೂ, ಸಮ್ಮೇಳನದ ಸಂಚಾಲಕ ದೀಪಾ ರಾವ್ ಮತ್ತು ಮೈಥಿಲಿ ಇದ್ದರು. ಈ ಸಂದರ್ಭ ಮಾಜಿ ಸಚಿವ ಜಯಪ್ರಕಾಶ್ ಹೆಗ್ಡೆ ಅವರನ್ನು ಸನ್ಮಾನಿಸಲಾಯಿತು. ಮೈಥಿಲಿ ಬಿ. ವಂದಿಸಿದರು. ವಿದ್ಯಾರ್ಥಿನಿ ಬನೀಸ್ ನಿರೂಪಿಸಿದರು. ಸಮ್ಮೇಳನದಲ್ಲಿ ವಿವಿಧ ಕಾಲೇಜುಗಳ ಅಧ್ಯಾಪಕರು, ಸಂಶೋಧಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದು ಸಂಪನ್ಮೂಲ ವ್ಯಕ್ತಿಗಳು ಎಐ, ಡಿಜಿಟಲ್ ಶಿಕ್ಷಣ, ಸಂಶೋಧನಾ ಕೌಶಲ್ಯ, ಸಂವಹನ ಸಾಮರ್ಥ್ಯ ಮತ್ತು ಉದ್ಯೋಗಾವಕಾಶಗಳ ಕುರಿತು ಮಾಹಿತಿ ನೀಡಿದರು. ನಂತರ ಉನ್ನತ ಶಿಕ್ಷಣದಲ್ಲಿ ತಂತ್ರಜ್ಞಾನದ ಬಳಕೆ, ಆನ್‌ಲೈನ್ ಕಲಿಕೆ, ನವೀನ ಬೋಧನಾ ವಿಧಾನಗಳು ಮತ್ತು ಭವಿಷ್ಯದ ಉದ್ಯೋಗ ಕ್ಷೇತ್ರಗಳ ಕುರಿತು ಚರ್ಚೆ ನಡೆದವು.

ಯಕ್ಷಗಾನ ಕಲೆಯ ಬೆಳವಣಿಗೆಗೆ ಮಕ್ಕಳಲ್ಲಿ ಆಸಕ್ತಿ ಮೂಡಿಸಿ: ಸಂತೋಷ್



ಕೋಟ: ಯಕ್ಷಗಾನ ಕಲೆಯ ಬೆಳವಣಿಗೆಗೆ ಮುಂದಿನ ಪೀಳಿಗೆಗೆ ಆಸಕ್ತಿ ಮೂಡಿಸುವುದ ಅನಿವಾರ್ಯ. ಆಗ ಭವಿಷ್ಯದಕಾಲಘಟ್ಟದಲ್ಲಿ ಯಕ್ಷಗಾನ ವಿಜೃಂಭಿಸುವುದರಲ್ಲಿ ಸಂದೇಹವಿಲ್ಲ. ಇಂದಿನ ಮಕ್ಕಳು ನಾಳೆಯ ದಿನ ಕಲಾವಿದನೋ, ಕಲಾ ಪ್ರೇಕ್ಷಕನೋ ಆಗಬಹುದು. ಕರಾವಳಿಯ ಈ ಶ್ರೀಮಂತ ಕಲೆ ದೇಶವ್ಯಾಪಿ ವಿಸ್ತರಿಸಲು ಇಂದಿನ ಮಕ್ಕಳಿಂದಲೂ ಸಾಧ್ಯ ಎಂದು ತೆಕ್ಕಟ್ಟೆ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಸಂತೋಷ್ ಕುಮಾರ್ ಹೇಳಿದರು.

ತೆಕ್ಕಟ್ಟೆ ಹಯಗ್ರೀವದಲ್ಲಿ ಯಶಸ್ವೀ ಕಲಾವೃಂದ ಕೊಮೆ ತೆಕ್ಕಟ್ಟೆ ಹಾಗೂ ತೆಕ್ಕಟ್ಟೆ ಗ್ರಾಮ ಪಂಚಾಯತ್‌ನ ಅರಿವು ಕೇಂದ್ರದ ಸಹಯೋಗದಲ್ಲಿ 6 ದಿನಗಳ ಕಾಲ 'ರಜಾರಂಗು-26, ವಿಶೇಷ ಕಾರ್ಯಗಾರ' ಹಾಗೂ ಮುಖವರ್ಣಿಕೆ ಶಿಬಿರದಲ್ಲಿ ಮೇ 12ರಂದು ಸಂತೋಷ್ ಸಮಾರೋಪದ ನುಡಿಗಳನ್ನಾಡಿದರು. ಶಿಬಿರದ ನಿರ್ದೇಶಕ ರೋಹಿತ್ ತೀರ್ಥಹಳ್ಳಿ, ಸಂಪನ್ಮೂಲ ವ್ಯಕ್ತಿ ರಾಹುಲ್ ಕೋಟ, ಇಂಜಿನಿಯರ್ ಸುಬ್ರಹ್ಮಣ್ಯ ವೈದ್ಯ ಇದ್ದರು. ಪ್ರಣಮ್ಯ ಸ್ವಾಗತಿಸಿ, ರಚಿತ್ ಶೆಟ್ಟಿ ವಂದಿಸಿದರು. ಪವನ್ ಆಚಾರ್ ನಿರೂಪಿಸಿದರು. ಬಳಿಕ ಯಕ್ಷಗಾನ ಮುಖವರ್ಣಿಕೆ ಕಮ್ಮಟ ಮುಂದುವರಿಯಿತು.

> ಯಕ್ಷಗಾನ ಇಂದು ದೇಶ ಹಾಗೂ ಹೊರದೇಶದಲ್ಲೂ ಮನ್ನಣೆ ಪಡೆದಿದೆ. ಈ ಕ್ಷೇತ್ರವು ಮತ್ತಷ್ಟು ಬೆಳವಣಿಗೆ ಹೊಂದಬೇಕಾದರೆ ಪ್ರೋತ್ಸಾಹ ಅಗತ್ಯ.
> ● ಸಂತೋಷ್ ಕುಮಾರ್

ಮಲ್ಯರಮಠ ಶ್ರೀ ವೆಂಕಟರಮಣ ಭಜನಾ ಮಂಡಳಿಯ ಉದ್ಘಾಟನೆ



ಕುಂದಾಪುರ: ದೇವರ ಸೇವೆ ಮಾಡುವ ಸದುದ್ದೇಶದಿಂದ ಆರಂಭಗೊಂಡ ಶ್ರೀ ವೆಂಕಟರಮಣ ಭಜನಾ ಮಂಡಳಿ, ದೇವರ ಮೇಲೆ ಭಕ್ತಿ, ಶ್ರದ್ಧೆ ವಿಶ್ವಾಸವನ್ನಿಟ್ಟುಕೊಂಡು ನಿರಂತರವಾಗಿ ಭಕ್ತಿಯಿಂದ ಭಜನೆ ಮೂಲಕ ದೇವರ ಸೇವೆಯನ್ನು ಮಾಡುವಂತಾಗಬೇಕು. ಇದರಿಂದ ಎಲ್ಲರಿಗೂ ಒಳಿತಾಗುತ್ತದೆ. ದೇವರ ಆಶೀರ್ವಾದ ಕೃಪೆಯಿಂದ ಸನ್ಮಂಗಲವಾಗಲಿದೆ ಎಂದು ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶ ಶ್ರೀಮದ್ ವಿದ್ಯಾಧೀಶ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿ ಹೇಳಿದರು.

ಗಂಗೊಳ್ಳಿಯ ಮಲ್ಯರಮಠ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಮೊಕ್ಕಾಂನಲ್ಲಿರುವ ಶ್ರೀಗಳು ಶನಿವಾರ ಮಲ್ಯರಮಠ ಶ್ರೀ ವೆಂಕಟರಮಣ ಭಜನಾ ಮಂಡಳಿಯನ್ನು ಉದ್ಘಾಟಿಸಿ ಆಶೀರ್ವದಿಸಿದರು.

ದೇವಸ್ಥಾನದ ಆಡಳಿತ ಮೊಕ್ತೇಸರ ಎನ್. ಸದಾಶಿವ ನಾಯಕ್, ಜಿ. ವೆಂಕಟೇಶ ನಾಯಕ್, ಯು. ನಾರಾಯಣ ಪೈ, ಡಾ.ಕಾಶೀನಾಥ ಪೈ, ಜಿ.ನಿತ್ಯಾನಂದ ಶೆಣೈ, ಜಿ.ವಿಜಯ ಶೆಣೈ, ಬಾಲಕೃಷ್ಣ ಶೆಣೈ, ರಾಮಕೃಷ್ಣ ಶೆಣೈ, ಜಿ.ಗಣಪತಿ ನಾಯಕ್, ವಿಜೇಶ ಭಂಡಾರ್‌ಕಾರ್, ಎಂ.ಗಣೇಶ ಪೈ, ಮನೋಹರ ಶೆಣೈ, ಬಿ.ಗಣೇಶ ಶೆಣೈ, ಮಂಡಳಿ ಸದಸ್ಯರು, ಭಜಕರು ಉಪಸ್ಥಿತರಿದ್ದರು.

ಕರಾವಳಿ ಸಾಂಪ್ರದಾಯಿಕ ನಾಡದೋಣಿ ಮೀನುಗಾರರ ಸಂಘ ಗಂಗೊಳ್ಳಿ ವಲಯದಿಂದ ಮೀನುಗಾರಿಕಾ ಕಾರ್ಯದರ್ಶಿಗೆ ಮನವಿ ಸಲ್ಲಿಸಿ ಒತ್ತಾಯ

ಮೋಟರೀಕೃತ ನಾಡದೋಣಿ ಮೀನುಗಾರರಿಗೆ ಅವಶ್ಯಕವಾಗಿ ಸೀಮೆಎಣ್ಣೆಯನ್ನು ಒದಗಿಸಿ

ಸಾಂದರ್ಭಿಕ ಚಿತ್ರ



ಕುಂದಾಪುರ: ಮೋಟರೀಕೃತ ನಾಡದೋಣಿ ಮೀನುಗಾರರಿಗೆ ಅವಶ್ಯಕವಾಗಿ ಸೀಮೆಎಣ್ಣೆಯನ್ನು ಬಿಡುಗಡೆಗೊಳಿಸಬೇಕು ಹಾಗೂ ಹೆಚ್ಚುವರಿ ಸಬ್ಸಿಡಿ ನೀಡುವಂತೆ ಕರಾವಳಿ ಸಾಂಪ್ರದಾಯಿಕ ನಾಡದೋಣಿ ಮೀನುಗಾರರ ಸಂಘ ಗಂಗೊಳ್ಳಿ ವಲಯ ಇವರು ಮೀನುಗಾರಿಕಾ ಹಾಗೂ ಪಶುಸಂಗೋಪನಾ ಇಲಾಖೆ ಕಾರ್ಯದರ್ಶಿ ವಿನೋತ್‌ಪ್ರಿಯಾ ಆರ್. ಅವರಿಗೆ ಮನವಿ ಸಲ್ಲಿಸಿದ್ದಾರೆ.

ಸಾಂಪ್ರದಾಯಿಕ ಮೀನುಗಾರಿಕೆಯು ವರ್ಷದಿಂದ ವರ್ಷಕ್ಕೆ ನಶಿಸಿಕೊಂಡು ಬರುತ್ತಿದ್ದು ನಾಡದೋಣಿ ಮೀನುಗಾರರು ತುಂಬಾ ಸಂಕಷ್ಟದಲ್ಲಿ ಬದುಕು ಸಾಗಿಸುತ್ತಿದ್ದಾರೆ. ಆಧುನೀಕತೆಗೆ ಹೊಂದಿಕೊಳ್ಳುವ ದೃಷ್ಟಿಯಿಂದ ತಮ್ಮ ದೋಣಿಗಳಿಗೆ ಇಂಜಿನ್ ಅಳವಡಿಸಿ ಮೀನುಗಾರಿಕೆ ನಡೆಸುತ್ತಿದ್ದು ಈ ಇಂಜಿನ್‌ಗಳಿಗೆ ಸರಕಾರದಿಂದ ಸುಮಾರು ವರ್ಷಗಳಿಂದ ಸಬ್ಸಿಡಿ ದರದಲ್ಲಿ ಸೀಮೆಎಣ್ಣೆ ನಿರಂತರವಾಗಿ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯಿಂದ ಪಡಿತರ ದರದಲ್ಲಿ ಮೀನುಗಾರಿಕಾ ದೋಣಿಗಳಿಗೆ ಸೀಮೆಎಣ್ಣೆಯನ್ನು ಪೂರೈಸಲಾಗುತ್ತಿದೆ. ರಾಜ್ಯ ಸರಕಾರದಿಂದ ನಾಡದೋಣಿ ಇಂಜಿನ್‌ಗಳಿಗೆ ಸೀಮೆಎಣ್ಣೆ ಬದಲಿ ವ್ಯವಸ್ಥೆಯಾಗಿ ಗ್ಯಾಸ್ ಇಂಜಿನ್, ಎಲೆಕ್ಟ್ರಿಕ್ ಇಂಜಿನ್‌ಗಳು ಪ್ರಾತ್ಯಕ್ಷಿಕ(ಡೆಮೋ) ನಡೆಸಿದ್ದು, ವಾಸ್ತವವಾಗಿ ಈ ಎರಡು ಇಂಜಿನ್‌ಗಳ ನಾಡದೋಣಿ ಮೀನುಗಾರಿಕೆ ನಡೆಸಲು ಹಾಗೂ ಹವಮಾನ ವೈಪರಿತ್ಯವಾದಾಗ ಈ ಇಂಜಿನ್‌ಗಳ ಸಾಮರ್ಥ್ಯ ಕ್ಷೀಣವಾಗಿರುವುದರಿಂದ ಪುನಃ ಸೀಮೆಎಣ್ಣೆಯ ಇಂಜಿನ್‌ಗಳಿಗೆ ಅವಲಂಬಿತವಾಗುವುದು ಅನಿವಾರ್ಯ. ಕೇಂದ್ರದಿಂದ ಕೊಡಮಾಡುವ ಸಹಾಯಧನ ರಹಿತ ಸೀಮೆಎಣ್ಣೆಯನ್ನು ರಾಜ್ಯ ಸರಕಾರದ ಅನುದಾನದ ಅಡಿಯಲ್ಲಿ 1 ಲೀ.ಗೆ ರೂ. 35ರಂತೆ ನಾಡದೋಣಿ ಮೀನುಗಾರರು ಖರೀದಿಸಿ ಮೀನುಗಾರಿಕೆಯನ್ನು ನಡೆಸುತ್ತಿದ್ದಾರೆ. ಕಳೆದ ಎರಡು ವರ್ಷಗಳಿಂದ ಪಿ.ಡಿ.ಎಸ್ ಸೀಮೆಎಣ್ಣೆಯು ನಾಡದೋಣಿ ಮೀನುಗಾರರಿಗೆ ದೊರಕದೇ ಮೀನುಗಾರರ ಜೀವನವು ಅಸ್ತವ್ಯಸ್ಥವಾಗಿದೆ.

ಇತ್ತೀಚೆಗೆ ಕೇಂದ್ರ ಸರಕಾರದ ಸಹಾಯಧನ ರಹಿತ ಸೀಮೆಎಣ್ಣೆ ದೊರಕಲು ತುಂಬ ತ್ರಾಸದಾಯಕವಾಗಿ ಬರುವುದನ್ನು ಮನಗೊಂಡು ನಾಡದೋಣಿ ಮೀನುಗಾರರು ರಾಜ್ಯ ಸರಕಾರಕ್ಕೆ ಬೇಡಿಕೆ ನೀಡಿದ ಹಿನ್ನಲೆಯಲ್ಲಿ ರಾಜ್ಯ ಸರಕಾರವು ನೇರವಾಗಿ ಇಂಡಿಯನ್ ಆಯಲ್ ಕಾರ್ಪೋರೇಶನ್, ಭಾರತ್ ಪೆಟ್ರೋಲಿಯಂ ಕಾರ್ಪೋರೇಶನ್‌ಗಳಿಂದ ಮಾರುಕಟ್ಟೆ ದರದಲ್ಲಿ ಸೀಮೆಎಣ್ಣೆಯನ್ನು ಖರೀದಿಸಿ ಕೆ.ಎಫ್.ಡಿ.ಸಿ ಮೂಲಕ ಸೀಮೆ ಎಣ್ಣೆಯನ್ನು ಮೀನುಗಾರರಿಗೆ 1 ಲೀ.ಗೆ ರೂ. 35 ಸಹಾಯಧನ ನೀಡಿ ವಿತರಿಸುತ್ತಿದ್ದು ಪ್ರಸ್ತುತ ದರ ರೂಪಾಯಿ 150 ರಿಂದ 160ಕ್ಕೆ ದರ ನಿಗದಿಯಾಗಿದ್ದು, ಮೀನುಗಾರರು ಮೀನುಗಾರಿಕೆಗೆ ತೆರಳದೆ ಬಂದರು ಭಾಗದಲ್ಲಿ ಲಂಗರು ಹಾಕಿ ದುಃಖಿತರಾಗಿದ್ದಾರೆ. ಮುಂದಿನ ದಿನಗಳಲ್ಲಿ ಇದಕ್ಕೆ ಪರಿಹಾರ ದೊರಕದೆ ಇದ್ದಲ್ಲಿ ಮೀನುಗಾರರು ಬದುಕು ಕಳೆದುಕೊಳ್ಳುವ ಭೀತಿಯಿಂದ ವಲಸೆ ಹೋಗುವ ಅನಿವಾರ್ಯತೆ ಬಂದರೂ ಅಚ್ಚರಿ ಪಡಬೇಕಿಲ್ಲ ಎಂದು ಮನವಿಯಲ್ಲಿ ಸಂಘದ ಅಧ್ಯಕ್ಷ ಯಶವಂತ ಖಾರ್ವಿ ಒತ್ತಾಯಿಸಿದ್ದಾರೆ.

ವಾರ್ಷಿಕವಾಗಿ 25,000 ಕೆ.ಎಲ್ ಸೀಮೆಎಣ್ಣೆ ಅಗತ್ಯ

ಪ್ರಸ್ತುತ ಕರ್ನಾಟಕ ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಸರಕಾರದ ಅಧಿಕೃತ ದಾಖಲೆಯ ಪ್ರಕಾರ 8030 ನಾಡದೋಣಿಗಳು ಮೀನುಗಾರಿಕೆ ನಡೆಸುತ್ತಿದ್ದು, ಈ ದೋಣಿಗಳಿಗೆ ತಲಾ 300 ಲೀಟರ್‌ನಂತೆ ವಾರ್ಷಿಕವಾಗಿ 25,000 ಕೆ.ಎಲ್ ಸೀಮೆಎಣ್ಣೆ ಅಗತ್ಯವಿದೆ. ಇದು ಸರಿಯಾದ ರೀತಿಯಲ್ಲಿ ನಿರಂತರವಾಗಿ ಪೂರೈಕೆಯಾದರೆ ಮಾತ್ರ ಮೀನುಗಾರರು ದುಡಿದು ಬದುಕಲು ಸಾಧ್ಯ ಎಂದು ಮನವಿಯಲ್ಲಿ ತಿಳಿಸಲಾಗಿದೆ.